ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಸೋಮವಾರ, 1 ಜೂನ್ 2026

ಸಂಪುಟ 48, ಸಂಚಿಕೆ 74, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital



ರಾಯಲ್ ಚಾಂಪಿಯನ್ಸ್ ಬೆಂಗಳೂರು!

ಸತತ 2ನೇ ಕಪ್ ಗೆದ್ದ ಆರ್‌ಸಿಬಿ

- 155 ರನ್‌ಗಳಿಗೆ ಟೈಟಾನ್ಸ್ ಕಟ್ಟಿಹಾಕಿದ ಚಾಲೆಂಜರ್ಸ್
- ಭುವನೇಶ್ವರ್ 2, ಹ್ಯಾಜೆಲ್‌ವುಡ್ 2, ರಸಿಕ್ 3 ವಿಕೆಟ್
- ಆಪದ್ಬಾಂಧವನಾಗಿ ಕ್ರೀಸ್ ಕಾಯ್ದುಕೊಂಡ ವಿರಾಟ್
- ಅಬ್ಬರದ ಆರಂಭ ನೀಡಿದ ವೆಂಕಟೇಶ್ ಅಯ್ಯರ್-ಕೊಹ್ಲಿ
- ಮೊದಲ ವಿಕೆಟ್‌ಗೆ ಅಯ್ಯರ್-ಕೊಹ್ಲಿ 62 ರನ್ ಜತೆಯಾಟ
- ಜಿಟಿ ಪರ ವಾಷಿಂಗ್ಟನ್ ಸುಂದರ್ ಅಜೇಯ 50 ರನ್

• ವಿವರ ಕ್ರೀಡಾಪುಟ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಒಬ್ಬನು ಪ್ರಿಯನಾಗಬೇಕಾದರೆ ಆತನ ಗುಣಗಳು ಅಧಿಕೃತವೇ ಹೊರತು ಹೊಗಳಿಕೆಯಲ್ಲ.

▲ ಶಿಶುಪಾಲ ವಧೆ

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಉಷ್ಣ ಅಲೆಯಿಂದ ಜಾಗರೂಕರಾಗಿರಿ: ಮೋದಿ

• ಪುಟ ೭

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

• ಪುಟ ೫

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

• ಪುಟ ೭

ಇಂದು ಸಿದ್ದರಾಮಯ್ಯ, ಡಿಕೆಶಿ ದಿಲ್ಲಿಗೆ | ವರಿಷ್ಠರ ಜತೆ ಸರಣಿ ಸಭೆ

ಸಂಪುಟ ರಚನೆ ಕಸರತ್ತು



- ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಬಗ್ಗೆ ಚರ್ಚೆ
- ಹೈಕಮಾಂಡ್ ತೀರ್ಮಾನವೇ ಅಂತಿಮ

ಸಚಿವ ಸಂಪುಟಕ್ಕೆ ಯಾರ್ಯಾರು?

ಸಚಿವ ಸಂಪುಟದಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬ ಬಗ್ಗೆ ಸಿದ್ದರಾಮಯ್ಯ ಮತ್ತು ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಈಗಾಗಲೇ ತಮ್ಮ ಬೆಂಬಲಿಗರ ಪ್ರತ್ಯೇಕ ಪಟ್ಟಿಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. ಜಾತಿ ಮತ್ತು ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವುದು ಹೈಕಮಾಂಡ್ ಮುಂದಿರುವ ದೊಡ್ಡ ಸವಾಲು. ಡಿ.ಕೆ. ಶಿವಕುಮಾರ್ ಅವರು ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸುತ್ತಿದ್ದರೆ, ಸಿದ್ದರಾಮಯ್ಯ ಅವರು ಅನುಭವಿಗಳಿಗೆ ಸಂಪುಟದಲ್ಲಿ ಸ್ಥಾನ ನೀಡುವ ಪರವಾಗಿದ್ದಾರೆ ಎನ್ನಲಾಗಿದೆ.

• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಬೆನ್ನಲ್ಲೇ ಈಗ ಸಚಿವ ಸಂಪುಟ ರಚನೆಯ ಕಸರತ್ತು ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಹಂಗಾಮಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರ (ಜೂನ್ 1) ದೆಹಲಿಗೆ ಪ್ರಯಾಣ ಬೆಳೆಸಲಿದ್ದು, ಹೈಕಮಾಂಡ್ ನಾಯಕರೊಂದಿಗೆ ಸರಣಿ ಸಭೆಗಳನ್ನು ನಡೆಸಲಿದ್ದಾರೆ.

ಮುಂದಿನ ಎರಡು ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಉಪಮುಖ್ಯಮಂತ್ರಿ ಹುದ್ದೆ ಗಳನ್ನು ಸೃಷ್ಟಿಸಬೇಕೇ ಅಥವಾ ಬೇಡವೇ ಎಂಬ ಚರ್ಚೆ ದೆಹಲಿಯಲ್ಲಿ ನಡೆಯಲಿದೆ. ಒಂದು ವೇಳೆ ಡಿಸಿಎಂ ಹುದ್ದೆ ಸೃಷ್ಟಿಸುವುದಾದರೆ ಎರಡು ಅಥವಾ ನಾಲ್ಕು ಸ್ಥಾನಗಳನ್ನು ನೀಡಬೇಕೇ ಎಂಬ ಬಗ್ಗೆಯೂ ಗೊಂದಲವಿದೆ. ಸದ್ಯ ಒಕ್ಕಲಿಗ ಸಮುದಾಯಕ್ಕೆ ಸಿಎಂ ಸ್ಥಾನ ಸಿಗುತ್ತಿರುವ ಹಿನ್ನೆಲೆಯಲ್ಲಿ ಉಳಿದ ಪ್ರಮುಖ ಸಮುದಾಯಗಳಿಗೆ ಡಿಸಿಎಂ ಸ್ಥಾನ ನೀಡುವ ಸಾಧ್ಯತೆ ಇದೆ.

ನಾಯಕತ್ವ ಬದಲಾವಣೆ ಪ್ರಕ್ರಿಯೆಯನ್ನು ಯಾವುದೇ ಗೊಂದಲವಿಲ್ಲದೆ ಪರಿಹರಿಸಿದ ಕಾಂಗ್ರೆಸ್ ಹೈಕಮಾಂಡ್, ಸಂಪುಟ ನೇಮಕದಲ್ಲೂ ಹಿರಿಯ- ಕಿರಿಯರಿಗೆ ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಎಲ್ಲರನ್ನೂ ಸಮಾಧಾನಗೊಳಿಸಲು ನಿರ್ಧರಿಸಿದೆ. ಈಗಾಗಲೇ ಸಚಿವಾಕಾಂಕ್ಷಿಗಳು ದಿಲ್ಲಿಗೆ ತೆರಳಿದ್ದು, ರಾಜ್ಯದಿಂದ ಯಾವುದೇ ಹೆಸರು ದಿಲ್ಲಿಗೆ ಹೋದರೂ ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ.

ಸಂಪುಟ ಚರ್ಚೆ ಮಾತ್ರ: ಸೋಮವಾರ ದಿಲ್ಲಿಯಲ್ಲಿ ನಡೆಯುವ ಸಭೆಯಲ್ಲಿ ಸಂಪುಟ ಸೇರ್ಪಡೆಯ ಬಗ್ಗೆ ಮಾತ್ರ ಚರ್ಚೆಯಾಗಲಿದೆ.

➡ಪುಟ ೪



15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

• **ಕಲಬುರಗಿ/ಬೆಂಗಳೂರು:** ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮೊದಲ ಹಂತದಲ್ಲಿ ಕೆಲವೇ ಶಾಸಕರು ಸಚಿವರಾಗಲಿದ್ದಾರೆ. 15 ದಿನಗಳ ಬಳಿಕ ಸಚಿವ ಸಂಪುಟ ವಿಸ್ತರಣೆ ನಡೆಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.



ಕಲಬುರಗಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೊಸ ಸಚಿವ ಸಂಪುಟದಲ್ಲಿ ಎಷ್ಟು ಜನ ಡಿಸಿಎಂಗಳನ್ನು ಮಾಡಬೇಕು ಎಂಬುದರ ಬಗೆಗೆ ಇನ್ನೂ ಯಾವುದೇ ಪ್ರಸ್ತಾವಗಳು ಬಂದಿಲ್ಲ.

➡ಪುಟ ೪

> ಸಚಿವರಾಗಿ ಯಾರು ಪ್ರಮಾಣವಚನ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ. ಈ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ.
>
> ■ ಡಿ.ಕೆ.ಶಿವಕುಮಾರ್, ನಿಯೋಜಿತ ಮುಖ್ಯಮಂತ್ರಿ

> ಜೂನ್ 3ರಂದು ಯಾರೆಲ್ಲಾ ಸಂಪುಟ ಸೇರುತ್ತಾರೆ ಎಂಬ ಕುತೂಹಲ ಎಲ್ಲರಿಗೂ ಇದೆ. ಹೈಕಮಾಂಡ್ ಈ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ. ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದಾಗ ಉತ್ತಮ ಕೆಲಸ ಮಾಡಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸುಸೂತ್ರವಾಗಿ ಆಡಳಿತ ನಡೆಸಿದರು.
>
> ■ ಕೆ.ಎಚ್.ಮುನಿಯಪ್ಪ, ಮಾಜಿ ಸಚಿವ

ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ | ಶ್ರೀ ಕ್ಷೇತ್ರದ ಕೊಡುಗೆ ಕೊಂಡಾಡಿದ ಸಿಪಿಆರ್

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



• **ಮಂಗಳೂರು:** ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಗಳು ನೀಡುತ್ತಿರುವ ಕೊಡುಗೆ ಮಹತ್ತರವಾದುದು ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಅಮೃತ ವರ್ಷಿಣಿ ಸಭಾಂಗಣದಲ್ಲಿ ಭಾನುವಾರ ನಡೆದ ಬೆಳ್ತಂಗಡಿಯಲ್ಲಿ ನಿರ್ಮಾಣಗೊಂಡಿರುವ ಸುಸಜ್ಜಿತ ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಧರ್ಮಸ್ಥಳಕ್ಕೆ ಆಗಮಿಸಿದ್ದೇನೆ. ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಕೃತಾರ್ಥನಾಗಿದ್ದೇನೆ ಎಂದರು.

ಧಾರ್ಮಿಕ, ಶಿಕ್ಷಣ, ಆರೋಗ್ಯ, ಕಲೆ-ಸಾಹಿತ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಮಾಡಿರುವ ಕೆಲಸ ಅಪಾರವಾದುದು. ಕ್ಷೇತ್ರದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ವೀ. ಹೆಗ್ಗಡೆಯವರ ಸರ್ವಧರ್ಮೀಯರನ್ನೂ, ಎಲ್ಲಾ ಜಾತಿಯವರನ್ನೂ ಸಮಾನತೆ ಮತ್ತು ಗೌರವಭಾವದಿಂದ ಪರಿಗಣಿಸಿ ಸಾಮಾಜಿಕ ಸಾಮರಸ್ಯದೊಂದಿಗೆ ಅವರು ಮಾಡುತ್ತಿರುವ ಸೇವೆ ಆದರ್ಶ ಹಾಗೂ ಅನುಕರಣೀಯ ಎಂದರು.

➡ಪುಟ ೪

ಗ್ರಾಮಾಭಿವೃದ್ಧಿ ಯೋಜನೆಗಳು ಪ್ರಗತಿಗೆ ಪೂರಕ

ಧರ್ಮಾಧಿಕಾರಿ ದೂರದೃಷ್ಟಿ ಹಾಗೂ ನೇತೃತ್ವದಲ್ಲಿ ಪ್ರಾರಂಭಿಸಿದ ಗ್ರಾಮಾಭಿವೃದ್ಧಿ ಯೋಜನೆ, 'ಸಿರಿ' ಗ್ರಾಮೋದ್ಯೋಗ ಸಂಸ್ಥೆ, ರುಡ್‌ಸೆಟ್ ಮೊದಲಾದ ಯೋಜನೆಗಳು ನಿರುದ್ಯೋಗ ನಿವಾರಣೆಯೊಂದಿಗೆ ರಾಷ್ಟ್ರದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು. ಸೇವಾ ಮನೋಭಾವದೊಂದಿಗೆ 'ಸಿರಿ'ಯ ಮೂಲಕ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸುತ್ತಿರುವುದು ಸ್ತುತ್ಯರ್ಹವಾಗಿದೆ ಎಂದರು.

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

• **ಹೊಸದಿಲ್ಲಿ:** ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.



ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು.

ಸಿಡಿಎಸ್ ಆಗಿ ಜನರಲ್ ಸುಬ್ರಮಣಿ ಅಧಿಕಾರ ಸ್ವೀಕಾರ

• ಪುಟ ೨

ಕಿರುಸುದ್ದಿ

ಬಿಲ್ಲವ ಸಮುದಾಯಕ್ಕೆ ಸ್ಥಾನಮಾನ ನೀಡಲು ಆಗ್ರಹ

ಮಂಗಳೂರು: ಕರ್ನಾಟಕದಲ್ಲಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನೂತನ ಸರ್ಕಾರ ರಚನೆಯಾಗಲಿದ್ದು, ಈ ಸಂದರ್ಭ ಬಿಲ್ಲವ ಸಮುದಾಯಕ್ಕೂ ಸೂಕ್ತ ಸ್ಥಾನಮಾನ ಸಿಗಬೇಕು ಎಂದು ಆರ್ಯ ಈಡಿಗ ಮಹಾಸಂಸ್ಥಾನ ಸೋಲೂರು ಮಠದ ಶ್ರೀ ವಿಖ್ಯಾತನಂದ ಸ್ವಾಮೀಜಿ ಆಗ್ರಹಿಸಿದ್ದಾರೆ. ಅವರು ಭಾನುವಾರ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕ್ಷೇತ್ರದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್‌ನಲ್ಲಿರುವ ಬಿ.ಕೆ.ಹರಿಪ್ರಸಾದ್ ಅವರು ಬಿಲ್ಲವ ಸಮಾಜದ ಅಗ್ರಗಣ್ಯ ನಾಯಕರು ಮತ್ತು ಹಿರಿಯ ಮುತ್ಸದ್ದಿ ಮತ್ತು ಅನುಭವಿ ರಾಜಕಾರಣಿಯಾಗಿದ್ದಾರೆ ಅವರಿಗೆ ಅವಕಾಶ ಸಿಗಬೇಕು ಎಂದರು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಬಿಲ್ಲವರು ಬಹುಸಂಖ್ಯಾತರು, ಆದರೆ ರಾಜಕೀಯದಲ್ಲಿ ಸ್ಥಾನಮಾನದಲ್ಲಿ ಅನುಪಾತದಂತೆ ಮಾನ್ಯತೆ ದೊರೆಯದಿರುವುದು ವಿಷಾದನೀಯ. ಆದ್ದರಿಂದ ಮುಂದೆ ರಚನೆಯಾಗುವ ಸಚಿವ ಮಂಡಲದಲ್ಲಿ ಬಿ.ಕೆ.ಹರಿಪ್ರಸಾದ್ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕೆಂದು ಅಖಿಲ ಭಾರತ ಬಿಲ್ಲವ ಸಮಾಜದ ಒಕ್ಕೊರಲಿನ ಆಗ್ರಹವಾಗಿದೆ ಎಂದರು.

ಈ ಸಂದರ್ಭ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಅಧ್ಯಕ್ಷ ಜೈರಾಜ್ ಎಚ್ ಸೋಮಸುಂದರಂ, ಬಿಲ್ಲವ ಸಮುದಾಯದ ನಾಯಕರಾದ ಪದ್ಮನಾಭ ಕೋಟ್ಯಾನ್, ಗಣೇಶ್ ಪೂಜಾರಿ, ಪ್ರಮೀಳಾ ಈಶ್ವರ್, ಸುವಿಲಾಕ್ಷಿ ವೈ ಸುವರ್ಣ ಕೆ. ಲೋಕನಾಥ್, ಜೀವನ್ ಕುಮಾರ್ ಕೆರೆಬೈಲ್, ಶಕಿಲಾ ರಾಜ್, ಯೋಗೇಶ್ ಕುಮಾರ್, ಬಿ.ದೇರಣ್ಣ ಸೇರಿದಂತೆ ನಾನಾ ಮಂದಿ ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ

• **ಕಾಸರಗೋಡು:** ಕಾಸರಗೋಡಿನ ಎಲ್‌ಬಿಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸಯನ್ಸ್ ಮತ್ತು ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಸಂದರ್ಶನವು ಜೂನ್ 4 ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನಲ್ಲಿ ನಡೆಯಲಿದೆ. ಸಂಬಂಧಿತ ವಿಷಯಗಳಲ್ಲಿ ಎಂ.ಟೆಕ್ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 7510655405, 9037667582, 9745306534, 9496251434 ಕರೆ ಮಾಡಬಹುದು.

ಮೋಟಾರ್ ಕಾರ್ಮಿಕರ ಮಕ್ಕಳಿಗೆ ಕಲಿಕಾ ಕಿಟ್

ಕಾಸರಗೋಡು: ಕೇರಳ ಮೋಟಾರ್ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಸಕ್ರಿಯ ಸದಸ್ಯರಾಗಿರುವ ಕಾರ್ಮಿಕರ ಮಕ್ಕಳಿಗೆ ಉಚಿತ ಅಧ್ಯಯನ ಸಾಮಗ್ರಿ ಕಿಟ್‌ಗಳ ವಿತರಣೆಯನ್ನು ಜಿಲ್ಲಾ ಕಾರ್ಯಕಾರಿ ಕಚೇರಿಯಲ್ಲಿ ನೆರವೇರಿಸಲಾಯಿತು. ಕಾರ್ಯಕ್ರಮವನ್ನು ಕೇರಳ ಮೋಟಾರ್ ಕಾರ್ಮಿಕರ ಕಲ್ಯಾಣ ನಿಧಿ ಮಂಡಳಿಯ ನಿರ್ದೇಶಕ ಜಯಪಾಲನ್ ಉದ್ಘಾಟಿಸಿದರು. ಜಿಲ್ಲಾ ಸಲಹಾ ಸಮಿತಿ ಸದಸ್ಯ ಗಿರಿಕೃಷ್ಣನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಲಹಾ ಸಮಿತಿ ಸದಸ್ಯರಾದ ವಿಜಯಕುಮಾರ್, ಎಂ.ಪಿ.ಬಿಜೀಶ್, ಶಂಕರ್ ಕೃಷ್ಣರಪ್ಪುರ ಮತ್ತು ಇತರರು ಮಾತನಾಡಿದರು. ಜಿಲ್ಲೆಯ ವಿವಿಧ ಮೋಟಾರ್ ಕಾರ್ಮಿಕರ ಒಕ್ಕೂಟದ ಮುಖಂಡರು ಮತ್ತು ಮೋಟಾರ್ ಕ್ಷೇತ್ರದ ಫಲಾನುಭವಿಗಳು ಭಾಗವಹಿಸಿದ್ದರು. ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿ ಒ.ಎಸ್.ಜಾಬು ಸ್ವಾಗತಿಸಿ, ಹಿರಿಯ ಗುಮಾಸ್ತ ವಿ.ವಿ.ಸುಶೀಲ ವಂದಿಸಿದರು.

ಆನೆಗುಡ್ಡೆ ದೇಗುಲದಲ್ಲಿ ಪಂಚವರ್ಣದ 303ವಾರದ ಪರಿಸರಸ್ನೇಹಿ ಅಭಿಯಾನ

• **ಕೋಟ:** ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು,ಹಂದಟ್ಟು ಮಹಿಳಾ ಬಳಗ ಕೋಟ,ಮಣೂರು ಫ್ರೆಂಡ್ಸ್ ಸಹಯೋಗದೊಂದಿಗೆ ಮೊಗವೀರ ಯುವ ಸಂಘಟನೆ ಕೋಟೇಶ್ವರ ಘಟಕದ ಸಂಯೋಜನೆಯೊಂದಿಗೆ 303ನೇ ಭಾನುವಾರದ ಪರಿಸರಸ್ನೇಹಿ ಅಭಿಯಾನ ಕಾರ್ಯಕ್ರಮ ಆನೆಗುಡ್ಡೆ ಶ್ರೀ ವಿನಾಯಕ ದೇಗುಲದ ವಠಾರ ಸ್ವಚ್ಛಗೊಳಿಸುವ ಕಾರ್ಯಕ್ರಮ ಜರಗಿತು.ದೇಗುಲದ ವತಿಯಿಂದ ವ್ಯವಸ್ಥಾಪಕ ನಟೇಶ್ ಕಾರಂತ್ ಸ್ವಚ್ಛತಾಗ್ರಹಿಗಳಿಗಾ ಪಂಚವರ್ಣ ಸಂಘಟನೆಯ ಕೃತಜ್ಞತಾಪತ್ರ,ಹಾಗೂ ಮೊಗವೀರ ಯುವ ಸಂಘಟನೆಯ ಕೋಟೇಶ್ವರ ಘಟಕದ ಕಾರ್ಯದರ್ಶಿ ನಾಗರಾಜ್ ಚೆಕ್ಕೆಟ್ಟೆ ಇವರನ್ನು ಗುರುತಿಸಿ ಗೌರವಿಸಲಾಯಿತು. ಮುಖ್ಯ ಅಭ್ಯಾಗತರಾಗಿ ರೋಟರಿ ಕ್ಲಬ್ ಕೋಟ ಸಾಲಿಗ್ರಾಮ ಇದರ ಪ್ರಮುಖರಾದ ರಾಜೇಂದ್ರ ಸುರ್ವಾ,ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಕೆ.ಮನೋಹರ್ ಪೂಜಾರಿ, ಸಂಚಾಲಕ ಅಮೃತ್ ಜೋಗಿ,ಪಂಚವರ್ಣ ಮಹಿಳಾಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ,ಕಾರ್ಯಾಧ್ಯಕ್ಷೆ ಕಲಾವತಿ,ಕಾರ್ಯದರ್ಶಿ ವಸಂತಿ ಹಂದಟ್ಟು,ಹಂದಟ್ಟು ಮಹಿಳಾ ಬಳಗದ ಸುಜಾತ ಬಾಯರಿ, ಮೊಗವೀರ ಯುವ ಸಂಘದ ರಾಜೇಶ್ ಕಾಂಚನ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಕಿಕ್ ಬಾಕ್ಸಿಂಗ್: ಬಂಟಕಲ್ ಕಾಲೇಜಿನ ವಿದ್ಯಾರ್ಥಿಗೆ ಚಿನ್ನದ ಪದಕ



• **ಶಿರ್ವ:** ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಡಾಟಾ ಸೈನ್ಸ್ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿ ಮೊಹಮ್ಮದ್ ಅಫ್ರಿದ್ ಅವರು ಮೈಸೂರಿನ ಚಾಮುಂಡಿ ವಿಹಾರ ಇಂಡೋರ್ ಸ್ಟೇಡಿಯಂನಲ್ಲಿ ನಡೆದ 6ನೇ ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಅತ್ಯುತ್ತಮ ಸಾಧನೆ ಮಾಡಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಅವರು ಪಾಯಿಂಟ್ ಫೈಟ್ (89 ಕೆಜಿ) ವಿಭಾಗ ಹಾಗೂ ಎಂ/ಎಫ್ ವೆಟರನ್ (ತಂಡ) ಸೀನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದಿದ್ದಾರೆ. ಅಲ್ಲದೆ ಎಂ/ಎಫ್ ವೆಟರನ್ ಸೀನಿಯರ್ ವಿಭಾಗದಲ್ಲಿ ದ್ವಿತೀಯ ಸ್ಥಾನದೊಂದಿಗೆ ಬೆಳ್ಳಿಯ ಪದಕ ಪಡೆದಿದ್ದಾರೆ. ಸಂಸ್ಥೆಯ ಮಂಡಳಿ, ಪ್ರಾಂಶುಪಾಲರು ಹಾಗೂ ಅಧ್ಯಾಪಕರು ವಿದ್ಯಾರ್ಥಿಯ ಸಾಧನೆಯನ್ನು ಶ್ಲಾಘಿಸಿದ್ದಾರೆ.



ಮಂಗಳೂರು ನಗರದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಸುಮಾರು 36 ವರ್ಷಗಳ ಕಾಲ ಸೇವೆ ಸಲ್ಲಿಸಿ ವೆನ್ಲಾಕ್ ಆಸ್ಪತ್ರೆಯ ವೈದ್ಯಕೀಯ ದಾಖಲೆ ವಿಭಾಗದಲ್ಲಿ ನಿವೃತ್ತರಾದ ಕೃಷ್ಣಪ್ಪ ಪೂಜಾರಿ ಅವರನ್ನು ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮೆಡಿಸಿನ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಕ್ರಿಸ್ಟೋಫರ್ ಪಾಯ್ಸ್, ವೈದ್ಯಕೀಯ ದಾಖಲೆ ವಿಭಾಗದ ಮುಖ್ಯಸ್ಥ, ಮೆಡಿಸಿನ್ ವಿಭಾಗದ ಪ್ರಾಧ್ಯಾಪಕ ಡಾ. ಆರ್ಚಿತ್ ಬೋಳೂರು, ಮಾಹೆ ಮಂಗಳೂರು ವಿಭಾಗದ ಎಚ್.ಆರ್.ಕ್ಲಸ್ಟರ್ ಮುಖ್ಯಸ್ಥೆ ಶಾಂತಲಾ ಡಿ.ಪೈ, ಕೆಎಂಸಿ ಎಚ್.ಆರ್.ಮುಖ್ಯಸ್ಥ ಸತೀಶ್ ಶೆಟ್ಟಿ ಕೆ., ರಾಜೇಶ್ ಕೆ. ಮತ್ತಿತರರು ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಸೂರಿಗಾಗಿ ಒತ್ತಾಯಿಸಿ ವಸತಿರಹಿತರಿಂದ ಪ್ರತಿಭಟನಾ ಜಾಥಾ

• **ಮಡಿಕೇರಿ:** ನಿವೇಶನ ರಹಿತರಿಗೆ ನಿವೇಶನ, ಸೂರು ಇಲ್ಲಸವರಿಗೆ ಸೂರು ನೀಡಬೇಕೆಂದು ಒತ್ತಾಯಿಸಿ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಕೊಡಗು ಜಿಲ್ಲಾ ಸಮಿತಿ ಮತ್ತು ಬಹುಜನ ಕಾರ್ಮಿಕ ಸಂಘದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನಾ ಜಾಥಾ ನಡೆಯಿತು.

'ನಮ್ಮ ಭೂಮಿ ನಮ್ಮ ಹಕ್ಕು, ಭಿಕ್ಷೆಯಲ್ಲ, ಎಲ್ಲಾ ಬಡವರ ಸ್ವಾಭಿಮಾನದ ಬದುಕಿಗಾಗಿ ಭೂಮಿಯ ಹಕ್ಕನ್ನು ಸರ್ಕಾರ ನೀಡಬೇಕು' ಎಂದು ಒತ್ತಾಯಿಸಿ ಇಲ್ಲಿನ ಹಳೆಯ ಖಾಸಗಿ ಬಸ್ ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಜಾಥಾ ನಡೆಸಲಾಯಿತು.

> ‘ನಮ್ಮ ಭೂಮಿ ನಮ್ಮ ಹಕ್ಕು, ಭಿಕ್ಷೆಯಲ್ಲ, ಎಲ್ಲಾ ಬಡವರ ಸ್ವಾಭಿಮಾನದ ಬದುಕಿಗಾಗಿ ಭೂಮಿಯ ಹಕ್ಕನ್ನು ಸರ್ಕಾರ ನೀಡಬೇಕು’

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ರಾಜ್ಯಾಧ್ಯಕ್ಷಮಾರಸಂದ್ರಮುನಿಯಪ್ಪ ಅವರು, 'ಕೊಡಗಿನಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಕಾಫಿ ತೋಟಗಳಲ್ಲಿ ಲೈನ್ ಮನೆಗಳಲ್ಲಿ ವಾಸವಿದ್ದಾರೆ. ಅವರಿಗೆ ತಲಾ 5 ಸೆಂಟ್‌ನಂತೆ 50 ಎಕರೆ ಜಾಗವನ್ನು ನಿವೇಶನಕ್ಕೆ ಕಾಯ್ದಿರಿಸಬೇಕು. ಒತ್ತುವರಿ ಮಾಡಿರುವ ಭೂಮಿಯನ್ನು ಇಂತಹ ಬಡವರಿಗೆ ನೀಡಬೇಕು. ಈಗಾಗಲೇ ಅನೇಕ ಕಡೆ ಜಾಗ ಗುರುತಿಸಿದ್ದೇವೆ. ಈ ಕುರಿತು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಒತ್ತಾಯಿಸಿದ್ದೇವೆ. ಆದರೂ, ಜಿಲ್ಲಾಡಳಿತ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ವಿರುದ್ಧ ಕಾಂಗ್ರೆಸ್‌ಗೆ ಬಡವರು ಮತ ಹಾಕಿ ಗೆಲ್ಲಿಸಿದರು. ಆದರೆ, ಗೆದ್ದ ನಂತರ ಬಡವರ ಪರ ನಿಲ್ಲದೆ ಶ್ರೀಮಂತರ ಪರ ಇದ್ದಾರೆ ಎಂದು ಆರೋಪಿಸಿದ ಅವರು, ಭೂಗುತ್ತಿಗೆ ನೀತಿ ರದ್ದುಪಡಿಸಿ, ಒತ್ತುವರಿ ಭೂಮಿಯನ್ನು ವಶಕ್ಕೆ ಪಡೆದು ನಿರ್ವಸಿತರಿಗೆ ಭೂ ಹಂಚಿಕೆ ಮಾಡಬೇಕು ಎಂದು ಮನವಿ ಮಾಡಿದರು. ಈ ಸಂಬಂಧ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಪತ್ರ ಸಲ್ಲಿಸಲಾಯಿತು

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಎನ್.ಮೂರ್ತಿ, ಬಸವರಾಜು, ಕೆ.ಮೊಣ್ಣಪ್ಪ, ವೆಂಕಟಗಿರಿ ಭಾಗವಹಿಸಿದ್ದರು.

ಕ್ಲೋಸ್‌ಬರ್ನ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಂ.ಟಿ. ಲಕ್ಷ್ಮೀ ನಿರ್ಧಾರ

ನಿವೃತ್ತಿಯ ಬಳಿಕವೂ ಶಿಕ್ಷಕಿ ಸೇವೆ

• **ಮಡಿಕೇರಿ:** ಸರ್ಕಾರಿ ಶಾಲೆ ಶಿಕ್ಷಕರೊಬ್ಬರು ವಯೋ ನಿವೃತ್ತಿ ಬಳಿಕ ಒಂದು ವರ್ಷ ಕಾಲ ಸ್ವಇಚ್ಛೆಯಿಂದ ತನ್ನ ಸೇವೆಯನ್ನು ನೀಡುವ ಮಹತ್ವ ನಿರ್ಧಾರ ಕೈಗೊಳ್ಳುವ ಮೂಲಕ ಮಾದರಿ ನಡೆ ತೋರಿದ್ದಾರೆ.

ಮಡಿಕೇರಿ ತಾಲೂಕಿನ ಕ್ಲೋಸ್‌ಬರ್ನ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕರಾಗಿದ್ದ ಎಂ.ಟಿ. ಲಕ್ಷ್ಮೀ ಈ ಮಾದರಿ ನಿರ್ಧಾರ ತೆಗೆದುಕೊಂಡವರು. 32 ವರ್ಷ ಕಾಲ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಅವರು ಮೇ 30ಕ್ಕೆ ವಯೋನಿವೃತ್ತಿಯಾದರು. ಈ ಹಿನ್ನೆಲೆಯಲ್ಲಿ ಅವರಿಗೆ ಬೀಳ್ಕೊಡುಗೆ ಸಮಾರಂಭ ಶಾಲೆಯಲ್ಲಿ ನಡೆಯಿತು. ಈ ವೇಳೆ ಸಹಶಿಕ್ಷಕರು, ಎಸ್‌ಡಿಎಂಸಿ, ಹಳೆ ವಿದ್ಯಾರ್ಥಿಗಳು ಉಡುಗೊರೆ, ಫಲತಾಂಬೂಲ ನೀಡಿ ಗೌರವಿಸಿದರು.

ಗೌರವ ಸ್ವೀಕರಿಸಿ ಮಾತನಾಡಿದ ಲಕ್ಷ್ಮೀ, 1994ರಲ್ಲಿ ಆರಂಭಿಸಿ ಶಿಕ್ಷಕ ವೃತ್ತಿ ವಿವಿಧ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿದೆ. ಈ ಅವಧಿಯಲ್ಲಿ ಸಹಶಿಕ್ಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮಸ್ಥರು ನನಗೆ ಸಹಕರಿಸಿದ್ದಾರೆ. ಮಕ್ಕಳೊಂದಿಗೆ ಬೆರೆತು ಪಠ್ಯ ಚಟುವಟಿಕೆಯನ್ನು ಕಲಿಸುವುದನ್ನು ಆರಂಭದಿಂದಲೇ ಮೈಗೂಡಿಸಿಕೊಂಡಿದ್ದೆ. ಇಂದಿನವರೆಗೂ ಅದನ್ನೇ ಮುಂದುವರೆಕೊಂಡು ಬಂದಿದ್ದೇನೆ ಎಂದರು.

ಸಹಶಿಕ್ಷಕಿ ಉಷಾ ಮಾತನಾಡಿ, ನಲಿ–ಕಲಿ ಚಟುವಟಿಕೆಯಲ್ಲಿ ಲಕ್ಷ್ಮೀ ಟೀಚರ್ ರೀತಿ ಉತ್ಸಾಹದಿಂದ ತೊಡಗಿಸಿಕೊಳ್ಳುತ್ತಿದ್ದವರು ಬೇರೊಬ್ಬರಿಲ್ಲ. ಸರ್ಕಾರದ ನಿಯಮ ಪ್ರಕಾರ ಸಮಯ ಬಂದಾಗ ನಿವೃತ್ತಿಯಾಗಲೇಬೇಕು. ಆದರೆ ಮುಂದಿನ ಒಂದು ವರ್ಷ ಇವರು ಶಾಲೆಗೆ ಸೇವೆ ನೀಡಲು ಮನಸ್ಸು ಮಾಡಿದ್ದು ಅವರ ದೊಡ್ಡ ಗುಣ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



> **ಕ್ಲೋಸ್‌ಬರ್ನ್ ಶಾಲೆಯಲ್ಲಿ ಈ ಮೊದಲು ಕೂಡಾ ಕಾರ್ಯನಿರ್ವಹಿಸಿ ಬೇರೆಡೆ ವರ್ಗವಾಗಿದ್ದೆ. ನಿವೃತ್ತಿಗೆ 6 ತಿಂಗಳು ಮುನ್ನ ವರ್ಗಾವಣೆ ಅವಕಾಶ ಎದುರಾದಾಗ ಕ್ಲೋಸ್‌ಬರ್ನ್ ಶಾಲೆಯನ್ನೇ ಆಯ್ಕೆ ಮಾಡಿಕೊಂಡೆ. ನಿವೃತ್ತಿ ನಂತರ ಪಠ್ಯ, ಪಠ್ಯೇತರ ಚಟುವಟಿಕೆ ನಡೆಸಲು ಶಿಕ್ಷಕರಿಗೆ ಹೊರೆಯಾಗಬಾರದು, ಮಕ್ಕಳಿಗೂ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ಮುಂದಿನ ವರ್ಷ ಕಾಲ ಸ್ವಯಂ ಆಸಕ್ತಿಯಿಂದ ಬಂದು ತನ್ನ ಸೇವೆ ನೀಡುತ್ತೇನೆ.**
> ■ ಎಂ.ಟಿ. ಲಕ್ಷ್ಮೀ

ಮತ್ತೋರ್ವ ಶಿಕ್ಷಕಿ ಡಿ.ಎಂ. ಸುಜಾತ ಮಾತನಾಡಿ, ಲಕ್ಷ್ಮೀ ಅವರೊಂದಿಗಿನ ಒಡನಾಟವನ್ನು ನೆನಪಿಸಿಕೊಂಡರು. ಹಳೆ ವಿದ್ಯಾರ್ಥಿ ಕಿಶೋರ್ ರೈ ಕತ್ತಲೆಕಾಡು ಮಾತನಾಡಿ, ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಗುರುತಿಸಿ ಅವಕಾಶ ಕಲ್ಪಿಸುವ ಮೂಲಕ ಮುನ್ನೆಲೆಗೆ ತರುತ್ತಿದ್ದರು. ಇವರ ಶ್ರಮ, ಕೊಡುಗೆಯ ಫಲವಾಗಿ ಇಂದು ಅನೇಕ ಮಂದಿ ಸಮಾಜಗದ ವಿವಿಧ ಸ್ತರಗಳಲ್ಲಿ ಗೌರವದ ಜೀವನ ನಡೆಸುತ್ತಿದ್ದಾರೆಂದು ಸ್ಮರಿಸಿದರು.

ಶಾಲೆ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಲಕ್ಷ್ಮೀ ಅವರ ವೃತ್ತಿ ಪಯಣದ ವಿವರವನ್ನು ಶಿಕ್ಷಕಿ ಜೆಸ್ಸಿ ಓದಿದರು. ಶಿಕ್ಷಕಿ ಪ್ರಜ್ಞಾ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾರಾಯಣ, ಉಪಾಧ್ಯಕ್ಷೆ ಜಯಶ್ರೀ, ಪೋಷಕರು, ಶಾಲೆಯ ವಿದ್ಯಾರ್ಥಿಗಳು, ಹಳೆ ವಿದ್ಯಾರ್ಥಿಗಳು ಈ ಸಂದರ್ಭ ಉಪಸ್ಥಿತರಿದ್ದರು.

600ಕ್ಕೂ ಅಧಿಕ ಮಕ್ಕಳ ಪಾಲ್ಗೊಳ್ಳುವಿಕೆ ಅಧ್ಯಯನ ಉತ್ಸವ ಸಮಾಪನ: ವಿಜೇತರಿಗೆ ಬಹುಮಾನ ವಿತರಣೆ



• **ಕಾಸರಗೋಡು:** ಬೇಸಿಗೆ ರಜೆಯಲ್ಲಿ ಪರಪ್ಪ ಪರಿಶಿಷ್ಟ ಅಭಿವೃದ್ಧಿ ಕಚೇರಿಯ ನೇತೃತ್ವದಲ್ಲಿ 34 ಸಮಾಜ ಅಧ್ಯಯನ ಕೊಠಡಿಗಳ 600ಕ್ಕೂ ಹೆಚ್ಚು ಮಂದಿ ಮಕ್ಕಳನ್ನು ಒಳಗೊಂಡ ಅಧ್ಯಯನ ಉತ್ಸವದ ಸಮಾರೋಪ ಸಮಾರಂಭವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಶನಿವಾರ ಉದ್ಘಾಟಿಸಿದರು.

ಬಹುಮಾನ ವಿತರಣೆ

ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ, ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ಎಲ್‌ಎಸ್‌ಎಸ್, ಯುಎಸ್‌ಎಸ್ ವಿದ್ಯಾರ್ಥಿ ವೇತನ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪರಪ್ಪ ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಬಿಂದು ಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಕಿನಾನೂರು ಕರಿಂದಳಂ ಗ್ರಾಮ ಪಂಚಾಯತ್ ಅಧ್ಯಕ್ಷ ಎಂ.ರಾಜನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಬ್ಲಾಕ್ ಪಂಚಾಯತ್ ಸದಸ್ಯರಾದ ಎಂ.ಗಂಗಾಧರನ್, ಇ.ಟಿ.ಜೋಸ್, ಸುನು ಕುರಿಯಾಕೋಸ್, ದೀಪಾ ಟಿ.ಕೆ., ಸುಜಾ ಅನೀಶ್, ಸಫೀನಾ ಫೈಸಲ್, ನಸೀಮಾ, ಭವ್ಯರಾಜ್, ಗ್ರಾಮ ಪಂಚಾಯತ್ ಸದಸ್ಯೆ ಎಂ.ಓಮನಾ, ಬಿಡಿಓ ಸುನೀಲ್ ಕುಮಾರ್ ಶುಭಹಾರೈಸಿದರು.

ಪರಪ್ಪ ಪರಿಶಿಷ್ಟ ಅಭಿವೃದ್ಧಿ ಇಲಾಖೆ ಅಧಿಕಾರಿ ಬಿ.ಸಿ.ಅಯ್ಯಪ್ಪನ್ ಸ್ವಾಗತಿಸಿ, ಭೀಮನಡಿ ಪರಿಶಿಷ್ಟ ವಿಸ್ತರಣಾಧಿಕಾರಿ ಧನ್ಯವಾದವಿತ್ತರು. ಅತ್ಯುತ್ತಮ ಸಮಾಜ ಅಧ್ಯಯನ ಕೊಠಡಿಯಾಗಿ ಆಯ್ಕೆಯಾದ ತಾಯನ್ನೂರು ಮತ್ತು ನೀರತುತ್ತಟ್ಟು ಅಧ್ಯಯನ ಕೊಠಡಿಗಳಿಗೆ ಜಿಲ್ಲಾಧಿಕಾರಿ ಬಹುಮಾನ ವಿತರಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ | ಡಾ. ಲೋಕೇಶ್ ಕರೆ

ಜಿಲ್ಲಾಸ್ಪತ್ರೆಯ ಪ್ರಯೋಜನ ಪಡೆಯಿರಿ

• **ಸೋಮವಾರಪೇಟೆ:** ಆರೋಗ್ಯ ಸಮಸ್ಯೆಗಳು ಆರಂಭಿಕ ಹಂತದಲ್ಲೇ ಪತ್ತೆಯಾದರೆ ಚಿಕಿತ್ಸೆ ಸುಲಭವಾಗುತ್ತದೆ. ಜಿಲ್ಲಾಸ್ಪತ್ರೆಯಲ್ಲಿ ದೊರೆಯುವ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದು ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಬೋಧಕ ಆಸ್ಪತ್ರೆಯ ಡೀನ್ ಡಾ. ಲೋಕೇಶ್ ಅಭಿಪ್ರಾಯಪಟ್ಟರು.

ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಸೋಮವಾರಪೇಟೆ ತಾಲೂಕು ಘಟಕ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ–ಬೋಧಕ ಆಸ್ಪತ್ರೆ ಹಾಗೂ ಮಾದಾಪುರ ಗ್ರಾಮ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಶನಿವಾರ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎಂಬಿಬಿಎಸ್ ಸೇರಿದಂತೆ ಆರೋಗ್ಯ ವಿಜ್ಞಾನ ಕೋರ್ಸ್‌ಗಳು ಲಭ್ಯವಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬಹುದು ಎಂದರು.



ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ ಮಾತನಾಡಿ, ಗರ್ಭಿಣಿಯರು ಹಾಗೂ ಮಕ್ಕಳ ಆರೋಗ್ಯ ರಕ್ಷಣೆಗೆ ಸರ್ಕಾರದಿಂದ ಹಲವು ಸೌಲಭ್ಯಗಳು ಲಭ್ಯವಿವೆ. ಗರ್ಭಧಾರಣೆಯ ಆರಂಭದಿಂದಲೇ ನಿಯಮಿತ ತಪಾಸಣೆ, ಪೌಷ್ಟಿಕ ಆಹಾರ ಹಾಗೂ ವೈದ್ಯರ ಸಲಹೆಗಳನ್ನು ಪಾಲಿಸುವುದು ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಅಗತ್ಯವಾಗಿದೆ. ಬೋಧಕ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಸೇವೆ, ಹೆರಿಗೆ ಸೌಲಭ್ಯ, ನವಜಾತ ಶಿಶುಗಳ ಆರೈಕೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕಿ ಸವಿತಾ ರೈ ಮಾತನಾಡಿ, ಮಡಿಕೇರಿಯ ಜಿಲ್ಲಾಸ್ಪತ್ರೆಯಲ್ಲಿ ಎಲ್ಲಾ ರೀತಿಯ ಆರೋಗ್ಯ ಸೇವೆಗಳು ಒಂದೇ ಸೂರಿನಲ್ಲಿ ದೊರೆಯುತ್ತಿದೆ. ಅಚ್ಚುಕಟ್ಟಾದ ಸೇವೆ ಸಿಗುತ್ತಿದೆ. ಗ್ರಾಮೀಣ ಜನರಿಗೆ ಸೌಲಭ್ಯ ಸಿಗಬೇಕೆಂಬ ಉದ್ದೇಶದಿಂದ ಇಂತಹ ಸ್ಥಳಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಜನರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ವೈದ್ಯಕೀಯ ಸೇವೆಗಳ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವ ಕುಂಬೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಜನರಿಗೆ ಆರೋಗ್ಯ ಸೇವೆಗಳನ್ನು ಮನೆಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಇಂತಹ ಶಿಬಿರಗಳನ್ನು ಸಂಘದ ವತಿಯಿಂದ ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಜನರಿಗೆ ನೆರವಾಗುವ ಕಾರ್ಯಕ್ರಮಗಳನ್ನು ಮುಂದೆಯೂ ಹಮ್ಮಿಕೊಳ್ಳಲಾಗುವುದು ಎಂದರು.

ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಪರಮೇಶ್ ಕುಮಾರ್ ಮಾತನಾಡಿ, ಪ್ರತಿಯೊಬ್ಬರೂ ನಿಯಮಿತ ವ್ಯಾಯಾಮ ನಿತ್ಯ ಮಾಡಿದರೆ, ಆರೋಗ್ಯವಂತರಾಗಿರಬಹುದು. ಆರೋಗ್ಯ ಇದ್ದರೆ ಮಾತ್ರ ಕೆಲಸವನ್ನು ಬದ್ಧತೆಯಿಂದ ಮಾಡಲು ಸಾಧ್ಯ ಎಂದರು.

ಪಂಚಾಯತ್ ಆಡಳಿತಾಧಿಕಾರಿ ಹೇಮಂತ್, ಪಿಡಿಓ ರವಿ, ಕರವೇ ಅಧ್ಯಕ್ಷ ಬಬಿನ್ ನಾಗಂಡ ವೇದಿಕೆಯಲ್ಲಿದ್ದರು. ಸಾರ್ವಜನಿಕರು, ಪಂಚಾಯತ್ ಸಿಬ್ಬಂದಿಗಳು ಮತ್ತು ಪತ್ರಕರ್ತರು ರಕ್ತದಾನ ಮಾಡಿದರು.

ಡಾ. ಬಿ. ಬಿ. ಹೆಗ್ಡೆ ಕಾಲೇಜಿನಲ್ಲಿ 'ವಾರ್ಷಿಕ ಗೇಮ್ ಫೆಸ್ಟ್'

ಕ್ರೀಡೆಯಿಂದ ಮಾನಸಿಕ ಕ್ಷಮತೆ

• **ಕುಂದಾಪುರ:** ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ಸಹಕಾರಿ. ದೈಹಿಕ ಕ್ಷಮತೆಯೊಂದಿಗೆ ಕ್ರೀಡೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮಾನಸಿಕ ಕ್ಷಮತೆಯನ್ನು ಕಂಡುಕೊಳ್ಳಬಹುದು. ಪರಿಶ್ರಮದ ಮೂಲಕ ಸಾಧನೆ ಮಾಡಿದ ಕ್ರೀಡಾ ವಿದ್ಯಾರ್ಥಿಗಳು ಸಾಧನೆಗೆ ಕಾರಣಿಕರ್ತರಾದ ಸಂಸ್ಥೆ ಮಾರ್ಗದರ್ಶಕರನ್ನು ಎಂದೂ ಮರೆಯಬಾರದು ಎಂದು ಕುಂದಾಪುರದ ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ರಾಘವೇಂದ್ರ ಗಾಣಿಗ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಬುಧವಾರ ಜರಗಿದ 'ವಾರ್ಷಿಕ ಗೇಮ್ ಫೆಸ್ಟ್' ಪ್ರಸಕ್ತ ಶೈಕ್ಷಣಿಕ ವರ್ಷ ಮಂಗಳೂರು ವಿಶ್ವ ವಿದ್ಯಾನಿಲಯ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾ ಸಾಧಕ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಅಂತರ್– ತರಗತಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.



ಸಂಸ್ಥೆಯ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವಿಶ್ವ ವಿದ್ಯಾನಿಲಯ ಮಟ್ಟದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ನಿಶಾಂತ್ ಡಿಸೋಜ, ಮಂಜುನಾಥ್, ವಿನ್ಸಂಟನ್, ಲಕ್ಷ್ಮೀ, ಸಿಂಚನಾ ಜಿ. ನಾಯಕ್, ಸುಜನ ಭಂಡಾರಿ, ಆರ್ಯ ವಿ.ಪುತ್ರನ್, ಜೀವನ ಪೂಜಾರಿ, ಶ್ರೀನಿಧಿ ಶೆಟ್ಟಿ, ಪ್ರಶಾಂತ ಗೌಡ, ಪ್ರಜ್ವಲ್ ಡಿ.ಪಿ. ಅವರನ್ನು ಸನ್ಮಾನಿಸಲಾಯಿತು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ ಸ್ವಾಗತಿಸಿ, ಪ್ರಸ್ತಾವಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ರಂಜಿತ್ ಟಿ. ಎನ್. ವಂದಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಸತೀಶ ಶೆಟ್ಟಿ ಹೆಸ್ಕತ್ತೂರು ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿ ಸುಹಾಸ ಮಲ್ಯ ಪ್ರಾರ್ಥಿಸಿದರು.

ಲಕ್ಷ್ಮೀಪುರ ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ಮಂಡಳಿಯ ರಜತ ಮಹೋತ್ಸವ | ಸಾಧಕ ಮಹಿಳೆಯರಿಗೆ ಸನ್ಮಾನ

ಮಹಿಳಾ ಸಬಲೀಕರಣದಿಂದ ದೇಶದ ಪ್ರಗತಿ ಸಾಧ್ಯ: ಶಾರದ ವೈ ಶೇಣಿ

• **ಕಾರ್ಕಳ:** ಲಕ್ಷ್ಮೀಪುರ ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ಮಂಡಳಿಯ ರಜತ ಮಹೋತ್ಸವವು ಇತ್ತೀಚೆಗೆ ಜರಗಿತು.

ಸಭಾಧ್ಯಕ್ಷತೆಯ ವಹಿಸಿದ್ದ ಮಹಿಳಾ ಮಂಡಳಿಯ ಅಧ್ಯಕ್ಷೆ ಉಷಾ ನಾಯಕ್ ಮಂಡಳಿ 25 ವರ್ಷಗಳಿಂದ ನಡೆದು ಹಾದಿ ಬಗ್ಗೆ ಸಿಂಹಾವಲೋಕನ ಮಾಡಿದರು.

ಶಾರದಾಂಬ ವಿದ್ಯಾ ಸಂಸ್ಥೆಗಳು ಶೇಣಿ ಕಾಸರಗೋಡು ಇದರ ಸಂಚಾಲಕಿ ಶಾರದ ವೈ ಶೇಣಿ ಕಾರ್ಯಕ್ರಮ ಉದ್ಘಾಟಿಸಿ, ನಮ್ಮ ಸಮಾಜದ ಮಹಿಳೆಯರ ಸ್ಥಿತಿಗತಿಯ ಬಗ್ಗೆ ವಿವರಿಸಿ, ಮಹಿಳಾ ಸಬಲೀಕರಣ ಅಗತ್ಯವಿದೆ. ಇದರಿಂದ ದೇಶ, ಸಮಾಜದ ಪ್ರಗತಿ ಸಾಧ್ಯ ಎಂದು ಹೇಳಿದರು.

ಮಂಗಳೂರು ಐ.ಸಿ.ಎ.ಐ. ಉಪಾಧ್ಯಕ್ಷೆ ಸಿ.ಎ. ಮಮತಾ ರಾವ್, ರಾ.ಸಾ. ಬ್ರಾ. ಮಹಿಳಾ ವೇದಿಕೆ ಮಣಿಪಾಲ ಇದರ ಮಾಜಿ ಅಧ್ಯಕ್ಷೆ ಮೋಹಿನಿ ನಾಯಕ್, ಶ್ರೀವರದ ಸಿದ್ಧಿ ವಿನಾಯಕ ಸೇವಾಮಂಡಲ ಡೊಂಬಿವಿಲಿ ಮುಂಬೈ ಇದರ ವರ್ಷ ನಾಯಕ್, ರಾ.ಸಾ. ಬ್ರಾ. ಸಂಘ ಮಣಿಪಾಲ ಇದರ ಕಾರ್ಯದರ್ಶಿ ಸುಮಿತ್ರ, ರಾ.ಸಾ.ಸಮಾಜ ಬೆಂಗಳೂರು ಇದರ ಜಂಟಿ ಕೋಶಾಧಿಕಾರಿ ಸುಧಾ ಪ್ರಭು, ರಾ.ಸಾ.ಬ್ರಾ. ಮಹಿಳಾ ಮಂಡಳಿ ಬೆಂಗಳೂರು ಇದರ ಇಂದುಮತಿ ವಾಗ್ಲೆ, ರಾ.ಸಾ. ಬ್ರಾ. ಮಹಿಳಾ ವೇದಿಕೆ ಮಣಿಪಾಲ ಇದರ ಅಧ್ಯಕ್ಷೆ ರೂಪ ನಾಯಕ್, ರಾ. ಸಾ. ಬ್ರಾ. ಮಹಿಳಾ ಮಂಡಳಿ, ಬಂಟಕಲ್ಲು ಇದರ ಅಧ್ಯಕ್ಷೆ ವನಿತಾ ನಾಯಕ್, ರಾ. ಸಾ. ಬ್ರಾ. ಮಹಿಳಾ ಮಂಡಳಿ ಬೆಳಗಾವಿಯ ಇಂದಿರಾ ಕಾಮತ್, ರಾ.ಸಾ.ಬ್ರಾ. ಸಂಘ ತೀರ್ಥಹಳ್ಳಿ ಇದರ ಮಾಜಿ ಅಧ್ಯಕ್ಷೆ ಸುಮ ನಾಯಕ್, ಆಡಳಿತ ಮೊಕ್ತೇಸರರಾದ ಚೇತನ್ ನಾಯಕ್, ರಾ.ಸಾ.ಸಂಘ ಲಕ್ಷ್ಮೀಪುರ ಅಧ್ಯಕ್ಷ ಬಾಲಕೃಷ್ಣ ನಾಯಕ್ ಉಪಸ್ಥಿತರಿದ್ದರು.



ಸನ್ಮಾನ ಕಾರ್ಯಕ್ರಮ

ರಾ.ಸಾ. ಬ್ರಾ. ಮಹಿಳಾ ಮಂಡಲಿ ಲಕ್ಷ್ಮೀ ಪುರ ಇದರ ಸ್ಥಾಪಕ ಅಧ್ಯಕ್ಷೆ ಇಂದುಮತಿ ಪ್ರಭು, ಸ್ಥಾಪಕ ಕೋಶಾಧಿಕಾರಿ ಶುಭಾ ವಾಗ್ಲೆ, ಸಾಧಕ ಮಹಿಳೆಯರಾದ ಮಾನಸ ವಾಗ್ಲೆ, ಭಾಗವತರಾದ ಪಡುಬಿದ್ರಿ ಕಾವ್ಯಶ್ರೀ ನಾಯಕ್ ಅಜೇರು, ರಾಜೀವಿ ನಾಯಕ್ ಹಾಗೂ ಶೈಕ್ಷಣಿಕ ಸಾಲಿನಲ್ಲಿ ಗರಿಷ್ಠ ಅಂಕಗಳಿಸಿದ ಮಹಾಲಕ್ಷ್ಮೀ ಭಾಗವ್ ಮತ್ತು ಧೃತಿ ನಾಯಕ್ ಹಾಗೂ ಪಿಯುಸಿಯಲ್ಲಿ ಸಮೀಕ್ಷಾ ಆರ್. ಮತ್ತು ಸ್ಮೃತಿ ದೊಂಡ್ಯೆ ಹಾಗೂ ರಾ. ಸಾ. ಬ್ರಾ. ಮಹಿಳಾ ಮಂಡಲಿಯ ಕೋಶಾಧಿಕಾರಿ ಶೋಭಾ ಪ್ರಭು ಮತ್ತು ಮಂಡಲಿಯ ಅಧ್ಯಕ್ಷೆ ಉಷಾ ನಾಯಕ್ ಅವನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ವಿಚಾರಗೋಷ್ಠಿಯಲ್ಲಿ ಗೀತಾ ವಾಗ್ಲೆ ಅವರು 'ಅಮ್ಚಿ ಆರ್.ಎಸ್.ಬಿ. ಅಸ್ಮಿತೆ, ಅಮ್ಚಿ ಭಾಷಾ ಅಮ್ಚಿ ಸಂಸ್ಕೃತಿ', ವಿದ್ಯಾಲತಾ ಅವರು 'ಮಹಿಳಾ ಸಬಲೀಕರಣ', ಡಾ. ಶ್ರುತಿ ನಾಯಕ್, ಮಹಿಳಾ ಆರೋಗ್ಯ ಜಾಗೃತಿ' ವಿಷಯದ ಬಗ್ಗೆ ಮಾತನಾಡಿದರು. ಮಂಡಳಿಯ ಸದಸ್ಯರಾದ ರೇವತಿ ತೆಂಡುಲ್ಕರ್ ಹಾಗೂ ವಿದ್ಯಾ ಪಾಟ್ಕರ್ ನಿರ್ವಹಿಸಿದರು. ಶ್ರೀನಿಧಿ ನಿರೂಪಿಸಿದರು. ಉಷಾ ನಾಯಕ್ ಸ್ವಾಗತಿಸಿ, ವಂದಿಸಿದರು.

ಕಿರುಸುದ್ದಿ

ಎಸ್ಸೆಸೆಲ್ಸಿ ಮರು ಮೌಲ್ಯಮಾಪನ : ವಿದ್ಯಾರ್ಥಿನಿ ಸುಶ್ಮಿತಾಗೆ 624 ಅಂಕ

• **ಸುಬ್ರಹ್ಮಣ್ಯ:** ಎಸ್ಸೆಸೆಲ್ಸಿ ಮರು ಮೌಲ್ಯ ಮಾಪನ ಮತ್ತು ಮರು ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆಯುವ ಮೂಲಕ ಕುಕ್ಕೆ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯದ ವಿದ್ಯಾರ್ಥಿನಿ ಸುಶ್ಮಿತಾ ಬಿ. ಅವರು 625ಕ್ಕೆ 624 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿದ್ದಾರೆ.



ಈ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿನಿಯೊಬ್ಬರು ಉತ್ತಮ ಸಾಧನೆ ಮಾಡಿದ್ದಾರೆ. ಆರಂಭದಲ್ಲಿ ಸುಶ್ಮಿತಾ ಒಟ್ಟು 613 ಅಂಕ ಪಡೆದಿದ್ದರು. ಸಮಾಜ ವಿಜ್ಞಾನದಲ್ಲಿ 95 ಅಂಕ ಪಡೆದಿದ್ದು ಮರು ಮೌಲ್ಯಮಾಪನವಾದಾಗ ಹೆಚ್ಚುವರಿ 4 ಅಂಕ ದೊರಕಿ 99 ಆಯಿತು. ಹಾಗೆ ಒಟ್ಟು 617 ಅಂಕ ಪಡೆದರು. ಬಳಿಕ ವಿಜ್ಞಾನ ವಿಷಯಕ್ಕೆ ಮರು ಪರೀಕ್ಷೆ ಬರೆದಾಗ ಅದರಲ್ಲಿ 100ರಲ್ಲಿ 100 ಅಂಕ ಗಳಿಸಿದರು. ಹಾಗೆ 625ರಲ್ಲಿ 624 ಅಂಕ ಪಡೆದು ರಾಜ್ಯಕ್ಕೆ ಎರಡನೇ ಸ್ಥಾನಿಯಾಗಿ ಹೊರ ಹೊಮ್ಮಿದರು. ಕನ್ನಡ 125, ಇಂಗ್ಲೀಷ್ 100, ಹಿಂದಿ 100, ಗಣಿತ 100, ಸಮಾಜ ವಿಜ್ಞಾನ 99 ಅಂಕ ಪಡೆದಿದ್ದಾರೆ. ಸುಶ್ಮಿತಾ ಅವರು ನಾಲ್ಕೂರು ಗ್ರಾಮದ ಅಂಜೇರಿಯ ಕೃಷಿಕರ ಸುಬ್ಬಪ್ಪ ಪಾಟಾಳಿ ಮತ್ತು ವೇದಾವತಿ ದಂಪತಿಯ ಪುತ್ರಿ.

ಅಂಕ ಪಟ್ಟಿಯಲ್ಲಿ ದೋಷ

ಸುಶ್ಮಿತಾ ಅವರ ಅಂತಿಮ ಅಂಕ ಪಟ್ಟಿಯಲ್ಲಿ ದೋಷ ಕಂಡು ಬಂದಿದೆ. ಇದರಲ್ಲಿ ಮರು ಮೌಲ್ಯಮಾಪನದ 4 ಹೆಚ್ಚುವರಿ ಅಂಕಗಳು ನಮೂದಾಗದೇ ಒಟ್ಟು 620 ಎಂದೇ ದಾಖಲಾಗಿದೆ. ಇದೀಗ ಈ ಪ್ರಮಾದವನ್ನು ಮತ್ತೆ ಸರಿಪಡಿಸಬೇಕಾಗಿದೆ.

ಟಿ. ಆರ್. ಶಮಂತ್‌ಗೆ ಎಸ್ಸೆಸೆಲ್ಸಿ ಪರೀಕ್ಷೆ 2 ರಲ್ಲಿ 96.8 ಶೇ.

ನಾಪೋಕ್ಲು: ಇಲ್ಲಿಗೆ ಸಮೀಪದ ಬೇತು ಗ್ರಾಮದ ಎಕ್ಸಲ್ ಸ್ಕೂಲ್ ಆಫ್ ಎಜುಕೇಶನ್ ವಿದ್ಯಾರ್ಥಿ ಟಿ. ಆರ್. ಶಮಂತ್ ಎಸ್ಸೆಸೆಲ್ಸಿ ಪರೀಕ್ಷೆ 2 ರಲ್ಲಿ 605 ಅಂಕ ಗಳಿಸಿದ್ದು ಹೋಬಳಿ ವ್ಯಾಪ್ತಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾನೆ. ಈತ ಇಂಗ್ಲೀಷ್ ನಲ್ಲಿ 118, ಕನ್ನಡ ದಲ್ಲಿ 96,ಹಿಂದಿ ಯಲ್ಲಿ ಲ್ಲಿ100, ಗಣಿತ ದಲ್ಲಿ 96, ವಿಜ್ಞಾನದಲ್ಲಿ97, ಸಮಾಜ ದಲ್ಲಿ 98 ಅಂಕ ಗಳಿಸಿದ್ದಾನೆ.



ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ 96.8 ಶೇಕಡಾ ಅಂಕಗಳಿಸಿರುವ ಶಮಂತ್ ನಾಪೋಕ್ಲು ಕಲ್ಲು ಮೊಟ್ಟೆ ನಿವಾಸಿ ರಮೇಶ್ ಮತ್ತು ಚಂದ್ರಕಲಾ ದಂಪತಿಯ ಪುತ್ರ.

ಎಸ್ಸೆಸೆಲ್ಸಿ: ಧರ್ಮಸ್ಥಳದ ಜೆ. ಮಾಧುರ್ಯ ಶೇ. 100 ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮಸ್ಥಾನ

ಉಜಿರೆ: 2025–26ನೆ ಸಾಲಿನ ಎಸ್ಸೆಸೆಲ್ಸಿ ಪರೀಕ್ಷೆ – 2 ರಲ್ಲಿ ಧರ್ಮಸ್ಥಳದ ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ 625ರಲ್ಲಿ 625 ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ ಪ್ರಥಮಸ್ಥಾನ ಪಡೆದಿದ್ದಾಳೆ. ಈಕೆ ಧರ್ಮಸ್ಥಳದ ನಿವಾಸಿ ಸುಬ್ರಹ್ಮಣ್ಯ ಪ್ರಸಾದ್ ಮತ್ತು ಮಧುರಾ ದಂಪತಿಯ ಪುತ್ರಿ.



ಬಾವಿಯಲ್ಲಿ ವೃದ್ಧೆಯ ಮೃತದೇಹ ಪತ್ತೆ

• **ಮಡಿಕೇರಿ:** ವೃದ್ಧೆಯೊಬ್ಬರ ಮೃತದೇಹ ಕಿರಿದಾದ ಬಾವಿಯೊಂದರಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಚೆಟ್ಟಳ್ಳಿ ಸಮೀಪದ ಚೇರಳ ಶ್ರೀಮಂಗಲ ಗ್ರಾಮದ ವಿಜಯಲಕ್ಷ್ಮಿ (86) ಎಂಬವರ ಮೃತದೇಹ ಕಿರಿದಾದ ಬಾವಿಯಲ್ಲಿ ಪತ್ತೆಯಾದ ಹಿನ್ನೆಲೆಯಲ್ಲಿ ಮಡಿಕೇರಿ ಗ್ರಾಮಾಂತರ ಪೊಲೀಸರು ಹಾಗೂ ಅಗ್ನಿ ಶಾಮಕ ದಳ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಮೇಲೆತ್ತಿದ್ದಾರೆ. ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದ್ದು, ಮೃತದೇಹದ ಮರಣೋತ್ತರ ಪರೀಕ್ಷೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಪೊಲೀಸರ ತನಿಖೆಯಿಂದ ಸಾವಿಗೆ ನಿಖರ ಕಾರಣ ತಿಳಿದು ಬರಬೇಕಿದ್ದು, ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಸಾರ ಭಾರತಿ ದೂರದರ್ಶನದಲ್ಲಿ ಕೃತಿ ಕೈಲಾರ್‌ಗೆ 'ಬಿ' ಗ್ರೇಡ್

• **ಉಪ್ಪಿನಂಗಡಿ:** ಪ್ರಸಾರ ಭಾರತಿ ದೂರದರ್ಶನದಲ್ಲಿ ಭರತನಾಟ್ಯವನ್ನು ಪ್ರದರ್ಶನ ನೀಡುವ ನಿಟ್ಟಿನಲ್ಲಿ ಉಪ್ಪಿನಂಗಡಿಯ ಕೃತಿ ಕೈಲಾರ್ ಅವರಿಗೆ 'ಬಿ' ಗ್ರೇಡ್ ಕಲಾವಿದೆಯಾಗಿ ಮಾನ್ಯತೆ ದೊರಕಿದೆ.



ಉಪ್ಪಿನಂಗಡಿಯ ಕೈಲಾರ್ ರಾಜಗೋಪಾಲ ಭಟ್ ಮತ್ತು ಸತ್ಯೇಶ್ವರಿ ದಂಪತಿಯ ಪುತ್ರಿಯಾಗಿರುವ ಈಕೆ ಭರತನಾಟ್ಯ ಶಾಸ್ತ್ರಪ್ರವೀಣೆಯಾಗಿದ್ದು, ಹಲವಾರು ವೇದಿಕೆಗಳಲ್ಲಿ ಭರತನಾಟ್ಯ ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ. ಈಕೆಯ ಭರತಾನಾಟ್ಯ ಪ್ರಾವೀಣ್ಯತೆಯನ್ನು ಕಂಡ ಪ್ರಸಾರ ಭಾರತಿಯ ಆಯ್ಕೆ ಸಮಿತಿಯು ದೂರದರ್ಶನದಲ್ಲಿ ಕಾರ್ಯಕ್ರಮ ನೀಡುವ ನಿಟ್ಟಿನಲ್ಲಿ ಬಿ ಗ್ರೇಡ್ ಕಲಾವಿದೆ ಯಾಗಿ ಇವರನ್ನು ಆಯ್ಕೆ ಮಾಡಿದೆ. ಪ್ರಸಕ್ತ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಅಂತಿಮ ವರ್ಷದ ಬಿಬಿಎಲ್ ಎಲ್‌ಬಿ ವಿದ್ಯಾರ್ಥಿನಿಯಾಗಿದ್ದು, ವಿದ್ವಾನ್ ಬಾಲಕೃಷ್ಣ ಮಂಜೇಶ್ವರ ಹಾಗೂ ವಿದುಷಿ ಸುಹಾಸಿನಿ ಕೌಲಗಿ ಅವರ ಮಾರ್ಗದರ್ಶನದಲ್ಲಿ ನೃತ್ಯಾಭ್ಯಾಸವನ್ನು ಮುಂದುವರಸುತ್ತಿದ್ದಾರೆ. ಮಾತ್ರವಲ್ಲದೆ ವಿದ್ವಾನ್ ಡಾ. ಆರ್. ಎಸ್. ನಂದ ಕುಮಾರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿದ್ದಾರೆ. ಈಕೆ ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದ ಹಿರಿಯ ವಿದ್ಯಾರ್ಥಿನಿಯಾಗಿದ್ದಾರೆ.



ಶಾಲಾ ಪ್ರಾರಂಭಕ್ಕೂ ಮುನ್ನ ಗಂಗೊಳ್ಳಿಯ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ಗಂಗೊಳ್ಳಿ ಖಾರ್ವಿಕೇರಿಯ ಕೊಂಚಾಡಿ ರಾಧಾ ಶೆಣೈ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ಸ್ವಚ್ಛತಾ ಕಾರ್ಯ ನಡೆಸಿದರು. ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರ ಕಾರ್ಯವನ್ನು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಮತ್ತು ಎಸ್‌ಡಿಎಂಸಿ ಸದಸ್ಯರು ಶ್ಲಾಘಿಸಿದ್ದಾರೆ.

ಕರ್ನಾಟಕ ರಾಜ್ಯ ಐಸ್ ಸ್ಕೇಟಿಂಗ್ ಚಾಂಪಿಯನ್‌ಶಿಪ್

ಸಾಧನಾಗೆ ಎರಡು ಕಂಚಿನ ಪದಕ

• **ಕುಶಾಲನಗರ:** ಡೆಹರಾಡೂನ್‌ನ ಹಿಮಾದ್ರಿ ಐಸ್ ರಿಂಕ್‌ನಲ್ಲಿ ಮೇ 26 ಮತ್ತು 27ರಂದು ನಡೆದ ಕರ್ನಾಟಕ ರಾಜ್ಯ ಐಸ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಶಾರ್ಟ್ ಟ್ರ್ಯಾಕ್ ಮತ್ತು ಲಾಂಗ್ ಟ್ರ್ಯಾಕ್ ಸ್ಪರ್ಧೆಗಳಲ್ಲಿ ತೊರೆನೂರಿನ ಸಾಧನಾ ಅವರು ಎರಡು ಕಂಚಿನ ಪದಕಗಳನ್ನು ಗೆದ್ದು ಗಮನಾರ್ಹ ಸಾಧನೆ ಮಾಡಿದ್ದಾರೆ. ಅಲ್ಲದೇ ಜೂನ್ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್ ಶಿಪ್‌ಗೂ ಆಯ್ಕೆಯಾಗಿದ್ದಾರೆ.



ಸಾಧನಾ ತೊರೆನೂರು, ಕುಶಾಲನಗರದ ಏಂಜಲ್ಸ್ ವಿಂಗ್ಸ್ ಸ್ಕೇಟಿಂಗ್ ಅಕಾಡೆಮಿಯ ಸ್ಕೇಟರ್ ಆಗಿದ್ದು, ಅಲ್ಲಿನ ಯೂನಿಕ್ ಅಕಾಡೆಮಿ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಕರ್ನಾಟಕ ಐಸ್ ಸ್ಕೇಟಿಂಗ್ ಅಸೋಸಿಯೇಷನ್ (ಏಐಖಿಐ) ಡೆಹರಾಡೂನ್‌ನ ಹಿಮಾದ್ರಿ ಐಸ್ ರಿಂಕ್‌ನಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಐಸ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕೊಡಗು ಜಿಲ್ಲೆಯನ್ನು ಪ್ರತಿನಿಧಿಸಿದ್ದ ಸಾಧನಾ, ಶಾರ್ಟ್ ಟ್ರ್ಯಾಕ್ ಮತ್ತು ಲಾಂಗ್ ಟ್ರ್ಯಾಕ್ ಐಸ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಿ, 11 ರಿಂದ 13 ವರ್ಷ ವಯಸ್ಸಿನ ಜೂನಿಯರ್ ಡಿ ಬಾಲಕಿಯರ ವಿಭಾಗದಲ್ಲಿ 500 ಮೀ ಮತ್ತು 1000 ಮೀ ಲಾಂಗ್ ಟ್ರ್ಯಾಕ್ ಸ್ಪರ್ಧೆಗಳಲ್ಲಿ 2 ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಮೈಸೂರು ನಗರದ ಸಿಟಿರನ್ ರೋಲರ್ ಸ್ಕೇಟಿಂಗ್ ಅಕಾಡೆಮಿಯಲ್ಲಿ, ಏಕಲವ್ಯ ಪ್ರಶಸ್ತಿ ವಿಜೇತ ಕೋಚ್ ಡಾ. ವರ್ಷಾ ಎಸ್. ಪುರಾಣಿಕ್ ಅವರ ಬಳಿ ಸಾಧನಾ ತರಬೇತಿ ಪಡೆಯುತ್ತಿರುವ ಸಾಧನಾ ತೊರೆನೂರು, 2024ರಲ್ಲಿ ಕುಶಾಲನಗರದ ಏಂಜಲ್ಸ್ ವಿಂಗ್ಸ್ ಸ್ಕೇಟಿಂಗ್ ಅಕಾಡೆಮಿಯಲ್ಲಿ ತಮ್ಮ ಅಭ್ಯಾಸವನ್ನು ಆರಂಭಿಸಿದ್ದರು. ಕಡಿಮೆ ಅವಧಿಯಲ್ಲೇ ಕೊಡಗು ಜಿಲ್ಲೆಯನ್ನು ಪ್ರತಿನಿಧಿಸಿ ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಹಲವು ಪದಕಗಳನ್ನು ಗೆದ್ದು ಗಮನ ಸೆಳೆದಿರುವ ಈಕೆ ಬ್ಯಾಂಡಿ ನ್ಯಾಷನಲ್ಸ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕರ್ನಾಟಕ ಬ್ಯಾಂಡಿ ತಂಡಕ್ಕೆ ಹಲವಾರು ಪದಕಗಳನ್ನು ತಂದುಕೊಟ್ಟಿದ್ದಾರೆ. ಸಾಧನಾ ಅವರು ಟಿ.ವಿ. ರವಿ ಮತ್ತು ಸುಪ್ರೀತಾ ಎ.ಎಸ್. ಅವರ ಪುತ್ರಿ.

ಸರ್ವತೋಮುಖ ಶಿಕ್ಷಣ ಕಲ್ಪನೆಯಲ್ಲಿ ಗುತ್ತಿಗಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಣ

ಗುಣಮಟ್ಟಕ್ಕೆ 304 ವಿದ್ಯಾರ್ಥಿಗಳೇ ಸಾಕ್ಷಿ!

ದಿಗಂತ ವಿಶೇಷ

ಸುಬ್ರಹ್ಮಣ್ಯ: ಗ್ರಾಮೀಣ ಭಾಗದ ಶಾಲೆಯೊಂದು ಕೆ.ಪಿ.ಎಸ್. ಮಾದರಿಯಲ್ಲಿ ಸ್ವ ಪ್ರಯತ್ನದಿಂದ ಮುಂದೆ ಬಂದು ಪ್ರಗತಿ ಸಾಧಿಸಿದೆ. ಗುತ್ತಿಗಾರಿನ ಪಿ.ಎಂ.ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯು ಸರ್ವತೋಮುಖ ಶಿಕ್ಷಣ ಕಲ್ಪನೆಯಲ್ಲಿ ಶಿಕ್ಷಣ ನೀಡುವ ಮೂಲಕ ಗ್ರಾಮೀಣ ವಿದ್ಯಾರ್ಥಿಗಳ ಅಭ್ಯುದಯಕ್ಕೆ ಮೆಟ್ಟಿಲಾಗಿದೆ. 304 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಇಲ್ಲಿ ದೊರಕುವ ಗುಣಮಟ್ಟದ ಉತ್ಕೃಷ್ಟ ಶಿಕ್ಷಣಕ್ಕೆ ಸಾಕ್ಷಿ.

ಅತೀ ಹೆಚ್ಚು ವಿದ್ಯಾರ್ಥಿಗಳು

ಕೆಪಿಎಸ್ ಶಾಲೆಗಳನ್ನು ಬಿಟ್ಟರೆ ಸುಳ್ಯ ತಾಲೂಕಿನಲ್ಲಿ ಇದೇ ಶಾಲೆ ಮಕ್ಕಳ ಸಂಖ್ಯೆಯಲ್ಲಿ ಟಾಪರ್ ಆಗಿದೆ. ತಾಲೂಕಿನಲ್ಲಿ ಅತಿ ಹೆಚ್ಚು ಮಕ್ಕಳಿರುವ ಮೂರನೇ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 8 ವರ್ಷಗಳ ಹಿಂದೆ ಇಲ್ಲಿ ಎಲ್.ಕೆ.ಜಿ, ಯುಕೆಜಿ ಆರಂಭಿಸಿ ಆರನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮ ತರಗತಿಗಳು ನಡೆಯುತ್ತಿದೆ.

ಸರ್ವತೋಮುಖಿ ಜ್ಞಾನ

ಇಲ್ಲಿ ಓದು ಬರಹದೊಂದಿದೆ ಭವಿಷ್ಯ ರೂಪಿಸುವ ಶಿಕ್ಷಣವೂ ಲಭ್ಯ. ಉಚಿತ ಸಂಗೀತ ಶಿಕ್ಷಣ, ಸ್ಪೋಕನ್ ಇಂಗ್ಲೀಷ್, ಕೌಶಲ್ಯ ಆಧಾರಿತ ಶಿಕ್ಷಣ, ಆರ್ಟ್ಸ್ ಮತ್ತು ಕ್ರಾಫ್ಟ್, ದೈಹಿಕ ಶಿಕ್ಷಣದೊಂದಿಗೆ ವಿಶೇಷ ಕ್ರೀಡಾ ತರಬೇತಿ, ಕ್ರೀಡೆಯೊಂದಿಗೆ ಪಾಠ, ಸ್ಮಾರ್ಟ್ ಕ್ಲಾಸ್, ಯೋಗ, ಕರಾಟೆ , ಕಂಪ್ಯೂಟರ್ ಶಿಕ್ಷಣ, ವಿದ್ಯಾರ್ಥಿಗಳೊಂದಿಗೆ ತಜ್ಞರ ಸಮಾಲೋಚನೆ, ಉಚಿತ ಶೈಕ್ಷಣಿಕ ಪ್ರವಾಸ ಮತ್ತಿತರ ಶೈಕ್ಷಣಿಕ ವ್ಯವಸ್ಥೆಗಳು ಲಭ್ಯ.



ಮಕ್ಕಳಿಗೆ ದತ್ತಿನಿಧಿ ಠೇವಣಿ

ಇದಲ್ಲದೆ ಮಧ್ಯಾಹ್ನದ ಊಟದ ಯೋಜನೆ, ಬಾಳೆಹಣ್ಣು ಮೊಟ್ಟೆ, ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಶೂ, ಸಾಕ್ಸ್, ವಿಶಾಲವಾದ ಆಟದ ಮೈದಾನ, ಉತ್ತಮ ಹಸಿರು ವಾತಾವರಣ, ಸಿ.ಸಿ ಕ್ಯಾಮರ ವ್ಯವಸ್ಥೆ, ಉಚಿತ ಆರೋಗ್ಯ ತಪಾಸಣೆ, ವಿದ್ಯಾರ್ಥಿ ವೇತನ ಇಂತಹ ವ್ಯವಸ್ಥೆಗಳಲ್ಲದೆ ಈ ವರ್ಷ ಒಂದನೇ ತರಗತಿಗೆ ದಾಖಲಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ದತ್ತಿ ನಿಧಿ ಠೇವಣಿ ಲಭ್ಯವಿದೆ.

ಕಲಿಕೆಗೆ ಪೂರಕ ವಾತಾವರಣ

ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ 16 ಕ್ಕೂ ಮಿಕ್ಕಿ ನುರಿತ ಶಿಕ್ಷಕರು ಇಲ್ಲಿದ್ದಾರೆ.ಬೇಕಾದಷ್ಟು ಕೊಠಡಿಗಳ ಸಂಖ್ಯೆ ಇದೆ. ಬೇಕಾಗುವಷ್ಟು ಶೌಚಾಲಯಗಳಿವೆ, ಸಾಕಷ್ಟು ನೀರಿನ ಲಭ್ಯತೆ ಇಲ್ಲಿದೆ. ಶಾಲೆಯ ಎದುರಿಗೆ ಇಂಟರ್ ಲಾಕ್ ಹಾಕಿ ಛಾವಣಿ ನಿರ್ಮಿಸುವ ಯೋಜನೆ ಸಿದ್ದವಾಗಿದೆ.

> **ಯಾವುದೇ ಕ್ಷೇತ್ರ ಅಥವಾ ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡಲು ಅವಕಾಶ ದೊರೆತಾಗ ಆ ಸಂಸ್ಥೆಯ ಅಭಿವೃದ್ಧಿಗೆ ಕೆಲಸ ಮಾಡುವುದು ನನ್ನ ಸಂಕಲ್ಪ. ಹಾಗೆ ಜಿ.ಪಂ ಸದಸ್ಯನಾಗಿದ್ದಾಗ ನಾನು ಕಲಿತ ಶಾಲೆಗೆ ಜಿಲ್ಲಾ ಪಂಚಾಯತ್ ನಿಂದ 5 ಕೊಠಡಿ ಕೊಟ್ಟಿರುವುದು ಸಂತೋಷ ತಂದಿದೆ. ಎಸ್‌ಡಿಎಂಸಿ ಅಧ್ಯಕ್ಷನಾಗಿ ಇಲ್ಲಿನ ಅವಶ್ಯಕತೆ ಮತ್ತು ವಿದ್ಯಾರ್ಥಿಗಳ ಜ್ಞಾನಾರ್ಜನೆ ಬೇಕಾದ ಕಾರ್ಯಗಳನ್ನು ಮಾಡಲಾಗಿದೆ. ಕಂಪ್ಯೂಟರ್ ಶಿಕ್ಷಣಕ್ಕೆ ದಾನಿಗಳ ಮೂಲಕ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಮಾಜಿ ಶಾಸಕ ಎಸ್. ಅಂಗಾರ, ಶಾಸಕಿ ಭಾಗೀರಥಿ ಮುರುಳ್ಯ ಶಾಲೆಯಲ್ಲಿ ಅಭಿವೃದ್ಧಿ ಕೆಲಸಗಳು ನಡೆಯಲು ಅನುದಾನ ನೀಡಿದ್ದಾರೆ. ಪಿ.ಎಂ.ಶ್ರೀ ಯೋಜನೆಯಲ್ಲಿ ಎಲ್‌ಕೆಜಿ, ಯುಕೆಜಿಗೆ ನೂತನ ಕೊಠಡಿ ರಚನೆ ಕೆಲಸ ಪ್ರಗತಿಯಲ್ಲಿದೆ. ಶಾಲೆಯ ಮುಖ್ಯೋಪಾಧ್ಯಾಯಿನಿ, ಶಿಕ್ಷಕ ವೃಂದ, ಹಳೆ ವಿದ್ಯಾರ್ಥಿ ಸಂಘ, ಎಸ್.ಡಿ.ಎಂ.ಸಿ, ಪೋಷಕರು, ಊರವರ ಸಹಕಾರದಲ್ಲಿ ಉತ್ತಮ ಅಭಿವೃದ್ಧಿ ಕಂಡಿದ್ದೇವೆ.**
>
> ■ **ವೆಂಕಟ್ ದಂಬೆಕೋಡಿ,** ಅಧ್ಯಕ್ಷರು, ಎಸ್.ಡಿ.ಎಂ.ಸಿ

ಸಕಲವೂ ಲಭ್ಯ


ಈ ಶಾಲೆ ಕೇಂದ್ರ ಸರಕಾರದ ಯೋಜನೆಯ ಪಿ.ಎಂ.ಶ್ರೀ ಶಾಲೆಯ ವ್ಯಾಪ್ತಿಗೆ ಸುಳ್ಯ ತಾಲೂಕಿನಲ್ಲಿ ಆಯ್ಕೆಯಾದ ಹಿರಿಯ ಪ್ರಾಥಮಿಕ ಶಾಲೆಯಾಗಿದ್ದು ಈಗಾಗಲೇ 60 ಲಕ್ಷ ಅನುದಾನ ಸದ್ಬಳಕೆ ಮಾಡಲಾಗಿದೆ. ಮಕ್ಕಳ ಕಲಿಕೆಗೆ ಬೇಕಾಗುವ ಕಲಿಕೋಪಕರಣದಿಂದ ಹಿಡಿದು ಶಿಕ್ಷಕರು, ಕೊಠಡಿ, ಮೂಲ ಭೂತ ಸೌಕರ್ಯ, ಮೈದಾನ ಎಲ್ಲವನ್ನೂ ವ್ಯವಸ್ಥೆಗೊಳಿಸಲಾಗಿದೆ. ಇದಲ್ಲದೆ ಶಾಸಕರು, ಸಂಸದರು, ಜಿಲ್ಲಾ ಪಂಚಾಯತ್, ತಾ.ಪಂ. ನೀಡಿದ ಅನುದಾನ ಬಳಸಿದ್ದಲ್ಲದೆ ದಾನಿಗಳೇ ನಿರ್ಮಿಸಿದ ಕೊಠಡಿ ಇದೆ. ದಾನಿಗಳ ಸಹಕಾರದಲ್ಲಿ ಶಾಲಾ ಶಿಕ್ಷಕರ ವೇತನ ಮತ್ತಿತರ ವ್ಯವಸ್ಥೆ ಶಾಲಾಭಿವೃದ್ಧಿ ಸಮಿತಿ ಮಾಡಿದೆ. ಇಲ್ಲಿ ಒಟ್ಟಾಗಿ 16 ಶಿಕ್ಷಕರಿದ್ದಾರೆ. ಪಿ.ಎಂ. ಶ್ರೀ ಯೋಜನೆ ವತಿಯಿಂದಲೇ ಕಂಪ್ಯೂಟರ್, ಸಂಗೀತ, ದೈಹಿಕ ಶಿಕ್ಷಣ, ಇಂಗ್ಲೀಷ್ ಸ್ಪೀಕಿಂಗ್ ಮತ್ತಿತರ ಶಿಕ್ಷಣ ಕೊಡಲು 6 ಶಿಕ್ಷಕರಿದ್ದಾರೆ.

ಕೃಷಿ ತೋಟ

ಶಾಲೆಗೆ ಆರ್ಥಿಕ ವ್ಯವಸ್ಥೆಯ ದೂರದೃಷ್ಟಿ ಹೊಂದಿಕೊಂಡು ಶಾಲೆಗೆ ಸುಮಾರು 500 ಅಡಿಕೆ ಗಿಡಗಳಿರುವ ಕೃಷಿ ತೋಟ ನಿರ್ಮಿಸಲಾಗಿದೆ. ಅದು ಈಗಾಗಲೇ ಫಸಲು ಬರಲಾರಂಭಿಸಿದ್ದು ಮುಂದಿನ ದಿನಗಳಲ್ಲಿ ಶಾಲೆಯ ಖರ್ಚುವೆಚ್ಚಕ್ಕೆ ಆಧಾರವಾಗಲಿದೆ.

ಕೇರಳ ಕನ್ನಡ ಅಕಾಡೆಮಿ ಸ್ಥಾಪನೆ: ಸಿಎಂಗೆ ಮನವಿ

• **ಕಾಸರಗೋಡು:** ಕೇರಳ ಸರಕಾರವು ರಾಜ್ಯವನ್ನು ಕೇಂದ್ರೀಕರಿಸಿ ಕಾಸರಗೋಡಿನಲ್ಲಿ ಪ್ರತ್ಯೇಕ ಅಸ್ತಿತ್ವವುಳ್ಳ ಕೇರಳ ಕನ್ನಡ ಅಕಾಡೆಮಿಯನ್ನು ಸ್ಥಾಪಿಸುವಂತೆ ಕೋರಿ ರಾಜ್ಯ ಸರಕಾರದ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರಿಗೆ ಕಾಸರಗೋಡಿನ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅವರು ಮನವಿ ಮೂಲಕ ಒತ್ತಾಯಿಸಿದ್ದಾರೆ.



ಕೇರಳ ರಾಜ್ಯದಲ್ಲಿ ನೆಲೆಸಿರುವ ಸರ್ವ ಕನ್ನಡಿಗರ ಹಿತ ರಕ್ಷಣೆಗಾಗಿ ಹಾಗೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಮಗ್ರವಾದ ಸಾಂಸ್ಕೃತಿಕ ಕನ್ನಡೀಕರಣ ಯೋಜನೆಯೊಂದನ್ನು ಸಿದ್ಧಪಡಿಸಿ ಮುಂದಿನ ಬಜೆಟ್‌ನಲ್ಲಿ ಕೇರಳ ಸರಕಾರವು ಕನ್ನಡ ಭಾಷೆ, ಸಂಸ್ಕೃತಿಯ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿ ಮೊತ್ತದ ಸಾಂಸ್ಕೃತಿಕ ನಿಧಿಯನ್ನು ಸ್ಥಾಪಿಸಿ ಘೋಷಿಸಬೇಕೆಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯ ಸರಕಾರವು ಕೇರಳ ಕನ್ನಡ ಅಕಾಡೆಮಿಯನ್ನು ಸ್ಥಾಪಿಸುವ ಕುರಿತು ಕಾಸರಗೋಡಿನ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ನೇತೃತ್ವದಲ್ಲಿ ನಡೆದ ಕೇರಳ ರಾಜ್ಯ ಕನ್ನಡ ಸಮ್ಮೇಳನ ಮತ್ತು ಕೇರಳ – ಕರ್ನಾಟಕ ಉತ್ಸವದ ಬಹಿರಂಗ ಅಧಿವೇಶನದಲ್ಲಿ 7 ಬಾರಿ ನಿರ್ಣಯಗಳನ್ನು ಕೈಗೊಂಡು ಸರಕಾರದ ಸಂಬಂಧಪಟ್ಟವರಿಗೆ ಮನವಿಯನ್ನು ಸಲ್ಲಿಸಲಾಗಿತ್ತು.

ಕಾಸರಗೋಡು ಕನ್ನಡ ಗ್ರಾಮದಲ್ಲಿ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನವೆಂಬರ್ 7 ಮತ್ತು 8ರಂದು ನಡೆಯುವ ಕೇರಳ ರಾಜ್ಯ 8ನೇ ಕನ್ನಡ ಸಮ್ಮೇಳನ – 2026 ಮತ್ತು ಕೇರಳ ಕರ್ನಾಟಕ ಉತ್ಸವ ಹಾಗೂ ಕೇರಳ ರಾಜ್ಯ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಕೇರಳ – ಕರ್ನಾಟಕ ಸರಕಾರಗಳ ಮುಖ್ಯಮಂತ್ರಿಗಳನ್ನು ಉದ್ಘಾಟಕರನ್ನಾಗಿ ಮತ್ತು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ತೀರ್ಮಾನಿಸಲಾಗಿದೆ ಎಂದು ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಕೇರಳ ರಾಜ್ಯ ಘಟಕ, ಕೇರಳ ರಾಜ್ಯ 8ನೇ ಕನ್ನಡ ಸಮ್ಮೇಳನ ಮತ್ತು ಕೇರಳ – ಕರ್ನಾಟಕ ಉತ್ಸವ ಸಮಿತಿಯ ಅಧ್ಯಕ್ಷ ಶಿವರಾಮ ಕಾಸರಗೋಡು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಷ್ಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಎಕ್ಸಲೆಂಟ್ ಸ್ಪೋರ್ಟ್ಸ್ ಅವಾರ್ಡ್‌ಗೆ ಕಾಸರಗೋಡಿನ ಅಭಿಜ್ಞಾ ಆಯ್ಕೆ

• **ಕಾಸರಗೋಡು:** ಏಷ್ಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಎಕ್ಸಲೆಂಟ್ ಸ್ಪೋರ್ಟ್ಸ್ ಅವಾರ್ಡ್‌ಗೆ ಕಾಸರಗೋಡಿನ ಅಭಿಜ್ಞಾ ಆಯ್ಕೆಯಾಗಿದ್ದಾರೆ. ಈಕೆ ಯೋಗಾಸನದಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಪ್ರಥಮ ಸ್ಥಾನದಲ್ಲಿ 13 ಚಿನ್ನದ ಪದಕವನ್ನು ಪಡೆದಿರುವ ಮೆರಿಟ್ ಸರ್ಟಿಫಿಕೇಟ್, ಖೆಲೋ ಇಂಡಿಯಾ ಮೆರಿಟ್ ಸರ್ಟಿಫಿಕೇಟ್ ಇದರ ಆಧಾರದಲ್ಲಿ ಈ ಅವಾರ್ಡ್‌ಗೆ ಆಯ್ಕೆ ಮಾಡಲಾಗಿದೆ.



ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ನೊಬೆಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಹಾಗೂ ಇಂಡಿಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಈ ಮೊದಲು ವಿಶ್ವ ದಾಖಲೆ ಮಾಡಿ ಹೆಸರು ಗಳಿಸಿಕೊಂಡಿದ್ದಾರೆ. ಇದೀಗ ಆಕೆ ಯೋಗ ಶಿಕ್ಷಣವನ್ನು ಕಾಸರಗೋಡು ಕರಂದಕ್ಕಾಡು ಯೋಗ ಫಾರ್ ಕಿಡ್ಸ್ ಸಂಸ್ಥೆಯಲ್ಲಿ ನಿರ್ವಹಿಸುತ್ತಾ 10ನೇ ತರಗತಿಯನ್ನು ಕಾಸರಗೋಡು ಸಿಪಿಸಿಆರ್‌ಐ ಕೇಂದ್ರೀಯ ವಿದ್ಯಾಲಯದಲ್ಲಿ ಪೂರ್ತಿಗೊಳಿಸಿ ಮುಂದಿನ ಪ್ರಥಮ ಪಿಯುಸಿ ಶಿಕ್ಷಣವನ್ನು ತಲಪಾಡಿ ದೇವಿನಗರ ಶಾರದಾ ವಿದ್ಯಾನಿಕೇತನ ಪಿಯು ಕಾಲೇಜ್‌ನಲ್ಲಿ ಪಡೆಯಲು ಸೇರ್ಪಡೆಗೊಂಡಿದ್ದಾರೆ. ಅಭಿಜ್ಞಾ ಅವರು ಹರೀಶ್ ಮತ್ತು ತೇಜಕುಮಾರಿ ದಂಪತಿಯ ಪುತ್ರಿ.

ಚಿತ್ರ ವಿರೂಪ | ಅಡೂರು ಶ್ರೀ ಮಹಾಲಿಂಗೇಶ್ವರ ಕ್ಷೇತ್ರ

ಬೃಹತ್ ಪಂಜಿನ ಮೆರವಣಿಗೆ



• **ಮುಳ್ಳೇರಿಯ:** ಕುಂಬಳೆ ಸೀಮೆಯ ಪ್ರಸಿದ್ಧ ದೇವಸ್ಥಾನವಾದ ಅಡೂರು ಶ್ರೀ ಮಹಾಲಿಂಗೇಶ್ವರ ಕ್ಷೇತ್ರದ ಮುಂಭಾಗಿಲಿನ ಚಿತ್ರಣವನ್ನು ತೆಗೆದು ಎಸ್‌ಎಸ್‌ಎಫ್ ಪಳ್ಳಂಗೋಡು ಸೆಕ್ಟರ್‌ನ ಕಾರ್ಯಕ್ರಮವೊಂದರ ಆಮಂತ್ರಣ ಪತ್ರಿಕೆಯ ಮುಖಪುಟದಲ್ಲಿ ವಿಚಿತ್ರ ರೂಪವಾಗಿ ಚಿತ್ರಿಸಿ ಹಂಚಲಾಗಿತ್ತು. ಈ ಪ್ರಕರಣವು ಹಿಂದು ಸಮಾಜಕ್ಕೆ ಅಪಾರ ನೋವನ್ನುಂಟು ಮಾಡಿದ್ದು ಇದರ ವಿರುದ್ಧವಾಗಿ ವಿಶ್ವ ಹಿಂದು ಪರಿಷತ್ ಮತ್ತು ಬಜರಂಗ ದಳ ಅಡೂರು ಘಟಕದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಯ ಭಾಗವಾಗಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯಲ್ಲಿ ಮಾತೃಶಕ್ತಿ ಕಾಸರಗೋಡು ಜಿಲ್ಲಾ ಸಂಯೋಜಕಿ ಸತಿ ಕೋಡೋತ್, ಹಿಂದು ಜಾಗರಣ ವೇದಿಕೆಯ ಮಂಗಳೂರು ಸಹ ಸಂಚಾಲಕ ಅಕ್ಷಯ್ ರಜಪೂತ್ ಕಲ್ಲಡ್ಕ, ವಿಶ್ವ ಹಿಂದು ಪರಿಷತ್ ಕಣ್ಣೂರು ವಿಭಾಗ ಸಂಚಾಲಕ ಸಂಕಪ್ಪ ಭಂಡಾರಿ ಬಳ್ಳಂಬೆಟ್ಟು, ವಿಶ್ವ ಹಿಂದು ಪರಿಷತ್ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಶಿವರಾಯ ಜಿ., ಮುಳ್ಳೇರಿಯ ಪ್ರಖಂಡ ಕಾರ್ಯದರ್ಶಿ ಅಭಿಷೇಕ್ ಸರಳಾಯ, ಮುಳ್ಳೇರಿಯ ಪ್ರಖಂಡ ಬಜರಂಗ ದಳ ಸಂಯೋಜಕ್ ಭರತ್ ಜಿ. ಅಡೂರು, ವಿಶ್ವ ಹಿಂದು ಪರಿಷತ್ ಅಡೂರು ಘಟಕದ ಅಧ್ಯಕ್ಷ ಸತ್ಯನಾರಾಯಣ ಭಟ್, ಗೌರವಾಧ್ಯಕ್ಷ ಅಶೋಕ್ ಸರಳಾಯ ಹಾಗೂ ನೂರಾರು ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಮಳೆಮಾಪನ ತುರ್ತು ದುರಸ್ತಿ | ಉಭಯ ಡಿಸಿಗಳಿಗೆ ಕಿಶೋರ್ ಕುಮಾರ್ ಪುತ್ತೂರು ಪತ್ರ

ಎರಡೇ ದಿನದಲ್ಲಿ ಸ್ಪಂದನೆ ನೀಡಿದ ಉಡುಪಿ ಜಿಲ್ಲಾಧಿಕಾರಿ!

• **ಪುತ್ತೂರು:** ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ಫಸಲ್ ಬಿಮಾ' (ಹವಾಮಾನ ಆಧಾರಿತ ಬೆಳೆ ವಿಮೆ) ಯೋಜನೆಯಡಿ ಹವಾಮಾನ ವೈಪರೀತ್ಯದಿಂದ ಬೆಳೆ ಕಳೆದುಕೊಂಡ ರೈತರಿಗೆ ಸಮರ್ಪಕ ಪರಿಹಾರ ಒದಗಿಸುವ ನಿಟ್ಟಿನಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಉಭಯ ಜಿಲ್ಲೆಗಳಲ್ಲಿ ಕೆಟ್ಟು ಹೋಗಿರುವ ಮಳೆ ಮಾಪನಗಳನ್ನು ಮುಂಗಾರಿಗೂ ಮುನ್ನ ತುರ್ತಾಗಿ ಪರಿಶೀಲಿಸಿ ದುರಸ್ತಿಪಡಿಸುವಂತೆ ಉಡುಪಿ–ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ. ಅವರ ಮನವಿಗೆ ಉಡುಪಿ ಜಿಲ್ಲಾಧಿಕಾರಿ ಎರಡು ದಿನಗಳಲ್ಲೇ ಸ್ಪಂದಿಸಿದ್ದಾರೆ.



ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಕರಾವಳಿ ಭಾಗದ ರೈತರ ಪರವಾಗಿ ತೀವ್ರ ಕಳವಳ ವ್ಯಕ್ತಪಡಿಸಿರುವ ಶಾಸಕರು, ಬೆಳೆ ವಿಮೆ ಯೋಜನೆಯಡಿ ಪರಿಹಾರ ಒದಗಿಸಲು ಪ್ರತಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಅಳವಡಿಸಲಾದ ಮಳೆಮಾಪನಗಳಲ್ಲಿ ದಾಖಲಾಗುವ ಮಳೆಯ ಪ್ರಮಾಣವೇ ಪ್ರಮುಖ ಆಧಾರವಾಗಿದೆ. ಆದರೆ, ಕಳೆದ ಬಾರಿ ಭಾರಿ ಮಳೆಯಿಂದಾಗಿ ಅನೇಕ ಗ್ರಾಮಗಳಲ್ಲಿ ರೈತರ ಬೆಳೆಗಳು ಸಂಪೂರ್ಣ ಹಾನಿಗೀಡಾಗಿದ್ದರೂ, ರೈತರಿಗೆ ಅತ್ಯಂತ ಕಡಿಮೆ ವಿಮಾ ಪರಿಹಾರ ಬಂದಿದೆ. ಇದಕ್ಕೆ ಆಯಾ ಗ್ರಾಮಗಳಲ್ಲಿ ಅಳವಡಿಸಲಾದ ಮಳೆಮಾಪನಗಳು ಸಮರ್ಪಕ ನಿರ್ವಹಣೆಯಿಲ್ಲದೆ ಕೆಟ್ಟು ಹೋಗಿರುವುದು ಮತ್ತು ನಿಖರವಾದ ಮಳೆಯ ಪ್ರಮಾಣವನ್ನು ದಾಖಲಿಸುವಲ್ಲಿ ವಿಫಲವಾಗಿರುವುದೇ ನೇರ ಕಾರಣವಾಗಿದೆ. ಮಾಪನಗಳ ಈ ದೋಷದಿಂದಾಗಿ ರೈತರಿಗೆ ಬಹುದೊಡ್ಡ ಮಟ್ಟದ ಆರ್ಥಿಕ ಅನ್ಯಾಯವಾಗಿದೆ. ಈ ಗಂಭೀರ ವಿಚಾರವನ್ನು ತಾವು ಇತ್ತೀಚೆಗೆ ವಿಧಾನ ಪರಿಷತ್ತಿನ ಕಲಾಪದಲ್ಲಿಯೂ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆದಿರುವುದಾಗಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ನಿಟ್ಟಿನಲ್ಲಿ ಮುಂಬರುವ ಮುಂಗಾರು ಮಳೆ ಆರಂಭವಾಗುವ ಮೊದಲೇ ದ.ಕ. ಮತ್ತು ಉಡುಪಿ ಜಿಲ್ಲೆಯ ಎಲ್ಲಾ ಗ್ರಾ.ಪಂ. ವ್ಯಾಪ್ತಿಯಲ್ಲಿರುವ ಮಳೆಮಾಪನ ಕೇಂದ್ರಗಳನ್ನು ತಕ್ಷಣವೇ ಪರಿಶೀಲಿಸಬೇಕು ಹಾಗೂ ಕೆಟ್ಟು ಹೋಗಿರುವ ಮಾಪನಗಳನ್ನು ಕೂಡಲೇ ದುರಸ್ತಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಜೊತೆಗೆ, ಈ ಮಳೆಮಾಪನ ಕೇಂದ್ರಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿ ಕೊಳ್ಳಲು ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳಲು, ಪ್ರತಿ ಮಾಪನದಲ್ಲಿ ದಾಖಲಾದ ಮಳೆಯ ವಿವರವನ್ನು ಆಯಾ ಗ್ರಾ.ಪಂ.ಗೆ ಕಡ್ಡಾಯವಾಗಿ ಪ್ರತಿ ವಾರ ವರದಿಯ ರೂಪದಲ್ಲಿ ನೀಡುವಂತೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಅವರು ಕೋರಿದ್ದಾರೆ.

ಈ ಪತ್ರದ ಪ್ರತಿಯನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ನಿರ್ದೇಶಕರಿಗೆ, ಎರಡೂ ಜಿಲ್ಲೆಗಳ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಮತ್ತು ತೋಟಗಾರಿಕೆ ಉಪನಿರ್ದೇಶಕರಿಗೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರಿಗೂ ರವಾನಿಸಲಾಗಿದೆ.

ಶೀಘ್ರ ಸ್ಪಂದಿಸಿದ ಡಿಸಿ

ಶಾಸಕ ಕಿಶೋರ್ ಕುಮಾರ್ ಪುತ್ತೂರು ಅವರು ಪತ್ರ ಬರೆದ ಕೇವಲ ಎರಡು ದಿನಗಳಲ್ಲಿಯೇ ಉಡುಪಿ ಜಿಲ್ಲಾಧಿಕಾರಿಯವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಕೆಎಸ್‌ಎನ್‌ಡಿಎಂಸಿ ವತಿಯಿಂದ ಈಗಾಗಲೇ ಅಳವಡಿಸಲಾದ ಸ್ವಯಂಚಾಲಿತ ಮಳೆಮಾಪನಗಳ ಸಮರ್ಪಕ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮತ್ತು ನಿಗಾ ವಹಿಸುವ ಜವಾಬ್ದಾರಿಯನ್ನು ಗ್ರಾಮೀಣ ಮಟ್ಟದಲ್ಲಿ ಗ್ರಾಮ ಆಡಳಿತ ಅಧಿಕಾರಿಗೆ ವಹಿಸಲಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ ದುರಸ್ತಿಯಲ್ಲಿರುವ ಅಥವಾ ಕಾರ್ಯ ನಿರ್ವಹಿಸದ ಮಳೆಮಾಪನಗಳ ಸ್ಥಿತಿಗತಿಯ ಬಗ್ಗೆ ಈಗಾಗಲೇ ಕೆಎಸ್‌ಎನ್‌ಡಿಎಂಸಿ ನಿರ್ದೇಶಕರ ಗಮನಕ್ಕೆ ತರಲಾಗಿದ್ದು, ಅವುಗಳ ದುರಸ್ತಿಗೆ ಸರ್ಕಾರದಿಂದ ಅಗತ್ಯ ಕ್ರಮ ವಹಿಸಲಾಗಿದೆ. ಅಲ್ಲದೆ, ಜಿಲ್ಲೆಯಲ್ಲಿ 38 ಮಳೆಮಾಪನಗಳನ್ನು ಹೊಸದಾಗಿ ಅಳವಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂಬ ಸಮಾಧಾನಕರ ವಿಚಾರವನ್ನು ಜಿಲ್ಲಾಧಿಕಾರಿಗಳು ತಮ್ಮ ಪ್ರತ್ಯುತ್ತರ ಪತ್ರದಲ್ಲಿ ಶಾಸಕರಿಗೆ ಖಚಿತಪಡಿಸಿದ್ದಾರೆ.

ಗಡಿ ನಿಯಂತ್ರಣ ರೇಖೆ ಬಳಿ ಭಾರತೀಯ ಸೇನಾ ಕಾರ್ಯಾಚರಣೆ

ಪಿಒಕೆ ನುಸುಳುಕೋರ ಸೇರಿ ಮೂವರ ಬಂಧನ

• **ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಭಾರತೀಯ ಸೇನಾ ಪಡೆಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಗಡಿ ದಾಟಲು ಯತ್ನಿಸುತ್ತಿದ್ದ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿವೆ. ಇದರ ಬೆನ್ನಲ್ಲೇ ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ, ಪ್ರೀತಿಯ ಆಮಿಷಕ್ಕೆ ಒಳಗಾಗಿ ಗಡಿ ದಾಟಿ ಬಂದಿದ್ದ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಯುವಕನೊಬ್ಬನನ್ನು ಸೇನೆ ವಶಕ್ಕೆ ಪಡೆದಿದೆ.

ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಕೆಲವರು ದೇಶ ವಿರೋಧಿ ಕೃತ್ಯ ಎಸಗುವ ಉದ್ದೇಶದಿಂದ ಗಡಿ ದಾಟಲುಯತ್ನಿಸುತ್ತಿದ್ದಾರೆ ಎಂಬ ನಿಖರ ಮಾಹಿತಿ ಸೇನೆಗೆ ಲಭ್ಯವಾಗಿತ್ತು. ಶನಿವಾರ ರಾತ್ರಿ ಭಾರತೀಯ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಸೋಪೋರ್ ಮೂಲದ ಇಬ್ಬರು ಹಾಗೂ ಅವರಿಗೆ ಸಹಾಯ ಮಾಡುತ್ತಿದ್ದ ಗೈಡ್ (ಮಾರ್ಗದರ್ಶಿ) ಸೇರಿದಂತೆ ಮೂವರನ್ನು ಚಿನಾರ್ ವಾರಿಯರ್ಸ್ ಪಡೆಗಳು ಬಂಧಿಸಿವೆ. ಬಂಧಿತರನ್ನು ಆದಿಲ್ ಹುಸೇನ್, ಇಶ್ಫಾಕ್ ಲೋನ್ ಮತ್ತು ಜಾಫರ್ ಹಫೀಜ್ ಎಂದು ಗುರುತಿಸಲಾಗಿದ್ದು, ಸದ್ಯ ಇವರನ್ನು ತೀವ್ರ



ವಿಚಾರಣೆಗೆ ಒಳಪಡಿಸಲಾಗಿದೆ.

ಇದೇ ಉರಿ ವಲಯದಲ್ಲಿ ನಡೆದ ಮತ್ತೊಂದು ಹೈಡ್ರಾಮಾ ಘಟನೆಯಲ್ಲಿ, ಭಾರತದ ಗಡಿಯೊಳಗೆ ಅಕ್ರಮವಾಗಿ ನುಸುಳುತ್ತಿದ್ದ ಪಾಕ್ ಆಕ್ರಮಿತ ಕಾಶ್ಮೀರದ ಯುವಕನನ್ನು ಸೇನೆ ಜಾಣ್ಮೆಯಿಂದ ಬಂಧಿಸಿದೆ. ಆತನ ಬಳಿ ಇದ್ದ ಗುರುತಿನ ಚೀಟಿ ಆಧರಿಸಿ ಮುಜಾಫರಾಬಾದ್ ಮೂಲದ 22 ವರ್ಷದ


ಸಾಮಾಜಿಕ ಜಾಲತಾಣ ಪ್ರೇಮಿ ಗಡಿ ದಾಟಿದ ಸಾಹಸ

ಗಡಿ ದಾಟಿ ಬಂದ ಯುವಕನ ಕಥೆ ಕೇಳಿ ಅಧಿಕಾರಿಗಳೇ ದಂಗು

ಜೀಶನ್ ಮೀರ್ ಎಂದು ಗುರುತಿಸಲಾಗಿದೆ.

ಪ್ರಾಥಮಿಕ ವಿಚಾರಣೆ ವೇಳೆ ಈತ ನೀಡಿದ ಹೇಳಿಕೆ ಕೇಳಿ ಭದ್ರತಾ ಸಿಬ್ಬಂದಿಯೇ ಆಶ್ಚರ್ಯಚಕಿತರಾಗಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕ ಭಾರತದ ಕಡೆಯ ಹುಡುಗಿಯೊಬ್ಬಳ ಪರಿಚಯವಾಗಿದ್ದು, ಅವಳನ್ನು ಭೇಟಿಯಾಗಲು ತಾನು ಗಡಿ ದಾಟಿ ಬಂದಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ. ಗಡಿಯಲ್ಲಿ ಜಾಗರೂಕರಾಗಿದ್ದ ಚಿನಾರ್ ವಾರಿಯರ್ಸ್ ಯುವಕನ ಮೇಲೆ ಗುಂಡು ಹಾರಿಸದೆ, ಅತ್ಯಂತ ಸಂಯಮದಿಂದ ಆತನನ್ನು ಜೀವಂತವಾಗಿ ಸೆರೆಹಿಡಿದು ಮುಂದಿನ ಕಾನೂನು ಕ್ರಮಗಳಿಗಾಗಿ ಜಮ್ಮು-ಕಾಶ್ಮೀರ ಪೊಲೀಸರಿಗೆ ಒಪ್ಪಿಸಿದ್ದಾರೆ. ಗಡಿಯಲ್ಲಿ ಉಭಯ ಘಟನೆಗಳಿಂದಾಗಿ ಭದ್ರತೆಯನ್ನು ಮತ್ತಷ್ಟು ಕಠಿಣಗೊಳಿಸಲಾಗಿದೆ.

ರಾಮ ಬಾಣ



ಕಿಡಿ ನುಡಿ

• **ವಾಸುದೇವರಾವ್ ಕಕ್ಕೆನೇಜಿ**

◈ ನಮ್ಮ ಸಮಾಜ ಕಟ್ಟುವಲ್ಲಿ ಮಹತ್ತರ ಪಾತ್ರ ವಹಿಸುವ ಪತ್ರಿಕೆಯವರ ಪೆನ್ನು ಸದಾ ಕಾಲ ಸತ್ಯದ ಕಡೆಗಿರಲಿ – **ಯು.ಟಿ.ಖಾದರ್**

– ಸತ್ಯ ಹೇಳಬಹುದಿತ್ತು, ಆದರೆ ಪೆನ್ನಿನ ಹಿಂದೆ ಗನ್ನು ಇರುವ ಭಯ ಅನೇಕರಿಗೆ!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ಒತ್ತಡ. ಯಾವುದೇ ಕೆಲಸ ಬಾಕಿ ಇಡಬೇಡಿ. ಸಂಗಾತಿ ಜತೆಗಿನ ಸಂಬಂಧ ಸುಧಾರಣೆ. ಭಿನ್ನಮತ ನಿವಾರಣೆ.

ವೃಷಭ
ಆಪ್ತ ಸಂಬಂಧ ಇನ್ನೊಂದು ಸ್ತರ ಮೇಲೇರಲಿದೆ. ಏಕಾಂಗಿಗಳಿಗೆ ವೈವಾಹಿಕ ಅವಕಾಶ ಉಜ್ವಲ. ಆರ್ಥಿಕ ಪರಿಸ್ಥಿತಿ ಉತ್ತಮ, ಆದಾಯ ಏರಿಕೆ.

ಮಿಥುನ
ವೃತ್ತಿಯಲ್ಲಿ ಸವಾಲು. ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಹೊಸ ವ್ಯವಹಾರದಲ್ಲಿ ಹಣ ಹೂಡುವುದು ಸಮಂಜಸವೆನಿಸದು. ಕೌಟುಂಬಿಕ ಅಸಹಕಾರ.

ಕಟಕ
ಎಲ್ಲ ವಿಧಗಳಲ್ಲೂ ಇಂದು ತೃಪ್ತಿಕರ ದಿನ. ಧನಪ್ರಾಪ್ತಿ. ಕಾರ್ಯ ಸಫಲ. ನಿಮ್ಮ ಇಷ್ಟವೊಂದು ನೆರವೇರುವುದು. ಬಂಧು ಸಹಕಾರ.

ಸಿಂಹ
ಏರಿಳಿತಗಳ ದಿನ. ದೊಡ್ಡ ಹೊಣೆ ಬೀಳಲಿದೆ. ಅದನ್ನು ಪೂರೈಸಲು ಕಷ್ಟ ಪಡುವಿರಿ. ಕಳೆಕೊಂಡ ಪ್ರೀತಿ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಿರಿ.

ಕನ್ಯಾ
ಸವಾಲಿನ ದಿನ. ಹಣದ ವ್ಯವಹಾರದಲ್ಲಿ ತೊಡಕು ಕಾಣಿಸೀತು. ಹದ ತಪ್ಪಿದ ಮಾತು ಉದ್ವಿಗ್ನತೆ ಉಂಟು ಮಾಡಬಹುದು. ಸಂಯಮ ವಹಿಸಿರಿ.

ತುಲಾ
ವೃತ್ತಿಕ್ಷೇತ್ರದಲ್ಲಿ ಉಂಟಾಗಿದ್ದ ಉದ್ವಿಗ್ನತೆ ನಿವಾರಣೆ. ಸೌಹಾರ್ದ ಪರಿಸ್ಥಿತಿ ನೆಲೆಸಲಿದೆ. ಧನಹಾನಿ ಸಂಭವ, ಎಚ್ಚರದಿಂದ ವ್ಯವಹರಿಸಿ.

ವೃಶ್ಚಿಕ
ದೈನಂದಿನ ಒತ್ತಡದಿಂದ ಮುಕ್ತಿ. ನಿಮ್ಮ ಇಷ್ಟದ ಹವ್ಯಾಸದಲ್ಲಿ ಕಾಲ ಕಳೆಯುವ ಅವಕಾಶ. ಒಟ್ಟಿನಲ್ಲಿ ಇಂದು ಸಂತೋಷದ ಮನಸ್ಥಿತಿ

ಧನು
ಅದೃಷ್ಟ ನಿಮಗೆ ಕೈಕೊಡಬಹುದು. ಹಾಗಾಗಿ ಕಾರ್ಯದಲ್ಲಿ ಸಫಲತೆ ದೊರಕದು. ಪ್ರೀತಿಯ ವಿಷಯದಲ್ಲಿ ಭಾವನಾತ್ಮಕ ಏರುಪೇರು.

ಮಕರ
ಇಂದು ಹೆಚ್ಚು ಭಾವುಕ ಪ್ರಸಂಗಕ್ಕೆ ಸಾಕ್ಷಿಯಾಗುವಿರಿ. ಆರ್ಥಿಕ ಪ್ರಗತಿಗೆ ಅಡ್ಡಿ ಬಂದೀತು. ವೃತ್ತಿಯಲ್ಲಿ ಆಂಶಿಕ ಯಶಸ್ಸು ಪಡೆಯುವಿರಿ

ಕುಂಭ
ಬಹಳಷ್ಟು ಕೆಲಸ ಬಾಕಿಯಿದೆ. ಅದನ್ನು ಪೂರೈಸಬೇಕಾದ ಒತ್ತಡ. ಪ್ರೀತಿಯ ವಿಚಾರದಲ್ಲಿ ದುಡುಕಿನ ನಿರ್ಧಾರ ತಾಳಬೇಡಿ.

ಮೀನ
ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಕೆಲ ಸಮಸ್ಯೆ ಎದುರಿಸುವಿರಿ. ಅಭದ್ರತೆಯ ಭಾವ ಕಾಡಲಿದೆ. ಸಂಗಾತಿ ಜತೆಗೆ ಮನಸ್ತಾಪ ಸಂಭವ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 4,9,2,8

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್

ಜೂ.3ಕ್ಕೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

• **ಬೆಂಗಳೂರು:** ಜೂನ್ 3ರಂದು ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ. ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಅವರಿಗೆ ಇನ್ನಷ್ಟೇ ನೀಡಲಾಗುವುದು. ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪಕ್ಷದ ಎಲ್ಲಾ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಗ್ಯಾರಂಟಿ ಸಮಿತಿಗಳ ಅಧ್ಯಕ್ಷರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ಎಲ್ಲಾ ನಾಯಕರು ಹಾಗೂ ಪದಾಧಿಕಾರಿಗಳಿಗೆ ಆಹ್ವಾನ ನೀಡಲು ಆಗದ ಕಾರಣ, ಇಲ್ಲೇ ಎಲ್‌ಇಡಿ ಪರದೆಗಳಲ್ಲಿ ಆ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಮಗಾಗಿ ಹೋರಾಟ ಮಾಡಿ, ಶ್ರಮಿಸಿದ ನಾಯಕರಿಗೆ ನಾವು ಇಷ್ಟಾದರೂ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.



ಸಾರ್ವಜನಿಕರಿಗೆ ತೊಂದರೆಯಾಗದಂತೆ ಸರಳ ಸಮಾರಂಭ

ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಪ್ರಮಾಣ ವಚನ ಕಾರ್ಯಕ್ರಮಕ್ಕೆ ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಈ ಕಾರ್ಯಕ್ರಮ ಸರಳವಾಗಿ ನಡೆಯುತ್ತಿರುವುದರಿಂದ ಹೆಚ್ಚಿನ ಜನ ಸೇರಲು ಆಗುವುದಿಲ್ಲ. ಹೀಗಾಗಿ ನಮ್ಮ ಕಾರ್ಯಕರ್ತರು ಕ್ಷಮಿಸಬೇಕು ಎಂದು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು. ತಮ್ಮೊಂದಿಗೆ ಬೇರೆ ಸಚಿವರು ಪ್ರಮಾಣ ವಚನ ಸ್ವೀಕರಿಸುವ ಕುರಿತ ಪ್ರಶ್ನೆಗೆ, ಅದರ ಬಗ್ಗೆ ನನಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ನಿರ್ಧರಿಸಿದಂತೆ ಮಾಡುತ್ತೇವೆ. ಹಾಗಾಗಿ ಈ ಬಗ್ಗೆ ಯಾವುದೇ ಹೇಳಿಕೆ ನೀಡಲು ಬಯಸುವುದಿಲ್ಲ ಎಂದು ತಿಳಿಸಿದರು.

ನೂರು ಕಚೇರಿಗಳ ಶಂಕುಸ್ಥಾಪನೆ ಬಗ್ಗೆ ಕೇಳಿದಾಗ, ಗಾಂಧಿ ಭಾರತ ಮತ್ತು ಗಾಂಧೀಜಿಯವರ 100 ವರ್ಷಗಳ ನೆನಪಿನ ಅಂಗವಾಗಿ ನಾವು 100 ಕಚೇರಿಗಳನ್ನು ಸ್ಥಾಪಿಸಲು ನಿರ್ಧರಿಸಿದ್ದೆವು. ಈಗ ಅವುಗಳನ್ನು ಸಿದ್ಧಪಡಿಸುತ್ತಿದ್ದೇವೆ. ಅವುಗಳಿಗೆ ಮುಂದಿನ ದಿನಗಳಲ್ಲಿ ಭೂಮಿ ಪೂಜೆ ಮಾಡಲಾಗುವುದು. ಈಗ ರೇಸ್ ಕೋರ್ಸ್ ರಸ್ತೆಯ ಕಚೇರಿಗೆ ಭೂಮಿ ಪೂಜೆ ಮಾಡಲು ಅನುಮತಿ ಕೇಳುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಸ್ಪೀಕರ್ ಸ್ಥಾನಕ್ಕೆ ಶಾಸಕರ ಹಿಂದೇಟು

• **ಬೆಂಗಳೂರು:** ಒಂದೆಡೆ ಸಚಿವ ಸ್ಥಾನಕ್ಕಾಗಿ ಹಿರಿಯ ಮತ್ತು ಕಿರಿಯ ಶಾಸಕರಿಂದ ಇನ್ನಿಲ್ಲದ ಲಾಬಿ ನಡೆಯುತ್ತಿದ್ದರೆ, ಮತ್ತೊಂದೆಡೆ ಅದಕ್ಕೆ ವ್ಯತಿರಿಕ್ತವಾಗಿ ವಿಧಾನಸಭೆಯ ಸಭಾಧ್ಯಕ್ಷ ಸ್ಥಾನ ಕೊಡ್ತೀನಿ ಅಂದ್ರೂ ಹಿಂದೇಟು ಹಾಕುತ್ತಿರುವುದು ಕಂಡುಬರುತ್ತಿದೆ.

ಹಾಲಿ ಇರುವ ಸ್ಪೀಕರ್ ಯು.ಟಿ. ಖಾದರ್ ಸಚಿವ ಆಕಾಂಕ್ಷಿಯಾಗಿದ್ದಾರೆ. ಇದಕ್ಕಾಗಿ ಭಾರಿ ಲಾಬಿ ನಡೆಸಿದ್ದಾರೆ. 2023 ರಲ್ಲೇ ಇದಕ್ಕಾಗಿ ಅವರು ಕಸರತ್ತು ನಡೆಸಿದ್ದರು. ಆದರೆ, ಅಂತಿಮವಾಗಿ ಸ್ಪೀಕರ್ ಹುದ್ದೆ ಲಭಿಸಿತ್ತು. ಈಗ ಹೊಸ ಸಂಪುಟದಲ್ಲಿ ಶತಾಯಗತಾಯ ಸೇರಲು ಯತ್ನಿಸುತ್ತಿದ್ದಾರೆ.

ಇನ್ನು ಒಂದು ವೇಳೆ ಖಾದರ್ ಸಂಪುಟ ಸೇರಿದರೆ, ತೆರವಾಗಲಿರುವ ಸ್ಥಾನಕ್ಕೆ ಹಿರಿಯ ನಾಯಕರಾದ ಎಚ್.ಕೆ. ಪಾಟೀಲ, ಆರ್.ವಿ. ದೇಶಪಾಂಡೆ ಮತ್ತು ಟಿ.ಬಿ. ಜಯಚಂದ್ರ ಅವರ ಹೆಸರು ಕೇಳಿಬರುತ್ತಿದೆ. ಇವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಆದರೆ, ಈ ಪೈಕಿ ಆರ್.ವಿ. ದೇಶಪಾಂಡೆ ಈಗಾಗಲೇ ಸ್ಪೀಕರ್ ಸ್ಥಾನ ನಿರಾಕರಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ದೇಶಪಾಂಡೆ, ನಾನು ಸ್ಪೀಕರ್ ಹುದ್ದೆ ಆಕಾಂಕ್ಷಿ ಅಲ್ಲ. ನನಗೆ ಆಸಕ್ತಿಯೂ ಇಲ್ಲ. ಒಂದು ವೇಳೆ ಕೊಟ್ಟರೂ ನನಗೆ ಆ ಹುದ್ದೆ ಬೇಡ ಎಂದು ಸ್ಪಷ್ಟಪಡಿಸಿದ್ದಾರೆ.

ಒಟ್ಟಾರೆಯಾಗಿ ದೆಹಲಿ ಭೇಟಿಯ ನಂತರ ರಾಜ್ಯ ರಾಜಕಾರಣದ ಹೊಸ ಸಂಪುಟ ಮತ್ತು ಕೆಪಿಸಿಸಿ ಸಾರಥ್ಯದ ಕುರಿತು ಚರ್ಚೆ ನಡೆಯಲಿದೆ. ಇದೇ ವೇಳೆ ಸ್ಪೀಕರ್ ಹುದ್ದೆಯ ಬಗ್ಗೆಯೂ ಸ್ಪಷ್ಟ ಚಿತ್ರಣ ಸಿಗಲಿದೆ ಎನ್ನಲಾಗಿದೆ.

ಮತ್ತೆ ಮುನ್ನೆಲೆಗೆ ಬಂದ ಸಮನ್ವಯ ಸಮಿತಿ

• **ಬೆಂಗಳೂರು:** ಈ ಹಿಂದೆ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಸಮನ್ವಯ ಸಮಿತಿ ರಚನೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದ್ದು, ಇದರ ಬಗ್ಗೆ ಪರ-ವಿರೋಧಗಳು ವ್ಯಕ್ತವಾಗುತ್ತಿವೆ.

ಸಿದ್ದರಾಮಯ್ಯ ನಾಯಕತ್ವದಲ್ಲಿ 3 ವರ್ಷ ಪೂರ್ಣಗೊಳಿಸಿರುವ ಕಾಂಗ್ರೆಸ್ ಸರ್ಕಾರ ಈಗ ಸುಸೂತ್ರ ಅಧಿಕಾರ ಹಸ್ತಾಂತರದ ಬಳಿಕ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ಎರಡೂ ಬಣಗಳು ಮತ್ತು ಹೈಕಮಾಂಡ್ ನಡುವೆ ಸಂಪರ್ಕ ಕೊಂಡಿಯಂತೆ ಕೆಲಸ ಮಾಡಲು ಕೋರ್ ಕಮಿಟಿ ಅಥವಾ ಸಮನ್ವಯ ಸಮಿತಿಯೊಂದರ ಅಗತ್ಯತೆ ಇದೆ ಎಂಬ ಮಾತುಗಳು ಕೆಲ ಹಿರಿಯ ಸಚಿವರಿಂದ ಕೇಳಿಬರುತ್ತಿದೆ.

ಸಮನ್ವಯ ಸಮಿತಿ ಅತ್ಯವಶ್ಯ: ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ. ಅದಕ್ಕೊಂದು ಸಮನ್ವಯ ಸಮಿತಿ ಇರುವುದು ಅತ್ಯಂತ ಅವಶ್ಯಕ. ಅದು ತುಂಬ ಮುಖ್ಯವಾದದ್ದಾಗಿದೆ. ಹಾಗಾಗಿ, ನಾನೂ ಅದನ್ನೇ ಸಲಹೆ ಮಾಡುತ್ತೇನೆ ಎಂದು ತಿಳಿಸಿದರು.

ಈ ಹಿಂದೆ ಅಂದರೆ 2018–19ರಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗಿತ್ತು. ಆಗ ಸಿದ್ದರಾಮಯ್ಯ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚನೆಯಾಗಿತ್ತು. ಆದಾಗ್ಯೂ ಆದೇ ಸಮನ್ವಯದ ಕೊರತೆಯಿಂದ ಸರ್ಕಾರ ಅವಧಿಗೂ ಮೊದಲೇ ವಿಸರ್ಜನೆಯಾಯಿತು.

ಸಂಪುಟ ರಚನೆ ಕಸರತ್ತು

ಪುಟ ೧ ➡ ವಿಧಾನ ಪರಿಷತ್ ಮತ್ತು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಚರ್ಚೆ ಇಲ್ಲ ಎಂದು ಮೂಲಗಳು ತಿಳಿಸಿವೆ. ರಾಜ್ಯಸಭೆ ಚುನಾವಣೆ ಇನ್ನೂ ಒಂದು ವಾರ ಇರುವುದರಿಂದ ಸದ್ಯಕ್ಕೆ ಸಂಪುಟ ಚರ್ಚೆ ಮಾತ್ರ ಆಗಲಿದೆ. ಅಲ್ಲದೆ, ಪ್ರಮಾಣವಚನ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ್ ಗಾಂಧಿ ಅವರಿಗೆ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಲಿದ್ದಾರೆ.

15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

ಪುಟ ೧ ➡ **ಪ್ರಸ್ತಾವ ಬಂದ ಬಳಿಕ ಎಷ್ಟು ಡಿಸಿಎಂ ಮಾಡಬೇಕು? ಎಷ್ಟು ಸಚಿವರನ್ನು ಮಾಡಬೇಕು? ಎಂದು ತೀರ್ಮಾನಿಸಲಾಗುವುದು. ಮಹತ್ವದ ನಿಗಮದ ಅಧ್ಯಕ್ಷ ಸ್ಥಾನಗಳನ್ನೂ ಜತೆಯಲ್ಲೇ ಮಾಡಬೇಕಾ? ಎನ್ನುವ ಚರ್ಚೆ ಸಹ ನಡೆದಿದೆ. ಇವೆಲ್ಲಾ ಜೂನ್ 3ರ ನಂತರ ನಿರ್ಧಾರ ಮಾಡುತ್ತೇವೆ ಎಂದರು.**

ಎಷ್ಟು ಮಂದಿ ಪ್ರಮಾಣವಚನ ಸ್ವೀಕರಿಸುತ್ತಾರೋ ಗೊತ್ತಿಲ್ಲ: ಡಿ.ಕೆ. ಶಿವಕುಮಾರ್ ಅವರೊಂದಿಗೆ ಎಷ್ಟು ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ ಎನ್ನುವ ಪ್ರಸ್ತಾವ ಇನ್ನೂ ಬಂದಿಲ್ಲ. ಎಂಟು ಸಚಿವರನ್ನು ಮಾಡುತ್ತಾರೋ, ಹತ್ತು ಜನರನ್ನು ಸಚಿವರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಸದ್ಯಕ್ಕೆ ಒಂದು ಹಂತದಲ್ಲಿ ಸಚಿವರನ್ನು ಮಾಡುತ್ತೇವೆ. ಆದಾದ 15 ದಿನ ಅಥವಾ ಒಂದು ತಿಂಗಳು ಬಿಟ್ಟು ಎರಡನೇ ಹಂತದ ಮಂತ್ರಿಮಂಡಲ ರಚನೆ ಮಾಡುವ ವಿಚಾರ ಇದೆ. ಆದರೆ, ಸಿಎಂ ಏನು ವಿಚಾರ ಮಾಡುತ್ತಾರೋ ಅವರಿಗೇ ಬಿಟ್ಟದ್ದು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಮಿಟಿ ರಚನೆ ಹೈಕಮಾಂಡ್‌ಗೆ ಬಿಟ್ಟಿದ್ದು: ಸತೀಶ್

• **ಬೆಂಗಳೂರು:** ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ಹಿರಿಯ ನಾಯಕರ ನೇತೃತ್ವದಲ್ಲಿ ಕೋರ್ ಕಮಿಟಿ ರಚನೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಮಾಜಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತುಕತೆ ನಡೆಸಿದ ಅವರು, ಈ ಹಿಂದೆಯೂ ಕೋರ್ ಕಮಿಟಿ ಬಗ್ಗೆ ಚರ್ಚೆ ಆಗಿತ್ತು, ಆದರೆ ಆಗಲಿಲ್ಲ. ಮಾಡುವುದು ಬಿಡುವುದು ಹೈಕಮಾಂಡ್ ನಿರ್ಧರಿಸಲಿದೆ ಎಂದರು. ಡಿ.ಕೆ. ಶಿವಕುಮಾರ್ ಆಡಳಿತಕ್ಕೆ ಸಿದ್ದರಾಮಯ್ಯ ಮಾರ್ಗದರ್ಶನ ಇದೆ. ಅವರು ಅನುಸರಿಸ ಮಾರ್ಗಗಳೇ ಮಾನದಂಡ ಆಗಿದ್ದು, 3 ವರ್ಷದ ಆಡಳಿತದ ಮಾದರಿಯಲ್ಲೇ ಇವರು ಆಡಳಿತ ನಡೆಸಲಿದ್ದಾರೆ. ಅಧಿಕಾರ ಹಂಚಿಕೆ ಸರಳವಾಗಿ ಗೊಂದಲ ಇಲ್ಲದೇ ಹಂಚಿಕೆಯಾಗಿದೆ. ಪಕ್ಷದಲ್ಲಿ ಶಿಸ್ತು ಇದೆ ಎಂಬುದನ್ನು ತೋರಿಸಲಾಗಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಹೈಕಮಾಂಡ್ ಸಭೆಯಲ್ಲಿ ಚರ್ಚೆಯಾಗಬಹುದು, ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ. ನಾನೇ ಆಗಬೇಕು ಅಂತ ಇಲ್ಲ, ಸೂಕ್ತ ಅನಿಸಿದವರು ಅಧ್ಯಕ್ಷ ಆಗುತ್ತಾರೆ. ಲಾಭ ನಷ್ಟದ ಬಗ್ಗೆ ಹೈಕಮಾಂಡ್ ಚರ್ಚೆ ಮಾಡಲಿದ್ದಾರೆ. ಮೊದಲ ಹಂತದಲ್ಲಿ ಹಿರಿಯರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ಜಾರಕಿಹೊಳಿ ಹೇಳಿದರು.

ಇಂದಿನಿಂದ ನಾಮಪತ್ರ ಸಲ್ಲಿಕೆ ಆರಂಭ

• **ಬೆಂಗಳೂರು:** ವಿಧಾನಸಭೆಯಿಂದ ರಾಜ್ಯಸಭೆಯ 4 ಹಾಗೂ ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಸೋಮವಾರದಿಂದ ಅಧಿಸೂಚನೆ ಆರಂಭವಾಗಲಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ 7 ಸದಸ್ಯರ ಅವಧಿ ಜೂನ್ 30ಕ್ಕೆ ಕೊನೆಗೊಳ್ಳಲಿದೆ. ಅದೇ ರೀತಿ ರಾಜ್ಯಸಭೆಯ 4 ಸದಸ್ಯರ ಅವಧಿ ಜೂನ್ 26ಕ್ಕೆ ಕೊನೆಗೊಳ್ಳಲಿದೆ. ಸರ್ಕಾರ ರಚನೆಯ ಕಸರತ್ತು ಜೋರಾಗಿರುವುದರಿಂದ ಆಡಳಿತ ಪಕ್ಷದ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿಲ್ಲ, ವಿರೋಧ ಪಕ್ಷಗಳ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳ್ಳದ ಕಾರಣ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ವಿಳಂಬವಾಗಬಹುದು.

ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಜೂ.9 ನಾಮಪತ್ರಗಳ ಪರಿಶೀಲನೆ. ನಾಮಪತ್ರ ಹಿಂಪಡೆಯಲು ಕೊನೆ ದಿನ ಜೂ.11 ಜೂ.18 ರಂದು ಬೆಳಗ್ಗೆ 9ರಿಂದ ಸಂಜೆ 4 ಗಂಟೆ ನಡೆಯಲಿದೆ. ಅದೇ ದಿನ ಫಲಿತಾಂಶ ಪ್ರಕಟಗೊಳ್ಳಲಿದೆ. ರಾಜ್ಯಸಭೆಯ 4 ಸ್ಥಾನಗಳಿಗೂ ಅದೇ ದಿನ ಮತದಾನ ನಿಗದಿಯಾಗಿರುವುದರಿಂದ ಶಾಸಕರು ಮತದಾರರಾಗಿರುವ ರಾಜ್ಯಸಭೆಯ 4 ಹಾಗೂ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಒಂದೇ ದಿನ ಏಕಕಾಲಕ್ಕೆ ಚುನಾವಣೆ ನಡೆಯಲಿದೆ.

ಡಿಕೆಶಿಗೆ ಹೂವಿನ ಹಾರ ಹಾಕುವುದು ನಿಷೇಧ

• **ಬೆಂಗಳೂರು:** ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅಭಿನಂದಿಸಲು ಕಾರ್ಯಕರ್ತರು, ಸಾರ್ವಜನಿಕರು ಮುಗಿ ಬೀಳುತ್ತಿದ್ದಾರೆ. ಆದರೆ, ಅವರಿಗೆ ಹೂವಿನ ಹಾರ ಹಾಕುವುದನ್ನು ನಿಷೇಧಿಸಲಾಗಿದೆ.



ಸಾಮಾನ್ಯವಾಗಿ ಅಭಿನಂದಿಸುವಾಗ ಹೂಗುಚ್ಛ ನೀಡುವುದು, ಹೂವಿನ ಹಾರಗಳನ್ನು ಕೊರಳಿಗೆ ಹಾಕುವುದು ಸಾಮಾನ್ಯ. ಡಿ.ಕೆ. ಶಿವಕುಮಾರ್ ಅವರಿಗೆ ಸುಗಂಧ ರಾಜ ಹೂವು ಅಲರ್ಜಿ. ಸುಗಂಧರಾಜ ಹೂವು ಮೈಗೆ ತಾಗಿದರೆ ತುರಿಕೆ ಬರುವುದರಿಂದ ಈವರೆಗೆ ಅವರನ್ನು ಅಭಿನಂದಿಸಲು ಸುಗಂಧರಾಜ ಹೂವಿನ ಮಾಲೆಗಳಿಗೆ ನಿಷೇಧವಿತ್ತು. ಇನ್ನು ಮುಂದೆ ಎಲ್ಲಾ ರೀತಿಯ ಹೂವಿನ ಹಾರಗಳನ್ನೂ ನಿಷೇಧಿಸಲಾಗಿದೆ.

ಅಂಗಡಿಗಳಲ್ಲಿ ಹೂವಿನ ಹಾರಗಳು ಒಂದಕ್ಕೊಂದು ತಗಲುವಂತೆ ಇಡುವುದು, ಒಂದೇ ಬುಟ್ಟಿಯಲ್ಲಿ ಹಾಕುವುದು ಇದೆಲ್ಲವೂ ನಡೆಯುವುದರಿಂದ ಬೇರೆ ಹೂವಿನ ಮಾಲೆಗಳಿಗೂ ಸುಗಂಧ ರಾಜ ಹೂವು ತಗುಲಿರುವ ಸಾಧ್ಯತೆ ಹೆಚ್ಚು. ಹೊಸದಾಗಿ ಆಯ್ಕೆಯಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಗರು, ಕಾರ್ಯಕರ್ತರು, ಸಾರ್ವಜನಿಕರು, ಅಧಿಕಾರಿಗಳಾದಿಯಾಗಿ ಎಲ್ಲರೂ ಅಭಿನಂದಿಸುವುದರಿಂದ ಕಟ್ಟುನಿಟ್ಟಾಗಿ ಹೂವಿನ ಹಾರವನ್ನು ನಿಷೇಧಿಸಲಾಗಿದೆ ಎಂದು ಸ್ವತಃ ಡಿ.ಕೆ. ಶಿವಕುಮಾರ್ ಅವರೇ ತಿಳಿಸಿದ್ದಾರೆ. ತಮಗೆ ಸುಗಂಧರಾಜ ಹೂವಿನ ಅಲರ್ಜಿ ಇರುವುದರಿಂದ ಈ ನಿರ್ಧಾರ ಮಾಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ತಮ್ಮ ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನಿಸಲು ಸಾಧ್ಯವಾಗದಿರುವುದಕ್ಕೆ ಡಿ.ಕೆ. ಶಿವಕುಮಾರ್ ಅವರು ಕಾರ್ಯಕರ್ತರಲ್ಲಿ ಕ್ಷಮೆ ಕೋರಿದ್ದಾರೆ.

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



ಪುಟ ೧ ➡ ಧರ್ಮ ಮತ್ತು ಪರಂಪರೆಯ ರಕ್ಷಣೆಯೊಂದಿಗೆ ಅನ್ನದಾನ ವಿದ್ಯಾದಾನ, ಔಷಧದಾನ, ಅಭಯದಾನ ಮೊದಲಾದ ಮಾನವೀಯ ಸೇವೆಗಳನ್ನು ಮಾಡುವುದರ ಜತೆಗೆ ಸ್ವಚ್ಛತೆ ಕಾಪಾಡುವುದು ಹಾಗೂ ವೈಜ್ಞಾನಿಕವಾದ ಪಾರದರ್ಶಕ ಆಡಳಿತ ವೈಖರಿ ಮಾದರಿಯಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮೀಣ ಹಿನ್ನೆಲೆಯುಳ್ಳ ಬಡವರಿಗೆ ಸಿರಿ ನೇರವಾಗಿ ನೆರವಾಗಿದೆ. ರಾತ್ರೋರಾತ್ರಿ ಇದು ಬೆಳೆದಿಲ್ಲ. ವರ್ಷಾನುಗಟ್ಟಲೆ ಕಾಲ ತೆಗೆದುಕೊಂಡು ಬೆಳೆದಿದೆ. ಮಾತೃಶ್ರೀ ಸಿರಿ ಕೈಗಾರಿಕಾ ಪಾರ್ಕ್ ನಿರ್ಮಾಣ ಆಗಿರುವುದು, ಅಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ ಸೇರಿದಂತೆ ಕೊಟ್ಟಿರುವ ಸೌಲಭ್ಯಗಳನ್ನೆಲ್ಲ ನೋಡಿ ನಾನು ಬಹಳ ಖುಷಿಯಾಗಿದ್ದೇನೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು. ಕರ್ನಾಟಕ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ, ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಡಿ. ಶ್ರೇಯಸ್ ಕುಮಾರ್ ಹಾಗೂ ಅಮಿತ್ ಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

2026–27ನೇ ಸಾಲಿನಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ

ರಾಜ್ಯದ 114.50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ

▸ **ದೇವಿತಾ.ಸಿ.ಸುಬ್ಬಯ್ಯ**

• **ಬೆಂಗಳೂರು:** ಈ ಭಾರಿ 2026–27ನೇ ಸಾಲಿನ ಮುಂಗಾರು ಹಂಗಾಮಿಗೆ ಕೃಷಿ ಇಲಾಖೆಯು ಮಹತ್ವಾಕಾಂಕ್ಷಿ ಗುರಿ ನಿಗದಿಪಡಿಸಿದ್ದು, ಒಟ್ಟು 114.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆಸುವ ಯೋಜನೆ ರೂಪಿಸಿದೆ.

ದಿಗಂತ ವಿಶೇಷ

ಕೃಷಿ ಇಲಾಖೆಯು 2026–27ನೇ ಸಾಲಿನಲ್ಲಿ ರಾಜ್ಯದಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡುವ ಮಹತ್ವಾಕಾಂಕ್ಷಿ ಗುರಿ ಹೊಂದಿದ್ದು, ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯಲು 82.48 ಲಕ್ಷ ಹೆಕ್ಟೇರ್ ಪ್ರದೇಶವನ್ನು ನಿಗದಿಪಡಿಸಲಾಗಿದೆ. ಪೂರ್ವ ಮುಂಗಾರು ಅವಧಿಯಲ್ಲಿ 2.78 ಲಕ್ಷ ಹೆಕ್ಟೇರ್ ಗುರಿಗೆ ಅನುಗುಣವಾಗಿ ಈಗಾಗಲೇ 28,900 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಂಡಿದ್ದು, ಮಳೆ ಪ್ರಮಾಣಕ್ಕೆ ಅನುಗುಣವಾಗಿ ಬಿತ್ತನೆ ಚಟುವಟಿಕೆಗಳು ವೇಗ ಪಡೆಯುತ್ತಿವೆ. ಮುಂಗಾರು ಹಂಗಾಮಿನಲ್ಲಿ 4.71 ಲಕ್ಷ ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳ ಬೇಡಿಕೆಯಿದ್ದು, ಅಗತ್ಯಕ್ಕಿಂತ ಅಧಿಕ 5.46 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳು ಲಭ್ಯವಿದೆ.



> **ಈ ವರ್ಷದ ಮುಂಗಾರು ಹಂಗಾಮಿಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದೇವೆ. ರೈತರಿಗೆ ಗುಣಮಟ್ಟದ ಬೀಜ, ರಸಗೊಬ್ಬರ ಹಾಗೂ ತಾಂತ್ರಿಕ ಸಲಹೆ ಲಭ್ಯವಾಗುವಂತೆ ಕ್ರಮ ಕೈಗೊಂಡಿದ್ದೇವೆ. ರೈತರು ಸಮಯಕ್ಕೆ ಸರಿಯಾಗಿ ಬಿತ್ತನೆ ಆರಂಭಿಸಿದರೆ ಉತ್ತಮ ಉತ್ಪಾದನೆ ಸಾಧ್ಯ.**
>
> ■ **ಎನ್.ಚೆಲುವರಾಯಸ್ವಾಮಿ, ಹಂಗಾಮಿ ಕೃಷಿ ಸಚಿವ**

ಬೆಳೆವಾರು ಗುರಿ ಏನು? ಮುಂಗಾರು ಹಂಗಾಮಿನಲ್ಲಿ ಬಹುಪಾಲು ಆಹಾರ ಧಾನ್ಯಗಳನ್ನು ಬೆಳೆಯುವ ಗುರಿಯಿದ್ದು, ಒಟ್ಟಾರೆ 37.60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಜೋಳ, ಮೆಕ್ಕೆಜೋಳ, ಭತ್ತ, ನವಣೆ, ಸಾವೆ, ಬರಗು ಮತ್ತಿತರ ಆಹಾರ ಧಾನ್ಯಗಳ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆಯಾಗುವ ಗುರಿಯಿದೆ. ಈ ಬೆಳೆಗಳಿಂದ 101.71 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ.

22 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ, ಹೆಸರು, ಅವರೆ ಮತ್ತಿತರ ಬೇಳೆಕಾಳುಗಳನ್ನು ಬೆಳೆಯುವ ಸಾಧ್ಯತೆ ಇದ್ದು, 12.44 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಸೂರ್ಯಕಾಂತಿ, ಶೇಂಗಾ, ಎಳ್ಳುಮತ್ತಿತರ ಎಣ್ಣೆಕಾಳು ಬೆಳೆಗಳನ್ನು 7.91 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡುವ ಗುರಿ ಇದ್ದು, 8.08 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಬಹುದು. ಇನ್ನುಳಿದಂತೆ ಹತ್ತಿ, ಕಬ್ಬು, ತಂಬಾಕು ಮತ್ತಿತರ ಬೆಳೆಗಳನ್ನು 15.75 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬಹುದಾಗಿದೆ ಎಂದು ಕೃಷಿ ಇಲಾಖೆ ಅಂದಾಜಿಸಿದೆ.



ರೈತರಿಗೆ ಅಗತ್ಯ ಸಿದ್ಧತೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂಗಾರು ಮಳೆ ಆರಂಭವಾಗುವ ಮುನ್ನವೇ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳ ಸಂಗ್ರಹಣೆ ಮಾಡಲಾಗಿದೆ. ರೈತರಿಗೆ ಯಾವುದೇ ಕೊರತೆ ಉಂಟಾಗದಂತೆ ಸಹಕಾರಿ ಸಂಘಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡುವ ಯೋಜನೆ ರೂಪಿಸಲಾಗಿದೆ. ಕೃಷಿ ತಜ್ಞರ ಅಭಿಪ್ರಾಯದಂತೆ, ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆ ವೈವಿಧ್ಯತೆ ಕಡೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಮಳೆ ಪ್ರಮಾಣ ಕಡಿಮೆ ಇರುವ ಪ್ರದೇಶಗಳಲ್ಲಿ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆ ಬೆಳೆಸುವಂತೆ ಸಲಹೆ ನೀಡಲಾಗುತ್ತಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಕೆಶಿಗೆ ಅಭಿನಂದನೆ ಮಹಾಪೂರ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರಿಗೆ ಪಕ್ಷದ ಹಿರಿಯ ಮತ್ತು ಕಿರಿಯ ನಾಯಕರು ಭೇಟಿ ಮಾಡಿ ಹೂಗುಚ್ಛ ನೀಡಿ ಶುಭ ಹಾರೈಸಿದರು.


ಭಾನುವಾರ ಬೆಳಗ್ಗೆಯಿಂದಲೇ ಸದಾಶಿವನಗರದ ನಿವಾಸಕ್ಕೆ ಆಗಮಿಸಿದ ನಾಯಕರು ಶುಭಕೋರಿ ಮಾತುಕತೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಬಿ ಪಾಟೀಲ್, ದಿನೇಶ್ ಗುಂಡೂ



ರಾವ್, ಎಚ್ ಕೆ ಪಾಟೀಲ್, ಎಚ್.ಸಿ ಮಹದೇವಪ್ಪ, ಸುನಿಲ್ ಬೋಸ್, ಡಾ ಅಜಯ್ ಸಿಂಗ್, ಮಾಂಕಾಳ ವೈದ್ಯ, ಮಧು ಬಂಗಾರಪ್ಪ, ರಾಘವೇಂದ್ರ ಹಿಟ್ನಾಳ್, ಬಿ.ಆರ್ ಪಾಟೀಲ್, ತನ್ವಿರ್ ಸೇಠ್, ವಿಜಯಾನಂದ್ ಕಾಶಪ್ಪನವ ನವರ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತಿತರರು ಆಗಮಿಸಿದ್ದರು.

ನಾನು ಸಚಿವ ಸ್ಥಾನದ ಆಕಾಂಕ್ಷಿ: ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಸಂಜೆ ಭೇಟಿ ಮಾಡಿ ಶುಭ ಹಾರೈಸಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರನ್ನು ಅಭಿನಂದಿಸಲು ಬಂದಿದ್ದೆ. ಈ ವೇಳೆ ಎಸ್ಐಆರ್ ಮತ್ತು ಮೈಸೂರು ಜಿಲ್ಲೆಯ ರಾಜಕೀಯ ಕುರಿತು ಚರ್ಚಿಸಿದ್ದೇವೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಹೈಕಮಾಂಡ್ ನನಗೂ ಭರವಸೆ ನೀಡಿದೆ ಎಂದು ತಿಳಿಸಿದರು.

ಡಿಕೆಶಿಗೆ ಶುಭ ಹಾರೈಕೆ



ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಭಾನುವಾರ ಭೇಟಿ ಮಾಡಿ ಶುಭ ಹಾರೈಸಿದರು.

ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ: ಜಯಸಿಂಹ

ಬೆಂಗಳೂರು: ಬ್ರಾಹ್ಮಣರು ಸರ್ವೇ ಜನಾಃಸುಖಿನೋ ಭವಂತು ಎಂದು ಎಲ್ಲರ ಹಿತಾವನ್ನು ಕಾಪಾಡುತ್ತಾರೆ, ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.

ನಗರದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯಿತ್ರಿ ಭವನದಲ್ಲಿ ವಿಪ್ರ ಬ್ಯುಸಿನೆಸ್ ಫೋರಂ ವತಿಯಿಂದ ನಡೆದ ಮಾತೃ ವೈಭವ ಕಾರ್ಯಕ್ರಮ, ಬ್ರಾಹ್ಮಣ ಸಮುದಾಯದ ಮಹಿಳೆಯರ ತಯಾರಿಕೆ ಮಾಡಿದ ಆಹಾರ ಮತ್ತು ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಸಂಸ್ಕಾರ ಮತ್ತು ಮಾನವೀಯತೆ ಮುಖ್ಯ. ಪ್ರತಿಯೊಬ್ಬರು ಸರಿಯಾದ ದಾರಿಯಲ್ಲಿ ಸಾಗಬೇಕು. ತಂದೆ, ತಾಯಿಗೆ ಮಕ್ಕಳು ಗೌರವ ಕೊಡಬೇಕು. ಅದಕ್ಕೆ ಮಕ್ಕಳಿಗೆ ಸಂಸ್ಕಾರ ಕೊಡಿಸಬೇಕು. ಸಮಾಜದಲ್ಲಿ ಬದುಕಲು ಹಣ ಇರಬೇಕು. ಆದರೆ ಹಣದ ವ್ಯಾಮೋಹಕ್ಕೆ ಬೀಳಬಾರದು. ಬ್ರಾಹ್ಮಣರು ಅಲ್ಪತೃಪ್ತರು. ಸರ್ವೇ ಜನಾಃ ಸುಖಿನೋ ಭವಂತು ಎಂದು ಎಲ್ಲರ ಹಿತವನ್ನು ಕಾಪಾಡುತ್ತಾರೆ ಎಂದು ತಿಳಿಸಿದರು.

ಬ್ರಾಹ್ಮಣರು ತಯಾರಿಸಿದ ಆಹಾರ ಪದಾರ್ಥಗಳಿಗೆ ಉತ್ತಮ ಬೇಡಿಕೆ ಇದೆ.ಬ್ರಾಹ್ಮಣ ಮಹಿಳೆಯರು ಸ್ವಾವಲಂಭಿ, ಸ್ವಾಭಿಮಾನಿಯಾಗಿ ಬದುಕಲು ಸ್ವಂತ ವ್ಯಾಪಾರ ಉದ್ಯಮಿ ಪ್ರಾರಂಭ ಮಾಡಬೇಕು. ಅದಕ್ಕೆ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಸುಲಭ ಸಾಲ, ಸೌಲಭ್ಯ ಸಿಗಲಿದೆ. ಮಂಡಳಿಯಿಂದ ಪ್ರತಿಯೊಬ್ಬ ಮಹಿಳೆಗೆ 2ಲಕ್ಷ ಸಾಲ ಸೌಲಭ್ಯ ಸಿಗಲಿದೆ. ಇದುವರಗೆ 1,116 ಜನರಿಗೆ ತಲಾ 2ಲಕ್ಷ ಸಾಲ ನೀಡಲಾಗಿದ್ದು, ಇದರಲ್ಲಿ 376 ಹೆಣ್ಣು ಮಕ್ಕಳು



ಫಲಾನುಭವಿಗಳು ಇದ್ದಾರೆ ಎಂದು ಮಾಹಿತಿ ನೀಡಿದರು.

ಮಂಡಳಿ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ನಗದು ಪುರಸ್ಕಾರ ನೀಡಲಾಗುತ್ತಿದೆ. ಮೆಡಿಕಲ್, ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿಪ್ರ ಬ್ಯುಸಿನೆಸ್ ಫೋರಂ ಅಧ್ಯಕ್ಷ ಆನಂದ್ ಮಾತನಾಡಿ, ಮಾತೃ ವೈಭವ ಎಂಬ ಕಾರ್ಯಕ್ರಮದ ಮೂಲಕ ವಿಪ್ರ ಸಮುದಾಯದವರು ಸ್ವಾವಲಂಭಿ ಮತ್ತು ಸ್ವಯಂ ಉದ್ಯೋಗದಿಂದ ತಯಾರಿಕೆ ಮಾಡಿದ ಆಹಾರ ಪದಾರ್ಥಗಳು ಮತ್ತು ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ವೇದಿಕೆ ಕಲ್ಪಿಸಲಾಗಿದೆ. ಮಹಿಳೆಯರು ತಾಯಿ, ತಂಗಿ ಅಕ್ಕನಾಗಿ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುವಳು. ಅವರಿಗೆ ಗೌರವ ಸಲ್ಲಿಸಬೇಕಾಗಿದ್ದು ನಮ್ಮ ಕರ್ತವ್ಯ ಎಂದು ಹೇಳಿದರು.

ಕಿರುಸುದ್ದಿ

ಜೂ.3ರ ನಂತರ ಡಿಸಿಎಂ ಹುದ್ದೆ ನಿರ್ಧಾರ: ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: ಹೆಚ್ಚುವರಿ ಡಿಸಿಎಂ ಸ್ಥಾನಕ್ಕೆ ಸಂಬಂಧಿಸಿದಂತೆ ಹೈಕಮಾಂಡ್‌ಗೆ ಇನ್ನು ಯಾವುದೇ ಅಧಿಕೃತ ಪ್ರಸ್ತಾವನೆ ಬಂದಿಲ್ಲ. ಜೂನ್ 3ರ ನಂತರ ಈ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು. ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಕಾರಣದ ತೀವ್ರ ಕುತೂಹಲ ಕೆರಳಿಸಿರುವ ಉಪಮುಖ್ಯಮಂತ್ರಿ ಸ್ಥಾನದ ಸೃಷ್ಟಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ವಿವರಣೆ ನೀಡಿದರು. ಮುಖ್ಯಮಂತ್ರಿಯವರ ಜೊತೆಗೆ ಎಷ್ಟು ಜನ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬುದು ಸಹ ಇನ್ನೂ ಅಂತಿಮವಾಗಿಲ್ಲ ಎಂದರು. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಮೇಲೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಹಜವಾಗಿಯೇ ಬದಲಾವಣೆಯಾಗಲಿದೆ. ಮುಖ್ಯಮಂತ್ರಿಯವರೊಂದಿಗೆ ಉತ್ತಮ ಸಮನ್ವಯತೆ (ಕೋ-ಆರ್ಡಿನೇಷನ್) ಹೊಂದಿರುವ ಹಾಗೂ ಸಾರ್ವಜನಿಕವಾಗಿ ದೊಡ್ಡ ಜನ ಬೆಂಬಲವಿರುವ ಸೂಕ್ತ ವ್ಯಕ್ತಿಯನ್ನೇ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

ಬಾಗೇಪಲ್ಲಿ: ತಾಲೂಕಿನ ಸುಂಕಲಮ್ಮ ದೇವಸ್ಥಾನದ ಬಳಿ ಭೀಕರ ಸರಣಿ ಅಪಘಾತದಲ್ಲಿ ಆರು ಕಾರ್ಮಿಕರು ಅಸುನೀಗಿದ್ದಾರೆ. ಈ ದುರ್ಘಟನೆಯಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟಿರೆ, ಆಸ್ಪತ್ರೆಯಲ್ಲಿ ಓರ್ವ ಅಸುನೀಗಿದ್ದಾನೆ. ನಾಲ್ವರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಪಟ್ಟಣ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಗಂಗೋತ್ರಿ ಪೆಟ್ರೋಲ್ ಬಂಕ್ ಬಳಿ ಈ ದುರಂತ ಸಂಭವಿಸಿದೆ. ಮಿಂಚನಹಳ್ಳಿಯಿಂದ ಕೆಲಸ ಮುಗಿಸಿ ಬಾಗೇಪಲ್ಲಿ ಪಟ್ಟಣಕ್ಕೆ ಆಟೋದಲ್ಲಿ ಮರಳುತ್ತಿದ್ದಾಗ್ಲ ಬೆಂಗಳೂರು ಕಡೆಯಿಂದ ವೇಗವಾಗಿ ಬಂದ ಥಾರ್ ಕಾರು ಆಟೋಗೆ ಡಿಕ್ಕಿ ಹೊಡೆದಿದು, ನಿಂತಿದ್ದ ಲಾರಿಗೂ ಡಿಕ್ಕಿಯಾಗಿದೆ. ಪಟ್ಟಣದ ಸರೋಜಮ್ಮ (65) ಉಮಾದೇವಿ(55) ವಿಜಯ (40) ಲಕ್ಷ್ಮೀಬಾಯಿ (50) ಆಟೋ ಚಾಲಕ ಅಂಜನಪ್ಪ (35) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಜಿಲ್ಲಾ ವರಿಷ್ಠಾಧಿಕಾರಿ ಚೌಕ್ಸೆ ಡಿ.ವೈ.ಎಸ್ಪಿ. ಪ್ರಭಾಕರ್ ರೆಡ್ಡಿ, ಎಸ್ಐ ಸುನಿಲ್ ಕುಮಾರ್, ಪೊಲೀಸ್ ಸಿಬ್ಬಂದಿ ಶ್ರೀಪತಿ, ಸುರೇಶ್ ನಾಯ್ಕ್ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉಪತಹಸೀಲ್ದಾರ್ ಆತ್ಮಹತ್ಯೆ

ಹಾಸನ: ನಗರದ ಬಿಎಂ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಉಪತಹಸೀಲ್ದಾರ್ ತಿಮ್ಮಯ್ಯ (52) ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.



ತಿಮ್ಮಯ್ಯ (52) ಆತ್ಮಹತ್ಯೆಗೆ ಶರಣಾದ ಉಪತಹಸೀಲ್ದಾರ್. ಮೈಸೂರು ಜಿಲ್ಲೆ, ಸಾಲಿಗ್ರಾಮದಲ್ಲಿ ಉಪತಹಸೀಲ್ದಾರ್ ಆಗಿದ್ದ ತಿಮ್ಮಯ್ಯ ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಾಲ್ಕು ಪುಟದ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂಲತಃ ಕೊಡಗು ಜಿಲ್ಲೆಯವರಾದ ತಿಮ್ಮಯ್ಯ ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬಸ್ಥರೊಂದಿಗೆ ವಾಸವಿದ್ದರು. ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಸ್ಥಳಕ್ಕೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ಜಾತಿವಾರು 4ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ

ಕೆಪಿಸಿಸಿ ಸಾರಥಿಗೆ ಹುಡುಕಾಟ

ಬೆಂಗಳೂರು: ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಜೂನ್ 3 ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಹೀಗಾಗಿ ತೆರವಾಗುವ ಈ ಮಹತ್ವದ ಸ್ಥಾನಕ್ಕೆ ಸಮರ್ಥ ನಾಯಕನ ಹುಡುಕಾಟ ನಡೆದಿದೆ.

ಈಗಾಗಲೇ ಸಚಿವ ಸ್ಥಾನದ ಜೊತೆಗೆ ಅಧ್ಯಕ್ಷ ಪಟ್ಟವನ್ನೂ ನಿಭಾಯಿಸಲು ಸಿದ್ಧ ಎಂದು ಸತೀಶ್ ಜಾರಕಿಹೊಳಿ ಆಸಕ್ತಿ ತೋರಿದ್ದಾರೆ. ಇವರ ಜೊತೆಗೆ ಡಾ. ಜಿ. ಪರಮೇಶ್ವರ್ ಮತ್ತು ಎಂ.ಬಿ.ಪಾಟೀಲ್ ಹೆಸರುಗಳು ಮುಂಚೂಣಿಯಲ್ಲಿವೆ. ಇದರೊಂದಿಗೆ ಜಾತಿವಾರು 4 ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ ನಡೆದಿದೆ.

ಇನ್ನು ಕಲಬುರಗಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿಗೆ ಹುದ್ದೆಗೆ ಮತ್ತೊಬ್ಬರು ಬರಲೇಬೇಕು. ಅದು ಸಹಜ ಪ್ರಕ್ರಿಯೆ. ಒಳ್ಳೆಯವರನ್ನು ನೋಡಿ, ಕಾಂಬಿನೇಷನ್ ನೋಡಿ ಕೆಪಿಸಿಸಿಗೆ ನೇಮಕ ಮಾಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಚುನಾವಣೆಗೆ ಕೇವಲ 24 ತಿಂಗಳು ಮಾತ್ರ ಬಾಕಿ ಇದೆ. ಬಹಳ ವೇಗವಾಗಿ ಕೆಲಸ ಮಾಡಬೇಕಿದೆ. ವೇಗವಾಗಿಯೂ, ಸಾಮೂಹಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನನ್ನು ನಾವು ಹುಡುಕಬೇಕಿದೆ.

ಜೊತೆಗೆ ಅವರಿಗೆ ಸಹಕಾರ ನೀಡುವಂಥ ತಂಡವೂ ಇರಬೇಕಾಗುತ್ತದೆ. ಇವೆಲ್ಲವೂ ವಿಚಾರ ಮಾಡಿ ನಾವು ಅಧ್ಯಕ್ಷರ ಆಯ್ಕೆ ಮಾಡುತ್ತೇವೆ' ಎಂದು ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಪಕ್ಷದ ವೇದಿಕೆಯಲ್ಲಿ ಚರ್ಚೆ: ಎಂಬಿಪಾ



ವೀರಶೈವ ಲಿಂಗಾಯತ ಸಮುದಾಯಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವ ವಿಚಾರವಾಗಿ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡುವುದಾಗಿ ಮಾಜಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಶಾಸಕಾಂಗ ಸಭೆ ನಡೆದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಆಗಿ ಆಯ್ಕೆಯಾಗಿದ್ದಾರೆ. ಆಗ ಅಭಿನಂದನೆ ಸಲ್ಲಿಸಲು ಆಗಲಿಲ್ಲ. ಅದಕ್ಕಾಗಿ ಮನೆಗೆ ಬಂದು ಶುಭ ಹಾರೈಸಿದ್ದಾಗಿ ಹೇಳಿದರು. ಭೇಟಿಯ ವೇಳೆ ಸಾಮಾನ್ಯವಾದ ಮಾತುಕತೆಗಳಾಗಿವೆ. ಲಿಂಗಾಯತ ಸಮುದಾಯಕ್ಕೆ ಪಕ್ಷದ ಅಧ್ಯಕ್ಷ ಸ್ಥಾನ ನೀಡುವುದು, ಸಂಪುಟ ಪುನರ್ ರಚನೆ ಸೇರಿದಂತೆ ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ ಎಂದಿದ್ದಾರೆ.



"ಮುಂಬರುವ ಚುನಾವಣೆ ಮತ್ತು ಪಕ್ಷದ ಸಿದ್ಧತೆ ಹಾಗೂ ಪಕ್ಷ ಕಟ್ಟುವ ದೃಷ್ಟಿಯಿಂದ ಎಲ್ಲವನ್ನೂ ವಿಚಾರ ಮಾಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕಾಗುತ್ತದೆ.

■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



"ಹೊಸ ಸಂಪುಟದಲ್ಲಿ ಯಾರು ಸಚಿವರಾಗಬೇಕು, ಉಪ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ. ಈಗ ಡಿ.ಕೆ.ಶಿವಕುಮಾರ್ ಅವರು ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಅದಕ್ಕೆ ತಯಾರಿ ನಡೆದಿದೆ.

■ **ಸಂತೋಷ್‌ಲಾಡ್,** ಮಾಜಿ ಸಚಿವ

ಡಿಕೆಶಿ ಸರ್ವಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣವಚನ

ಬೆಂಗಳೂರು: ಕರ್ನಾಟಕದ ನೂತನ ಸಿಎಂ ಆಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗಿದ್ದು, ಜೂ. 3ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರು ಸರ್ವ ಧರ್ಮದ ಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಲು ತೀರ್ಮಾನಿಸಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಕಾರ್ಯಕ್ರಮ ಜೂ.3ರಂದು ಸಂಜೆ 4..05ಕ್ಕೆ ನಡೆಯಲಿದೆ. ರಾಜ್ಯದ 50ಕ್ಕೂ ಅಧಿಕ ಮಠಾಧೀಶರು, ಕ್ರೈಸ್ತ ಸಮು ದಾಯದ ಧರ್ಮ ಗುರುಗಳು, ಮುಸ್ಲಿಂ ಸಮುದಾಯದ ಮೌಲ್ವಿಗಳನ್ನು ಪ್ರಮಾಣವಚನ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಸೂಚನೆ ನೀಡಲಾಗಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿ, ಸುತ್ತೂರುಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶ್ರೀಸಿದ್ಧಗಂಗಾಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮಿ, ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ರವಿಶಂಕರ ಗುರೂಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯಸ್ವಾಮೀಜಿ, ಪೇಜಾವರ ಶ್ರೀವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ ಸಹಿತ 50ಕ್ಕೂ ಅಧಿಕ ಮಠಾಧೀ ಶರನ್ನು ಆಹ್ವಾನಿಸಲು ಯೋಜಿಸಲಾಗಿದೆ.

ಬೆಂಗಳೂರು ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಡಾ.ಪೀಟರ್ ಮಚಾದೋ, ಕಲಬುರಗಿಯ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್‌ನ ಹಜರತ್ ಹಫೀಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್ ಆಹ್ವಾನಿಸಲಾಗುತ್ತದೆ.

ಸಿದ್ಧತೆ ಪರಿಶೀಲನೆ

ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಸೋಮವಾರ (ಜೂ.1) ಸಭೆ ನಡೆಸಲಿದ್ದಾರೆ. ಡಿಪಿಎಆರ್ ಕಾರ್ಯದರ್ಶಿಯಾಗಿರುವ ಜಗದೀಶ್ ಅವರು ಲೋಕಭವನದಲ್ಲಿ ಅಧಿಕಾರಿಗಳ ಸಭೆ ನಡೆಸಲಿದ್ದು, ಪ್ರಮಾಣವಚನ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಲಿದ್ದಾರೆ. ಪ್ರಮಾಣ ವಚನ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರ ವಾಹನ ನಿಲುಗಡೆ ವ್ಯವಸ್ಥೆ, ಕಾರ್ಯಕರ್ತರಿಗೆ ಪ್ರವೇಶ ಪಾಸ್ ವಿತರಣೆ, ಪ್ರಮಾಣ ವಚನ ಸ್ವೀಕರಿಸಲಿರುವ ಕುಟುಂಬಸ್ಥರಿಗೆ ಹಾಗೂ ಗಣ್ಯರಿಗೆ ಆಸನ ವ್ಯವಸ್ಥೆ ಬಗ್ಗೆ ಪರಿಶೀಲಿಸಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲು ನಿಲುಗಡೆ

ಅಭಿವೃದ್ಧಿಗಾಗಿ ಮೋದಿ ಶ್ರಮ: ಸೋಮಣ್ಣ

ಚನ್ನರಾಯಪಟ್ಟಣ: ಪ್ರತಿಯೊಂದು ಹಳ್ಳಿಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂಬ ಉದ್ದೇಶದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.



ಚನ್ನರಾಯಪಟ್ಟಣ ರೈಲ್ವೆ ನಿಲ್ದಾಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲಿನ ನಿಲುಗಡೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಭಾಗದ ಪ್ರಯಾಣಿಕರು, ಸ್ಥಳೀಯ ಶಾಸಕರು ಹಾಗೂ ಸಂಸದರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿ, ಇಂದಿನಿಂದ ಚನ್ನರಾಯಪಟ್ಟಣ ನಿಲ್ದಾಣದಲ್ಲಿ ಈ ರೈಲಿನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಈ ಮೊದಲು 17 ಭೋಗಿಗಳನ್ನು ಹೊಂದಿದ್ದ ಈ ರೈಲಿಗೆ ಈಗ 21 ಭೋಗಿಗಳನ್ನು ಜೋಡಿಸಲಾಗಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ನಿಲ್ದಾಣದಲ್ಲಿ ಹೆಚ್ಚುವರಿ ಪ್ಲಾಟ್‌ಫಾರ್ಮ್ ನಿರ್ಮಾಣ ಕಾರ್ಯ ವಿಳಂಬವಾಗಿದ್ದರಿಂದ ನಿಲುಗಡೆ ತಡವಾಗಿತ್ತು, ಈಗ ಎಲ್ಲಾ ತಾಂತ್ರಿಕ ಕೆಲಸಗಳು ಮುಗಿದಿವೆ. ಮುಂದಿನ ದಿನಗಳಲ್ಲಿ ರೈತರ ಅನುಕೂಲಕ್ಕಾಗಿ ಇನ್ನು ಹತ್ತಾರು ರೈಲುಗಳನ್ನು ಬಿಡುವ ಯೋಜನೆಯಿದ್ದು, ಹಾಸನ-ತಿರುಪತಿ ಹಾಗೂ ಬೆಂಗಳೂರು-ಮುಂಬೈ ನಡುವೆ ಪ್ರತ್ಯೇಕ ರೈಲು ಸಂಚಾರ ಆರಂಭಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

"ಐದು ತಿಂಗಳ ಹಿಂದೆಯೇ ಈ ರೈಲು ನಿಲುಗಡೆಗೆ ಸರ್ಕಾರ ಆದೇಶ ನೀಡಿದ್ದರೂ ತಾಂತ್ರಿಕ ದೋಷಗಳಿಂದ ಜಾರಿಯಾಗಿರಲಿಲ್ಲ. ಈ ವಿಷಯ ಗಮನಕ್ಕೆ ಬಂದ ತಕ್ಷಣ ರೈಲ್ವೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಂದಿನಿಂದ ನಿಲುಗಡೆಗೆ ಅನುಕೂಲ ಮಾಡಿಕೊಡಲಾಗಿದೆ.

■ **ಶ್ರೇಯಸ್ ಪಟೇಲ್,** ಸಂಸದ

ಈಜಲು ತೆರಳಿದ್ದ ಐವರು ನೀರು ಪಾಲು

ರಾಯಚೂರು: ಮಂತ್ರಾಲಯದ ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ ಐವರು ಮುಳುಗಿ ಮೃತಪಟ್ಟಿದ್ದಾರೆ. ನೀರು ಪಾಲಾದವರನ್ನು ಹೈದ್ರಾಬಾದ್ ಮೂಲದ ಯುವನ ಚಂದ್ರ(5), ಸತೀಶ್ (35) ಮಂತ್ರಾಲಯ ಗ್ರಾಮದ ರಾಘವೇಂದ್ರ (25), ಧನುಷ್ (23), ಉರವಕೊಂಡದ ಸಂಧ್ಯಾ(22) ಎಂದು ಗುರುತಿಸಲಾಗಿದೆ.

ಮೃತರು ಭಾನುವಾರ ಮಂತ್ರಾಲಯದಲ್ಲಿನ ಸಂಬಂಧಿಕರ ಮನೆಯಲ್ಲಿ ಏರ್ಪಡಿಸಿದ್ದ ಸತ್ಯನಾರಾಯಣ ಪೂಜೆಗೆ ಆಗಮಿಸಿದ್ದರು. ಪೂಜೆಯ ಬಳಿಕ ನದಿಯಲ್ಲಿ ಈಜಲು ತೆರಳಿದ್ದರು. ಆದರೆ, ನದಿಯಲ್ಲಿನ ನೀರಿನ ಆಳ ತಿಳಿಯದೆ ನದಿಯಲ್ಲಿ ಸ್ವಲ್ಪ ದೂರ ತೆರಳಿದ್ದಾರೆ. ನೀರಿನ ಸೆಳವಿಗೆ ಸಿಲುಕಿ ಈ ಐವರು ನೀರು ಪಾಲಾಗಿದ್ದಾರೆ. ಇವರೊಂದಿಗೆ ತೆರಳಿದ್ದ ಯುವತಿ ಅಪರ್ಣಾ ಸಾವಿನ ದವಡೆಯಿಂದ ಪಾರಾಗಿದ್ದಾರೆ. ಧನುಷ್ ಮೃತದೇಹ ಪತ್ತೆಯಾಗಿದ್ದು ಉಳಿದವರ ಶವಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ. ಪೊಲೀಸರು ಸ್ಥಳೀಯ ಮೀನುಗಾರರ ಸಹಾಯದೊಂದಿಗೆ ಶವಗಳ ಶೋಧ ಕಾರ್ಯ ನಡೆಸಿದ್ದಾರೆ. ಎಮ್ಮಿಗನೂರು ಡಿವೈಎಸ್‌ಪಿ ಭಾರ್ಗವಿ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

ಇಂದು ಶಾಲೆ ಆರಂಭ

ಬೆಂಗಳೂರು: ಸುಮಾರು ಎರಡು ತಿಂಗಳಿನಿಂದ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮೌನವಾಗಿದ್ದ ರಾಜ್ಯದ ಶಾಲೆಗಳು, ಇಂದಿನಿಂದ ಮಕ್ಕಳ ಕಲರವ ಆರಂಭವಾಗಲಿದ್ದು, ಶಾಲಾ ಅಂಗಳ ಕಳೆಕಟ್ಟಲಿದೆ.

ಶಿಕ್ಷಣ ಇಲಾಖೆಯು ಹೊಸ ಶೈಕ್ಷಣಿಕ ವರ್ಷದ ಅಂದರೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಜೂನ್ 1 ರಿಂದ ಪ್ರಾರಂಭಿಸಲು ಆದೇಶಿಸಿದ್ದು, ಮೇ 29 ರಂದು ಶಾಲಾ ಶಿಕ್ಷಕರು ಪೂರ್ವ ಸಿದ್ಧತೆ ಕೈಗೊಂಡಿದ್ದಾರೆ. ಇಂದಿನಿಂದ ಮಕ್ಕಳು ಆಗಮಿಸಲಿದ್ದು, ಪ್ರಾರಂಭೋತ್ಸವದ ಮೂಲಕ ವಿದ್ಯಾರ್ಥಿಗಳಿಗೆ ಸ್ವಾಗತ ನೀಡಲಾಗುತ್ತಿದೆ.

ಮೇ 29 ರಂದು ಪೂರ್ವ ಸಿದ್ಧತೆಗೊಸ್ಕರ ನಿಗದಿ ಮಾಡಲಾಗಿತ್ತು. ಶಾಲಾ ಆವರಣ, ಕೊಠಡಿ ಹಾಗೂ ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ, ಅಡುಗೆ ಮನೆ, ಪಾತ್ರೆ ಸ್ವಚ್ಛಗೊಳಿಸುವುದು, ಶಾಲಾ ವೇಳಾಪಟ್ಟಿ ಸಿದ್ಧತೆ, ಎಸ್‌ಡಿಪಿ ಕ್ರಿಯಾಯೋಜನೆ, ಶಿಕ್ಷಕರಿಗೆ ವಿಷಯಗಳ ಹಂಚಿಕೆ ಸೇರಿದಂತೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರು ಇರುವಂತೆ ನೋಡಿಕೊಳ್ಳಲು ಇಲಾಖೆಯು ಆಯಾ ಶಾಲೆಯ ಮುಖ್ಯಶಿಕ್ಷಕರಿಗೆ ಸೂಚಿಸಿತ್ತು. ಅದರಂತೆ ಶಾಲಾ ಶಿಕ್ಷಕರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಶಾಲೆಗಳನ್ನು ಆರಂಭಿಸಿದ್ದಾರೆ. ಜೂ. 1ರಂದು ಉತ್ಸವದ ರೀತಿಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಇಲಾಖೆ ಸೂಚಿಸಿದ್ದು, ಶಾಲೆಗೆ ತಳಿರು-ತೋರಣ ಕಟ್ಟಿ ಡೋಲು, ನಗಾರಿ ಮೂಲಕ ಮಕ್ಕಳನ್ನು ಕರೆ ತಂದು ಗುಬಾಬಿ ಹೂ ನೀಡಿ ಸ್ವಾಗತಿಸಲು ಸಿದ್ಧವಾಗಿದೆ. ಅಲ್ಲದೆ ಬಿಸಿಯೂಟ ಸಿಹಿಯೊಂದಿಗೆ ಪ್ರಾರಂಭಿಸುವುದು, ಶಾಲಾ ಸಮವಸ್ತ್ರ, ಪುಸ್ತಕಗಳ ಹಂಚಿಕೆಯೂ ನಡೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಸುರಕ್ಷತೆಗೆ ಆದ್ಯತೆ

ಮಳೆಗಾಲದ ಹಿನ್ನೆಲೆಯಲ್ಲಿ ಶಾಲಾ ಕೊಠಡಿಗಳ ಸುರಕ್ಷತೆಗೆ ಆದ್ಯತೆ ನೀಡಲು ಶಿಕ್ಷಕರಿಗೆ ಸೂಚಿಸಿರುವ ಶಿಕ್ಷಣ ಇಲಾಖೆಯು, ಲಭ್ಯ ಇರುವ ಅನುದಾನ ಬಳಸಿಕೊಂಡು ಶಾಲಾ ಕೊಠಡಿಗಳ ದುರಸ್ತಿಗೆ ತಿಳಿಸಿದೆ. ಯಾವುದೇ ಕಾರಣಕ್ಕೂ ಅಸುರಕ್ಷಿತ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸುವಂತಿಲ್ಲ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ತೊಂದರೆ ಇದ್ದಲ್ಲಿ ದೂರು ನೀಡುವುದು ಸೇರಿದಂತೆ ಮಕ್ಕಳ ವಿಷಯದಲ್ಲಿ ಅಲಕ್ಷ್ಯ ತೋರಿದಲ್ಲಿ ಅನಾಹುತ ಸಂಭವಿಸಿದರೆ ಶಿಕ್ಷಕರನ್ನೇ ಹೊಣೆಗಾರಿಕೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.



ರಾಜ್ಯಮಟ್ಟದ ಕಾರ್ಯಕ್ರಮ ರದ್ದು

ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್) ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಬೇಕಾಗಿತ್ತು. ಅಲ್ಲದೆ ಮುಖ್ಯಮಂತ್ರಿಗಳು ಸ್ವತಃ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗೆ ಸ್ವಾಗತಿಸಿ, ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ-ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನೇರ ಸಂವಾದ ನಡೆಸಲು ಸಿದ್ಧತೆ ನಡೆಸಲಾಗಿತ್ತು. ಆದರೆ ಸದ್ಯ ರಾಜ್ಯದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳಿಂದಾಗಿ ರಾಜ್ಯಮಟ್ಟದ ಪ್ರಾರಂಭೋತ್ಸವ ಮತ್ತು ಕೆಪಿಎಸ್ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮವನ್ನು ರದ್ದು ಪಡಿಸಲಾಗಿದೆ. ಒಟ್ಟಾರೆ ಎರಡು ತಿಂಗಳ ರಜೆಯಲ್ಲಿ ಮೋಜು, ಮಸ್ತಿಯಲ್ಲಿ ಕಾಲ ಕಳೆದ ಚಿಣ್ಣರು ಈಗ ಶಾಲೆಯತ್ತ ಮುಖ ಮಾಡಿದ್ದು,ಶಾಲೆಗಳಲ್ಲಿ ಚಟುವಟಿಕೆಗಳು ಆರಂಭವಾಗಲಿದೆ.

ಸಫಲತೆಗಾಗಿ ಸಂಕಲ್ಪ

▸ ಮೇಘಾ ಪ್ರಮೋದ್

ಕೇರಳದ ಎರ್ನಾಕುಲಂ ಜಿಲ್ಲೆಯ ಪುಥೆನ್‌ಕ್ಕಾವು ಪಟ್ಟಣದಲ್ಲಿ ವಾಸಿಸುವ ಶಿಖಾ ಸುರೇಂದ್ರನ್‌ರ ಪುಟ್ಟ-ಪುಟ್ಟ ಕಣ್ಣುಗಳಲ್ಲಿ ದೊಡ್ಡ-ದೊಡ್ಡ ಕನಸುಗಳಿತ್ತು. ತಂದೆ ಹಾಸಿಗೆ ಹಿಡಿದಿದ್ದರು ಹಾಗು ತಾಯಿ ಅಸಹಾಯಕಳಾಗಿದ್ದಳು. ಹೇಗೊ ಸಂಬಂಧಿಕರ ಸಹಾಯದಿಂದ ಎಂಜಿನಿಯರಿಂಗ್ ಪದವಿಯನ್ನು ಮುಗಿಸಿದ ಈ ಪ್ರತಿಭಾಶಾಲಿ ಹುಡುಗಿ ಐಎಎಸ್ ಮುಗಿಸಿ ದೇಶದ ಸೇವೆ ಮಾಡಲು ಬಯಸಿದ್ದಳು, ಆದರೆ ಹಣವಿಲ್ಲದೆ ದೆಹಲಿಯಲ್ಲಿದ್ದು ಕೋಚಿಂಗ್ ಪಡೆಯುವುದು ಹೇಗೆ ಸಾಧ್ಯವಾದೀತು. ಆಗ ಶಿಖಾ ಸಂಕಲ್ಪದ ಸಂಪರ್ಕಕ್ಕೆ ಬಂದರು. ರಾಷ್ಟ್ರೀಯಸ್ವಯಂಸೇವಕಸಂಘದ ಪ್ರಚಾರಕರಾದ ಸಂತೋಷ್ ತನೇಜಾಜೀಯವರ ಪ್ರಯತ್ನದಿಂದ1986ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೆಹಲಿಯಲ್ಲಿ ಸಿವಿಲ್ ಸರ್ವಿಸ್ ಗಾಗಿ ತರಬೇತಿಯನ್ನು ನೀಡುತ್ತಿದೆ. ಇಲ್ಲಿ ಅತಿ ಕಡಿಮೆ ಮೊತ್ತದ ಶುಲ್ಕವನ್ನು ನೀಡಿ ತರಬೇತಿಯ ಜೊತೆಗೆ ಹಾಸ್ಟೆಲ್ ಸೌಲಭ್ಯವನ್ನೂ ಪಡೆದ ಶಿಖಾ ದಾಖಲೆ ನಿರ್ಮಿಸಿದ್ದಳು.2017-18ರ ಬ್ಯಾಚಿನ ಶಿಖಾ ಸುರೇಂದ್ರನ್ ಐಎಎಸ್ ನಲ್ಲಿ ದೇಶದಲ್ಲೇ16ನೇ ಸ್ಥಾನವನ್ನು ಪಡೆದರು.



ಸೇವಾಗಾಥ
ಕಥೆ-8

ರಾಜಸ್ಥಾನದ ಅಲ್ವಾರ್ ಜಿಲ್ಲೆಯ ರೋನಿಜಾಜಾಟ್ ಹಳ್ಳಿಯ ರೈತ ಕುಟುಂಬದ ರಾಜೀವ್ ಕುಮಾರರದ್ದು ಇದೇ ರೀತಿಯ ಕಥೆ. ಅವರ ಕುಟುಂಬದಲ್ಲಿ ಯಾರೂ ಶಿಕ್ಷಿತರಿರಲಿಲ್ಲ. ಇಂದು ಇವರು ಸಿವಿಲ್ ಸೇವೆಗೆ ಆಯ್ಕೆಯಾಗಿ ಮಸ್ಸೂರಿಯಲ್ಲಿ ಐಎಎಸ್ ತರಬೇತಿ ಪಡೆಯುತ್ತಿದ್ದಾರೆ. ಹಾಗೆಯೆ ಅವರ ಈ ಯಶಸ್ಸಿಗೆ ಸಂಕಲ್ಪ ಪರಿವಾರವೆ ಕಾರಣ ಎನ್ನುತ್ತಾರೆ. ಹಣದ ಸಮಸ್ಯೆ ಯಾವ ವಿದ್ಯಾರ್ಥಿಗಳ ಪ್ರತಿಭೆಗೆ ತೊಡಕಾಗಿದೆಯೊ ಅಂತಹ 20ವಿದ್ಯಾರ್ಥಿಗಳಿಗೆ ಸಂಕಲ್ಪ ಪರಿವಾರವು ಪ್ರತಿ ವರ್ಷ ಉಚಿತ ತರಬೇತಿಯನ್ನು ನೀಡುತ್ತಿದೆ. ವಿಶೇಷವಾಗಿ ಜನಜಾತಿಸಮುದಾಯ ಹಾಗು ಈಶಾನ್ಯ ಭಾಗದ ಬಡ ವಿದ್ಯಾರ್ಥಿಗಳಿಗೆ ಸಂಕಲ್ಪವು ಪಾಲಕರ ಹಾಗು ಗುರುವಿನ ಪಾತ್ರವನ್ನು ನಿರ್ವಹಿಸುವ ಕುಟುಂಬದಂತಿದೆ.

ಬೆಳಗ್ಗಿನ ಯೋಗಾಭ್ಯಾಸ, ಸಂಜೆಯ ಶಾಖೆಯಿಂದ ಹಿಡಿದು ರಾತ್ರಿಯ ಪ್ರಾರ್ಥನೆಯ ತನಕ ನಿಯಮ ಬದ್ಧವಾದ ಹಾಗೂ ಸಂಸ್ಕಾರಗಳಿಂದ ಕೂಡಿದ ದಿನ ಚರಿಯು ಸಂಕಲ್ಪವನ್ನು ಬೇರೆ ತರಬೇತಿ ಕೇಂದ್ರಗಳಿಗಿಂತ ಭಿನ್ನವಾಗಿಸುತ್ತದೆ. ವಿಶೇಷವಾದ ಉಪನ್ಯಾಸ ಸರಣಿಗಳಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳನ್ನು ಶಿಕ್ಷಣದೊಂದಿಗೆ ಜೋಡಿಸಿದಮೇಜರ್ ಜನರಲ್ ಜಿ.ಕೆ. ಸಹಗಲ್ ಹಾಗು ಶ್ರೀ ರವಿಶಂಕರ್ ಗುರೂಜಿ ಅವರಂತಹ ರಾಷ್ಟ್ರೀಯವಾದಿಗಳ ಅನುಭವ ವಿದ್ಯಾರ್ಥಿಗಳಲ್ಲಿ ದೇಶಕ್ಕಾಗಿ ಜವಾಬ್ದಾರಿಯುತರಾಗಿರಲು ಪ್ರೇರೇಪಿಸುತ್ತದೆ. ದೇಶಕ್ಕೆ ರಾಷ್ಟ್ರೀಯವಾದಿ ಆಡಳಿತಗಾರರನ್ನು ನೀಡುವ ಉದ್ದೇಶದಿಂದ 1986ರಲ್ಲಿ ಸಂಕಲ್ಪವನ್ನು ಸ್ಥಾಪಿಸಲಾಯಿತು ಎಂದು ಸಂಸ್ಥೆಯ ಸಂಸ್ಥಾಪಕರಾದ ಸಂತೋಷ್ ಜೀಯವರು ಹೇಳುತ್ತಾರೆ.2015ರಲ್ಲಿ ಸಿವಿಲ್ ಸೇವೆಯಲ್ಲಿ ಯಶಸ್ವಿಯಾದ ಒಟ್ಟು1256ವಿದ್ಯಾರ್ಥಿಗಳಲ್ಲಿ670ವಿದ್ಯಾರ್ಥಿಗಳು ಸಂಕಲ್ಪದವರೆ ಆಗುವುದರೊಂದಿಗೆ ಸಂಕಲ್ಪವು ಸಫಲತೆಯ ಇತಿಹಾಸವನ್ನು ನಿರ್ಮಿಸಿದೆ.

ಸಂಸ್ಥೆಯು ಪ್ರತಿ ವರ್ಷ ಆಯೋಜಿಸುವ ಗುರು ಸಮ್ಮಾನ್ ಕಾರ್ಯಕ್ರಮದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನೂಸಹ ಗುರುಗಳೊಂದಿಗೆ ಸನ್ಮಾನಿಸಲಾಗುತ್ತದೆ. ಇಷ್ಟೆ ಅಲ್ಲದೆ, ಪ್ರತಿ ವರ್ಷ ಜಿಂಜೋಲಿಯಲ್ಲಿ ನಡೆಯುವ 'ದಿಶಾಬೋಧ' ಶಿಬಿರದಲ್ಲಿ ದೇಶದ 200 ಪದವೀದರರನ್ನು ಸಿವಿಲ್ ಸೇವೆಯ ಪರೀಕ್ಷೆಯ ತಯಾರಿಯ ಮೊದಲು ಅವರಿಗೆ ಓದುವ ವಿಧಾನವನ್ನು ಕಲಿಸಿ ದೇಶಕ್ಕಾಗಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ.ಈ ಶಿಬಿರದಲ್ಲಿ ಭಾಗ ವಹಿಸಿದವರಿಗೆಸಂಘದ ಸಹ ಸರಕಾರ್ಯವಾಹರಾದ ಮಾನ್ಯ ಶ್ರೀ ಕೃಷ್ಣಗೋಪಾಲ್ ಜಿ ಸೇರಿದಂತೆ ಸಂಘದ ಹಿರಿಯ ಅಧಿಕಾರಿಗಳ ಮಾರ್ಗದರ್ಶನವೂ ದೊರೆಯುತ್ತಿದೆ.

ಸಂಕಲ್ಪದ ವೈಶಿಷ್ಟ್ಯವೆಂದರೆ ಇಲ್ಲಿನ ಆತ್ಮೀಯ ವಾತಾವರಣದಲ್ಲಿ ದೆಹಲಿಯಂತಹ ಮಹಾನಗರದಲ್ಲಿ ಕೌಟುಂಬಿಕ ವಾತಾ ವರಣದ ಕೊರತೆ ಕಾಣಿಸುವುದಿಲ್ಲ ಎಂದು ಕೇರಳದಶಿಖಾ ಸುರೇಂದ್ರನ್ ಹೇಳುತ್ತಾರೆ. ಆಡಳಿತಾಧಿಕಾರಿಗಳನ್ನು ರಾಷ್ಟ್ರೀಯವಾದಿ ಚಿಂತನೆಗಳಿಗೆ ಜೋಡಿಸಲು ಪ್ರತಿ ವರ್ಷ 3 ದಿನಗಳ ಉಪನ್ಯಾಸ ಸರಣಿಗಳನ್ನು ಆಯೋಜಿಸಲಾಗುತ್ತದೆ. ಇದರಲ್ಲಿ ಸಮಾಜದ ಪ್ರಬುದ್ಧ ಚಿಂತಕರು ವಿವಿಧ ರಾಷ್ಟ್ರೀಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾರೆ.

ಜಾರಕಿಹೊಳಿ ವಿರುದ್ಧ ನಕಲಿ ಪೋಸ್ಟ್: ದೂರು ದಾಖಲು

ಬೆಳಗಾವಿ: 'ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ' ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ ಘಟನೆಯ ಕುರಿತು, ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಬೆಳಗಾವಿ ಸೈಬರ್ ಕ್ರೈಂ ಠಾಣೆಗೆ ದೂರು ದಾಖಲಿಸಿದ್ದಾರೆ.



ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರ ವಿರುದ್ಧ 37 ಶಾಸಕರಿಂದ ಸಚಿವ ಸತೀಶ ಜಾರಕಿಹೊಳಿ ಅವರು ಸಹಿ ಸಂಗ್ರಹ ಮಾಡಲಾಗಿದೆ ಎಂಬ ಗಂಭೀರ ಆರೋಪ ಮಾಡಲಾಗಿದೆ. ಈ ಆರೋಪವನ್ನು ಸ್ವತಃ ಸಚಿವ ಸತೀಶ ಜಾರಕಿಹೊಳಿ ನಿರಾಕರಿಸಿದ್ದಾರೆ. ಹೀಗಾಗಿ ಸತೀಶ ಜಾರಕಿಹೊಳಿ ಅವರ ವಿರುದ್ಧ ಇಲ್ಲ ಸಲ್ಲದ ಅಪವಾದ ಹೊರಿಸಿ ಅವರ ಹೆಸರು ಹಾಳು ಮಾಡಲು ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಂಚು ರೂಪಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಸಾರ್ವಜನಿಕರಲ್ಲಿ ಶಾಂತಿ ಭಂಗ, ದೊಂಬಿ ಉಂಟು ಮಾಡುವಂತೆ ಮಾಡಲು ಸುಳ್ಳು ಸುದ್ದಿಗಳನ್ನು ಸಚಿವ ಸತೀಶ ಜಾರಕಿಹೊಳಿ ಅವರ ವಿರುದ್ಧ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ. ಶೀಘ್ರವೇ ಸುಳ್ಳು ಸುದ್ದಿ ಹರಡಿಸುವವರ ಹಾಗೂ ಈ 2 ನಕಲಿ ಫೇಸ್‌ಬುಕ್ ಖಾತೆ ಮಾಡಿ ಅವಹೇಳನಕಾರಿ ಪೋಸ್ಟ್ ಹಾಕಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.

ಸಂಪಾದಕೀಯ

ಹಲ್ಲೆ ಮತ್ತು ಹುಟ್ಟುವ ಪ್ರಶ್ನೆಗಳು

ತೃಣಮೂಲ ಕಾಂಗ್ರೆಸಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ ನಡೆಸಿದವರ ಬಂಧನವಾಗಿದೆ. ಆದರೆ ರಾಜಕೀಯದಾಟ ಆರಂಭವಾಗಿದೆ. ಮಮತಾ ಬ್ಯಾನರ್ಜಿಯವರು ಅದನ್ನು ದೇಶದ ಅತ್ಯಂತ ಪ್ರಮುಖ ಘಟನೆ ಎಂಬಂತೆ ಚಿತ್ರಿಸಲಾರಂಭಿಸಿದ್ದಾರೆ. ರಾಹುಲ್ ಗಾಂಧಿ ಕೂಡ ಸಾಂತ್ವನ ವ್ಯಕ್ತಪಡಿಸಿದ್ದಾರೆ. ಸ್ವಯಂ ಅಭಿಷೇಕ್ ಬ್ಯಾನರ್ಜಿ, ಇದು ಸರ್ಕಾರಿ ಪ್ರಾಯೋಜಿತ ಹಲ್ಲೆ ಎಂದಿದ್ದಾರೆ. ಹಲ್ಲೆ ಅಕ್ಷಮ್ಯ. ಆದರೆ ಈ ಪ್ರಕರಣ ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತವೆ.



ಬಿಜೆಪಿ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಹಿಂಸೆಯ ರಾಜಕಾರಣಕ್ಕಿಳಿದಿದೆ, ವ್ಯವಸ್ಥೆಯನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ದಮನಿಸುತ್ತಿದೆ ಎನ್ನುವ ಮಮತಾ ತಮ್ಮ ಅಧಿಕಾರಾವಧಿಯಲ್ಲಿ ದಿನನಿತ್ಯ ಬಿಜೆಪಿ ಕಾರ್ಯಕರ್ತರ ಕೊಲೆಗಳಾಗುತ್ತಿದ್ದಾಗ ಸಂವೇದನಾಹೀನರಾಗಿ ನಡೆದುಕೊಂಡಿದ್ದರು. ಅಭಿಷೇಕ್ ಬ್ಯಾನರ್ಜಿಯ ಸೋನಾರ್‌ಪುರ ಭೇಟಿಯಲ್ಲೇ ಅಪ್ರಮಾಣಿಕತೆಯಿದೆ. ಚುನಾವಣೆಯ ನಂತರದ ಹಿಂಸಾಚಾರದಲ್ಲಿ ಮೃತರಾದವರ ಮನೆಗಳಿಗೆ ಸಂತಾಪ ಸೂಚಿಸಲು ತೆರಳಿದ್ದರೋ ಅಥವಾ ಕೆರಳಿಸಲು ಹೋಗಿದ್ದರೋ ಎಂಬ ಗುಮಾನಿ ಜನರಿಗಿದೆ. ಚುನಾವಣೆಯ ಸಮಯದಲ್ಲಿ ಇದೇ ಅಭಿಷೇಕ್ ಬ್ಯಾನರ್ಜಿ ಮೇ 4ರ ನಂತರ ನಿಮ್ಮನ್ನು ಕಾಪಾಡಲು ಯಾವ ದೆಹಲಿಯ ನಾಯಕ ಬರುತ್ತಾನೆ ನೋಡೋಣ ಎಂದು ನೇರಾನೇರ ಬಿಜೆಪಿ ಕಾರ್ಯಕರ್ತರಿಗೆ ಬೆದರಿಕೆಯನ್ನೂ ಒಡ್ಡಿದ್ದರು. ಅಂದರೆ ಈ ಅಭಿಷೇಕ್ ಬ್ಯಾನರ್ಜಿ ಮೂಲತಃ ಗೂಂಡಾಗಿರಿಯನ್ನೇ ರಾಜಕಾರಣ ಎಂದುಕೊಂಡ ಮನುಷ್ಯ. ಅಲ್ಲದೆ ಪ.ಬಂಗಾಳದಲ್ಲಿ ಮಮತಾರನ್ನು ಬೆಂಬಲಿಸುವ ಅಸಂಖ್ಯಾತ ಕಾರ್ಯಕರ್ತರಿಗೂ ಅಭಿಷೇಕ್ ಬ್ಯಾನರ್ಜಿ ಕಂಡರಾಗುತ್ತಿರಲಿಲ್ಲ. ಸೋಲಿನ ನಂತರ ಇದಕ್ಕೆ ನೇರವಾಗಿ ಅಭಿಷೇಕ್ ಬ್ಯಾನರ್ಜಿಯೇ ಕಾರಣ ಎಂದು ಅನೇಕ ಟಿ.ವಿ ಚರ್ಚೆಗಳಲ್ಲಿ ತೃಣಮೂಲ ಕಾಂಗ್ರೆಸಿನ ಸಮರ್ಥಕರೇ ಆರೋಪವನ್ನು ಮಾಡಿದ್ದರು. ಇವೆಲ್ಲವನ್ನೂ ನೋಡಿದರೆ ಟಿಎಂಸಿಯ ಕಾರ್ಯಕರ್ತರೇ ತಮ್ಮ ಸೋಲಿಗೆ ಇವರೇ ಕಾರಣರಾದರೆಂದು ಯಾಕೆ ಹಲ್ಲೆ ನಡೆಸಿರಬಾರದು? ದಶಕಗಳ ಕಾಲ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಹಿಂಸಾಚಾರದ ಮೂಲಕ ಗೆಲ್ಲುತ್ತಿದ್ದ ಟಿಎಂಸಿ ಹಲ್ಲೆಯ ಬಗ್ಗೆ ದೂರನ್ನೇಕೆ ನೀಡಲಿಲ್ಲ? ಇದು ಸರ್ಕಾರಿ ಪ್ರಾಯೋಜಿತ ಹಲ್ಲೆಯಾಗಿದ್ದರೆ ಪೊಲೀಸರೇಕೆ ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಳ್ಳುತ್ತಿದ್ದರು? ನಾಲ್ವರನ್ನೇಕೆ ಬಂಧಿಸುತ್ತಿದ್ದರು? ಘಟನೆಯ ನಂತರ ಅನುಕಂಪದ ಹೇಳಿಕೆಗಳನ್ನು ನೀಡುತ್ತಿರುವ ಟಿಎಂಸಿ ಮತ್ತು ಅದರ ನಾಯಕಿಯ ಸುಳ್ಳುಗಳನ್ನು ನೋಡಿದರೆ ಇವೆಲ್ಲಾ ಸೋಲಿನ ಹತಾಶೆಯಿಂದ ಹೊರಬಂದ ನಾಟಕ ಎಂದೇ ಅನಿಸುತ್ತದೆ. ಮಮತಾ ಬ್ಯಾನರ್ಜಿ ಒಂದು ಹೆಜ್ಜೆ ಮುಂದುವರಿದು ಐಸಿಯುನಲ್ಲಿದ್ದ, ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಯಿಂದ ತುರಾತುರಿಯಲ್ಲಿ ಬಿಡುಗಡೆ ಮಾಡಿದ್ದಾರೆ ಎಂದೂ ಆರೋಪಿಸಿದ್ದಾರೆ, ಇದಕ್ಕೆ ಸರ್ಕಾರದ ಬೆದರಿಕೆಯೇ ಕಾರಣ ಎಂದು ಆರೋಪವನ್ನು ಮಾಡಿದ್ದಾರೆ. ಹಲ್ಲೆ ಪ್ರಕರಣದಲ್ಲಿ ಸಹಜವಾಗಿ ನಡೆಯಬೇಕಾದ ವೈದ್ಯಕೀಯ ಪ್ರಕ್ರಿಯೆಗಳು ಮುಗಿದ ಮೇಲೆ ಯಾಕಾದರೂ ಅಭಿಷೇಕ್ ಬ್ಯಾನರ್ಜಿ ಆಸ್ಪತ್ರೆಯಲ್ಲಿರಬೇಕು? ಈ ಎಲ್ಲಾ ನಾಟಕದ ತಾತ್ಪರ್ಯವೇನೆಂದರೆ ಸೋತು ಸುಣ್ಣವಾದ ಟಿಎಂಸಿ ಮುಂದಿನ ದಿನಗಳಲ್ಲಿ ಇಂಥ ನಾಟಕಗಳನ್ನು ನಿರಂತರ ಮಾಡುತ್ತಿರುತ್ತದೆ ಎಂಬುದು!

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ಈ ಮೂವರದೂ ಒಂದೇ ರಾಗ -ಅದು ಸಮಾಜಮುಖಿ ರಾಗ. ಅವರೆಲ್ಲ ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದವರು.

ನೇರ ನೋಟ
ದು.ಗು. ಲಕ್ಷ್ಮಣ
dugulakshman@yahoo.com



ಒಂದೇ ಮನೆಗೆ ಸೇರಿದ ಸದಸ್ಯರಲ್ಲಿ ಹಲವರು ವೈದ್ಯರಾಗುವುದನ್ನು ನೋಡಿದ್ದೇವೆ. ನ್ಯಾಯವಾದಿ, ನ್ಯಾಯಾಧೀಶರು, ಅಧ್ಯಾಪಕರಾಗುವುದನ್ನು ನೋಡಿದ್ದೇವೆ. ಒಂದೇ ಮನೆಯಲ್ಲಿ, ತಂದೆ, ಮಗ, ಮೊಮ್ಮಗ ರಾಜಕಾರಣಿಯಾಗುವುದು ಹೊಸತೇನಲ್ಲ. ಆದರೆ ಒಂದೇ ಮನೆಗೆ ಸೇರಿದ ಸೋದರ, ಸೋದರಿಯರು ಸಮಾಜ ಸೇವೆಗಾಗಿ ಬದುಕು ಮುಡಿಪಾಗಿಟ್ಟ ನಿದರ್ಶನ ತೀರಾ ವಿರಳ. ಬೆಂಗಳೂರಿನ ಸ್ವರ್ಗೀಯರಾದ ಸೂರ್ಯನಾರಾಯಣರಾವ್, ಕೃ. ನರಹರಿ ಮತ್ತು ಕೃ. ರುಕ್ಮಿಣಿ ಸಮಾಜ ಸೇವೆಗಾಗಿಯೇ ಸಂಪೂರ್ಣ ಬದುಕು ಮುಡಿಪಾಗಿಟ್ಟ ಒಂದೇ ಬಳ್ಳಿಯ ಹೂಗಳು.

1967ರಲ್ಲಿ ಎಂ.ನಾಗೇಶ್ವರರಾವ್ ಮತ್ತು ಎಂ.ಎಸ್. ನಾಯಕ್ ನಿರ್ದೇಶನದ 'ಒಂದೇ ಬಳ್ಳಿಯ ಹೂಗಳು' ಎಂಬ ಕನ್ನಡ ಚಿತ್ರ ತೆರೆಕಂಡಿತ್ತು. ಅದರಲ್ಲೊಂದು ಅರ್ಥಗರ್ಭಿತ ಹಾಡು: "ಒಂದೇ ಬಳ್ಳಿಯ ಹೂಗಳು ನಾವು ಪ್ರೀತಿಯೇ ನಮಗಾಧಾರ! ಒಂದೇ ರಾಗ ಹರಿಸಿರೇ ಹರಿಸಿರೆ ಈಗ ಪಾವನ ಗಂಗಾಧರ" ಸ್ವರ್ಗೀಯರಾದ ಕೃ.ಸೂರ್ಯನಾರಾಯಣರಾವ್, ಕೃ.ನರಹರಿ ಮತ್ತು ಕೃ. ರುಕ್ಮಿಣಿ- ಈ ಮೂವರು ಒಂದೇ ಬಳ್ಳಿಯ ಹೂಗಳು. ಒಂದೇ ತಾಯಿಯ ಮಕ್ಕಳು. ದೇಶಭಕ್ತಿ, ಸಮಾಜ ಸೇವೆಯೇ ಅವರಿಗಾಧಾರ. ಈ ಮೂವರದೂ ಒಂದೇ ರಾಗ -ಅದು ಸಮಾಜಮುಖಿ ರಾಗ. ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದರು. ಸ್ವಂತದ ಸುಖ ಭೋಗಗಳನ್ನು ತ್ಯಜಿಸಿ, ಸಮಾಜ ಸೇವೆಯ ಯಜ್ಞದಲ್ಲಿ ಸಮಿಧೆಯಾಗಿ ಉರಿದರು. 'ಹಮ್ ಕರೇ ರಾಷ್ಟ್ರ ಆರಾಧನ್/ತನ್‌ಸೇ ಮನ್ ಸೇ ಧನ್ ಸೇ/ ತನು ಮನ ಧನ ಜೀವನ ಸೇ' ಎಂಬ ಸಂಘಗೀತೆಗೆ ನಿದರ್ಶನವಾದರು.

ಕೃ. ಸೂರ್ಯನಾರಾಯಣ ರಾವ್



ಸೂರೂಜಿ ಎಂದೇ ಜನಪ್ರಿಯರಾಗಿದ್ದ ಸೂರ್ಯನಾರಾಯಣ ರಾವ್ ಆಜಾನುಬಾಹು ವ್ಯಕ್ತಿ. (ಜನನ 20-08-1924; ನಿಧನ 19-11-2016). ತಮ್ಮ ಬಿ.ಎಸ್‌ಸಿ. ಪದವಿ ಮುಗಿಸಿದ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ಹೊರಟವರು ಮತ್ತೆ ಹಿಂತಿರುಗಿ ನೋಡಿದ್ದೇ ಇಲ್ಲ. ಕರ್ನಾಟಕದಲ್ಲಿ ಸಂಘದ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸೂರೂಜಿಯವರನ್ನು ಸಂಘದ ಪಾಲಿಗೆ ಕಬ್ಬಿಣದ ಕಡಲೆಯಂತಿದ್ದ ತಮಿಳುನಾಡು ಪ್ರಾಂತ ಪ್ರಚಾರಕರಾಗಿ ಶ್ರೀ ಗುರೂಜಿಯವರು ಕಳುಹಿಸಿದಾಗ ಸೂರೂಜಿ ಅಲ್ಲೊಂದು ಪವಾಡವನ್ನೇ ಮಾಡಿಬಿಟ್ಟರು. ಕನ್ನಡಿಗರಾಗಿದ್ದ ಸೂರೂಜಿ ಮೊದಲು ತಮಿಳು ಭಾಷೆಯನ್ನು ಮಾತನಾಡಲು, ಓದಲು ಕಲಿತರು. ಕ್ರಮೇಣ ಸಭೆಗಳಲ್ಲಿ ತಮಿಳಿನಲ್ಲೇ ಭಾಷಣ ಮಾಡಿ ತಮಿಳರ ಹೃದಯ ಗೆದ್ದರು. ನಡುವೆ ಕರ್ನಾಟಕಕ್ಕೆ ಕಾರ್ಯನಿಮಿತ್ತ ಬಂದು ಇಲ್ಲಿ ಸ್ವಯಂಸೇವಕರ ಬೈಠಕ್ ತೆಗೆದುಕೊಂಡಾಗ ಸೂರೂಜಿ ಮರೆತು ತಮಿಳಿನಲ್ಲೇ ಕೆಲವು ಬಾರಿ ಮಾತನಾಡಿದ್ದೂ ಉಂಟು! ಆ ಮಟ್ಟಕ್ಕೆ ತಮಿಳು ಅವರಿಗೆ ಹೃದ್ಗತವಾಗಿತ್ತು, ಸ್ವಾಮಿ ವಿವೇಕಾನಂದರ ಕುರಿತು ಅವರು ಮಾತನಾಡತೊಡಗಿದರೆ ವಿವೇಕಾನಂದರೇ ಪ್ರತ್ಯಕ್ಷ ಎದುರು ಬಂದು ಮಾತಾಡಿದಷ್ಟು ಪ್ರಭಾವಿಯಾಗಿರುತ್ತಿತ್ತು. ಸಂಘದ ಅ.ಭಾ. ಸೇವಾ ಪ್ರಮುಖರಾಗಿಯೂ ಕಾರ್ಯನಿರ್ವಹಿಸಿದ ಸೂರೂಜಿ ಕೆನ್ಯಾ, ನೈರೋಬಿ ಸೇರಿದಂತೆ ಹಲವು ದೇಶಗಳಿಗೆ ತೆರಳಿ, ಅಲ್ಲೆಲ್ಲ ಹಿಂದೂ ಸಂಘಟನೆಗಳಿಗೆ ಮಾರ್ಗದರ್ಶನ ಮಾಡಿದ್ದರು.

ಉಡುಪಿಯಲ್ಲಿ ನಡೆದ ವಿಶ್ವ ಹಿಂದು ಪರಿಷತ್ ಸಮ್ಮೇಳನದ ಯಶಸ್ಸಿಗೆ ಸೂರೂಜಿಯವರ ಕುಶಲ ಸಂಘಟನೆಯೂ ಪ್ರಮುಖ ಕಾರಣ. ಸಮಾಜದ ಅನೇಕ ಗಣ್ಯರು, ಸಂತ ಮಹಂತರು, ಚಿಂತಕರನ್ನು ಸಂಘದ ತೆಕ್ಕೆಗೆ ತಂದು ಅವರನ್ನು ಸಮಾಜಮುಖಿ ಕಾರ್ಯಗಳಿಗೆ ಪ್ರೇರಿಸಿದ ಮಹಾನ್ ಸಂಘಟಕ. ಕುಟುಂಬದ ಹಿರಿ ಮಗನಾಗಿ ಸಂಸಾರದ ನೊಗವನ್ನು ಹೊರಬೇಕಾಗಿದ್ದರೂ ಸಮಾಜ ಕಾರ್ಯದ ನೊಗಹೊತ್ತು ತಿರುಗಿದ ಧ್ಯೇಯವಾದಿ.

ಕೃ. ನರಹರಿ



ಕೃ. ನರಹರಿಯವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರ. ಕೊಡಗು ಜಿಲ್ಲೆಯಲ್ಲಿ ಎರಡು ವರ್ಷ ಸಂಘದ ಪ್ರಚಾರಕ್ ಆಗಿ ಕಾರ್ಯನಿರ್ವಹಣೆ. ಮನೆಯ ಆರ್ಥಿಕ ಸ್ಥಿತಿ ಸರಿಯಾಗಿಸಲು ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ 24 ವರ್ಷ ಉಪನ್ಯಾಸಕನಾಗಿ ಸೇವೆ. ಸಂಘದ ಸೂಚನೆಯಂತೆ ಉಪನ್ಯಾಸಕ ವೃತ್ತಿ ಕೈಗೊಂಡಿದ್ದರೇ ಹೊರತು ಅವರ ಸ್ವಂತ ಇಚ್ಛೆ ಆದಾಗಿರಲಿಲ್ಲ. (ಅಸಲಿಗೆ ಸ್ವಂತದ ಇಚ್ಛೆ ಎಂಬುದೇ ಅವರಿಗಿರಲಿಲ್ಲ). ಅನಂತರ ಸ್ವಯಂ ನಿವೃತ್ತಿ ಪಡೆದು ಶಿಕ್ಷಕ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದೂ ಸಂಘದ ಸೂಚನೆಯ ಪಾಲನೆಗಾಗಿ. ವಿಧಾನ ಪರಿಷತ್ ಸದಸ್ಯರಾಗಿ 18 ವರ್ಷ ಕಾಲ ಕಾರ್ಯ ನಿರ್ವಹಿಸಿದರೂ ತಾನೊಬ್ಬ ಎಂಎಲ್‌ಸಿ ಎಂಬ ಗತ್ತು, ದರ್ಪ ಅವರಲ್ಲಿ ಒಂದಿನಿತೂ ಇರಲಿಲ್ಲ. ಶಾಸಕನಾಗಿ ದೊರೆಯುತ್ತಿದ್ದ ವೇತನ , ಉಚಿತ ಸರ್ಕಾರಿ ನಿವೇಶನ ಇನ್ನಿತರ ಸೌಲಭ್ಯಗಳನ್ನು ನರಹರಿಯವರು ಸ್ವಂತಕ್ಕೆ ಬಳಕೆ ಮಾಡಿಕೊಂಡಿದ್ದೇ ಇಲ್ಲ. ಅದನ್ನೆಲ್ಲ ಸಂಘ ಪರಿವಾರದ ಸಂಘ ಸಂಸ್ಥೆಗಳಿಗೆ ದಾನವಾಗಿ ನೀಡಿದರು. ಅದೆಷ್ಟೋ ಬಡ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ತಮ್ಮ ಜೇಬಿನಿಂದ ಹಣ ಕಳಿಸುತ್ತಿದ್ದರು. ಪ್ರಸಿದ್ಧಿ, ಪ್ರಚಾರಗಳಿಂದ ಸದಾ ದೂರ. ನರಹರಿಯವರು ಆರೆಸ್ಸೆಸ್‌ನ ಕಟ್ಟಾಳು ಎಂಬುದು ಬಿಜೆಪಿಯೇತರ ರಾಜಕೀಯ ಪಕ್ಷಗಳಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಎಲ್ಲಾ ಪಕ್ಷದ ಮುಖಂಡರು ಅವರಿಗೆ ತಲೆಬಾಗಿ ಗೌರವ ನೀಡುತ್ತಿದ್ದರು. ಅಧಿವೇಶನದ ವೇಳೆ ಶಿಕ್ಷಣ ರಂಗಕ್ಕೆ ಸಂಬಂಧಿಸಿ ನರಹರಿಯವರು ಮಾಡುತ್ತಿದ್ದ ಭಾಷಣವನ್ನು ತದೇಕಚಿತ್ತರಾಗಿ ಆಲಿಸುತ್ತಿದ್ದರು.

ವೈಯಕ್ತಿಕ ಮೌಲ್ಯ, ಕೌಟುಂಬಿಕ ಮೌಲ್ಯ, ಸಾಮಾಜಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ ಮತ್ತು ರಾಷ್ಟ್ರೀಯ ಮೌಲ್ಯ- ಈ ಐದು ಬಗೆಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ನರಹರಿಯವರು ತಾವು ಹೋದೆಡೆಯಲ್ಲೆಲ್ಲ ಯುವ ಪೀಳಿಗೆಗೆ ಕರೆ ನೀಡುತ್ತಿದ್ದರು. ಶಿಸ್ತು, ಸರಳತೆ, ಬದ್ಧತೆಗೆ ಅನ್ವರ್ಥಕರಾಗಿ ಸಮಾಜ ಸಮರ್ಪಿತ ಬದುಕು ನಡೆಸಿದರು. (ಜನನ 25-05-1932; ನಿಧನ 8-10-2025).

ಕೃ. ರುಕ್ಮಿಣಿ



ಕೃ. ಸೂರೂಜಿಯವರ ತಂಗಿಯಾಗಿ, ನರಹರಿಯವರ ಅಕ್ಕನಾಗಿ ಜನಿಸಿದವರು ಕೃ. ರುಕ್ಮಿಣಿ (ರುಕ್ಮಿಣಿಯಕ್ಕ ಎಂದೇ ಚಿರಪರಿಚಿತರು). ಬಿ.ಎಸ್‌ಸಿ, ಬಿಎಡ್ ಪದವಿ ಪಡೆದ ಬಳಿಕ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರೌಢಶಾಲೆಗೆ ಶಿಕ್ಷಕಿಯಾಗಿ ಸೇರಿ ವೃತ್ತಿ ಆರಂಭಿಸಿದರು. ಅನಂತರ ಗಣಿತದ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ನಾಗಪುರ ವಿಶ್ವವಿದ್ಯಾಲಯದಲ್ಲಿ ಗಳಿಸಿದರು. ಪರೀಕ್ಷೆ ವೇಳೆ ಅವರ ವಾಸ್ತವ್ಯ ಆರೆಸ್ಸೆಸ್ ಸರಸಂಘಚಾಲಕರಾಗಿದ್ದ ಗುರೂಜಿಯವರ ಮನೆಯಲ್ಲಿ. ಮುಂದೆ ಎಂ.ಎಲ್.ಎ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಬಡ್ತಿ ಹೊಂದಿ, ಸಮರ್ಥವಾಗಿ ಆ ಜವಾಬ್ದಾರಿ ನಿರ್ವಹಿಸಿದರು. ಅವರ ಬೋಧನಾ ಕ್ರಮ ವಿದ್ಯಾರ್ಥಿಗಳಿಗೆ ಮೆಚ್ಚುಗೆಯಾಗಿತ್ತು.

ಕಾಲೇಜಿನಿಂದ ನಿವೃತ್ತಿ ಹೊಂದಿದ ಮೇಲೆ ಅವರನ್ನು ಸೆಳೆದಿದ್ದು ಮಹಿಳೆಯರ ಕ್ಷೇತ್ರದಲ್ಲಿ ಹಿಂದು ಸಂಘಟನೆ ಮಾಡುತ್ತಿದ್ದ ರಾಷ್ಟ್ರ ಸೇವಿಕಾ ಸಮಿತಿ. ಹೆಚ್ಚು ಕಡಿಮೆ ಸಮಿತಿಯ ಪೂರ್ಣಾವಧಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸಿ, ಆ ಸಂಘಟನೆಯ ಅಖಿಲ ಭಾರತ ಸಹಕಾರ್ಯ ವಾಹಿಕೆಯಾಗಿ ಕಾರ್ಯನಿರ್ವಹಿಸಿದ್ದ ರುಕ್ಮಿಣಿಯಕ್ಕನವರು ಸೂರ್ಯನಾರಾಯಣ ರಾವ್ ಕುಟುಂಬದ ಕೊನೆಯ ಕೊಂಡಿಯಾಗಿದ್ದರು. ರಾಷ್ಟ್ರಸೇವಿಕಾ ಸಮಿತಿಯ ಮೂಲಕ ಹಿಂದು ಸಮಾಜವನ್ನು ಸಂಘಟಿಸುವ ಮತ್ತು ಮಹಿಳೆಯರಿಗೆ ಮೌಲ್ಯ-ಸಂಸ್ಕಾರಗಳನ್ನು ನೀಡುವ ಉದಾತ್ತ ಕೆಲಸದಲ್ಲಿ ಅವರು ಸದಾ ಸಕ್ರಿಯರಾಗಿದ್ದರು. ಅವರ ನಿಷ್ಕಪಟ ಮಾತೃತ್ವ ಮತ್ತು ನಿರಂತರ ಕ್ರಿಯಾಶೀಲತೆ ಎಲ್ಲರ ಮೇಲೂ ಪ್ರಭಾವ ಬೀರಿತ್ತು.


ವೈರಲ್ ಆರ್ಥರೈಟಿಸ್‌ನಿಂದಾಗಿ ಮಂಡಿಗಳ ಶಕ್ತಿ ಕುಗ್ಗಿ ನಡೆಯಲು ಅಶಕ್ತರಾಗಿದ್ದಾಗಲೂ 12 ಮನೆಗಳ ಸುಡೋಕು ಸವಾಲುಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಿದ್ದರು. ವಿವಾಹವಾದ ಕೆಲವೇ ದಿನಗಳಲ್ಲಿ ಪತಿಯನ್ನು ಕಳೆದುಕೊಂಡರೂ ಧೃತಿಗೆಡದೆ ಸಮಾಜಮುಖಿ ಬದುಕು ನಡೆಸಿದರು. (ಜನನ 14-03-1929; ನಿಧನ: 21-05-2026). ರುಕ್ಮಿಣಿಯಕ್ಕನವರ ತಾಯಿ ಸುಂದರಮ್ಮನವರ ಇಚ್ಛೆಯಂತೆ, ಮಲ್ಲೇಶ್ವರಂ ರೈಲ್ವೇ ನಿಲ್ದಾಣದ ಹಿಂದಿರುವ ಗಾಯತ್ರಿ ನಗರದಲ್ಲಿ ರುಕ್ಮಿಣಿಯಕ್ಕನವರ ಸ್ವಂತ ಸ್ವತ್ತಾಗಿ ಒಂದು ಮನೆಯನ್ನು ಕಟ್ಟಿಸಲಾಗಿತ್ತು. 'ಸುಕೃಪಾ' ಹೆಸರಿನ ಆ ಮನೆಯನ್ನು ರಾಷ್ಟ್ರ ಸೇವಿಕಾ ಸಮಿತಿಯ ಸುಕೃಪಾ ಟ್ರಸ್ಟಿಗೆ ದಾನವಾಗಿ ನೀಡಿದರು.

ಕೃ. ಸೂರ್ಯನಾರಾಯಣ ರಾವ್ ಬದುಕಿದ್ದುದು 93 ವರ್ಷ. ಕೃ.ನರಹರಿಯವರ ಜೀವಿತಾವಧಿಯೂ 93 ವರ್ಷ. ಕೃ. ರುಕ್ಮಿಣಿಯಕ್ಕನವರದು 97 ವರ್ಷಗಳ ತುಂಬು ಜೀವನ. ಒಂದೇ ಬಳ್ಳಿಯ ಹೂಗಳಾದ ಈ ಮೂವರು ಪ್ರಾತಃಸ್ಮರಣೀಯರು. ಸಮಾಜ ಪುರುಷನ ಅಭಂಗ ಪೂಜೆಗೆ ಅರಳಿದ ಕಮಲಗಳಾದರು. ಸಾರ್ಥಕ ಬದುಕು ನಡೆಸಿದರು. 'ಸ್ವಂತಕ್ಕೆ ಸ್ವಲ್ಪ , ಸಮಾಜಕ್ಕೆ ಸರ್ವಸ್ವ' ಎಂಬ ನುಡಿಗೆ ಉಜ್ವಲ ನಿದರ್ಶನವಾಗಿ ಬೆಳಗಿದರು. ಸಾಮಾಜಿಕ ಕಾರ್ಯಕರ್ತರಿಗೆ ಒಂದೇ ಬಳ್ಳಿಯ ಈ ಹೂಗಳ ಉಜ್ವಲ ಬದುಕು ನಿತ್ಯ ನಿರಂತರ ಪ್ರೇರಣಾದಾಯಿ.

ಹರೆಯದವರು-ಪೋಷಕರ ಜವಾಬ್ದಾರಿ

ಹರಯದ ಮಕ್ಕಳ ಜತೆ ಪೋಷಕರು ಸಹನೆಯಿಂದ ವರ್ತಿಸಿ ಅವರ ಅನಿಸಿಕೆಗಳನ್ನು ಲಕ್ಷ್ಯಕೊಟ್ಟು ಆಲಿಸಬೇಕು.

ತಾರುಣ್ಯ ತಲ್ಲಣ
ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಹರೆಯದವರು ಉಜ್ವಲ ಭವಿಷ್ಯವನ್ನು ಎದುರಿಸಿ ಸಫಲರಾಗುವಲ್ಲಿ ಪೋಷಕರ ಪಾತ್ರ ಹಿರಿದು. ಮಕ್ಕಳು ಹರೆಯಕ್ಕೆ ಕಾಲಿಟ್ಟಾಗ ಅವರನ್ನು ಸಕಾರಾತ್ಮಕ ಮಾರ್ಗದರ್ಶನದಿಂದ ಅವರು ಸಾಗುವ ದಾರಿಯಲ್ಲಿ ಯಶಸ್ಸು ಗಳಿಸುವಂತೆ ನೋಡಿಕೊಳ್ಳುವುದು ಪೋಷಕರ ಹಿಂದಿನ ಜವಾಬ್ದಾರಿ. ಹಿಂದಿನ ಲೇಖನಗಳಲ್ಲಿ ತಿಳಿಸಿದಂತೆ ಮಕ್ಕಳು ಹರೆಯಕ್ಕೆ ಕಾಲಿಡುತ್ತಿದ್ದಂತೆ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಶರೀರದಲ್ಲಾಗುವ ಬದಲಾವಣೆಗಳು, ಮನೋವಿಕಾಸದಿಂದ ಉಂಟಾಗುವ ತಲ್ಲಣಗಳು, ಭಾವನಾತ್ಮಕವಾಗಿ ಹೊಂದಿಕೊಳ್ಳುವುದು, ಸಾಮಾಜಿಕ ಸವಾಲುಗಳನ್ನು ಎದುರಿಸುವುದು ಇವು ತಾರುಣ್ಯದ ಮನಸ್ಸನ್ನು ಸುಳಿಯಲ್ಲಿ ಸಿಕ್ಕಿಸುತ್ತವೆ. ಅದೇ ರೀತಿ ಎದುರಾಗುವ ಒತ್ತಡಗಳನ್ನು ಎದುರಿಸಿ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಬೇಕಾಗುತ್ತದೆ. ಹಾಗಿದ್ದಲ್ಲಿ ಮಾತ್ರ ಅವರು ನಡೆಯುವ ದಾರಿ ಸುಗಮವಾಗಿ ಮುಂದೆ ಸಾಗಬಹುದು. ಮನಸ್ಸನ್ನು ನೆಮ್ಮದಿಯಿಂದ ಇಟ್ಟುಕೊಳ್ಳಬಹುದು. ಅದಿಲ್ಲದಿದ್ದಲ್ಲಿ ಅವರ ಭವಿಷ್ಯ ಡೋಲಾಯಮಾನವಾಗುತ್ತದೆ. ಈ ಕುರಿತು ಕೆಲವು ಅಂಶಗಳನ್ನು ಪೋಷಕರು ಗಮನಿಸಿದರೆ ಒಳ್ಳೆಯದು.

ಮಗು ಹರೆಯಕ್ಕೆ ಕಾಲಿಟ್ಟಾಗ ಮೊದಲು ಕಾಣಿಸಿಕೊಳ್ಳುವುದು ಶಾರೀರಿಕ ಬದಲಾವಣೆಗಳು. ಹೀಗೆ ಆಗುವ ಬದಲಾವಣೆಗಳನ್ನು ಕಂಡು ಮನಸ್ಸು ದಿಗಿಲುಗೊಳ್ಳುವ ಸಂದರ್ಭಗಳು ಸಾಮಾನ್ಯ. ಶಾರೀರಿಕ ಬದಲಾವಣೆಗಳು ಎಲ್ಲರಲ್ಲೂ ಒಂದೇ ಅವಧಿಗೆ ಆಗುವುದಿಲ್ಲ. ಕೆಲವರಿಗೆ ಕೊಂಚ ಬೇಗ ಆದರೆ ಇನ್ನು ಕೆಲವರಿಗೆ ಕೊಂಚ ತಡವಾಗಿ ಆಗಬಹುದು. ಕೆಲವರಿಗೆ ನನಗೇಕೆ ಇಷ್ಟು ಮುಂಚಿತವಾಗಿ ಆಯಿತು ಎಂಬ ಸಂದೇಹ ಉಂಟಾದರೆ, ನನ್ನಲ್ಲೇಕೆ ಇನ್ನೂ ಅವರಿಗಾದ ಬದಲಾವಣೆಗಳು (ಬೆಳವಣಿಗೆ) ಆಗಲಿಲ್ಲ ಎಂಬ ಚಿಂತೆ ಕೆಲವರಿಗೆ. ತಮ್ಮ ಚಿಂತೆಯನ್ನು ಯಾರೊಂದಿಗೆ ಹಂಚಿಕೊಳ್ಳಬೇಕು, ಅಪ್ಪ ಅಮ್ಮನ ಹತ್ತಿರ ಕೇಳಿದರೆ ಅವರು ಅಲಕ್ಷ್ಯ ಮಾಡಬಹುದು. ಗೆಳೆಯರ ಹತ್ತಿರ ಕೇಳಲು ನಾಚಿಕೆ, ಹೀಗೆ ಮನಸ್ಸು ಸಂದೇಹಗಳ ಒತ್ತಡಕ್ಕೆ ಗುರಿಯಾಗುತ್ತದೆ. ಇದಕ್ಕೆ ಅವಶ್ಯವಿರುವುದು ಪೋಷಕರ ಸಕಾರಾತ್ಮಕ ಮಾರ್ಗದರ್ಶನ.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಲೈಂಗಿಕ ವಿಕಾಸದಲ್ಲಿ ಮೊದಲು ಉಂಟಾಗುವ ಸಂದೇಹ ಲಿಂಗಬೇಧ, ಹುಡುಗನಾದರೆ, ತನ್ನಲ್ಲಾಗುವ ಲೈಂಗಿಕ ಬದಲಾವಣೆಗಳು ಸರಿಯಾಗಿವೆಯೇ ಅಥವಾ ಇಲ್ಲವೇ, ತನ್ನ ಕುರಿತು ಇತರರು ಏನು ಹೇಳುತ್ತಾರೆ? ತಾನು ಇತರರಿಗಿಂತ ಚೆನ್ನಾಗಿದ್ದೇನೆಯೋ, ಇಲ್ಲವೋ, ತಾನು ಧರಿಸುವ ಉಡುಪುಗಳು, ತಲೆಕೂದಲು, ಧ್ವನಿ, ಸ್ನಾಯುಗಳು ಹೀಗೆ ಪುರುಷ ಚಿಹ್ನೆಗಳು ಆಕರ್ಷಿತವಾಗಿವೆಯೋ ಇಲ್ಲವೋ ಎಂಬ ಹಲವಾರು ಪ್ರಶ್ನೆಗಳು ಮೂಡುತ್ತವೆ. ಅದರೊಂದಿಗೆ ಸುಮಾರು ಹದಿನಾಲ್ಕನೇ ವಯಸ್ಸಿಗೆ ಗಂಡುಮಕ್ಕಳಲ್ಲಿ ವೀರ್ಯೋತ್ಪತ್ತಿ ಪ್ರಾರಂಭವಾಗುತ್ತದೆ. ಉತ್ಪತ್ತಿಯಾದ ಹೆಚ್ಚಿನ ವೀರ್ಯವು ರಾತ್ರಿ ನಿದ್ದೆಯಲ್ಲಿ ಸ್ಖಲನವಾಗಿ ಹಾಸಿಗೆ ಒದ್ದೆಯಾಗಬಹುದು. ಆದರೆ ಬೆಳ್ಳಗಿರುವ ಈ ದ್ರವ ಎಲ್ಲಿಂದ ಬಂತು, ಹೇಗೆ ಬಂತು, ಇದರಿಂದ ಆಗುವ ದುಷ್ಪರಿಣಾಮಗಳೇನು ಎಂಬ ಹಲವಾರು ಪ್ರಶ್ನೆಗಳು ಹರೆಯದವರ ಮನಸ್ಸಿನಲ್ಲಿ ಮೂಡಿ ಅದು ಒತ್ತಡಕ್ಕೆ ಕಾರಣವಾಗುತ್ತದೆ. ಇದನ್ನು ಯಾರೊಂದಿಗೆ ಕೇಳಿ ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂಬ ಚಿಂತೆ ಸದಾ ಹರೆಯದ ಮನಸ್ಸನ್ನು ಕಾಡುತ್ತದೆ.

ಹರೆಯದ ಗಂಡು ಮಕ್ಕಳಲ್ಲಿ 'ವೀರ್ಯಸ್ಖಲನ' (Night wets)ವು ಸಹಜವಾದ ಪ್ರಕ್ರಿಯೆ. ಇದು ಪುರುಷ ಲಿಂಗದ ಸಂಕೇತ ಎಂಬುದನ್ನು ತಂದೆ ತಾಯಿಗಳು ಮಕ್ಕಳಿಗೆ ತಿಳಿಸಬೇಕಾಗುತ್ತದೆ. ಅದಿಲ್ಲದಿದ್ದಲ್ಲಿ ಅದರಿಂದ ತಾನು ಮುಂದೆ ಷಂಡನಾಗಬಹುದು, ತನ್ನಭವಿಷ್ಯ ಹಾಳಾಗುತ್ತದೆ ಎಂದು ಭಾವಿಸಿ ಅದರ ಕುರಿತೇ ಚಿಂತಿಸುತ್ತಾ ಕಲಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಕೈಕಾಲು ಸುಸ್ತು, ಹೊಟ್ಟೆನೋವು, ಒಂದು ವಿಧದ ಭಯ, ಗಾಬರಿ, ಹಸಿವಿಲ್ಲದಿರುವಿಕೆ, ಹೀಗೆ ಹಲವಾರು ದೈಹಿಕ ಮತ್ತು ಮಾನಸಿಕ ರೋಗ ಲಕ್ಷಣಗಳಿಂದ ನರಳುತ್ತಾ ಅದನ್ನು ನಿವಾರಿಸಲು ಗ್ರಹಚಾರ, ವೈದ್ಯರು, ಹೀಗೆ, ನಾನಾವಿಧದ ಪದ್ಧತಿಗೆ ಮಾರುಹೋಗುತ್ತಾರೆ. ಹರೆಯದ ಕೆಲವರಿಗೆ ಗಡ್ಡ ಮೀಸೆಗಳು, ಕಂಕುಳು ಮತ್ತು ಜನನಾಂಗದ ಮೇಲ್ಭಾಗದಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಕೂದಲುಗಳು ತಡವಾಗಬಹುದು. ಅದಕ್ಕೆ ತನಗೆ ಹೀಗೆ ತಡವಾದರೆ ತನ್ನ ಸ್ನೇಹಿತರು ನೀನು ಹೆಣ್ಣಿಗ ಎಂದು ಟೀಕಿಸಬಹುದು ಎಂಬ ಚಿಂತೆಯಿಂದ ಮನಸ್ಸು ಸಂಕಟ ಅನುಭವಿಸಬಹುದು.

ಹೆಣ್ಣು ಮಕ್ಕಳಲ್ಲಿ ಲೈಂಗಿಕ ಅಂಗಾಂಗಗಳ ವಿಕಾಸದಲ್ಲಿ ಶರೀರದ ಉಬ್ಬು ತಗ್ಗುಗಳು ರೂಪುಗೊಂಡು, ಜನನದ ಗುಪ್ತಾಂಗಗಳು ವೃದ್ಧಿಸುತ್ತವೆ. ಸ್ತನಗಳು ದೊಡ್ಡವಾಗುತ್ತವೆ. ಹರೆಯದ ಹೆಣ್ಣು ಮಕ್ಕಳಲ್ಲಿ ಲೈಂಗಿಕ ವಿಕಾಸದ ಮುಖ್ಯವಾದ ಪ್ರಕ್ರಿಯೆ ಋತುಮತಿಯಾಗುವಿಕೆ, ಋತುವಿನ ಪ್ರಕ್ರಿಯೆಯಲ್ಲಿ ಗುಪ್ತಾಂಗದಿಂದ ಹೊರಹೊಮ್ಮುವ ರಕ್ತಸ್ರಾವ, ಇದರ ಕುರಿತು ತಾಯಿ ಮಗಳಿಗೆ ಸರಿಯಾದ ಮಾಹಿತಿ ನೀಡಬೇಕು. ಅದು ಏಕಾಗುತ್ತದೆ, ಅದರ ಅರ್ಥವೇನು, ರಕ್ತಸ್ರಾವ ಹೆಚ್ಚು ಕಡಿಮೆಯಾದರೆ ಏನು ಮಾಡಬೇಕು, ನೆಂಟರಿಷ್ಟರ ಮನೆಗೆ ಹೋಗುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಹೀಗೆ ಎಲ್ಲವನ್ನೂ ಸಮಾಧಾನದಿಂದ ವಿವರಿಸಬೇಕು. ಆಗ ಹರೆಯದ ಹೆಣ್ಣು ಮಕ್ಕಳ ಮನಸ್ಸು ನಿರಾಳವಾಗುತ್ತದೆ. ಹೆಣ್ಣು ಮಕ್ಕಳ ಸಾಮಾಜಿಕ ನಡವಳಿಕೆ ಹೇಗಿರಬೇಕು, ಹೇಗೆ ಹೆಣ್ಣಿನ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು, ಶೀಲವನ್ನು ರಕ್ಷಣೆ ಮಾಡಿಕೊಳ್ಳಲು ಇತರರೊಂದಿಗೆ ಹೇಗೆ ವರ್ತಿಸಬೇಕು, ಅದಿಲ್ಲದಿದ್ದಲ್ಲಿ ಆಗುವ ಪರಿಣಾಮಗಳನ್ನು ತಾಯಿ ಮಗಳಿಗೆ ವಿವರಿಸಬೇಕು. ಹಾಗೆಯೇ ಸಂದರ್ಭವೊದಗಿದಾಗ ಹೇಗೆ ತನ್ನನ್ನು ರಕ್ಷಣೆ ಮಾಡಿಕೊಳ್ಳಬೇಕು ಎಂಬ ಹಲವಾರು ವಿವರಗಳನ್ನು ಮಕ್ಕಳಿಗೆ ತಿಳಿಸಬೇಕು. ಗಂಡು ಮಕ್ಕಳಾಗಲೀ ಅಥವಾ ಹೆಣ್ಣು ಮಕ್ಕಳಾಗಲೀ ಅವರಿಗೆ ಲೈಂಗಿಕ ಶಿಕ್ಷಣ ನೀಡಬೇಕು. ಸರಿಯಾಗಿ ಲೈಂಗಿಕ ಶಿಕ್ಷಣ ಅವರ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಹರೆಯದವರಲ್ಲಿ ಮಿದುಳಿನಲ್ಲಿರುವ ನರಕೋಶಗಳ ಸಮೂಹಗಳು ವೃದ್ಧಿಯಾಗುತ್ತಿರುತ್ತವೆ. ಹರೆಯದ ಮಿದುಳಿನ ಕೆಲವು ಭಾಗಗಳಲ್ಲಿ ಸ್ರವಿಸುವ ನರವಾಹಕಗಳು ಹರೆಯದವರ ಭಾವನೆಗಳನ್ನು ನಿಯಂತ್ರಿಸುತ್ತವೆ. ಅದೇ ಕಾರಣದಿಂದ ಹರೆಯದವರ ಭಾವನೆಗಳು ಪ್ರವಾಹದೋಪಾದಿಯಲ್ಲಿ ಏರಿಳಿತಗೊಳ್ಳುತ್ತವೆ. ಭಾವನೆಗಳ ಪ್ರವಾಹವು ಹರೆಯದವರ ಯೋಚನೆಗಳ ಮೇಲೆ ಪರಿಣಾಮ ಬೀರಿ ಏನಾದರೂ ಆಗಬೇಕೆಂದರೆ ಅದು ಕೂಡಲೇ ಆಗಬೇಕೆಂದು ಹಾತೊರೆಯುತ್ತದೆ. ಅದು ಆಗದಿದ್ದಾಗ ಒಂದೇ ಬಾರಿಗೆ ಮನಸ್ಸು ನಿರಾಸೆ, ಹತಾಶೆಗೊಳ್ಳಬಹುದು. ಕೂಡಲೆ ತಡೆಯಲಾರದ ಕೋಪವುಂಟಾಗಬಹುದು. ಇದರಿಂದ ಹರೆಯದ ಮನಸ್ಸು ಖಿನ್ನತೆಗೊಳಗಾಗಿ ಆ ಕ್ಷಣದಲ್ಲಿ ತನಗೆ ಜೀವವೇ ಬೇಡ ಎಂಬ ಯೋಚನೆಯಿಂದ ಆತ್ಮಹತ್ಯೆಗೆ ಆಲೋಚಿಸಬಹುದು. ಇದಕ್ಕೆ ಅವಶ್ಯವಾಗಿರುವುದು ಪೋಷಕರ ಆತ್ಮೀಯತೆ, ಮುಕ್ತ ಸಂವಹನ, ಸಹನೆಯಿಂದ ಅವರ ಅನಿಸಿಕೆಗಳನ್ನು ಆಲಿಸಿ ಘಟನೆಗಳ ಕುರಿತು ಸರಿಯಾದ ಮಾಹಿತಿ ಒದಗಿಸುವುದು.

ಹರೆಯದ ಅವಧಿಯ ಮುಖ್ಯವಾದ ಮತ್ತೊಂದು ಪ್ರಕ್ರಿಯೆ 'ತನ್ನತನ'ವನ್ನು ಕಂಡುಕೊಳ್ಳುವುದು. 'ತನ್ನತನ' ಎಂದರೆ ಮನೋವಿಕಾಸದಿಂದ ಪುಟಿದೇಳುವ ತಾನು ಯಾರು? ತಾನು ಸಹಜವಾಗಿದ್ದೇನೆಯೇ? ತಾನು ಯಾರಂತಾಗಬೇಕು? ತಾನು ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು, ತನ್ನನ್ನು ಗುರುತಿಸುವವರಿದ್ದಾರೆಯೇ? ತನ್ನ ಸಾಮರ್ಥ್ಯ ಎಷ್ಟು, ತನ್ನನ್ನು ತನ್ನ ತಂದೆ ತಾಯಿಗಳು ಹೇಗೆ ಗುರುತಿಸುತ್ತಾರೆ? ಈ ಸಮಾಜದಲ್ಲಿ ತನ್ನ ಸ್ಥಾನಮಾನಗಳೇನು ಎಂಬ ಹಲವಾರು ಪ್ರಶ್ನೆಗಳಿಗೆ 'ತನ್ನತನ' (Self Identity) ಎಂದು ಕರೆಯುತ್ತಾರೆ. ಅಪಕ್ವವಾಗಿರುವ ಹರೆಯದ ಮನಸ್ಸಿಗೆ ಇವಕ್ಕೆಲ್ಲ ಉತ್ತರ ಕಂಡುಕೊಂಡು 'ತನ್ನತನ' ವನ್ನು ಸಾಧಿಸಿ ಮುನ್ನಡೆಯುವುದು ಅತಿಯಾದ ಒತ್ತಡವನ್ನುಂಟು ಮಾಡುವ ಅಂಶ. ಇದನ್ನು ನಿಭಾಯಿಸಿ ಹರೆಯದ ಮಕ್ಕಳನ್ನು ಮುನ್ನಡೆಯಲು ಅನುವು ಮಾಡಿಕೊಡುವುದು ಪೋಷಕರಿಗೂ ಒಂದು ಸವಾಲು ಎನ್ನಬಹುದು.

ಹರೆಯದವರು ತನ್ನತನವನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ವರ್ತನೆಗಳು ಅಸಹಜವೆಂದು ಪೋಷಕರಿಗೆ ಅನಿಸಬಹುದು. ಈ ಅವಧಿಯಲ್ಲಿ ಅವರು ಯೋಚಿಸುವ ರೀತಿ, ಕೇಳುವ ಪ್ರಶ್ನೆಗಳು, ಪ್ರದರ್ಶಿಸುವ ಭಾವನೆಗಳು ಹರೆಯದವರ ಆತಂಕಗಳನ್ನು ಮತ್ತು ಒತ್ತಡಗಳನ್ನು ಹೊರಹಾಕುವ ಒಂದು ಮಾರ್ಗ. ಇದಕ್ಕೆ ಅವಶ್ಯವಿರುವುದು ಪೋಷಕರ ಸಹನೆ, ಅವರ ಅನಿಸಿಕೆಗಳನ್ನು ಲಕ್ಷ್ಯಕೊಟ್ಟು ಆಲಿಸುವುದು, ಆತ್ಮೀಯ ಮುಕ್ತ ಸಂವಾದ ಮತ್ತು ಅವರಿಗೆ ವಾಸ್ತವಗಳ ಕುರಿತು ತಿಳಿಸಿ ಹೇಳುವುದು. ಸಮಸ್ಯೆಗಳು ಇದ್ದಲ್ಲಿ ಅದಕ್ಕೆ ತಾವೂ ಜವಾಬ್ದಾರರು ಎಂದು ಭಾವಿಸಿ ಅವರೊಂದಿಗೆ ಸಹಕರಿಸಬೇಕು. 'ತನ್ನತನ'ವನ್ನು ಸಾಧಿಸುವ ಹರೆಯದ ಮನಸ್ಸು ಆತ್ಮವಿಶ್ವಾಸದಿಂದ ಬೀಗುತ್ತದೆ. ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತದೆ. ನೆಮ್ಮದಿಯ ಬಾಳನ್ನು ನಡೆಸಲು ಸಿದ್ಧವಾಗುತ್ತದೆ.

ಸಾಮಾಜಿಕವಾಗಿ ಹರೆಯದ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಅವುಗಳಲ್ಲಿ ಮುಖ್ಯವಾದವು ಒಳ್ಳೆಯ ಗೆಳೆಯರ ಒಡನಾಟ, ಸಮಾಜದ ಟೀಕೆ ಟಿಪ್ಪಣಿ ಗಳಿಗೆ ಸಹನೆಯಿಂದ ಸ್ಪಂದಿಸುತ್ತಾ ಮುನ್ನಡೆ ಸಾಧಿಸುವುದು. ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು. ಪೋಷಕರು, ಮಕ್ಕಳಿಗೆ ಬಾಲ್ಯದಿಂದಲೇ ಜೀವನ ಕೌಶಲಗಳನ್ನು ಕುರಿತು ತರಬೇತಿ ನೀಡಿದಾಗ, ಹರೆಯದ ಮನಸ್ಸು ಪೋಷಕರ ಮಾರ್ಗದರ್ಶನದಲ್ಲಿ ಮುನ್ನಡೆ ಸಾಧಿಸುವುದರಲ್ಲಿ ಸಂಶಯವಿಲ್ಲ.


ತುಂಡು 'but'ಏ ಸಾಕು ಅನುಮಾನ ಹೆಚ್ಚೋಕೆ!

ವಾರದ ವರಸೆ
ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆಯನ್ನೇ ಕುಡಿದರೂ, ಅದು ಹೆಂಡ ಇರಬಹುದು' ಎಂದು ಭಾವಿಸುತ್ತಾರೆ ಎಂಬ ಮಾತಿದೆ. ಯಾರಾದರೂ ಹಾಗೆ ಭಾವಿಸುತ್ತಾರೆಂದರೆ ಅದಕ್ಕೆ ಮೂಲ ಕಾರಣವೇ ಅವರ ಮನಸ್ಸಿನಲ್ಲಿ ಮೂಡುವ ಅನುಮಾನ. ಹಾಗಾದರೆ ಅದನ್ನೇ ಪ್ರಸ್ತುತ ಕಾಲಮಾನದ ಸಂದರ್ಭಕ್ಕೆ ಅನ್ವಯಿಸೋಣ. ಯಾರಾದರೂ ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೆ, ಆಗ ಅದು ಹೆಂಡ ಇರಬಹುದೆಂಬ ಅನುಮಾನ ಮೂಡುವುದಷ್ಟೇ ಅಲ್ಲದೇ, ಅವರನ್ನು ಅಲ್ಲಿ ಕುಳ್ಳಿರಿಸಿದ್ದು ಯಾರು? ಅದರ ಹಿಂದೆ ಒಂದು ನಿರ್ದಿಷ್ಟ ಕಸುಬುದಾರರನ್ನು ಅವಮಾನಿಸುವ ಉದ್ದೇಶ ಅಡಗಿರಬಹುದೇ?, ಮರದ ಕೆಳಗೆ ಕುಳಿತು ಕುಡಿಯಲು ಈ ಕೆಟ್ಟ ವ್ಯವಸ್ಥೆಯೇ ಕಾರಣವಲ್ಲವೇ? ಇದರ ಹಿಂದೆ ಮೇಲ್ವರ್ಗ ಕೆಳವರ್ಗವೆಂಬ ತಾರತಮ್ಯ ಕೆಲಸ ಮಾಡಿಲ್ಲವೆಂದು ಹೇಗೆ ಹೇಳುವುದು? - ಇಂಥ ಸಾಲು ಸಾಲು ಅನುಮಾನಗಳು ಹೆಡೆಯೆತ್ತಿ ನಿಲ್ಲುತ್ತವೆ. ಏಕೆಂದರೆ ಇದು 'ಅನುಮಾನ'ವಂತರ ಕಾಲ! ಮಾನವಂತರಿಗಿದು ಕಾಲ ಹೌದೋ ಅಲ್ಲವೋ ಎನ್ನುವುದು ಅವರವರ ಜಿಜ್ಞಾಸೆಗೆ ಬಿಟ್ಟಿದ್ದು. ಆದರೆ ಇದು 'ಅನುಮಾನ'ವಂತರ ಕಾಲ ಎನ್ನುವುದನ್ನು ಮಾತ್ರ ಯಾವುದೇ ಕಾರಣಕ್ಕೂ ತಳ್ಳಿಹಾಕುವಂತಿಲ್ಲ.

ಮಾನವರು ಎಂದ ಮೇಲೆ ಕೆಲವರು ಮಾನವೀಯತೆ ಉಳ್ಳವರಾದರೆ, ಇನ್ನೊಂದಷ್ಟು ಜನ ಅಮಾನವೀಯತೆಯನ್ನೇ ಹೊದ್ದಿರುತ್ತಾರೆ. ಈ ನಡುವೆಯೂ ಮಾನವೀಯ ನೋಟ, ಸಂವೇದನೆ ಇರಬೇಕು ಎಂಬ ನಿರೀಕ್ಷೆ ಸಹಜ. ಆದರೆ ಇದಕ್ಕೆ ಹೊರತಾಗಿ ಕೆಲವರು ಸದಾ 'ಅನುಮಾನ'ವೀಯ ನೋಟವನ್ನೇ ಹೊಂದಿರುತ್ತಾರೆ. ತನ್ಮೂಲಕ ಅಲ್ಲಲ್ಲಿ ಸಂ'ವೇದನೆ'ಗೂ ಕಾರಣರಾಗುತ್ತಾರೆ. ಹಾಗೆಂದ ಮಾತ್ರಕ್ಕೆ ಅನುಮಾನವೇ ಇರಬಾರದು ಎಂದೇನಲ್ಲ. ಆದರೆ ಆ ಅನುಮಾನ ಅತಿರೇಕವಾದರೆ ಅದೂ ಒಂದು ಬಗೆಯ ಅಮಾನವೀಯ ನಡೆಯೇ ಎಂದೆನಿಸಿಕೊಳ್ಳುವುದು ನಿಸ್ಸಂಶಯ. ಎಲ್ಲೇ ಏನೇ ನಡೆಯಲಿ ಆ ಬಗ್ಗೆ ಒಂದು ಅನುಮಾನದ ಬಾಣ ಎಸೆಯುವ ಆಧುನಿಕ 'ಬಾಣ'ಭಟ್ಟರು ಜಾಲತಾಣಗಳಲ್ಲಿ, ಕೆಲವು ಮೀಡಿಯಾಗಳಲ್ಲಿ ಭರಪೂರ ಕ್ರಿಯಾಶೀಲರಾಗಿದ್ದಾರೆ. ಹೀಗೆ ಅವರವರ ಆಸಕ್ತಿ, ಒಲವು, ನಿಲುವಿಗೆ ಅನುಗುಣವಾಗಿ ಎಲ್ಲರನ್ನೂ, ಎಲ್ಲವನ್ನೂ ಅನುಮಾನದಿಂದಲೇ ನೋಡಿ ನೋಡಿ, 'ಅನುಮಾನ'ವೇ ಒಂದು ಮಟ್ಟಿಗೆ ಅವಮಾನಕ್ಕೆ ಗುರಿಯಾಗಬೇಕು. ಹಾಗಿರುತ್ತದೆ ಅವರ ವೈಖರಿ. ಏನೇ ಹೇಳಿ ಹೆಚ್ಚೆಚ್ಚು ಅನುಮಾನಪಡುವವರನ್ನು ಅನು'ಮಾನವ'ರು ಎಂದು ಕರೆಯಬಹುದೇನೋ!



ಅನುಮಾನ ಎಂಬ ಪದಕ್ಕೆ ಸಂಶಯ, ಸಂದೇಹ, ಗುಮಾನಿ, ಶಂಕೆ ಎಂಬಿತ್ಯಾದಿ ಅರ್ಥಗಳಿವೆ. ಗೊಂದಲ, ಇಬ್ಬಂದಿತನ ಎನ್ನುವುದೂ ಕೂಡಾ ಒಂದು ರೀತಿಯಲ್ಲಿ ಅದಕ್ಕೆ ಸಂಬಂಧಿಸಿದ ಪದಗಳೇ ಆಗಿವೆ. ಇಂಗ್ಲೀಷ್‌ನಲ್ಲಿ ಇದಕ್ಕೆ ಬೇರೆ ಬೇರೆ ಪದಗಳಿದ್ದರೂ ಬಹುಮುಖ್ಯವಾಗಿ 'ಡೌಟ್' ಎಂಬ ಪದವನ್ನು ಬಳಸಲಾಗುತ್ತದೆ. ಈ ಡೌಟ್ ಎಂಬ ಪದದ ಮೂಲ 'ಡ್ಯೂಓ' (duo) ಎಂದರೆ ಎರಡು ಎಂಬ ಅರ್ಥದ ಪದವಂತೆ. ಅಂದರೆ ಯಾವುದೇ ಆಗಲಿ ಎರಡೆರಡು ಇದ್ದಾಗ ಅಲ್ಲಿ ಅನುಮಾನ ಹುಟ್ಟುವ ಸಾಧ್ಯತೆಯೇ ಹೆಚ್ಚು ಎಂದು ಅರ್ಥೈಸಿಕೊಳ್ಳಬಹುದು. ಉದಾಹರಣೆಗೆ ಎರಡು ಮನೆ, ಎರಡು ಪಕ್ಷ, ಎರಡು ಮಡದಿ... ಇರುವೆಡೆಗಳಲ್ಲಿ ಎಷ್ಟೇ ಆದರೂ ಅನುಮಾನವೂ ಜಾಸ್ತಿಯೇ! ಕೆಲವೊಮ್ಮೆ ಅನುಮಾನಗಳ ಕಾರಣಕ್ಕೇ ಇವೆಲ್ಲವೂ ಎರಡೆರಡು ಆಗಿ ಬದಲಾಗುವ ಸಾಧ್ಯತೆಯೂ ಇದೆ. ಕೆಲವರ ಮೂಡು ಹೇಗಿದೆ, ಅವರ ಮನಸ್ಸಿನಲ್ಲಿ ಎಂಥೆಂಥ ಯೋಚನೆ ಮೂಡೀತು ಎಂದೆಲ್ಲಾ ಯೋಚಿಸಬೇಕಾದ್ದೇ ಇಲ್ಲ, ಏಕೆಂದರೆ ಅವರು ಸದಾ 'ಅನುಮಾನದ' ಮೋಡ್‌ನಲ್ಲೇ ಇರುತ್ತಾರೆ. ಅಂದರೆ ಸದಾ ಸುತ್ತಮುತ್ತಲ ಆಗುಹೋಗುಗಳ ಬಗ್ಗೆ ಅನುಮಾನ ಮೂಡುತ್ತಿರುತ್ತದೆ ಎಂದು ಹೇಳಬಹುದು!

'ನಂಗ್ಯಾಕೋ ಡೌಟು!' ಎನ್ನುತ್ತಲೇ ತಮ್ಮ ಮಾತು, ಆಲೋಚನೆ ಹಾಗೂ ವಿವೇಚನೆಗಳೆಲ್ಲವನ್ನೂ ಅದರ ಸುತ್ತಲೇ ಸುತ್ತುವಂತೆ ಮಾಡುವ 'ಡೌಟೇಶ'ರಿಗೆ ನಮ್ಮಲ್ಲೇನೂ ಕೊರತೆಯೇ ಇಲ್ಲ. 'ಡೌನ್-ಟು-ಅರ್ಥ್' ರೀತಿಯ ಮನುಷ್ಯರು ಇರುವಂತೆ ಇವರು ಅಗ್ದೀ 'ಡೌಟ್-ಟು-ಅರ್ಥ್' ಮನುಷ್ಯರೇ ಸೈ. ಅವರು ಈ ಭೂಮಿಯ ಮೇಲೆ ಇರುವುದೇ ಒಂದಿಲ್ಲೊಂದು ರೀತಿಯಲ್ಲಿ ಇನ್ನೊಬ್ಬರ ಮೇಲೆ ಡೌಟ್ ಪಡಲು ಎನ್ನುವುದನ್ನು ಅವರು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರಲು ಅನವರತ ಶ್ರಮಿಸುತ್ತಲೇ ಇರುತ್ತಾರೆ. ತನ್ನ ದೇಹವೇ ಸಂದೇಹಗಳ ಗುಡಾಣ ಎನ್ನುವುದನ್ನು ಡಣಾಡಂಗುರ ಬಾರಿಸುತ್ತಾ ಸಾರಿ ಸಾರಿ ಹೇಳುವಂತಿರುತ್ತದೆ ಅವರ ವರ್ತನೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

'...ತುಂಡು ಬಟ್ಟೆ ಸಾಕು ಮಾನ ಮುಚ್ಚೋಕೆ' ಎಂಬ ಸಾಲು ಎಲ್ಲರಿಗೂ ಗೊತ್ತು. ಇಂದಿಗೆ ತುಂಡುಡುಗೆಯನ್ನೇ ಕೆಲವರು ಹೆಚ್ಚು ಹೆಚ್ಚು ಬಳಸುವುದರಿಂದ, ಆ ಸಾಲುಗಳಲ್ಲಿ ಅಡಗಿರುವ ತತ್ವವು ಈ ಆಧುನಿಕ ಕಾಲದಲ್ಲಿ ಬೇರೆಯದೇ ಅರ್ಥ ಪಡೆದುಕೊಂಡಿದ್ದನ್ನು ಗಮನಿಸಬಹುದು. ಅದೇನೇ ಇರಲಿ. ಅದನ್ನೇ ಈ 'ಅನುಮಾನ'ದ ಬಗ್ಗೆ ಹೇಳುವುದಾದರೆ, 'ತುಂಡು ' but'ಏ ಸಾಕು ಅನುಮಾನ ಹೆಚ್ಚೋಕೆ...' ಎಂದು ನಿಸ್ಸಂಶಯವಾಗಿ ಹೇಳಬಹುದು. ಅಲ್ಲವೇ ಮತ್ತೆ ಯಾವುದರಲ್ಲಾದರೂ ಅನುಮಾನವನ್ನು ಹೆಚ್ಚಿಸುವವರಿಗೆ, ವಾಕ್ಯದ ಒಂದು ಸಣ್ಣ ತುಂಡಾದ 'but' ಅರ್ಥಾತ್ 'ಆದರ' ಎನ್ನುವುದು ಬಲು ದೊಡ್ಡ ಆಧಾರವೇ ಆಗುತ್ತದೆ. ಅವರು 'ಆದರೆ, ಹಾಗಾದರೆ, ಹೀಗಾದರೆ' ಎಂಬಿತ್ಯಾದಿ 'ರೇ'ಗಳನ್ನು ನಿರಂತರವಾಗಿ ಬೀರುತ್ತಲೇ ಇರುತ್ತಾರೆ! ಅವರಿಗೆ ಅದೇ ಒಂಥರಾ 'ರೇ ಆಫ್ ಹೋಪ್' (ಭರವಸೆಯ ಕಿರಣ) ಅವರ ಅಸ್ತಿತ್ವಕ್ಕೆ! ಹಸ್ತದಲ್ಲಿ ಅದೃಷ್ಟದ ರೇಖೆ, ವಿಜಯದ ರೇಖೆ, ಸಂತಾನ ರೇಖೆ ಇತ್ಯಾದಿಗಳನ್ನು ಗುರುತಿಸುವುದನ್ನು ನೋಡಿದ್ದೇವೆ. ಆದರೆ ಈ 'ರೇ' ಮಂದಿಗಳಿಗೆ ಬಾಯಲ್ಲೇ ಒಂದು ವಿಶಿಷ್ಟ ರೇಖೆ ಇರುತ್ತದೆ. ಅದೆಂದರೆ 'ರೇ' ಪ್ರಯೋಗ ಹಾಗೂ ಅದನ್ನು ಅನುಸರಿಸಿ ಏ'ಕೆ' ಎಂಬ ಪ್ರಶ್ನೆ. ಎರಡೂ ಒಟ್ಟಾಗಿ ರೇಖೆ! ಅದನ್ನೆಲ್ಲಾ 'ಮಹಾತ್ರಾಣ'ದಿಂದ ಮಾಡುವುದರಿಂದ, ಇನ್ನೊಬ್ಬರಿಗೆ ತ್ರಾಣ ಉಂಟುಮಾಡುವುದರಿಂದ 'ಕೆ' ಅಕ್ಷರಕ್ಕೆ ಮಹಾಪ್ರಾಣ ಕಾಂಪ್ಲಿಮೆಂಟರಿ!

ಇನ್ನು, ಆರಂಭದಲ್ಲಿ ಪ್ರೀತಿ ಪ್ರೇಮದ 'ಅನುಬಂಧ'ವಾಗಿ ಅಣು ಅಣುವಲ್ಲೂ ಪರಸ್ಪರ ಪ್ರೀತಿಸುತ್ತಾ ದಾಂಪತ್ಯ ನಡೆಸುವವರ ಮಧ್ಯೆ ಪರಸ್ಪರ ಗುಮಾನಿಯ ಅಪಥ್ಯವೊಂದು ಹುಟ್ಟಿ ಅದು ಅವರ ಪಥವನ್ನೇ ಬದಲಿಸಬಲ್ಲದು. ಕೊನೆಗೆ ಅನುಬಂಧ ಹೋಗಿ 'ಅನುಮಾನ'ಬಂಧವಾಗಿ ಪರಿವರ್ತಿತವಾಗುತ್ತದೆ. ಹೋದ ಬಂದಲ್ಲೆಲ್ಲಾ ಬರೀ ಅನುಮಾನ! ಇನ್ನು ರಾಜಕಾರಣದಲ್ಲಂತೂ ಅನುಮಾನದ ಹಾವಳಿ ಹೇಳತೀರದು. ಪ್ರತೀ ಕ್ಷಣವೂ 'ಅನುಮಾನವನ್ನೇ ಚಾಳೀಸು' ಮಾಡಿಕೊಂಡಿರುತ್ತಾರೆ ಅವರು. ಅಂದರೆ ಎಲ್ಲವನ್ನೂ ಹಾಗೂ ಎಲ್ಲರನ್ನೂ ಅನುಮಾನಿಸುವ ಚಾಳಿಯೂ ಹಾಗೂ ಅನುಮಾನದ ಕನ್ನಡಕ(ಚಾಳೀಸು) ತೊಟ್ಟೇ ಎಲ್ಲವನ್ನೂ ನೋಡುವ ಖಯಾಲಿಯೂ ಅವರಲ್ಲಿ ಖಾಯಂ. ಹಾಗಾಗಿ ಅಲ್ಲಿರುವವರ ಬಗ್ಗೆ 'ಮಾನವನಾಗುವೆಯೋ... ಇಲ್ಲ ಅನುಮಾನವನಾಗುವೆಯೋ...?' ಎಂದು ಕೇಳಬೇಕಾಗುತ್ತದೆ. ಅನುಮಾನದ ದೃಷ್ಟಿಕೋನ, ಅನುಮಾನದ ಕಣ್ಣು ಎಂದೆಲ್ಲಾ ಹೇಳುತ್ತೇವೆ. ಆ ನಿಟ್ಟಿನಲ್ಲಿ ನೋಡಿದರೆ ಸಿ.ಸಿ.ಟಿ.ವಿ ಕ್ಯಾಮೆರಾಗಳು ಅನುಮಾನದ ಆಧುನಿಕ ಕಣ್ಣುಗಳು ಎಂದರೆ ತಪ್ಪಾಗಲಿಕ್ಕಿಲ್ಲ. ಕಣ್ಣಿಗೆ ಸಮೀಕರಿಸಿ ಹೇಳಿದರೂ ಇದು ತದನಂತರ ಕಿವಿಗೂ ಲಿಂಕ್ ಆಗುತ್ತದೆ. ಯಾವುದೇ ಸಂಗತಿಯ ಬಗ್ಗೆ 'ಅನುಮಾನ'ವೊಂದು ಮೂಡಿದಾಗ, ಅದು ಕದ್ದು ಕೇಳಬೇಕು ಎಂಬ ಕ್ರಿಯೆಗೆ ಪ್ರಚೋದನೆಯಾಗಿಯೂ ಪರಿಣಮಿಸುತ್ತದೆ. ಯಾವುದೇ ಸಂಗತಿ ಎಂದೆನಷ್ಟೇ ಅದು ಅಷ್ಟೇ ಮುಖ್ಯವಾಗಿ 'ಸಂಗಾತಿ'ಗೂ ಅನ್ವಯವಾಗುವಂಥದ್ದೇ! ಅವರೂ ಒಂದಿಲ್ಲೊಂದು ಸಂದರ್ಭದಲ್ಲಿ ಕದ್ದು ಕೇಳುವುದನ್ನು ಮಾಡಿಯೇ ಇರುತ್ತಾರಲ್ಲ.

ರಾಜಕಾರಣದಲ್ಲಿ ಆಕೆ/ಈಕೆ ಯ ಬಗ್ಗೆಯೆಲ್ಲಾ ಚರ್ಚೆಯಾದಂತೆಯೇ ಕದ್ದಾಲಿಕೆಯ ಬಗ್ಗೆಯೂ ಆಗುತ್ತದೆ. ಇದನ್ನು ಸಂಪೂರ್ಣವಾಗಿ 'ಅನುಮಾನದ ಕಿವಿ' ಎಂದೇ ಹೇಳಬಹುದು. ಫೋನ್ ಟ್ಯಾಪ್ ಮಾಡಿ ತಮ್ಮ ವಿರೋಧಿಗಳ ಮಾತಿಗೆ 'ಖಾನ್' ಕೊಟ್ಟು ಸಾಕಷ್ಟು ವಿಷಯಗಳನ್ನು ಚಪ್ಪರಿಸಿ ಕೇಳಿ ಸವಿಯುವ ಅವರ ಪಾಲಿಗೆ ಅದುವೇ 'ಖಾನ್'ವಳಿ. ಒಂದು ಮಟ್ಟಿಗೆ ಅದು ಅವರ ಅನುಮಾನದ ಹಸಿವನ್ನು ತೀರಿಸುತ್ತದೆ ಇಲ್ಲವೇ ಮತ್ತಷ್ಟು ಹೆಚ್ಚಿಸುತ್ತದೆ. ಕೆಲವು ಖಾನಾವಳಿಗಳ ಹೆಸರು ಕೇಳಿದಾಕ್ಷಣ ಹೊಟ್ಟೆ, ಮುಂಚೆಗಿಂತ ಹೆಚ್ಚೇ ಚುರುಗುಡುತ್ತದಲ್ಲ, ಹಾಗೆ! ರಾಜಕಾರಣದಲ್ಲಿ ಇಂಥವರ ಖಾನ್‌ದಾನ್ ಬಗ್ಗೆ ಆಗಿಂದಾಗ್ಗೆ ಸದ್ದು, ಸುದ್ದಿ ಆಗುತ್ತಲೇ ಇರುತ್ತದೆ. ಇದನ್ನೆಲ್ಲಾ ಗಮನಿಸಿದರೆ ಕೆಲವರಿಗಂತೂ ಶಯನಾಗ್ರಹ ಅಂದರೆ ಮಲಗುವ ಕೋಣೆಗಿಂತಲೂ ತುಂಬಾ ಮುಖ್ಯವಾಗಿ ಬೇಕಾಗಿರುವುದು 'ಸಂಶಯ'ನಾಗ್ರಹ ಎನ್ನುವುದು ಸ್ಪಷ್ಟವಾಗುತ್ತದೆ. ಅಷ್ಟಕ್ಕೂ ನಮ್ಮ ಜೀವನವು ಒಂದು ಸಂದೇಶವಾಗಬೇಕೇ ಹೊರತು ಸಂದೇಹವಲ್ಲ!

ಓವರ್‌ಡೋಸ್: ಎಲ್ಲದರ ಬಗ್ಗೆಯೂ ಏನೋ ಒಂದು 'ಶಂಕೆ' ವ್ಯಕ್ತಪಡಿಸುತ್ತಲೇ ಇರುವ ಮನೋಧೋರಣೆ ಒಂದು ರೀತಿಯ ಕಾಯಿಲೆಯೇ ಸರಿ ಎಂದು ಹೇಳುತ್ತಾರೆ. ಹಾಗಾದರೆ ಆ ಕಾಯಿಲೆಯನ್ನು 'ಆಮಶಂಕೆ' ಎನ್ನಬಹುದೇನೋ?!

ಮನ್ ಕಿ ಬಾತ್‌ನಲ್ಲಿ ಜನರಿಗೆ ಮೋದಿ ಸಲಹೆ

ಉಷ್ಣ ಅಲೆಯಿಂದ ಜಾಗರೂಕರಾಗಿರಿ

» ಜನಸಾಮಾನ್ಯರ ಅಸಾಧಾರಣ ಸಾಧನೆಗಳಿಗೆ ಪ್ರಧಾನಿ ಶ್ಲಾಘನೆ

» ಜಲ ಸಂರಕ್ಷಣೆ, ಕ್ರೀಡೆ, ದೇಶದ ವೈವಿಧ್ಯತೆಯ ಬಗ್ಗೆ ಉಲ್ಲೇಖ

ಹೊಸದಿಲ್ಲಿ: ಉಷ್ಣ ಅಲೆಯ ಮುನ್ನೆಚ್ಚರಿಕೆಗಳು, ಮಾವು ಬೆಳೆಗಾರರಿಗೆ ಪ್ರಶಂಸೆ, ಜಲ ಸಂರಕ್ಷಣೆ, ಕ್ರೀಡಾ ಸಾಧನೆ ಹಾಗೂ ಸಮಾಜ ಸೇವೆ ಸೇರಿದಂತೆ ಹಲವು ಪ್ರಮುಖ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದ 134ನೇ ಸಂಚಿಕೆಯಲ್ಲಿ ಬೆಳಕು ಚೆಲ್ಲಿದರು.

ದೇಶದ ಹಲವು ಭಾಗಗಳಲ್ಲಿ ಉಷ್ಣ ಅಲೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ನಾಗರಿಕರು ಜಾಗರೂಕರಾಗಿರಬೇಕು ಎಂದು ಮೋದಿ ಕೋರಿದರು. ಸಾಕಷ್ಟು ನೀರು ಕುಡಿಯಿರಿ, ಬಿಸಿಲಿನಲ್ಲಿ ಹೋಗುವಾಗ ಎಚ್ಚರದಿಂದಿರಿ ಮತ್ತು ಸರ್ಕಾರಿ ಇಲಾಖೆಗಳು ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಎಂದು ಅವರು ಜನರಲ್ಲಿ ಮನವಿ ಮಾಡಿದರು.



ಸಮಾಜ ಸೇವಕರನ್ನು ಗುರುತಿಸಿ: ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿರುವ ವ್ಯಕ್ತಿಗಳಿಂದ ಕಲಿಯುವಂತೆ ಕರೆ ನೀಡಿದ ಪ್ರಧಾನಿ, ಸಮಾಜಕ್ಕಾಗಿ ಉತ್ತಮ ಕೆಲಸ ಮಾಡುತ್ತಿರುವವರನ್ನು ಗುರುತಿಸಿ, ಅವರನ್ನು ಶ್ಲಾಘಿಸಿ. ಸಾಧ್ಯವಾದರೆ ನೀವೂ ಅಂತಹ ಸತ್ಕಾರ್ಯಗಳ ಭಾಗವಾಗಿ ಎಂದರು. ಇಂತಹ ನಿಸ್ವಾರ್ಥ ಸೇವೆಗಳು ದೇಶದ ಪ್ರಗತಿಗೆ ಪ್ರೇರಣೆಯಾಗುತ್ತವೆ ಎಂದು ಆಶಯ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಪಾನೀಯಗಳಲ್ಲಿ ಏಕ ಭಾರತ ಶ್ರೇಷ್ಠ ಭಾರತ: ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ಸಾಂಪ್ರದಾಯಿಕ ಬೇಸಿಗೆ ಪಾನೀಯಗಳಾದ ಉತ್ತರ ಭಾರತದ ಆಮ್ ಪನ್ನಾ, ಪಂಜಾಬ್‌ನ ಲಸ್ಸಿ, ಗುಜರಾತ್‌ನ ಮಜ್ಜಿಗೆ, ಬಿಹಾರದ ಸತ್ತು ಶರಬತ್, ಕೊಂಕಣದ ಕೋಕಂ ಹಾಗೂ ದಕ್ಷಿಣ ಭಾರತದ ಪಾನಕ ಮತ್ತು ಮಜ್ಜಿಗೆ ಕುರಿತು ಪ್ರಧಾನಿ ಮಾತನಾಡಿದರು. ಇವು ಏಕ ಭಾರತ ಶ್ರೇಷ್ಠ ಭಾರತದ ಸಂಕೇತಗಳಾಗಿವೆ ಎಂದರು.

ಜಲ ಸಂರಕ್ಷಣೆ ಮತ್ತು ಕ್ರೀಡಾ ಸಾಧಕರಿಗೆ ಶ್ಲಾಘನೆ: ನದಿ, ಕೆರೆ ಮತ್ತು ಬಾವಿಗಳನ್ನು ಪುನಶ್ಚೇತನಗೊಳಿಸುವಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಪ್ರಧಾನಿ ಶ್ಲಾಘಿಸಿದರು. ಇದೇ ವೇಳೆ, ಜಾರ್ಖಂಡ್‌ನಲ್ಲಿ ನಡೆದ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಹೊಸ ದಾಖಲೆ ಬರೆದ ಗುರುಇಂದರ್ ವೀರ್ ಸಿಂಗ್, ತೇಜಸ್ವಿನ್ ಶಂಕರ್ ಸೇರಿದಂತೆ ಹಲವು ಯುವ ಕ್ರೀಡಾಪಟುಗಳನ್ನು ಮೋದಿ ಅಭಿನಂದಿಸಿದರು.

ಜನಸಾಮಾನ್ಯರ ಸಾಮೂಹಿಕ ಪ್ರಯತ್ನಗಳು ಮತ್ತು ರಾಷ್ಟ್ರ ನಿರ್ಮಾಣದ ಜವಾಬ್ದಾರಿಯನ್ನು ಈ ಬಾರಿಯ ಮನ್ ಕಿ ಬಾತ್ ಸಂಚಿಕೆ ಯಶಸ್ವಿಯಾಗಿ ಬಿಂಬಿಸಿತು.

ಮಾವು ಬೆಳೆಗಾರರಿಗೆ ಪ್ರಧಾನಿ ಗೌರವ

ಭಾರತದ ವೈವಿಧ್ಯಮಯ ಮಾವಿನ ತಳಿಗಳ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿಯವರು, ಮಾವು ಕೃಷಿಯಲ್ಲಿ ತೊಡಗಿರುವ ರೈತರನ್ನು ಶ್ಲಾಘಿಸಿದರು.ಬೇಸಿಗೆಯ ಆಗಮನದೊಂದಿಗೆ ಪ್ರತಿಯೊಂದು ಮನೆಯಲ್ಲೂ ಮತ್ತೊಂದು ಚರ್ಚೆ ಆರಂಭವಾಗುತ್ತದೆ – ಅದೇ ಮಾವಿನ ಹಣ್ಣಿನ ಬಗ್ಗೆ... ಮಹಾರಾಷ್ಟ್ರ ಮತ್ತು ಕೊಂಕಣ ಭಾಗದಲ್ಲಿ ಹಾಪುಸ್, ಅಲ್ಫಾನ್ಸೋ ಇದ್ದರೆ, ಗುಜರಾತ್‌ನ ಕೇಸರ್ ತಳಿಯು ಮಾವಿನ ರಸದ ಆತ್ಮವಾಗಿದೆ. ಉತ್ತರ ಪ್ರದೇಶದಲ್ಲಿ ದಶೇರಿ ಮತ್ತು ನನ್ನ ಕಾಶಿಯಲ್ಲಿ ಲಂಗ್ಡಾ ಮಾವುಗಳಿವೆ... ಮಾವಿನ ಹಣ್ಣಿನ ಪ್ರಯಾಣವು ಈಗ ಹಳ್ಳಿಗಳಿಂದ ಜಾಗತಿಕ ಮಾರುಕಟ್ಟೆಯವರೆಗೆ ತಲುಪುತ್ತಿದೆ... ಮಾವು ಬೆಳೆಗಾರರನ್ನು ಶ್ಲಾಘಿಸುತ್ತಾ ಅವರು, ಮಾವು ಕೃಷಿಯಲ್ಲಿ ತೊಡಗಿರುವ ನನ್ನ ರೈತ ಮಿತ್ರರನ್ನು ನಾನು ಪ್ರಶಂಸಿಸಲು ಬಯಸುತ್ತೇನೆ. ದೇಶದ ಕೃಷಿ ಆರ್ಥಿಕತೆಗೆ ನೀವು ಕೇವಲ ಸಾಮಾನ್ಯ ರೈತರಲ್ಲ, ಬದಲಿಗೆ ಅತ್ಯಂತ ವಿಶೇಷವಾದವರು ಎಂದು ಹೇಳಿದರು.

ಹಿಮಾಚಲದಲ್ಲಿ ಬಿಜೆಪಿ ಸಂಭ್ರಮ

ಧರ್ಮಶಾಲಾ: ಹಿಮಾಚಲ ಪ್ರದೇಶ ಸ್ಥಳೀಯ ಸಂಸ್ಥೆ ಚುನಾವಣಾ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಮೂರು ಮಹಾನಗರಪಾಲಿಕೆಗಳಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸಿದೆ. ಒಂದು ಮಹಾನಗರಪಾಲಿಕೆಯಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿದ್ದು, ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಭಾರೀ ಹಿನ್ನಡೆ ಅನುಭವಿಸಿದೆ. ಧರ್ಮಶಾಲಾದ 17 ವಾರ್ಡ್‌ಗಳಲ್ಲಿ 11ರಲ್ಲಿ ಬಿಜೆಪಿ ಗೆದ್ದರೆ, 5 ಕಾಂಗ್ರೆಸ್ ಪಾಲಾಗಿವೆ. ಸೋಲನ್‌ನ 17 ವಾರ್ಡ್‌ಗಳಲ್ಲಿ 10ರಲ್ಲಿ ಬಿಜೆಪಿ ಗೆದ್ದರೆ, 6ರಲ್ಲಿ ಕಾಂಗ್ರೆಸ್ ಮತ್ತು ಒಬ್ಬ ಸ್ವತಂತ್ರ ಅಭ್ಯರ್ಥಿ ಜಯ ಸಾಧಿಸಿದ್ದಾರೆ. ಮಂಡಿಯ 14 ವಾರ್ಡ್‌ಗಳಲ್ಲಿ ಬಿಜೆಪಿ 12ರನ್ನು ಗೆದ್ದುಕೊಂಡಿದೆ. ಪಾಲಂಪುರ್‌ನ 15 ವಾರ್ಡ್‌ಗಳಲ್ಲಿ ಕಾಂಗ್ರೆಸ್ 11 ಸ್ಥಾನ ಗೆದ್ದು ಗದ್ದುಗೆ ಉಳಿಸಿಕೊಂಡರೆ, 4 ವಾರ್ಡ್‌ಗಳು ಬಿಜೆಪಿ ಪಾಲಾಗಿವೆ. 25 ನಗರಸಭೆಗಳ ಚುನಾವಣೆಯಲ್ಲೂ ತಾವರೆ ಪಕ್ಷ 18ರಲ್ಲಿ ಗೆದ್ದು ಸಂಭ್ರಮಿಸಿದ್ದು, 22 ನಗರ ಪಂಚಾಯಿತಿಗಳಲ್ಲಿ 12ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ಕಾಲಮಿತಿ ಜಾರಿ

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೊಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ನ್ಯಾಯಾಂಗ ಸುಧಾರಣೆಯನ್ನು ಪ್ರಕಟಿಸಿದೆ. ಆದೇಶವನ್ನು ಕಾಯ್ದಿರಿಸಿದ ದಿನಾಂಕದಿಂದ ಗರಿಷ್ಠ ಮೂರು ತಿಂಗಳೊಳಗೆ ಹೈಕೋರ್ಟ್‌ಗಳು ತಮ್ಮ ತೀರ್ಪು ಪ್ರಕಟಿಸಬೇಕು ಎಂದು ಈ ಕಡ್ಡಾಯ ಮಾರ್ಗಸೂಚಿ ಹೇಳುತ್ತದೆ. ಇದರೊಂದಿಗೆ, ಜಾಮೀನು ಅರ್ಜಿಗಳನ್ನು ಸಾಮಾನ್ಯವಾಗಿ ಅದೇ ದಿನ, ಅಥವಾ ತಡವಾದರೆ ವಿಚಾರಣೆಯ 24 ಗಂಟೆಗಳ ಒಳಗೆ ಆಲಿಸಿ ನಿರ್ಧರಿಸಬೇಕು ಎಂದು ಉನ್ನತ ನ್ಯಾಯಾಲಯ ನಿರ್ದೇಶಿಸಿದೆ. ದೇಶಾದ್ಯಂತ ನ್ಯಾಯಾಂಗ ಪ್ರಕ್ರಿಯೆಯನ್ನು ಸುಗಮಗೊಳಿಸಲು ಈ ಹೊಸ ನಿರ್ದೇಶನಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ.

ಸ್ವಯಂಚಾಲಿತ ಅಧಿಸೂಚನೆಗಳು

ನಿರಂತರ ನಿಗಾ ವಹಿಸಲು ಮತ್ತು ಸಾಂಸ್ಥಿಕ ಟ್ರ್ಯಾಕಿಂಗ್ ಕಾಯ್ದುಕೊಳ್ಳಲು, ವಿಳಂಬವಾದ ಕಾಯ್ದಿರಿಸಿದ ತೀರ್ಪುಗಳ ವಿವರಗಳನ್ನು ಒಳಗೊಂಡಿರುವ ಮಾಸಿಕ ಇಮೇಲ್‌ಗಳನ್ನು ಸಂಬಂಧಪಟ್ಟ ನ್ಯಾಯಾಧೀಶರಿಗೆ ಮತ್ತು ಆಯಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ನೇರವಾಗಿ ಕಳುಹಿಸಲಾಗುತ್ತದೆ. ಇದಲ್ಲದೆ, ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ ವಕೀಲರಿಗೆ ಸ್ವಯಂಚಾಲಿತ ಇಮೇಲ್‌ಗಳು ಮತ್ತು ಅಧಿಸೂಚನೆಗಳು ತಲುಪುತ್ತವೆ. ಇದು ಬಾಕಿ ಇರುವ ವಿಷಯಗಳಲ್ಲಿ ಭಾಗಿಯಾಗಿರುವ ಎಲ್ಲಾ ಕಾನೂನು ಪ್ರತಿನಿಧಿಗಳ ನಡುವೆ ಪಾರದರ್ಶಕ ಸಂವಹನವನ್ನು ಖಾತರಿಪಡಿಸುತ್ತದೆ.

ಹೊಣೆಗಾರಿಕೆ ಕಾರ್ಯವಿಧಾನ

ವಿಳಂಬವನ್ನು ನಿಯಂತ್ರಿಸಲು ವ್ಯವಸ್ಥಿತ ಹೊಣೆಗಾರಿಕೆಯ ಚೌಕಟ್ಟನ್ನು ಸ್ಥಾಪಿಸಲಾಗಿದೆ. ಇದನ್ನು ಅನುಷ್ಠಾನಕ್ಕೆ ತರಲು ತಮ್ಮ ತಮ್ಮ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸುವಂತೆ ಎಲ್ಲಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳಿಗೆ ಸೂಚಿಸಲಾಗಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ತೀರ್ಪು ಮೂರು ತಿಂಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿದ್ದರೆ, ಆ ವಿಷಯವನ್ನು ಎರಡು ವಾರಗಳ ಒಳಗೆ ಸಂಬಂಧಪಟ್ಟ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು. ಹೆಚ್ಚುವರಿ ಎರಡು ವಾರಗಳ ನಂತರವೂ ತೀರ್ಪು ಹೊರಬರದಿದ್ದರೆ, ಮುಖ್ಯ ನ್ಯಾಯಮೂರ್ತಿಗಳು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಬಹುದು.

ದಾವೆದಾರರಿಗೆ ಪರಿಹಾರ

ತೀರ್ಪು ಪ್ರಕಟಣೆಯ ವಿಳಂಬದಿಂದ ತೊಂದರೆಗೊಳಗಾದ ದಾವೆದಾರರಿಗೆ, ಸುಪ್ರೀಂ ಕೋರ್ಟ್ ಆದೇಶ ನಿರ್ದಿಷ್ಟ ಕಾನೂನು ಪರಿಹಾರಗಳನ್ನು ಒದಗಿಸಿದೆ. ತೀರ್ಪನ್ನು ಕಾಯ್ದಿರಿಸಿದ ಮೂರು ತಿಂಗಳೊಳಗೆ ತೀರ್ಪು ನೀಡದಿದ್ದರೆ, ಸಂಬಂಧಪಟ್ಟ ಪಕ್ಷಗಳು ಶೀಘ್ರ ತೀರ್ಪು ಕೋರಿ ಅರ್ಜಿ ಸಲ್ಲಿಸಲು ಅನುಮತಿಸಲಾಗಿದೆ. ಅಂತಹ ಅರ್ಜಿಗಳನ್ನು ರಜಾದಿನಗಳನ್ನು ಹೊರತುಪಡಿಸಿ ಎರಡು ಕೆಲಸದ ದಿನಗಳ ಒಳಗೆ ಸಂಬಂಧಪಟ್ಟ ಪೀಠದ ಮುಂದೆ ಪಟ್ಟಿ ಮಾಡಬೇಕೆಂದು ಮಾರ್ಗಸೂಚಿ ಸೂಚಿಸುತ್ತದೆ. ಆರಂಭಿಕ ಮೂರು ತಿಂಗಳು ಮತ್ತು ಹೆಚ್ಚುವರಿ ಒಂದು ತಿಂಗಳ ನಂತರವೂ ತೀರ್ಪು ಬಾಕಿ ಉಳಿದಿದ್ದರೆ, ದಾವೆದಾರರು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಲು ಕೋರಬಹುದು.



ಹೈಕೋರ್ಟ್ ತೀರ್ಪುಗಳ ಪ್ರಕಟಣೆಗೆ ಸುಪ್ರೀಂ ವೇಗ

ದೇಶದ ಎಲ್ಲಾ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಕಡ್ಡಾಯ ನಿರ್ದೇಶನ ನೀಡಿದ್ದು, ತೀರ್ಪುಗಳ ಪ್ರಕಟಣೆ ಮತ್ತು ಜಾಮೀನು ಅರ್ಜಿಗಳ ವಿಲೇವಾರಿಗೆ ಕಟ್ಟುನಿಟ್ಟಾದ ಗಡುವು ನಿಗದಿಪಡಿಸಿದೆ. ಆದೇಶಗಳನ್ನು ಕಾಯ್ದಿರಿಸಿದ ನಂತರ ತೀರ್ಪು ನೀಡಲು ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಗರಿಷ್ಠ ಮೂರು ತಿಂಗಳ ಅವಧಿಯನ್ನು ನಿಗದಿಪಡಿಸಿದೆ.



ನ್ಯಾಯದಾನಕ್ಕೆ ಸುಪ್ರೀಂ ವೇಗ

» ಸುಪ್ರೀಂ ಕೋರ್ಟ್‌ಂದ ಹೈಕೋರ್ಟ್ ತೀರ್ಪುಗಳಿಗೆ ಮೂರು ತಿಂಗಳ ಗಡುವು

» ಜಾಮೀನು ಅರ್ಜಿಗಳ ಮೇಲೆ 24 ಗಂಟೆಗಳ ಒಳಗೆ ನಿರ್ಧಾರ ಅಗತ್ಯ.

» ಮೂರು ತಿಂಗಳು ಮೀರಿದ ಪ್ರಕರಣಗಳನ್ನು ಮುಖ್ಯ ನ್ಯಾಯಮೂರ್ತಿಗಳು ಮರುನಿಯೋಜಿಸಬಹುದು.

» ನಾಲ್ಕು ತಿಂಗಳ ವಿಳಂಬದ ನಂತರ ದಾವೆದಾರರು ವರ್ಗಾವಣೆ ಕೋರಬಹುದು.

» ಒಂದು ತಿಂಗಳಾದರೂ ಸಕಾರಣ ಆದೇಶ ಸಿಗದಿದ್ದರೆ ಮರುನಿಯೋಜನೆಗೆ ವಿನಂತಿಸಬಹುದು.

ಸಕಾರಣ ಆದೇಶಗಳು

ವಿವರವಾದ ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಲ್ಲಿನ ವಿಳಂಬವನ್ನೂ ಈ ನಿರ್ದೇಶನ ಪರಿಹರಿಸುವ ಪ್ರಯತ್ನ ನಡೆಸಿದೆ. ತೀರ್ಪಿನ ಕೇವಲ ಮುಖ್ಯ ಭಾಗವನ್ನು ಮಾತ್ರ ಪ್ರಕಟಿಸಿ, ವಿವರವಾದ ಆದೇಶವನ್ನು 15 ದಿನಗಳ ಒಳಗೆ ಅಪ್‌ಲೋಡ್ ಮಾಡದ ಸಂದರ್ಭಗಳಲ್ಲಿ, ಪಕ್ಷಗಳು ಅದರ ಶೀಘ್ರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಬಹುದು. ಒಂದು ತಿಂಗಳ ನಂತರವೂ ವಿವರವಾದ ತೀರ್ಪು ಲಭ್ಯವಾಗದಿದ್ದರೆ, ದಾವೆದಾರರು ಪ್ರಕರಣವನ್ನು ಮತ್ತೊಂದು ಪೀಠಕ್ಕೆ ಮರುನಿಯೋಜಿಸಲು ವಿನಂತಿಸಬಹುದು.

» ಸರ್ವೋಚ್ಚ ನ್ಯಾಯಾಲಯದಿಂದ ನಿರ್ದೇಶನ

» ಕಾಯ್ದಿರಿಸಿದ ತೀರ್ಪು ಘೋಷಣೆಗೆ ಗರಿಷ್ಠ 3 ತಿಂಗಳ ಅವಧಿ ನಿಗದಿ



ಕಾಯ್ದಿರಿಸಿದ ತೀರ್ಪಿನ ವಿವರಣೆ

ವಿಚಾರಣೆಯ ಮುಕ್ತಾಯದ ನಂತರ ನ್ಯಾಯಾಲಯದ ನಿರ್ಧಾರವನ್ನು ತಕ್ಷಣವೇ ನೀಡದೆ ಮುಂದೂಡಿದಾಗ ಮತ್ತು ಅದನ್ನು ಔಪಚಾರಿಕವಾಗಿ ಪ್ರಕಟಿಸುವವರೆಗೆ ಬಾಕಿ ಇರಿಸಿದಾಗ ಅದನ್ನು ಕಾಯ್ದಿರಿಸಿದ ತೀರ್ಪು ಎನ್ನಲಾಗುತ್ತದೆ. ಇದು ನ್ಯಾಯಾಧೀಶರಿಗೆ ವಾದಗಳು, ಪುರಾವೆಗಳು, ಕಾನೂನು ಪೂರ್ವಾಪರಗಳು ಮತ್ತು ಸಂಕೀರ್ಣ ಕಾನೂನು ಪ್ರಶ್ನೆಗಳನ್ನು ಪರಿಶೀಲಿಸಲು ಅಥವಾ ಲಿಖಿತ ನಿರ್ಧಾರವನ್ನು ನೀಡುವ ಮುನ್ನ ಇತರ ನ್ಯಾಯಾಧೀಶರೊಂದಿಗೆ ಚರ್ಚಿಸಲು ಸಮಯ ನೀಡುತ್ತದೆ. ವಿಚಾರಣೆ ಮುಗಿದ ತಕ್ಷಣವೇ ಪ್ರಕಟವಾಗುವ ಸಾಮಾನ್ಯ ತೀರ್ಪಿಗಿಂತ ಇದು ಕೇವಲ ಸಮಯದ ವಿಷಯದಲ್ಲಿ ಭಿನ್ನವಾಗಿದೆ. ಸಾಕಷ್ಟು ಪುರಾವೆಗಳು, ಸಂಕೀರ್ಣ ಸಂಗತಿಗಳು ಅಥವಾ ಮಹತ್ವದ ಕಾನೂನು ಪ್ರಶ್ನೆಗಳನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ತೀರ್ಪುಗಳನ್ನು ಕಾಯ್ದಿರಿಸುವುದು ಸಾಮಾನ್ಯ. ತೀರ್ಪುಗಳನ್ನು ಕಾಯ್ದಿರಿಸುವುದು ವಿವರವಾದ ವಿಶ್ಲೇಷಣೆಗೆ ಅವಕಾಶ ನೀಡುತ್ತದೆಯಾದರೂ, ಸುದೀರ್ಘ ವಿಳಂಬ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಂದಿಸಬಹುದು ಎಂಬ ಅಭಿಪ್ರಾಯ ವ್ಯಾಪಕವಾಗಿದೆ.

ಕಿರುಸುದ್ದಿ

ಅಪಘಾತ: ಬೆಂಗಳೂರಿನ ಮೂವರ ಸಹಿತ 8 ಸಾವು

ಚಂಬಾ: ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಕಾಲಾವನ್‌ನಲ್ಲಿ ಭಾನುವಾರ ಭೀಕರ ಅಪಘಾತ ಸಂಭವಿಸಿದ್ದು, ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಟ್ಯಾಕ್ಸಿ ಚಾಲಕನ ನಿಯಂತ್ರಣ ತಪ್ಪಿ 500 ಮೀ. ಆಳದ ಪ್ರಪಾತಕ್ಕೆ ಉರುಳಿದೆ. ದುರಂತದಲ್ಲಿ ಬೆಂಗಳೂರಿನ ಒಂದು ಕುಟುಂಬ, ಛತ್ತೀಸ್‌ಗಢದ ಇನ್ನೊಂದು ಕುಟುಂಬ ಮತ್ತು ಸ್ಥಳೀಯ ಚಾಲಕ ಸೇರಿ ಒಟ್ಟು 8 ಮಂದಿ ಮೃತಪಟ್ಟಿದ್ದಾರೆ. ಅಪಘಾತದ ಸಮಯದಲ್ಲಿ ಒಟ್ಟು 8 ಮಂದಿ ವಾಹನದಲ್ಲಿದ್ದರು. ಈವರೆಗೆ 3 ಮೃತದೇಹ ಗಳನ್ನು ಹೊರತೆಗೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ತಿಳಿಸಿದ್ದಾರೆ.

ಕೇದಾರನಾಥ ಯಾತ್ರೆ ಸ್ಥಗಿತ

ರುದ್ರಪ್ರಯಾಗ್: ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಭಾರೀ ಮಳೆ ಮತ್ತು ಬಿರುಗಾಳಿಯ ಮುನ್ಸೂಚನೆ ನೀಡಿ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದ ಹಿನ್ನೆಲೆಯಲ್ಲಿ, ಭಾನುವಾರ ಕೇದಾರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಯಾತ್ರಿಕರ ಸುರಕ್ಷತೆಯ ದೃಷ್ಟಿಯಿಂದ ಯಾತ್ರೆಯನ್ನು ನಿಲ್ಲಿಸಲಾಗಿದ್ದು, ಪ್ರಯಾಣಿಕರನ್ನು ಸುರಕ್ಷಿತ ಸ್ಥಳಗಳಲ್ಲಿ ಉಳಿಯುವಂತೆ ಜಿಲ್ಲಾಡಳಿತ ಸೂಚಿಸಿದೆ.

ಇಂದಿನಿಂದ ನಾಲ್ಕು ದಿನ ಭಾರತ-ಅಮೆರಿಕ ಚರ್ಚೆ

ಹೊಸದಿಲ್ಲಿ: ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆ ಮತ್ತೆ ವೇಗ ಪಡೆಯುತ್ತಿದ್ದು, ದಿಲ್ಲಿಯಲ್ಲಿ ಉಭಯ ನಿಯೋಗಗಳು ನಾಲ್ಕು ದಿನಗಳ ಚರ್ಚೆ ನಡೆಸಲಿವೆ. ಮುಖ್ಯ ಸಂಧಾನಕಾರ ಬ್ರೆಂಡನ್ ಲಿಂಚ್ ನೇತೃತ್ವದ ಹಾಗೂ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮುಖ್ಯ ಸಂಧಾನಕಾರ ದರ್ಪಣ್ ಜೈನ್ ನೇತೃತ್ವದ ಭಾರತ ನಿಯೋಗ ರಾಷ್ಟ್ರ ರಾಜಧಾನಿಯಲ್ಲಿ ಪರಸ್ಪರ ಲಾಭದಾಯಕ ವ್ಯಾಪಾರ ಬಗ್ಗೆ ಚರ್ಚಿಸಲಿವೆ.

ವ್ಯಾಣಿಜ್ಯ ಇಲಾಖೆಯ ಪ್ರಕಾರ, ಅಮೆರಿಕ ಜತೆ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿದ ಬಳಿಕ ವಿಸ್ತೃತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ) ಚರ್ಚೆ ನಡೆಸುವತ್ತ ಕೇಂದ್ರ ಸರ್ಕಾರ ಯೋಚಿಸಲಿದೆ. ವಿದೇಶಿ ಮಾರುಕಟ್ಟೆ ವ್ಯಾಪ್ತಿ, ತೆರಿಗೇತರ ವಿಧಾನಗಳು, ಸುಂಕ ಮತ್ತು ವ್ಯಾಪಾರ ಸೌಲಭ್ಯಗಳು, ಹೂಡಿಕೆ ಉತ್ತೇಜನ ಹಾಗೂ ಆರ್ಥಿಕ ಭದ್ರತೆ ಇತ್ಯಾದಿ ವಿಚಾರಗಳ ಕುರಿತು ಚರ್ಚೆ ನಡೆಯಲಿದೆ.

ಭಾರತ-ಅಮೆರಿಕ ನಡುವಿನ ಮಧ್ಯಂತರ ಒಪ್ಪಂದವೆಂದು ಪರಿಗಣಿಸಲಾದ ಮೊದಲ ಹಂತದ ಬಿಟಿಎ ಚೌಕಟ್ಟನ್ನು ಫೆ.7ರಂದು ಜಂಟಿಯಾಗಿ ಘೋಷಿಸಿದ್ದವು. ಪ್ರಸ್ತಾವಿಸಿದ ಒಪ್ಪಂದವನ್ನು ಕಾನೂನಾತ್ಮಕ ರೀತಿಯಲ್ಲಿ ಸಿದ್ಧಪಡಿಸುವುದು ಮುಂದಿನ ಹಂತ. ಬಿಟಿಎ ಒಪ್ಪಂದ ಚೌಕಟ್ಟನ್ನು ಘೋಷಿಸಿದ್ದರಿಂದ, ಉಭಯ ರಾಷ್ಟ್ರಗಳ ನಡುವಿನ ವಿಶಾಲವಾದ ವ್ಯಾಪಾರ ಸಾಧ್ಯತೆ ಖಚಿತಪಡಿಸಿದೆ. ಘೋಷಿತ ಬಿಟಿಎ ಚೌಕಟ್ಟಿನ ಪ್ರಕಾರ, ಭಾರತ ಮೇಲಿನ ಶೇ.50 ಸುಂಕವನ್ನು ಅಮೆರಿಕ ಶೇ.18ಕ್ಕೆ ಇಳಿಸಿದ್ದು, ರಷ್ಯಾ ತೈಲ ಖರೀದಿಗೆ ಹೇರಿದ್ದ ಶೇ.25 ದಂಡವನ್ನೂ ತೆಗೆದುಹಾಕಿದೆ.

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

ಘಾಜಿಯಾಬಾದ್: ಬಕ್ರೀದ್‌ಗೆ ಆಹ್ವಾನಿಸಿ ಹಿಂದು ಯುವಕನ ಹತ್ಯೆಗೈದ ಪ್ರಕರಣದ ಪ್ರಮುಖ ಆರೋಪಿ ಅಸಾದ್ ಭಾನುವಾರ ಮುಂಜಾನೆ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಅಸಾದ್ ತಂದೆ ನವಾಬ್ ಸೇರಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಉತ್ತರಪ್ರದೇಶದ ಘಾಜಿಯಾಬಾದ್‌ನ ಖೋಡಾದಲ್ಲಿ 17 ವರ್ಷದ ಸೂರ್ಯ ಪ್ರತಾಪ್ ಚೌಹಾಣ್‌ನನ್ನು ಬಕ್ರೀದ್‌ಗೆ ಆಹ್ವಾನಿಸಿದ್ದ ಅಸಾದ್, ಚಾಕುನಿಂದ ಇರಿದು ಹಲ್ಲೆ ನಡೆಸಿದ್ದ. ಏಳು ಮಂದಿಯಿಂದ ಚಾಕು ಇರಿತಕ್ಕೊಳಗಾಗಿ ಗಂಭೀರ ಗಾಯಗೊಂಡಿದ್ದ ಸೂರ್ಯನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಘಟನೆಗೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ಕುಟುಂಬಸ್ಥರು ಮತ್ತು ಸ್ಥಳೀಯರು ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದರು. ಅಸಾದ್ ಮಾಹಿತಿ ನೀಡಿದವರಿಗೆ 50,000 ರೂ. ಬಹುಮಾನವನ್ನೂ ಪೊಲೀಸರು ಘೋಷಿಸಿದ್ದರು.

7 ಮಂದಿಯಿಂದ ಚಾಕು ಇರಿತ: ಸಹೋದರ ಮನೆಯಲ್ಲಿದ್ದ. ಅಸಾದ್‌ನಿಂದ ದೂರವಾಣಿ ಕರೆ ಮಾಡಿ ಪದೇ ಪದೇ ಬಕ್ರೀದ್‌ಗೆ ಆಹ್ವಾನಿಸಿದ್ದ. ಆತನಿಗೆ ಬಕ್ರೀದ್ ಆಚರಣೆಗೆ ಹೋಗುವ ಇಚ್ಛೆಯಿರಲಿಲ್ಲ. ಅಸಾದ್ ಒತ್ತಾಯಕ್ಕೆ ತೆರಳಿದ್ದ. ಅಸಾದ್ ಜತೆಗಿದ್ದ 7 ಮಂದಿ ಕೈಯಲ್ಲಿ ಚಾಕುಗಳಿದ್ದವು. ನನ್ನ ಸಹೋದರನ ಮೇಲೆ ಎಲ್ಲರೂ ಚಾಕುವಿನಿಂದ ಇರಿದಿದ್ದಾರೆಂದು ಮೃತನ ಸಹೋದರಿ ಆರೋಪಿಸಿದ್ದಾರೆ. ತನ್ನ ಜೀವ ರಕ್ಷಿಸಿಕೊಳ್ಳಲು ಸೂರ್ಯ 200 ಮೀ. ದೂರದವರೆಗೆ ಓಡಿದ್ದ. ಆದರೆ ದಾಳಿಕೋರರು ಸೂರ್ಯನನ್ನು ಬೆನ್ನತ್ತಿ ಹೋಗಿ ಮತ್ತೆ ಚಾಕುವಿನಿಂದ ಇರಿದಿದ್ದಾರೆಂದು ಸಹೋದರಿ ಆರೋಪಿಸಿದ್ದಾರೆ.

ಭಾರತ- ಬಾಂಗ್ಲಾ ಗಡಿ ಮಾತುಕತೆ ಮಾ.8ರಿಂದ

ಹೊಸದಿಲ್ಲಿ: ಬಾಂಗ್ಲಾದೇಶದಲ್ಲಿ ಹೊಸ ಬಿಎನ್‌ಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೊದಲ ದ್ವೈವಾರ್ಷಿಕ ಡಿಜಿ ಮಟ್ಟದ ಗಡಿ ಮಾತುಕತೆ ಮುಂದಿನ ವಾರ ದಿಲ್ಲಿಯಲ್ಲಿ ನಡೆಯಲಿದೆ. ಜೂನ್ 8ರಿಂದ 11ರವರೆಗೆ ನಡೆಯಲಿರುವ ಈ ಸಭೆಯಲ್ಲಿ ಬಿಎಸ್‌ಎಫ್ ಡಿಜಿ ಪ್ರವೀಣ್ ಕುಮಾರ್ ಮತ್ತು ಬಿಜಿಬಿ ಡಿಜಿ ಮೇಜರ್ ಜನರಲ್ ಮೊಹಮ್ಮದ್ ಅಶ್ರಫುಜ್ಜಮಾನ್ ಸಿದ್ದಿಕಿ ನೇತೃತ್ವದ ನಿಯೋಗಗಳು ಭಾಗವಹಿಸಲಿವೆ.

ಭಾರತವು ಬಾಂಗ್ಲಾದೇಶದೊಂದಿಗೆ 4,096 ಕಿಮೀ ಉದ್ದದ ಅಂತಾರಾಷ್ಟ್ರೀಯ ಗಡಿ ಹಂಚಿಕೊಂಡಿದ್ದು, ಇದರಲ್ಲಿ ಸುಮಾರು 860 ಕಿಮಿ ಭಾಗಕ್ಕೆ ಇನ್ನು ಬೇಲಿ ಹಾಕಲಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಅಕ್ರಮ ನುಸುಳುವಿಕೆ ತಡೆಯಲು ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಕ್ರಮ ನುಸುಳುಕೋರರ ವಿರುದ್ಧ ಪತ್ತೆ ಹಚ್ಚಿ, ತೆಗೆದುಹಾಕಿ ಮತ್ತು ಗಡೀಪಾರು ಮಾಡಿ ಎಂಬ 3ಡಿ ಯೋಜನೆಯನ್ನು ಈಗಾಗಲೇ ಹೇಳಿದ್ದಾರೆ. ಈ ಮಾತುಕತೆಯಲ್ಲಿ ಗಡಿ ಬೇಲಿ ನಿರ್ಮಾಣ, ಬಿಎಸ್‌ಎಫ್ ಸಿಬ್ಬಂದಿ ಮೇಲಿನ ದಾಳಿ ತಡೆ, ಕಳ್ಳಸಾಗಣೆ, ಡ್ರೋನ್ ನುಸುಳುವಿಕೆ ಮತ್ತು ಅಕ್ರಮ ಬಾಂಗ್ಲಾ ವಲಸಿಗರನ್ನು ಮರಳಿ ಹಸ್ತಾಂತರಿಸುವ ಕುರಿತು ಚರ್ಚಿಸಲಾಗುವುದು. ಬಿಜಿಬಿ ತನ್ನ ನಾಗರಿಕರ ಮೇಲಿನ ದಾಳಿ ಬಗ್ಗೆ ಪ್ರಸ್ತಾಪಿಸುವ ಸಾಧ್ಯತೆಯಿದೆ. ಜೂ.11ರಂದು ಉಭಯ ದೇಶಗಳ ನಡುವೆ ಜಂಟಿ ಚರ್ಚೆಯ ದಾಖಲೆಗೆ ಸಹಿ ಹಾಕಲಾಗುವುದು.

ತೈಲ ರಫ್ತು ಮೇಲೆ ವಿಶೇಷ ಹೆಚ್ಚುವರಿ ಸುಂಕ ಕಡಿತ

ಹೊಸದಿಲ್ಲಿ: ಪೆಟ್ರೋಲ್, ಡೀಸೆಲ್, ಎಟಿಎಫ್ ಇಂಧನಗಳ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕವನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ. ಲೀಟರ್ ಪೆಟ್ರೋಲ್‌ಗೆ 1.5 ರೂ., ಡೀಸೆಲ್‌ಗೆ 13.5 ರೂ. ಮತ್ತು ವಿಮಾನಯಾನ ಟರ್ಬೈನ್ ಇಂಧನಕ್ಕೆ 9.5 ರೂ. ಕಡಿತಗೊಳಿಸಿದ್ದು, ಸೋಮವಾರದಿಂದ ಜಾರಿಯಾಗಲಿವೆ. ಪೆಟ್ರೋಲ್ ಮತ್ತು ಡೀಸೆಲ್ ರಫ್ತಿನ ಮೇಲೆ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಕಡಿತಗೊಳಿಸಿದ್ದಾಗಿ ವಿತ್ತ ಸಚಿವಾಲಯ ತಿಳಿಸಿದೆ. ದೇಶೀಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮಧ್ಯಪ್ರಾಚ್ಯ ಯುದ್ಧದಿಂದ ದೇಶೀಯ ತೈಲ ಪೂರೈಕೆ ಹೆಚ್ಚಿಸುವುದಕ್ಕಾಗಿ ಮೇ 16ರಂದು ಪೆಟ್ರೋಲಿಯಂ ರಫ್ತಿನ ಮೇಲೆ ಮೋದಿ ಸರ್ಕಾರ ವಿಶೇಷ ಹೆಚ್ಚುವರಿ ಸುಂಕ ವಿಧಿಸಿತ್ತು. 2022ರಲ್ಲಿ ಕೇಂದ್ರ ಸರ್ಕಾರ ಇಂಧನ ರಫ್ತುಗಳ ಮೇಲಿನ ವಿಶೇಷ ಹೆಚ್ಚುವರಿ ತೆರಿಗೆಯನ್ನು ಜಾರಿಗೆ ತಂದಿತ್ತು.

ನೌಕಾ ಪಡೆ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

ಹೊಸದಿಲ್ಲಿ: ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು. ನೌಕಾಪಡೆ ಮುಖ್ಯಸ್ಥರಾಗಿದ್ದ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರ ಅಧಿಕಾರಾವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಸ್ವಾಮಿನಾಥನ್ ಅವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದಾರೆ. ಇವರು ಡಿಸೆಂಬರ್ 31, 2028ರವರೆಗೆ ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರ ಬಾಲ್ಯ ಮತ್ತು ಶಿಕ್ಷಣದ ಹಿನ್ನೆಲೆ ಅತ್ಯಂತ ಪ್ರೇರಣಾದಾಯಕವಾಗಿದೆ. ಬೆಂಗಳೂರಿನ ಐತಿಹಾಸಿಕ ಬಸವನಗುಡಿಯ ಎನ್.ಆರ್. ಕಾಲೋನಿಯಲ್ಲಿ ಬೆಳೆದ ಅವರು, ನಗರದ ಪ್ರತಿಷ್ಠಿತ ಬಿಷಪ್ ಕಾಟನ್ ಶಾಲೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು. ದೇಶಸೇವೆಯ ಕನಸು ಹೊತ್ತು ನಂತರ ವಿಜಯಪುರದ(ವಿಜಾಪುರ) ಪ್ರಸಿದ್ಧ ಸೈನಿಕ ಶಾಲೆಯಲ್ಲಿ ಸೇನಾ ಶಿಕ್ಷಣವನ್ನು ಪೂರೈಸಿದರು. ಕಠಿಣ ಪರಿಶ್ರಮದ ಮೂಲಕ ಮೊದಲ ಪ್ರಯತ್ನದಲ್ಲೇ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕೇವಲ 19ನೇ ವಯಸ್ಸಿನಲ್ಲಿಯೇ (1987ರಲ್ಲಿ) ಭಾರತೀಯ ನೌಕಾಪಡೆಗೆ ಅಧಿಕಾರಿಯಾಗಿ ನೇಮಕಗೊಳ್ಳುವ ಮೂಲಕ ಯುವಕರಿಗೆ ಮಾದರಿಯಾದರು.



ಕಾರ್ಯಾಚರಣೆಗಳ ಸನ್ನದ್ಧತೆಗೆ ಆದ್ಯತೆ

ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ಗರಿಷ್ಠ ಕಾರ್ಯಾಚರಣೆಯ ಸಿದ್ಧತೆ ಹಾಗೂ ಯುದ್ಧದ ಪರಿಣಾಮಕಾರಿತ್ವವನ್ನು ಕಾಯ್ದುಕೊಳ್ಳುವುದು ತಮ್ಮ ಅತ್ಯುನ್ನತ ಆದ್ಯತೆ ಎಂದು ನೂತನ ಮುಖ್ಯಸ್ಥರು ತಿಳಿಸಿದ್ದಾರೆ. ಪ್ರಸ್ತುತ ಪ್ರಾದೇಶಿಕ ಕಡಲ ಭದ್ರತೆ ಸವಾಲಿನಿಂದ ಕೂಡಿದ್ದು, ಸಂಕೀರ್ಣ, ಅನಿರೀಕ್ಷಿತ ಮತ್ತು ಅನಿಶ್ಚಿತವಾಗಿದೆ ಎಂದಿದ್ದಾರೆ.

ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ಅವರು ಪಡೆದಿದ್ದಾರೆ.

ಸ್ವಾಮಿನಾಥನ್ ಅವರು, ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಮತ್ತು ಅದಕ್ಕೂ ಮುನ್ನ ನೌಕಾಸೇನೆಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಸಂವಹನ ಮತ್ತು ಎಲೆಕ್ಟ್ರಾನಿಕ್ ಯುದ್ಧ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿದ್ದಾರೆ.

ಐಎನ್‌ಎಸ್ ವಿದ್ಯುತ್ ಮತ್ತು ವಿನಾಶ್ ಕ್ಷಿಪಣಿ ನೌಕೆಗಳು, ಐಎನ್‌ಎಸ್ ಕುಲಿಶ್ ಕ್ಷಿಪಣಿ ಕಾರ್ವೆಟ್, ಐಎನ್‌ಎಸ್ ಮೈಸೂರು ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕ ನೌಕೆ ಮತ್ತು ಐಎನ್‌ಎಸ್ ವಿಕ್ರಮಾದಿತ್ಯ ಯುದ್ಧನೌಕೆಗಳ ಕಮಾಂಡಿಂಗ್ ಅಧಿಕಾರಿಯಾಗಿದ್ದರು. ಭಾರತೀಯ ನೌಕಾ ಸುರಕ್ಷತಾ ತಂಡವನ್ನೂ ರಚಿಸಿದ ಅನುಭವವೂ ಇದೆ.

ಸಿಡಿಎಸ್ ಆಗಿ ಜನರಲ್ ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ

ಹೊಸದಿಲ್ಲಿ: ಪಾಕಿಸ್ತಾನ ಮತ್ತು ಚೀನಾ ವಿಷಯಗಳಲ್ಲಿ ತಜ್ಞರೆನಿಸಿಕೊಂಡಿರುವ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಭಾನುವಾರ ಭಾರತದ ನೂತನ ರಕ್ಷಣಾ ಸಿಬ್ಬಂದಿ ಮುಖ್ಯಸ್ಥರಾಗಿ(ಸಿಡಿಎಸ್) ಅಧಿಕಾರ ವಹಿಸಿಕೊಂಡಿದ್ದಾರೆ. ಮೂರು ಸಶಸ್ತ್ರ ಪಡೆಗಳ ಏಕೀಕರಣ ಮತ್ತು ಮಹತ್ವಾಕಾಂಕ್ಷೆಯ ಥಿಯೇಟರೈಸೇಶನ್(ಸಮಗ್ರ ಮಿಲಿಟರಿ ಕಮಾಂಡ್) ಯೋಜನೆಯನ್ನು ಜಾರಿಗೊಳಿಸುವುದು ಅವರ ಪ್ರಮುಖ ಆದ್ಯತೆಯಾಗಿದೆ. ಶನಿವಾರ ನಿವೃತ್ತರಾದ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನಕ್ಕೆ ಸುಬ್ರಮಣಿ ಅವರು ನಿಯುಕ್ತರಾಗಿದ್ದಾರೆ.



ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಜನರಲ್ ಸುಬ್ರಮಣಿ, ಪ್ರಧಾನಮಂತ್ರಿಯವರ ಜೆಎಐ(ಜಾಯಿಂಟ್‌ನೆಸ್, ಆತ್ಮನಿರ್ಭರತೆ ಮತ್ತು ಇನ್ನೋವೇಶನ್)ದೃಷ್ಟಿಕೋನವನ್ನು ಸಾಕಾರಗೊಳಿಸಲು ನಾವು ಬದ್ಧರಾಗಿದ್ದೇವೆ. ಸಶಸ್ತ್ರ ಪಡೆಗಳ ಆಧುನೀಕರಣಕ್ಕಾಗಿ ಮಿಲಿಟರಿ, ಕೈಗಾರಿಕೆಗಳು, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳ ನಡುವೆ ಹೆಚ್ಚಿನ ಸಹಯೋಗವನ್ನು ಏರ್ಪಡಿಸಲಾಗುವುದು. ಸ್ವದೇಶಿ ಶಸ್ತ್ರಾಸ್ತ್ರಗಳ ಅಭಿವೃದ್ಧಿ ಮತ್ತು ಬಳಕೆಗೆ ವೇಗ ನೀಡಲಾಗುವುದು ಎಂದು ತಿಳಿಸಿದರು.

ಸುದೀರ್ಘ ಸೇನಾ ಅನುಭವ: ಸುಮಾರು 40 ವರ್ಷಗಳ ಸುದೀರ್ಘ ಸೇನಾ ವೃತ್ತಿಜೀವನ ಹೊಂದಿರುವ ಜನರಲ್ ಸುಬ್ರಮಣಿ ಅವರು ಈ ಹಿಂದೆ ಉಪ ಸೇನಾ ಮುಖ್ಯಸ್ಥರಾಗಿ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಡಿಸೆಂಬರ್ 14, 1985ರಂದು ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್ ಮೂಲಕ ಇವರು ಸೇನೆಗೆ ಸೇರಿದರು.

ಪ್ರಮುಖ ಸಾಧನೆಗಳು: ಅಸ್ಸಾಂನಲ್ಲಿ ಆಪರೇಷನ್ ರೈನೋ ಅನ್ವಯ ಬಂಡಾಯ ನಿಗ್ರಹ ಕಾರ್ಯಾಚರಣೆ, ಜಮ್ಮು-ಕಾಶ್ಮೀರದಲ್ಲಿ ಇನ್‌ಫೆಂಟ್ರಿ ಬ್ರಿಗೇಡ್ ಹಾಗೂ ಪಶ್ಚಿಮ ಗಡಿಯಲ್ಲಿ ಪ್ರಮುಖ ಸ್ಟ್ರೈಕ್ ಕಾರ್ಪ್ಸ್ ಸೇರಿದಂತೆ ವಿವಿಧ ಕಠಿಣ ರಂಗಗಳಲ್ಲಿ ಅವರು ಯಶಸ್ವಿಯಾಗಿ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಸುಬ್ರಮಣಿ ಅವರಿಗೆ ವಿಶಿಷ್ಟ ಸೇವೆಗಾಗಿ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ.

ಕೊಡಗು ಜಿಲ್ಲೆಯ ಕನ್ನಡ ಸಾಹಿತ್ಯ 17 ಸಮ್ಮೇಳನಕ್ಕೆ ಸಂಭ್ರಮದ ತೆರೆ

ಹೊಸಪೀಳಿಗೆಯ ಲೇಖಕರು ಬರಲಿ



ಸುಂಟಿಕೊಪ್ಪ: ಯಾವುದೇ ಸಂಸ್ಥೆ ನಿಂತ ನೀರಾದಾಗ ಜನರು ಅದರಿಂದ ದೂರವಾಗುತ್ತಾ ಹೋಗುತ್ತಾರೆ ಎಂದು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ 17 ನೇ ಸಮ್ಮೇಳನಾಧ್ಯಕ್ಷ ಅಬ್ದುಲ್ ರಶೀದ್ ಕನ್ನಡ ಸಂಸ್ಥೆಗಳನ್ನು ಎಚ್ಚರಿಸಿದ್ದಾರೆ.

ಸುಂಟಿಕೊಪ್ಪದ ಪಂಜೆ ಮಂಗೇಶರಾಯ ವೇದಿಕೆಯಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ 17 ನೇ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷರಿಗೆ ನೀಡಲಾದ ಗೌರವ ಸ್ವೀಕರಿಸಿ ಮಾತನಾಡಿದ ಅಬ್ದುಲ್ ರಶೀದ್, ಹೊಸಪೀಳಿಗೆಯ ಲೇಖಕರನ್ನು ಇಂಥ ಸಮ್ಮೇಳನಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ಇಂದಿನ ಕಾಲಮಾನಕ್ಕೆ ತಕ್ಕಂತೆ ಆಧುನಿಕ ಸಾಮಾಜಿಕ ಜಾಲತಾಣಗಳ ನೆರವನ್ನು ಪಡೆಯುವ ಮೂಲಕ ಸಮ್ಮೇಳನಕ್ಕೆ ಹೆಚ್ಚಿನ ಸಾಹಿತ್ಯಾಭಿಮಾನಿಗಳು ಬರುವಂತೆ ಮಾಡುವುದು ಸಾಧ್ಯವಿತ್ತು ಎಂದು ಅಭಿಪ್ರಾಯಪಟ್ಟರು. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಲೇಖಕರು ಕೊಡಗಿನಲ್ಲಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಸಾಹಿತ್ಯಾಸಕ್ತರನ್ನು ಮುಂದಿನ ದಿನಗಳಲ್ಲಿ ಸಾಹಿತ್ಯ ಸಮಾರಂಭಗಳಲ್ಲಿ ತೊಡಗಿಸಿಕೊಳ್ಳುವಂತಾಗಲಿ ಎಂದೂ ರಶೀದ್ ಆಶಯ ವ್ಯಕ್ತಪಡಿಸಿದರು.

ಮುಖ್ಯ ಭಾಷಣ ಮಾಡಿದ ಕರ್ನಾಟಕ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಬಹುಭಾಷೆಯ ಮಣ್ಣಿನಲ್ಲಿ ಇಂತಹ ಸಮ್ಮೇಳನಗಳು ನಡೆಯಬೇಕು ಎಂದು ಹೇಳಿದರಲ್ಲದೇ,. ಕೊಡಗಿನ ಭಾರತೀಸುತ, ಹುಲಿಯ ಹಾಲಿನ ಮೇವು, ಕೊಡಗಿನ ಗೌರಮ್ಮ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಚಿಕ್ಕವೀರರಾಜೇಂದ್ರ, ಬೂಕರ್ ಪ್ರಶಸ್ತಿ ಪಡೆದ ದೀಪಾಭಾಸ್ತಿ, ಯುವಕರಾಗಿರುವಾಗಲೇ ಅಪಾರ ಸಾಹಿತ್ಯ ಸಾಧನೆ ಮಾಡಿದ್ದ ಅಬ್ದುಲ್ ರಶೀದ್ ಸೇರಿದಂತೆ ಹಲವು ಸಾಹಿತಿಗಳ ಸಾಹಿತ್ಯ ಸಾಧನೆಯನ್ನು ಮಾನಸ ಸ್ಮರಿಸಿದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ, ಅಕಾಡೆಮಿ ವತಿಯಿಂದ ಮನೆಗಳಲ್ಲಿ ಸಾಹಿತ್ಯ ಕೃತಿಗಳ ಸಂಗ್ರಹಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪುಸ್ತಕ ಪತ್ತಾಯ ಎಂಬ ವಿನೂತನ ಯೋಜನೆ ಜಾರಿಗೊಳಿಸಿ ಸಾಹಿತ್ಯ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ ಎಂದರು.

ಪತ್ರಕರ್ತ ಅನಿಲ್ ಹೆಚ್.ಟಿ. ಮಾತನಾಡಿ, ಸರ್ವ ಜನಾಂಗದ ಸೌಹಾರ್ದತೆಗೆ ಕೊಡಗಿನಲ್ಲಿ ಹೆಸರುವಾಸಿಯಾಗಿರುವ ಸುಂಟಿಕೊಪ್ಪದವರೇ ಆದ ಅಬ್ದುಲ್ ರಶೀದ್ ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ, ಸಮ್ಮೇಳನದ ಮೌಲ್ಯ ಹೆಚ್ಚಿಸಲಾಗಿದೆ ಎಂದು ಶ್ಲಾಘಿಸಿದರು. ಮೈಸೂರು - ಬಸವನಹಳ್ಳಿ ನಡುವಿನ ಚತುಷ್ಪಥ ರಸ್ತೆನಿರ್ಮಾಣವಾದ ನಂತರ ಸುಂಟಿಕೊಪ್ಪ ಮತ್ತು ಮಡಿಕೇರಿ ನಗರಗಳು ತಮ್ಮ ಮೂಲ ಸೌಂದರ್ಯ ಕಳೆದುಕೊಳ್ಳುವ ಆಪಾಯವಿದೆ. ಅಭಿವೃದ್ಧಿ ಚಟುವಟಿಕೆಗಳು ಎಂದಿಗೂ ಮೂಲ ಸಂಸ್ಕೃತಿ, ಚಟುವಟಿಕೆಗಳಿಗೆ ಧಕ್ಕೆ ತರುವಂತಾಗಬಾರದು ಎಂದೂ ಅನಿಲ್ ಹೇಳಿದರು.

17 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ನೆರವಾದರನ್ನು ಕೊಡಗು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ. ಕೇಶವಕಾಮತ್, ಮತ್ತು ಪರಿಷತ್‌ನ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್ ಸ್ವರಿಸಿ ಗೌರವಿಸಿದರು. ಸಮ್ಮೇಳನದ ಆರ್ಥಿಕ ಸಮಿತಿ ಅಧ್ಯಕ್ಷ ಎ.ಲೋಕೇಶ್ ಕುಮಾರ್ ಮಾತನಾಡಿ, ಅನೇಕ ದಾನಿಗಳ ಕೊಡುಗೆಯಿಂದಾಗಿಯೇ ಸಮ್ಮೇಳನ ಅಭೂತಪೂರ್ವ ರೀತಿಯಲ್ಲಿ ಯಶಸ್ವಿಯಾಗಲು ಸಾಧ್ಯವಾಯಿತು ಎಂದರು.

ವೇದಿಕೆಯಲ್ಲಿ ಹೋಬಳಿ ಅಧ್ಯಕ್ಷ ಮತ್ತು ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ.ಎಫ್.ಸಬಾಸ್ಟಿನ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಪಿ.ಆರ್.ಸುನಿಲ್ ಕುಮಾರ್, ಗ್ರಾ.ಪಂ.ಅಭಿವೃದ್ಧಿಕಾರಿಗಳಾದ ವಿ.ಜಿ.ಲೋಕೇಶ್, ಬಿ.ಸಿ.ನಂದೀಶ್‌ಕುಮಾರ್, ಮಧುಮತಿಕೆ.ಎಲ್., ಆಸ್ಟಿ.ಯು., ಹಣಕಾಸು ಸಮಿತಿ ಸಂಚಾಲಕರಾದ ಮನು ಅಚ್ಚಮಯ್ಯ ವೇದಿಕೆ ನಿರ್ವಾಹಣ ಕೆ.ಎಸ್.ಅನಿಲ್‌ಕುಮಾರ್ ಸಂಚಾಲಕರಾದ ಅಬ್ದುಲ್ ನಿಯಾಜ್ ಸರ್ಣ ಸಂಚಿಕೆ ಸಮಿತಿ ಸಂಪಾದಕರಾದ ಬಿ.ಸಿ.ದಿನೇಶ್, ಸಹ ಸಂಪಾದಕರಾದ ವಿ.ಸುಲೈಮಾನ್, ಮೆರವಣಿಗೆ ಸಮಿತಿ ಅಧ್ಯಕ್ಷರಾದ ಎಂ.ಎಸ್. ಸುನಿಲ್, ಆಹಾರ ಸಮಿತಿ ಅಧ್ಯಕ್ಷರಾದ ಜಿ.ಬಿ.ಹರೀಶ್, ಅಲಂಕಾರ ಮತ್ತು ದ್ವಾರ ಸಮಿತಿ ಅಧ್ಯಕ್ಷರಾದ ಹೆಚ್.ಯು.ರಫೀಕ್ ಖಾನ್ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ಅಜ್ಜಿಕುಟ್ಟಿರ ಗಿರೀಶ್ ಇದ್ದರು.

ಉಪನ್ಯಾಸಕಿ ಪ್ರಮೀಳಾ ರೈ ಮತ್ತು ಎಸ್. ಕೆ.ಮಾಲಾದೇವಿ ನಿರೂಪಿಸಿ ವಂದಿಸಿದರು.

ಎನ್ ಎಂ ಪಿ ಎ ಇಂಡಿಯನ್ ಓಪನ್ ಸರ್ಫಿಂಗ್ 2026

ಕಮಲಿ ಮೂರ್ತಿ ಡಬಲ್ ಚಿನ್ನ



ಸುರತ್ಕಲ್: ತಣ್ಣೀರುಬಾವಿ ಬೀಚ್‌ನಲ್ಲಿ ನಡೆದ 7ನೇ ಎನ್‌ಎಂಪಿಎ ಇಂಡಿಯನ್ ಓಪನ್ ಸರ್ಫಿಂಗ್ 2026ರ ಅಂತಿಮ ದಿನ ತಮಿಳುನಾಡಿನ ಯುವ ಸರ್ಫರ್‌ಗಳ ಅಬ್ಬರಕ್ಕೆ ಸಾಕ್ಷಿಯಾಯಿತು.

ಕಮಲಿಗೆ ಡಬಲ್ ಕಿರೀಟ

ತಮಿಳುನಾಡಿನ 17 ವರ್ಷದ ಕಮಲಿ ಮೂರ್ತಿ ಮಹಿಳಾ ಓಪನ್ ಮತ್ತು ಯು-18 ಬಾಲಕಿಯರ ವಿಭಾಗದಲ್ಲಿ ಚಿನ್ನ ಗೆದ್ದು ಡಬಲ್ ಸಂಭ್ರಮ ಆಚರಿಸಿದರು. ಮಹಿಳಾ ಓಪನ್ ಫೈನಲ್‌ನಲ್ಲಿ 13.17 ಅಂಕ ಗಳಿಸಿದ ಅವರು, ಗೋವಾದ ಶುಗರ್ ಶಾಂತಿ ಬನಾರ್ಸೆ 11.73 ಅವರನ್ನು ಮಣಿಸಿದರು. ಗ-18 ಬಾಲಕಿಯರ ಫೈನಲ್‌ನಲ್ಲಿ 14.83 ಅಂಕಗಳೊಂದಿಗೆ ಮತ್ತೆ ಅಗ್ರಸ್ಥಾನ ಪಡೆದರು.

ಪುರುಷರ ವಿಭಾಗದಲ್ಲಿ ಕಿಶೋರ್ ಮೇಲುಗೈ

ಪುರುಷರ ಓಪನ್ ಫೈನಲ್‌ನಲ್ಲಿ ತಮಿಳುನಾಡಿನ ಕಿಶೋರ್ ಕುಮಾರ್ 15.20 ಅಂಕಗಳೊಂದಿಗೆ ಚಾಂಪಿಯನ್ ಆದರು. ಕೇರಳದ ರಮೇಶ್ ಬೂದಿಹಾಳ್ 12.87 ಎರಡನೇ ಸ್ಥಾನ ಪಡೆದರು.

ಕರ್ನಾಟಕಕ್ಕೆ ಒಂದೇ ಚಿನ್ನ

ಆತಿಥೇಯ ಕರ್ನಾಟಕಕ್ಕೆ ಯು-18 ಬಾಲಕರ ವಿಭಾಗದಲ್ಲಿ ಸ್ಥಳೀಯ ಸರ್ಫರ್ ಪ್ರದೀಪ್ ಪೂಜಾರ್ ಒಂದೇ ಚಿನ್ನ ತಂದುಕೊಟ್ಟರು. 12.17 ಅಂಕ ಗಳಿಸಿದ ಪ್ರದೀಪ್, ತಮಿಳುನಾಡಿನ ತಯಿನ್ ಅರುಣ್ 11.26 ಅವರನ್ನು ಹಿಂದಿಕ್ಕಿದರು.

ಯು-14 ಗ್ರೋಮ್ಸ್‌ನಲ್ಲಿ ಹೊಸ ಚಾಂಪಿಯನ್‌ಗಳು

ಮೊದಲ ಬಾರಿ ಸೇರಿಸಲಾದ ಯು-14 ವಿಭಾಗದಲ್ಲಿ ಕರ್ನಾಟಕದ ಹರೀಶ್ ಪಿ ಬಾಲಕರ ವಿಭಾಗದಲ್ಲಿ 17.23 ಅಂಕಗಳೊಂದಿಗೆ ಮತ್ತು ತಮಿಳುನಾಡಿನ ಧಮಯಂತಿ ಶ್ರೀರಾಮ್ ಬಾಲಕಿಯರ ವಿಭಾಗದಲ್ಲಿ 10.50 ಅಂಕಗಳೊಂದಿಗೆ ಚಾಂಪಿಯನ್ ಆದರು.

ಏಷ್ಯನ್ ಗೇಮ್ಸ್ ಆಯ್ಕೆಗೆ ಮಹತ್ವ

2026ರ ಐಚಿ-ನಾಗೋಯಾ ಏಷ್ಯನ್ ಗೇಮ್ಸ್‌ಗೆ ಭಾರತ ತಂಡದ ಆಯ್ಕೆಯಲ್ಲಿ ಈ ಕೂಟ ಪ್ರಮುಖ ಪಾತ್ರ ವಹಿಸಲಿದೆ. ಎನ್‌ಎಂಪಿಎ ಇಂಡಿಯನ್ ಓಪನ್, ಅಂಡಮಾನ್ ಟೆಟಲ್ ಪ್ರೋ, ಕೋಚಿಂಗ್ ಕ್ಯಾಂಪ್ ಮತ್ತು ಅಂತಾರಾಷ್ಟ್ರೀಯ ಪ್ರದರ್ಶನಗಳ ಆಧಾರದಲ್ಲಿ ತಂಡ ಆಯ್ಕೆಯಾಗಲಿದೆ.

ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಶನ್ ಆಯೋಜಿಸಿದ್ದ ಈ ಕೂಟಕ್ಕೆ ನ್ಯೂ ಮಂಗಳೂರು ಬಂದರು ಪ್ರಾಧಿಕಾರ ಮೂರನೇ ವರ್ಷವೂ ಪ್ರಾಯೋಜಕತ್ವ ನೀಡಿತ್ತು. ಮಂಗಳೂರಿನಲ್ಲಿ ಸರ್ಫಿಂಗ್ ಬೆಳವಣಿಗೆಗೆ ಇದು ಹೆಮ್ಮೆಯ ಕ್ಷಣ. ಪ್ರದೀಪ್ ಪೂಜಾರ್ ಅವರ ಗೆಲುವು ಗ್ರಾಸ್ ರೂಟ್ ಅಭಿವೃದ್ಧಿಯ ಫಲ ಎಂದು ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾದ ಉಪಾಧ್ಯಕ್ಷ ರಾಮ ಮೋಹನ್ ಪರಾಂಜಪೆ ಹೇಳಿದರು.

ಕಾರವಾರ - ಸುಬ್ರಹ್ಮಣ್ಯ ಬಸ್ ಸಮಸ್ಯೆ ವರದಿಗೆ ವಾಯುವ್ಯ ಸಾರಿಗೆ ಸ್ಪಂದನೆ

ಮಂಗಳೂರು: ಕಾರವಾರ - ಸುಬ್ರಹ್ಮಣ್ಯ ನಡುವೆ ಸಂಚರಿಸುವ ವಾಯುವ್ಯ ಸಾರಿಗೆ ಬಸ್ ಪದೇ ಪದೇ ದಾರಿಮಧ್ಯೆ ಕೆಟ್ಟು ನಿಂತು ಪ್ರಯಾಣಿಕರು ತೊಂದರೆ ಅನುಭವಿಸುತ್ತಿರುವ ಬಗ್ಗೆ ಹೊಸ ದಿಗಂತದಲ್ಲಿ ಮೇ 30 ರಂದು ಪ್ರಕಟಗೊಂಡ ವರದಿಗೆ ಎನ್ ಡಬ್ಲ್ಯೂ ಕೆಆರ್ ಟಿಸಿ ಶಿರಸಿ ವಿಭಾಗೀಯ ಕಚೇರಿ ಸ್ಪಂದಿಸಿದೆ.

ಕಾರವಾರ ಸುಬ್ರಹ್ಮಣ್ಯ ನಡುವೆ ಪ್ರತಿದಿನ ಸಂಚರಿಸುವ ಅಂಕೋಲ ಡಿಪೋದ ಎರಡೂ ವಾಯುವ್ಯ ಸಾರಿಗೆ ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸದಿರುವುದು, ಸುಬ್ರಹ್ಮಣ್ಯಕ್ಕೆ ತಡವಾಗಿ ಆಗಮಿಸುತ್ತಿರುವುದು, ದಾರಿ ಮಧ್ಯೆ ಪದೇ ಪದೇ ಕೆಟ್ಟು ನಿಲ್ಲುತ್ತಿರುವ ಬಗ್ಗೆ ಹೊಸ ದಿಗಂತ ವಿವರವಾದ ವರದಿ ಪ್ರಕಟಿಸಿತ್ತು. ಈ ವರದಿಗೆ ಸ್ಪಂದಿಸಿರುವ ಎನ್ ಡಬ್ಲ್ಯೂ ಕೆಆರ್ ಟಿಸಿ ಶಿರಸಿ ವಿಭಾಗೀಯ ಕಚೇರಿ ಅಧಿಕಾರಿಗಳು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ.

ಕಾರವಾರ ಸುಬ್ರಹ್ಮಣ್ಯ ನಡುವೆ ಸಂಚರಿಸುವ ಎರಡೂ ಬಸ್‌ಗಳು ಹಳೆಯದಾಗಿದ್ದು, ಎಂಜಿನ್ ಬಿಸಿಯಾಗುವ ಸಮಸ್ಯೆ ಇದೆ. ಈಗಾಗಲೇ ಒಂದು ಬಸ್‌ನ್ನು ರಿಪೇರಿ ನಡೆಸಲಾಗುತ್ತಿದೆ. ಇನ್ನು ಮುಂದೆ ಈ ರೂಟ್‌ನಲ್ಲಿ ನಿಗದಿತ ಸಮಯಕ್ಕೆ ಬಸ್ ಕಾರ್ಯಾಚರಣೆ ನಡೆಸುವಂತೆ ನಿಗಾ ವಹಿಸಲಾಗುವುದು. ಅಂಕೋಲ ಡಿಪೋದ ಈ ಬಸ್‌ಗಳ ಕಾರ್ಯಾಚರಣೆ ಬಗ್ಗೆ ಮುಂದಿನ ಒಂದು ವಾರಗಳ ಕಾಲ ವಿಭಾಗೀಯ ಕಚೇರಿ ಮೇಲ್ವಿಚಾರಣೆ ನಡೆಸಲಿದೆ. ಸುಬ್ರಹ್ಮಣ್ಯ ಕ್ಷೇತ್ರಕ್ಕೆ ತೆರಳುವ ಪ್ರಯಾಣಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಶಿರಸಿ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಚಂದ್ರಶೇಖರ್ ತಿಳಿಸಿದ್ದಾರೆ.

ಕಳಸಗುರಿಯ ನವಜ್ಯೋತಿ ಫ್ರೆಂಡ್ಸ್ ಕ್ಲಬ್‌ನಿಂದ ಸಮಾಜಸೇವೆ

ಚಿಕಿತ್ಸೆಗೆ, ವಿದ್ಯಾಭ್ಯಾಸಕ್ಕೆ ಧನ ಸಹಾಯ



ಮಂಗಳೂರು: ಕಳಸಗುರಿಯ ನವಜ್ಯೋತಿ ಫ್ರೆಂಡ್ಸ್ ಕ್ಲಬ್‌ನ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಸಹಾಯನಿಧಿಯ ಮೂಲಕ ಸುಮಾರು 2,50,000 ರೂಪಾಯಿ ಮೊತ್ತವನ್ನು ತೀರಾ ಕಷ್ಟದಲ್ಲಿ ಇದ್ದವರಿಗೆ ನೀಡಲಾಗಿತ್ತು. ನಂತರದ ದಿನದಲ್ಲಿ ಸುಮಾರು 75,000 ರೂಪಾಯಿ ಸಹಾಯಧನ ವಿತರಿಸಲಾಗಿದೆ.

ದಿ. ನಾರಾಯಣ ದೇವಾಡಿಗ ಯಾನೆ ಮುನ್ನ ಮತ್ತು ವಿಜಯಲಕ್ಷ್ಮಿ ದಂಪತಿಯಪುತ್ರಿಯಾದಭಾನುಪ್ರಿಯಾ ಅವರ ಮದುವೆ ಪ್ರಯುಕ್ತ 15,000 ಸಾವಿರ ಮೊತ್ತದ ಚೆಕ್ ಅವರ ಮನೆಗೆ ಹೋಗಿ ಕೊಡಲಾಯಿತು. ಅಸೌಖ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾಸ್ಕರ ಆಚಾರ್ಯ ಹೊಳೆಬದಿ ಅವರಿಗೆ 15,000 ರೂ. ಮೊತ್ತದ ಚೆಕ್ ಅನ್ನು ಗಂದಾಡಿ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ನೀಡಲಾಯಿತು. ಅಸೌಖ್ಯದಿಂದ ಆಸ್ಪತ್ರೆಯಲ್ಲಿ ಆಪರೇಶನ್ ಆಗಿ ಚಿಕಿತ್ಸೆ ಪಡೆಯುತ್ತಿರುವ ಕೃಷ್ಣ ಉಳಿಯ ಅವರಿಗೆ 15,000 ರೂ. ಮೊತ್ತದ ಚೆಕ್ ನೀಡಲಾಗಿದೆ. ಆಕ್ಸಿಡೆಂಟ್ ಆಗಿ ಚಿಕಿತ್ಸೆ ಪಡೆಯುತ್ತಿರುವ ರಂಜಿತ್ ಮತ್ತು ಸೌಮ್ಯ ದಂಪತಿ ಅವರಿಗೆ 15,000 ರೂ. ಮೊತ್ತದ ಚೆಕ್ ಅನ್ನು ಶಂಭೂರಿನಲ್ಲಿ ಇರುವ ಅವರ ಮನೆಗೆ ಹೋಗಿ ನೀಡಲಾಗಿದೆ. ಮೊನ್ನೆಯಷ್ಟೇ ವಿಧಿವಶರಾದ ರಮೇಶ ಅವರಿಗೆ ಕೊಡಲು ನಿರ್ಣಯ ಮಾಡಿದ 15,000 ರೂ. ಮೊತ್ತವನ್ನು ಅವರ ಪುತ್ರಿ ರಶ್ಮಿ ಅವರ ಹೆಸರಲ್ಲಿ ಎಫ್‌ಡಿ ಮಾಡಿ ಅದರ ಬಾಂಡ್ ಅನ್ನು ಅವರ ಮನೆಗೆ ಹೋಗಿ ನೀಡಲಾಯಿತು ಎಂದು ನವಜ್ಯೋತಿ ಫ್ರೆಂಡ್ಸ್ ಕ್ಲಬ್‌ನ ಅರುಣ್ ಶೆಟ್ಟಿ ತಿಳಿಸಿದ್ದಾರೆ.

ಅಕ್ರಮವಾಗಿ ಮರಳು ಸಾಗಾಟ ಪತ್ತೆ

ಬದಿಯಡ್ಕ: ಧರ್ಮತ್ತಡ್ಕ ಚೆಳ್ಳಂಗೈ ನದಿಯಿಂದ ಅಕ್ರಮವಾಗಿ ಮರಳು ಸಾಗಿಸಲಾಗುತ್ತಿದೆ ಎಂಬ ರಹಸ್ಯ ಮಾಹಿತಿಯ ಹಿನ್ನೆಲೆಯಲ್ಲಿ ಬದಿಯಡ್ಕ ಎಸ್‌ಐ ರೂಪೇಶ್ ನೇತೃತ್ವದ ಪೊಲೀಸ್ ತಂಡವು ಧರ್ಮತ್ತಡ್ಕದ ವೈ.ಸಿ. ರಸ್ತೆಯಲ್ಲಿ ನಡೆಸಿದ ತಪಾಸಣೆಯ ವೇಳೆ ನದಿಯಿಂದ ಮರಳನ್ನು ಸಾಗಿಸುತ್ತಿದ್ದ ಟಿಪ್ಪರ್ ಲಾರಿಯನ್ನು ವಶಪಡಿಸಲಾಗಿದೆ.

ಪೊಲೀಸರನ್ನು ಕಂಡ ಚಾಲಕ ಲಾರಿಯನ್ನು ನಿಲ್ಲಿಸಿ ಓಡಿ ಪರಾರಿಯಾಗಿದ್ದಾನೆ. ಬಳಿಕ ಲಾರಿಯನ್ನು ಪೊಲೀಸರು ಬದಿಯಡ್ಕ ಠಾಣೆಗೆ ಸಾಗಿಸಿದರು. ಆರ್‌ಸಿ ಮಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಸಲ್ಲ: ಶಾಸಕ ಭರತ್ ಶೆಟ್ಟಿ ಹೇಳಿಕೆ



ಕೈಕಂಬ: ಎಡಪದವು ಸಮೀಪದ ಬ್ರಿಂಡೆಲ್ ಶಾಲಾ ಬಳಿ ಸಾಮಾಜಿಕ ಕಾರ್ಯಕರ್ತ ಮೋರಿಸ್ ಪಿಂಟೋ ಒಡ್ಡೂರು ನೇತೃತ್ವದಲ್ಲಿ ಸ್ಥಳೀಯ ದಾನಿಗಳ ಸಹಕಾರದಲ್ಲಿ ನಿರ್ಮಿಸಲಾಗಿರುವ ಪ್ರಯಾಣಿಕರ ತಂಗುದಾಣವನ್ನು ಭಾನುವಾರ ಉದ್ಘಾಟಿಸಲಾಯಿತು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಾಸಕ ಡಾ.ವೈ. ಭರತ್ ಶೆಟ್ಟಿ ಮಾತನಾಡಿ, ಊರಿನ ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡಬಾರದು. ಜನರ ಸಮಸ್ಯೆಗಳಿಗೆ ಸಾಧ್ಯವಿದ್ದಷ್ಟು ನಾನು ಸ್ಪಂದಿಸಿದ್ದೇನೆ. ಅಭಿವೃದ್ಧಿಯ ವಿಚಾರದಲ್ಲಿ ರಾಜಕೀಯ ಮಾಡಿಲ್ಲ ಮತ್ತು ಧರ್ಮ ನೋಡಿಲ್ಲ. ರಾಜಕೀಯ ಮತ್ತು ಧರ್ಮ ರಹಿತವಾಗಿ ಎಲ್ಲರೂ ಒಟ್ಟು ಸೇರಿ ಪ್ರಯಾಣಿಕರಿಗೆ ತಂಗುದಾಣ ನಿರ್ಮಾಣ ಮಾಡಿದ ಕೆಲಸ ಶ್ಲಾಘನೀಯ ಎಂದ ಅವರು ತಂಗುದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣಕ್ಕೆ ನೆರವು ನೀಡುವ ಭರವಸೆ ನೀಡಿದರು.

ದಾನಿಗಳಿಗೆ ಸನ್ಮಾನ

ಎಡಪದವು ವಿವೇಕಾನಂದ ಕಾಲೇಜಿನ ಪ್ರಾಂಶುಪಾಲೆ ಗಾಯತ್ರಿ ನಾಯಕ್, ಪ್ರಾಥಶಾಲಾ ಮುಖ್ಯ ಶಿಕ್ಷಕ ವಾಸು. ಕೆ. ಮತ್ತು ಐಡಿಯಾಲ್ ಖಾಸಗಿ ಶಾಲೆಯ ಪ್ರಾಂಶುಪಾಲೆ ನಂದ ಉಮಾಪ್ರಿಯ ಗಡಿಯಾರ್ ಅವರನ್ನು ಮತ್ತು ದಾನಿಗಳನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಸ್ಮರಣಿಕೆ, ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.

ಮುತ್ತೂರು ಪಂ. ನಿಕಟಪೂರ್ವ ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ ಮಾತನಾಡಿದರು. ಕೆಪಿಸಿಸಿ ಸದಸ್ಯ ಆರ್. ಕೆ. ಪೃಥ್ವಿರಾಜ್ ಎಡಪದವು ಅಧ್ಯಕ್ಷತೆ ವಹಿಸಿದ್ದರು. ಎಡಪದವು ಪಂಚಾಯತ್ ನಿಕಟಪೂರ್ವ ಸದಸ್ಯ ಸುಕುಮಾರ್ ದೇವಾಡಿಗ, ಕುಶಾಲ್ ಕುಮಾರ್, ಗೀತಾ ನಾಯಕ್, ಹಿರಿಯರಾದ ಸಂಜೀವ ಶೆಟ್ಟಿ ಕಡೆಗುಂಡ್ಯ, ಉದ್ಯಮಿ ಗಣೇಶ್ ನಾಯಕ್, ನಾರಾಯಣ ಪೂಜಾರಿ,ಬಾಲಕೃಷ್ಣ ನಾಯಕ್, ಅಬ್ದುಲ್ ಹಮೀದ್, ನೋರ್ಬಟ್ ಮಥಾಯಸ್, ಗುರುನಾಥ ಶೆಟ್ಟಿ ಇದ್ದರು. ಗ್ರಾಮಸ್ಥರು ಪಾಲ್ಗೊಂಡಿದ್ದರು. ಚಂದ್ರಶೇಖರ ಎಡಪದವು ನಿರೂಪಿಸಿದರು. ಸುದರ್ಶನ್ ಕೊರ್ಡೇಲ್ ಸ್ವಾಗತಿಸಿ ವಂದಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-57) ಡ್ರಾ ಮೇ 24ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MH 328862 (MOOVATTUPUZHA)
Consolation Prize Rs.5,000/-
MA 328862 MB 328862 MC 328862 MD 328862
ME 328862 MF 328862 MG 328862 MJ 328862
MK 328862 ML 328862 MM 328862
2nd Prize Rs.25,00,000/- [25 Lakhs]
MG 716734 (VADAKARA)
3rd Prize Rs. 5,00,000/- [5 Lakhs]
MG 124524 (ATTINGAL)

FOR THE TICKETS ENDING WITH THE FOLLOWING NUMBERS

4th Prize Rs.5,000/-
0508 0544 1649 1709 1716 2680 2748 3160 4203 4942 5085 5489 5602 5777 5848 6610 7122 9353 9522
5th Prize Rs.2,000/-
0400 2539 7249 7670 7865 9143
6th Prize Rs.1,000/-
0078 0271 0760 0857 1298 1656 1770 1809 2421 3741 4461 5305 5399 5816 6067 7328 7429 7692 7757 8390 8652 8672 9584 9689 9713
7th Prize Rs.500/-
0268 0348 0408 0710 0716 0728 1140 1347 1369 1480 1489 1613 1615 1696 1738 1757 1975 2132 2521 2562 2610 2690 2866 3057 3161 3211 3366 3520 3569 3682 3703 3708 3786 3875 4224 4312 4350 4397 4474 4484 4577 5147 5254 5405 5677 5803 5966 6028 6033 6086 6182 6428 6461 6724 7055 7211 7420 7589 7591 8254 8426 8447 8541 8579 9025 9112 9295 9447 9556 9582 9650 9656 9705 9863 9875 9927
8th Prize Rs.200/-
0030 0172 0377 0416 0512 0607 0611 0803 1091 1138 1194 1399 1411 1517 1636 1950 1964 2032 2036 2137 2145 2466 2520 2595 2654 2717 2927 3111 3176 3406 3439 3493 3537 3590 3657 3734 3777 4280 4425 4452 4590 4659 4903 5122 5139 5273 5283 5310 5378 5453 5454 5462 5502 5520 5623 5705 6208 6554 6651 6729 7131 7151 7161 7276 7399 7524 7533 7558 7638 7645 7871 7913 7959 8043 8092 8159 8314 8504 8558 8708 8750 8822 8960 8980 9253 9306 9452 9655 9666 9678 9735 9869
9th Prize Rs.100/-
0058 0087 0106 0293 0300 0312 0322 0323 0444 0595 0619 0631 0675 0752 0808 0924 1124 1300 1323 1454 1571 1575 1645 1701 1730 1870 1900 1901 1949 2020 2106 2218 2220 2280 2338 2389 2390 2403 2452 2612 2658 2687 2831 2963 3078 3142 3245 3281 3333 3389 3415 3426 3524 3539 3678 3686 3727 3799 3805 3970 4106 4154 4260 4329 4368 4421 4442 4535 4575 4696 4809 5205 5240 5243 5294 5341 5373 5412 5616 5632 5641 5643 5654 5664 5682 5715 5768 6047 6220 6237 6274 6278 6495 6572 6619 6635 6757 6882 6892 6899 6926 7032 7096 7105 7163 7195 7221 7309 7368 7446 7493 7504 7687 7792 7808 7875 7904 7920 8068 8138 8218 8300 8320 8391 8439 8552 8591 8613 8655 8664 8687 8772 8896 8915 8968 9003 9211 9338 9398 9425 9532 9552 9592 9694 9799 9891 9906 9922 9928 9969

ಸರಕಾರಿ ಶಾಲೆಯೆಂಬ ಕೀಳರಿಮೆ ಸಲ್ಲದು: ಡಾ. ನರೇಂದ್ರ ಕಾಮತ್



ಉಳ್ಳಾಲ: ಸರಕಾರಿ ಶಾಲೆಯೆಂಬ ಕೀಳರಿಮೆ ಸಲ್ಲದು. ಸಾಧನೆಗೆ ಬಡತನ ಅಡ್ಡಿಯಾಗಲಾರದು.ತಾನು ಕೂಡ ಸರಕಾರಿ ಶಾಲೆಯಲ್ಲಿ ಕಲಿತು ಇಂದು ಓರ್ವ ವೈದ್ಯನಾಗಿದ್ದೇನೆ ಎಂದು ಡಾ.ನರೇಂದ್ರ ಕಾಮತ್ ಹೇಳಿದರು.

ಸೇವಾ ಭಾರತಿ ಸಂಯೋಜಿತ ಕುಂಪಲ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್,ಕೇಸರಿ ಮಿತ್ರ ವೃಂದ, ಕೇಸರಿ ಮಾತೃ ಮಂಡಳಿ ಇದರ ಆಶ್ರಯದಲ್ಲಿ ರೋಟರಿ ಕ್ಲಬ್ ಮಂಗಳೂರು, ರೋಟರಿ ಕ್ಲಬ್ ದೇರಳಕಟ್ಟೆ,ರೋಟರಿ ಸಮುದಾಯದಳ ಕುಂಪಲ, ಲಯನ್ಸ್ ಕ್ಲಬ್ ಸೋಮೇಶ್ವರ ಇವರ ಸಹಕಾರದಲ್ಲಿ ಕುಂಪಲದ ಕೇಸರಿ ಸಭಾಂಗಣದಲ್ಲಿ ಭಾನುವಾರದಂದು ನಡೆದ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ, ಕುಂಪಲ ಸರಕಾರಿ ಶಾಲೆಗೆ ಪೀಠೋಪಕರಣ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಕೇಸರಿ ಮಿತ್ರವೃಂದ ಟ್ರಸ್ಟ್ ಅಧ್ಯಕ್ಷ ಸುಧಾಕರ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ರೋಟರಿ ಕ್ಲಬ್ ಅಧ್ಯಕ್ಷ ವಿನೋದ್ ಆರಾಹ್ನ, ರೋಟರಿ ಕ್ಲಬ್ ದೇರಳಕಟ್ಟೆ ಅಧ್ಯಕ್ಷ ಡಾ.ಅನಂತನ್, ಸುಜೀರ್ ಪ್ರಸಾದ್ ನಾಯಕ್ ದೇವರಾಜ್ ಪೆರ್ನಾಂಡಿಸ್, ಪಿ.ಡಿ ವಿಕ್ರಮ್ ದತ್ತ, ದೇರಳಕಟ್ಟೆ ವಿದ್ಯಾರತ್ನ ಆಂಗ್ಲ ಮಾಧ್ಯಮ ಶಾಲಾ ಸಂಚಾಲಕ ರವೀಂದ್ರ ಶೆಟ್ಟಿ ಉಳಿದೊಟ್ಟು, ಶಶಿಕುಮಾರ್ ನಾಯರ್, ಕುಂಪಲ ಸರಕಾರಿಶಾಲಾಮುಖ್ಯೋಪಾಧ್ಯಾಯ ಚಂದ್ರಕಲಾ, ಕೇಸರಿ ಮಿತ್ರವೃಂದ ಮಾತೃಮಂಡಳಿ ಅಧ್ಯಕ್ಷ ದಿವ್ಯಾ ರಾಕೇಶ್ ಮೊದಲಾದವರು ಇದ್ದರು. ಕೇಸರಿ ಮಿತ್ರವೃಂದ ಟ್ರಸ್ಟ್ ಕಾರ್ಯದರ್ಶಿ ವೆಂಕಟೇಶ್ ಕುಂಪಲ ಸ್ವಾಗತಿಸಿ, ಟ್ರಸ್ಟ್ ಸ್ಥಾಪಕಾಧ್ಯಕ್ಷ ನಾರಾಯಣ ಕುಂಪಲ, ಸಮೃದ್ಧಿ ಶೆಟ್ಟಿ ನಿರೂಪಿಸಿದರು. ಪೂರ್ಣಿಮಾ ಗೌತಮ್ ವಂದಿಸಿದರು.

ಮಹಾಬೋಧಿ ಬ್ರೈನ್ಸ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಕೇಂದ್ರಕ್ಕೆ ಚಾಲನೆ

ಸಕಾಲಿಕ ಚಿಕಿತ್ಸೆಯಿಂದ ಜೀವ ಉಳಿವು

ಬೆಂಗಳೂರು: ಸೇವಾ ಮನೋಭಾವದ ಟ್ರೋಮಾ ಚಿಕಿತ್ಸಾ ಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾದರೆ. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಲಭ್ಯವಾಗಿಸಿ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಡಾ.ವೀರಪ್ಪ ಮೊಯ್ಲಿ ಹೇಳಿದರು.

ಜಯನಗರ 1ನೇ ಬ್ಲಾಕ್ ನಲ್ಲಿರುವ ಮಹಾಬೋಧಿ ಬ್ರೈನ್ಸ್ ಆಸ್ಪತ್ರೆಯಲ್ಲಿ ಹೊಸ ತುರ್ತು ಚಿಕಿತ್ಸಾ ಕೇಂದ್ರ ಉದ್ಘಾಟಿಸಿ ಮತನಾಡಿದ ಅವರು, ವೇಗ ಹಾಗೂ ಒತ್ತಡದ ಬದುಕಿನಲ್ಲಿ ಮನುಷ್ಯರಿಗೆ ಹಠಾತ್ ಆಘಾತಗಳು ಹೆಚ್ಚಾಗಿ ಎದುರಾಗುತ್ತಿದ್ದು, ಪ್ರಾಣಭೀತಿಯ ಪ್ರಕರಣಗಳು ಸರ್ವೇ ಸಾಮಾನ್ಯವಾಗುತ್ತಿವೆ. ಅಪಘಾತ ಹಾಗೂ ಅಪಾಯಕಾರಿ ಸನ್ನಿವೇಶದಲ್ಲಿ ಜೀವ ಉಳಿಸಲು ನೆರವಾಗುವ ಇಂತಹ ಟ್ರೋಮಾ ಸೆಂಟರ್ ಗಳ ಅಗತ್ಯ ಇಂದು ಬಹಳವಾಗಿದೆ ಎಂದರು.

ಜ್ಞಾನ, ಪ್ರೀತಿ ಹಾಗೂ ಕರುಣೆಯ ಬುದ್ಧನ ತತ್ವಗಳನ್ನು ಅಳವಡಿಸಿಕೊಂಡು ಮಹಾಬೋಧಿ ಆಸ್ಪತ್ರೆಯು ಸೇವಾ ನಿರತವಾಗಿದೆ ಎಂದು ಶ್ಲಾಘಿಸಿ, ಕಾರ್ಪೊರೇಟ್ ಆಸ್ಪತ್ರೆಗಳ ಚಿಕಿತ್ಸೆ ದುಬಾರಿಯಾಗುತ್ತಿರುವ ಸನ್ನಿವೇಶದಲ್ಲಿ ಸೇವಾ ಮನೋಭಾವ ದಿಂದ ಅತ್ಯಾಧುನಿಕ ತುರ್ತು ಚಿಕಿತ್ಸಾ ಸೆಂಟರ್ ಆರಂಭಿಸಿರುವುದು ಸ್ವಾಗತಾರ್ಹ ಎಂದರು.



ಹೆಸರಾಂತ ನರಶಸ್ತ್ರಚಿಕಿತ್ಸಕ ಡಾ.ಎನ್.ಕೆ.ವೆಂಕಟರಮಣ ಮಾತನಾಡಿ, ಮನುಷ್ಯರ ಮನಸ್ಸು ಮತ್ತು ಮೆದುಳು ಸರಿಯಾಗಿದ್ದರೆ ಇಡೀ ಸಮಾಜವು ಆರೋಗ್ಯ ಹಾಗೂ ನೆಮ್ಮದಿಯಿಂದ ಇರುತ್ತದೆ. ಇದು ಬುದ್ಧನ ತತ್ವವೂ ಆಗಿದೆ ಎಂದರು.

ಮಹಾಬೋಧಿ ಸೊಸೈಟಿಯ ಆಚಾರ್ಯ ಬುದ್ಧ ರಕ್ಷಿತ, ಕಸ್ಸಪ ಮಹಾತೇರ, ಆನಂದ ಭಂತೇಜಿ, ಶ್ರೀರಾಮ್ ರೂಪನಗುಂಟ, ನರ ಶಸ್ತ್ರಚಿಕಿತ್ಸಕ ಡಾ.ಜಿ.ನಾರಾಯಣ ರೆಡ್ಡಿ, ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮನೋಜ್ ರಾಜನ್ ಸೇರಿದಂತೆ ಇತರರಿದ್ದರು. ಮಹಾಬೋಧಿ ಸೊಸೈಟಿಯ ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಬೌದ್ಧ ಬಿಕ್ಕುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಅಗ್ನಿವೀರರ ನಿರ್ಗಮನ ಪರೇಡ್

ಬೆಂಗಳೂರು: ಕಠಿಣ ಮಿಲಿಟರಿ ತರಬೇತಿಯನ್ನು ಯಶಸ್ವಿ ಯಾಗಿ ಪೂರ್ಣಗೊಳಿಸಿದ 2,181 ಅಗ್ನಿವೀರರು ಮದ್ರಾಸ್ ಎಂಜಿನಿ ಯರಿಂಗ್ ಗ್ರೂಪ್ ಸೆಂಟರ್‌ನ ಪರೇಡ್ ಮೈದಾನದಲ್ಲಿ ಶನಿವಾರ ಪಾಸಿಂಗ್ ಔಟ್ ಪೆರೇಡ್ (ಪಿಒಪಿ) ನಡೆಸಿದರು. ಐಕಾನಿಕ್ ಗೋವಿಂದಸ್ವಾಮಿ ಡ್ರಿಲ್ ಸ್ಕ್ವೇರ್‌ನಲ್ಲಿ ನಡೆದ ವಿಧ್ಯುಕ್ತ ಪೆರೇಡ್ ಮಿಲಿಟರಿ ನಿಖರತೆ ಮತ್ತು ಶಿಸ್ತಿನ ಭವ್ಯ ಪ್ರದರ್ಶನವಾಗಿತ್ತು. ಅಗ್ನಿವೀರರು ಮಿಲಿಟರಿ ಬ್ಯಾಂಡ್‌ನ ರೋಮಾಂಚಕ ರಾಗಗಳಿಗೆ ಪರಿಪೂರ್ಣ ಸಿಂಕ್ರೊನೈಸೇಶನ್ ನಲ್ಲಿ ಮೆರವಣಿಗೆ ನಡೆಸಿದರು. ಈ ಪಾಸಿಂಗ್ ಔಟ್ ಪೆರೇಡ್‌ನಲ್ಲಿ ಮದ್ರಾಸ್ ಎಂಜಿನಿಯರ್ ಗ್ರೂಪ್ ಮತ್ತು ಸೆಂಟರ್‌ನ ಕಮಾಂಡೆಂಟ್ ಬ್ರಿಗೇಡಿಯರ್ ಅಜಯ್ ಸಿಂಗ್ ಠಾಕೂರ್ ಭಾಗವಹಿಸಿ, ಮಿಲಿಟರಿ ಜೀವನದಲ್ಲಿ ಶಿಸ್ತು, ಸಮಗ್ರತೆ, ಧೈರ್ಯ ಮತ್ತು ಬದ್ಧತೆಯ ಮುಖ್ಯವಾಗಿದೆ. ಭವಿಷ್ಯದ ಎಲ್ಲಾ ನಿಯೋಜನೆಗಳಲ್ಲಿ ಭಾರತೀಯ ಸೇನೆಯ ಮೌಲ್ಯಗಳು ಮತ್ತು ಸಂಪ್ರದಾಯ ಗಳನ್ನು ಎತ್ತಿಹಿಡಿಯಬೇಕು ಎಂದು ಕರೆ ನೀಡಿದರು. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ಅಗ್ನಿವೀರರನ್ನು ಅಭಿನಂದಿಸಿ ದರು. ಇದೇ ವೇಳೆ ಪಾಸಿಂಗ್ ಔಟ್ ಅಗ್ನಿವೀರರ ಹೆಮ್ಮೆಯ ಪೋಷಕರಿಗೆ ಗೌರವ ಪದಕ ನೀಡಲಾಯಿತು.



ಭೇಟಿ



ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿಕ್ರಂ ನಾಥ್ ಅವರು ಭಾನುವಾರ ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರದಲ್ಲಿನ ಶಿಶುಪಾಲನಾ ಕೇಂದ್ರಕ್ಕೆ ಭೇಟಿ ನೀಡಿ ಕೈದಿಗಳ ಜತೆ ಮಾತುಕತೆ ನಡೆಸಿದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು, ನ್ಯಾಯಮೂರ್ತಿಗಳಾದ ಅನು ಸಿವರಾಮನ್, ಸೂರಜ್ ಗೋವಿಂದರಾಜು, ಜಿ. ಬಸವರಾಜು, ಕಾರಾಗೃಹ ಇಲಾಖೆ ಮಹಾನಿರ್ದೇಶಕ ಅಲೋಕ್ ಕುಮಾರ್ ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರಿಯಾಕೃಷ್ಣಗೆ ಸಚಿವ ಸ್ಥಾನಕ್ಕೆ ಆಗ್ರಹ

ಬೆಂಗಳೂರು: ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅಥವಾ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಿಯಾಕೃಷ್ಣ ಅವರಿಗೆ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವ ಸ್ಥಾನ ನೀಡುವಂತೆ ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್ ರಾಜ್ಯಾಧ್ಯಕ್ಷ ಸಿ.ವಿ.ದೇವರಾಜ್ ಒತ್ತಾಯಿಸಿದ್ದಾರೆ. ವಿಜಯನಗರ ಕ್ಷೇತ್ರದ ಶಾಸಕ ಎಮ್.ಕೃಷ್ಣಪ್ಪ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಿಯಾಕೃಷ್ಣ ಜನಸಾಮಾನ್ಯರ ಪರ ಕಾಳಜಿಯುಳ್ಳ ಪ್ರಾಮಾಣಿಕ ರಾಜಕಾರಣಿಗಳಾಗಿದ್ದಾರೆ. ಇವರ ಪಕ್ಷ ನಿಷ್ಠೆ ಪ್ರಶ್ನಾರ್ಹ. ಎಮ್.ಕೃಷ್ಣಪ್ಪ ಹಾಗೂ ಪ್ರಿಯಾಕೃಷ್ಣ ಅವರು ಪಕ್ಷಕ್ಕೆ ಹಾಗೂ ಕ್ಷೇತ್ರದ ಜನತೆಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಸಿ.ವಿ.ದೇವರಾಜ್ ಆಗ್ರಹಿಸಿದ್ದಾರೆ



ಪಾಲಿಕೆಯ ವಿವಿಧ ಕಚೇರಿಗಳ ಸ್ಥಳಾಂತರ

ಬೆಂಗಳೂರು: ಕೇಂದ್ರ ನಗರ ಪಾಲಿಕೆಯ ಸಹಾಯಕ ನಿರ್ದೇಶಕರು ನಗರ ಯೋಜನೆ ವಲಯ–2 ಮತ್ತು ಉಪ ನಿರ್ದೇಶಕರು ನಗರ ಯೋಜನೆ ವಲಯ–2 ಅವರು ಕಚೇರಿಯನ್ನು ಅನೆಕ್ಸ್ ಕಟ್ಟಡ–03ರ 4ನೇ ಮಹಡಿಯ ಕೊಠಡಿ ಸಂಖ್ಯೆ:407, ರಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿದ್ದು, ಸ್ಥಳದ ಅಭಾವದಿಂದ ಇದೇ ಅನೆಕ್ಸ್ ಕಟ್ಟಡ–3, 1ನೇ ಮಹಡಿಯ ಕೊಠಡಿ ಸಂಖ್ಯೆ: 106ಕ್ಕೆ ಸ್ಥಳಾಂತರಿಸಲಾಗಿದೆ ಎಂದು ಪಾಲಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಖಾಸಗಿ ಬ್ಯಾಂಕ್ ಭದ್ರತಾ ಸಿಬ್ಬಂದಿ ಆತ್ಮಹತ್ಯೆ

ಬೆಂಗಳೂರು: ಖಾಸಗಿ ಬ್ಯಾಂಕ್‌ವೊಂದರ ಭದ್ರತಾ ಸಿಬ್ಬಂದಿಯೊಬ್ಬ ಅದೇ ಬ್ಯಾಂಕಿನ ಆವರಣದಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಜಾಜಿನಗರದಲ್ಲಿ ನಡೆದಿದೆ. ಬಿಹಾರ ಮೂಲದ ಆತ್ಮಹತ್ಯೆ ಮಾಡಿಕೊಂಡ ಭದ್ರತಾ ಸಿಬ್ಬಂದಿ ಪಿಂಟು(22), ನಗರದ ಹರಿಶ್ಚಂದ್ರ ಘಾಟ್ ಬಳಿಯ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿಯೇ ಪಿಂಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸದ್ಯ, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜೂ.16ರಿಂದ ವಿಜ್ಞಾನ ಅಕಾಡೆಮಿಯಿಂದ ಕಾರ್ಯಾಗಾರ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಉನ್ನತ ಬೌದ್ಧಿಕ ಆಸ್ತಿ ಹಕ್ಕುಗಳ ಪ್ರಮಾಣ ಪತ್ರ ವಿಷಯ ಕುರಿತು ಜೂ.16ರಿಂದ 20ರವರೆಗೆ ಐದು ದಿನಗಳ ಕಾಲ ತರಬೇತಿ ಕಾರ್ಯಾಗಾರವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಾಗಾರದಲ್ಲಿ ನಾನಾ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರ ಜ್ಞಾನಿಗಳು ಉಪನ್ಯಾಸ ನೀಡಲಿದ್ದು, ಆಸಕ್ತ ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು, ವಿಜ್ಞಾನಾಸಕ್ತರು ಹಾಗೂ ಕೈಗಾರಿಕೋದ್ಯಮ ಪ್ರತಿನಿಧಿಗಳು ಭಾಗವಹಿಸಬಹುದಾಗಿದೆ. ಆಸಕ್ತರು ಜೂ.12 ರೊಳಗಾಗಿ ಲಿಂಕ್ ಮೂಲಕ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಮೊ.9743084194 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಘನ ತ್ಯಾಜ್ಯ ನಿರ್ವಹಣೆ ನಿಯಮ ಅನುಷ್ಠಾನ ಕುರಿತು ಸಭೆ | ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸಲಹೆ

ತ್ಯಾಜ್ಯ ನಿರ್ವಹಣೆಗೆ ಮ್ಯಾಪಿಂಗ್ ವ್ಯವಸ್ಥೆ

ಬೆಂಗಳೂರು: ಘನ ತ್ಯಾಜ್ಯ ನಿರ್ವಹಣೆ ನಿಯಮಗಳು–2026ರ ಹೊಸ ನಿಯಮಗಳ ಪ್ರಕಾರ ನಾಲ್ಕು ರೀತಿಯ ವಿಂಗಡಣೆಯನ್ನು ಜಾರಿಗೆ ತರಬೇಕು. ವಿಂಗಡಿಸಿದ ಕಸವನ್ನು ಪ್ರತ್ಯೇಕವಾಗಿ ಸಂಸ್ಕರಣಾ ಘಟಕಗಳಿಗೆ ತಲುಪಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಮಗ್ರ ಮೇಲ್ವಿಚಾರಣಾ ತಂತ್ರಜ್ಞಾನ ಹಾಗೂ ಮ್ಯಾಪಿಂಗ್ ವ್ಯವಸ್ಥೆ ರೂಪಿಸಬೇಕೆಂದು ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.

ವಿಧಾನಸೌಧದಲ್ಲಿ ಘನ ತ್ಯಾಜ್ಯ ನಿರ್ವಹಣೆ ನಿಯಮಗಳು–2026ರ ಅನ್ವಯ ರಾಜ್ಯದಲ್ಲಿ ಅನುಷ್ಠಾನದ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಈಗಾಗಲೇ ದೇಶದ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ, ಘನ ತ್ಯಾಜ್ಯ ನಿರ್ವಹಣೆ ನಿಯಮಗಳು–2026ರ ಕಟ್ಟುನಿಟ್ಟಿನ ಜಾರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಸುಮಾರು 4,000 ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಸ್ವ–ಸಹಾಯ ಗುಂಪುಗಳನ್ನು ಸ್ವಚ್ಛತಾ ವಾಹಿನಿಗಳನ್ನಾಗಿ ಯಶಸ್ವಿಯಾಗಿ ನಿಯೋಜಿಸಲಾಗಿದೆ. ಇದನ್ನು ರಾಜ್ಯದ ಎಲ್ಲಾ 6,000 ಗ್ರಾಮ ಪಂಚಾಯತ್‌ಗಳಿಗೂ ವಿಸ್ತರಿಸಿ, ಅವರಿಗೆ ಘನ ತ್ಯಾಜ್ಯ ನಿರ್ವಹಣೆ ನಿಯಮಗಳ ಬಗ್ಗೆ ಸೂಕ್ತ ತರಬೇತಿ ನೀಡಬೇಕೆಂದು ಹೇಳಿದರು.

ಆನ್‌ಲೈನ್ ನೋಂದಣಿ: ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಬೇಕು. ಅವರು ಎಷ್ಟು ತ್ಯಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣೆ ಮಾಡುತ್ತಿದ್ದಾರೆ ಮತ್ತು ಎಷ್ಟು ಬಾಕಿ ಉಳಿದಿದೆ ಎಂಬ ಬಗ್ಗೆ ಐಇಸಿ ಮೂಲಕ ಅವರಿಗೆ ಸ್ಪಷ್ಟ ತಿಳುವಳಿಕೆ ನೀಡಬೇಕು. ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗುವ ಸ್ಥಳಗಳಲ್ಲಿ ವೈಜ್ಞಾನಿಕ ಕಸ ವಿಂಗಡಣೆಗೆ ಆದ್ಯತೆ ನೀಡಬೇಕು.ಬಿಡಬ್ಲ್ಯೂಜಿ ಗಳು ಸ್ವತಃ ಜೈವಿಕ ಶಕ್ತಿ ಉತ್ಪಾದನಾ ಘಟಕಗಳನ್ನು ನಿರ್ಮಿಸಿಕೊಳ್ಳಲು ಪ್ರೇರೇಪಿಸಬೇಕೆಂದು ತಿಳಿಸಿದರು.



ವೇಸ್ಟ್ ಟು ಎನರ್ಜಿ

ಪ್ಲಾಸ್ಟಿಕ್ ಬಾಟಲ್ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಮತ್ತು ಬಯೋ-ಮೆಡಿಕಲ್ ತ್ಯಾಜ್ಯಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಎಂಪಾನಲ್ ಆಗಿರುವ ಅಧಿಕೃತ ಏಜೆನ್ಸಿಗಳ ಮೂಲಕ ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಈ ಕ್ಷೇತ್ರಕ್ಕೆ ಖಾಸಗಿ ಉದ್ಯಮಿಗಳನ್ನು ಒಳಗೊಂಡು ವೇಸ್ಟ್ ಟು ಎನರ್ಜಿ ಮತ್ತು ವೇಸ್ಟ್ ಟು ವೆಲ್ತ್ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಡಾ. ಶಾಲಿನಿ ರಜನೀಶ್ ತಿಳಿಸಿದರು.

> ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ, ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕರ್ನಾಟಕವನ್ನು ದೇಶದಲ್ಲೇ ಮಾದರಿ ರಾಜ್ಯವನ್ನಾಗಿ ಮಾಡಲು ಶ್ರಮಿಸಬೇಕು.
>
> ■ ಡಾ. ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ

- ಹಸಿ ಕಸವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ದ್ರವ ತ್ಯಾಜ್ಯದ ನಿರ್ವಹಣೆಗಾಗಿ ಒಳಚರಂಡಿ ನೀರಿನ ಮರುಬಳಕೆ ನೀತಿ ಬಳಕೆ
- ಪರಿಸರಕ್ಕೆ ಮಾರಕವಾಗಿರುವ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಲು ಹಸಿರು ಉತ್ಪನ್ನಗಳನ್ನು ಉತ್ಪಾದಿಸುವ ಉದ್ಯಮಿಗಳಿಗೆ ಪ್ರೋತ್ಸಾಹ
- ರಾಜ್ಯದ 5,959 ಗ್ರಾಮಪಂಚಾಯಿತಿಗಳಲ್ಲಿ ಎಸ್‌ವಿಎಂ ಘಟಕಗಳ ನಿರ್ಮಾಣ
- ಪ್ರತಿವರ್ಷ 4,252 ಟಿಪಿಡಿ ಸಂಸ್ಕರಣಾ ಸಾಮರ್ಥ್ಯ ಹೊಂದಿರುವ ಕಸ ವಿಲೇವಾರಿ
- ರಾಜ್ಯದಲ್ಲಿ ಒಟ್ಟು 7,312 ತ್ಯಾಜ್ಯ ಸಂಗ್ರಹಣಾ ವಾಹನಗಳು ಸಕ್ರಿಯ
- 16,992 ಗ್ರಾಮಗಳಲ್ಲಿ ಒಣ ಕಸ ಸಂಗ್ರಹಣೆಗಾಗಿ ವ್ಯವಸ್ಥಿತ ಕ್ರಮ
- ★ಪಂಚಾಯತ್ ಮಟ್ಟದಲ್ಲಿ ಒಟ್ಟು 5,501 ಸ್ವಚ್ಛ ವಾಹಿನಿಗಳ ನಿಯೋಜನೆ

ಬಿಟ್ಕಾಯಿನ್ ಹಗರಣ ಪ್ರಕರಣ: ಗೈರು ಹಿನ್ನೆಲೆಯಲ್ಲಿ ಕ್ರಮ

ಮೊಹಮ್ಮದ್ ನಲಪಾಡ್‌ಗೆ ಇಡಿ ನೋಟಿಸ್

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯಾದ್ಯಂತ ಸಂಚಲನ ಸೃಷ್ಟಿಸಿದ್ದ ಬಿಟ್ಕಾಯಿನ್ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಎನ್.ಎ.ಹ್ಯಾರಿಸ್ ಅವರ ಪುತ್ರ ಮೊಹಮ್ಮದ್ ನಲಪಾಡ್‌ಗೆ ಮತ್ತೆ ಸಂಕಷ್ಟ ಎದುರಾಗಿದೆ. ಜೂ.1ರಂದು ವಿಚಾರಣೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ ಸಮನ್ಸ್ ನೀಡಿದೆ.

ನಲಪಾಡ್ ವಿಚಾರಣೆಗೆ ಹಾಜರಾಗುವಂತೆ ಹಿಂದಿನ ಶುಕ್ರವಾರವೇ ಇಡಿ ಸಮನ್ಸ್ ಜಾರಿಗೊಳಿಸಿತ್ತು. ಆದರೆ, ರಾಜಕೀಯ ಕಾರ್ಯಕ್ರಮ ಹಿನ್ನೆಲೆ ಮೊದಲ ನೋಟಿಸ್ ನಲಪಾಡ್ ಹಾಜರಾಗಿರಲಿಲ್ಲ. ಕಾರಣ ತಿಳಿಸಿ ಇಡಿಗೆ ಮನವಿ ಮಾಡಿದ್ದರು. ಇದೀಗ ಎರಡನೇ ಬಾರಿ ಇಡಿ ನೋಟಿಸ್ ಜಾರಿ ಮಾಡಿದ್ದು ಸೋಮವಾರ(ಜೂ.1) ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿ ತನಿಖೆಯನ್ನು ತೀವ್ರಗೊಳಿಸಿದೆ.

ಇತ್ತೀಚೆಗಷ್ಟೇ ಬಿಟ್ ಕಾಯಿನ್ ಬಹುಕೋಟಿ ಹಗರಣ ಪ್ರಕರಣದಲ್ಲಿ ಅಶೋಕನಗರದಲ್ಲಿರುವ ನಲಪಾಡ್ ಮನೆ ಹಾಗೂ ಶ್ರೀಕಿ ಮನೆ ಮೇಲೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ ಸತತ 21ಗಂಟೆಗಳ ಶೋಧ ಕಾರ್ಯ ನಡೆಸಿತ್ತು. ಈ ವೇಳೆ ಹಾರ್ಡ್‌ಡಿಸ್ಕ್, ವಿದೇಶಿ ವ್ಯವಹಾರದ ಬ್ಯಾಂಕ್ ದಾಖಲೆಯನ್ನು ವಶಕ್ಕೆ ಪಡೆದುಕೊಂಡಿತ್ತು.

ಈ ಪ್ರಕರಣ ಸಂಬಂಧ ಈಗಾಗಲೇ ಇಡಿ ಅಧಿಕಾರಿಗಳು ಶ್ರೀಕಿ, ಸುನೇಶ್ ಹೆಗ್ಡೆ, ರಾಬಿನ್ ಖಂಡೇವಾಲ ಅವರನ್ನು ಬಂಧಿಸಿದ್ದಾರೆ. ಕೆಲ ವರ್ಷಗಳ ಹಿಂದೆ ಬಿಟ್ ಕಾಯಿನ್ ಹಗರಣ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿತ್ತು. ಇದರಲ್ಲಿ ಕೆಲವು ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬ ಅನುಮಾನ ದಟ್ಟವಾಗಿತ್ತು. ಈ ಹಗರಣದ ಸೂತ್ರಧಾರ ಎನ್ನಲಾಗಿದ್ದ ಶ್ರೀಕೃಷ್ಣ ಯಾನೆ ಶ್ರೀಕಿ ಎಂಬಾತನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದರು.

ಪತ್ರಕರ್ತರಿಗಾಗಿ ನೇತ್ರ ತಪಾಸಣಾ ಉಚಿತ ಶಿಬಿರ

ಕಣ್ಣಿನ ಆರೋಗ್ಯ ಬಗ್ಗೆ ಜಾಗ್ರತೆ ಇರಲಿ

ಬೆಂಗಳೂರು: ಪತ್ರಕರ್ತರ ವೃತ್ತಿಯಲ್ಲಿ ಕಣ್ಣಿನ ಆರೋಗ್ಯ ಅತ್ಯಂತ ಮಹತ್ವದ್ದಾಗಿದೆ ಎಂದು ಬೆಂಗಳೂರು ಕಾರ್ಯನಿರತ ಪತ್ರಕರ್ತರ ಸಂಘ ಸಂಘದ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ ಅಭಿಪ್ರಾಯ ಪಟ್ಟರು.

ಬೆಂಗಳೂರು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಅಪ್ಟಿಕ್ ಕ್ರಾಫ್ಟ್ ಸಹಯೋಗದಲ್ಲಿ ಪತ್ರಕರ್ತರಿಗಾಗಿ ಉಚಿತ ನೇತ್ರ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರ ವೃತ್ತಿಯಲ್ಲಿ ನಿರಂತರ ಓದು, ಬರವಣಿಗೆ ಹಾಗೂ ಡಿಜಿಟಲ್ ಪರದೆಗಳ ಬಳಕೆಯಿಂದ ಕಣ್ಣಿನ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಆದರೆ ಬಿಡುವಿಲ್ಲದ ಕಾರ್ಯಭಾರದ ನಡುವೆ



ಹಲವಾರು ಪತ್ರಕರ್ತರು ತಮ್ಮ ಆರೋಗ್ಯದ ಕಡೆ ನಿರ್ಲಕ್ಷ್ಯ ವಹಿಸುತ್ತಾರೆ. ಪತ್ರಕರ್ತರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ವಿಶೇಷವಾಗಿ ಕಣ್ಣು ತಪಾಸಣೆ ಸೇರಿದಂತೆ ದೇಹದ ಸಮಗ್ರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದವರು ಸಲಹೆ ನೀಡಿದರು.

ಅಪ್ಟಿಕ್ ಕ್ರಾಫ್ಟ್ ಹಲವು ವರ್ಷಗಳಿಂದ ಉಚಿತ ಕಣ್ಣು ತಪಾಸಣೆ, ಕಣ್ಣಿನ ಚಿಕಿತ್ಸೆ ಹಾಗೂ ಉಚಿತ ಕನ್ನಡಕ ವಿತರಣೆ ಮೂಲಕ ಸಮಾಜಮುಖಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಪತ್ರಕರ್ತರಿಗಾಗಿ ಇಂತಹ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಜಯಕುಮಾರ್ ಗೌಡ, ನಗರ ಘಟಕದ ಅಧ್ಯಕ್ಷ ಸೋಮಶೇಖರ್ ಗಾಂಧಿ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಆರ್.ರವೀಶ್, ಅಪ್ಟಿಕ್ ಕ್ರಾಫ್ಟ್ ಮುಖ್ಯಸ್ಥ ಪ್ರಿಯೇಶ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ. ಸಿ. ಲೋಕೇಶ್, ರಾಜ್ಯ ಉಪಾಧ್ಯಕ್ಷ ಪುಂಡಲೀಕ ಬಾಳೋಜಿ ಇತರರಿದ್ದರು.

ಘನ ತ್ಯಾಜ್ಯ ನಿರ್ವಹಣೆಯಲ್ಲಿ ಅಕ್ರಮ: ಆರೋಪ

ತುರ್ತು ತನಿಖೆಗೆ ಕರಂದ್ಲಾಜೆ ಪತ್ರ

ಬೆಂಗಳೂರು: ನಗರದ ಸಮಗ್ರ ಘನತ್ಯಾಜ್ಯ ನಿರ್ವಹಣಾ ಟೆಂಡರ್ ಪ್ರಕ್ರಿಯೆಯಲ್ಲಿ ಸುಮಾರು 39,437 ಕೋಟಿ ರೂ. ಸಾರ್ವಜನಿಕ ವೆಚ್ಚವನ್ನು ಒಳಗೊಂಡ ಗಂಭೀರ ಅಕ್ರಮಗಳ ಆರೋಪಗಳ ಹಿನ್ನೆಲೆ, ತುರ್ತು ತನಿಖೆಗೆ ಕೈಗೊಳ್ಳಬೇಕೆಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಗಂಭೀರ ಪ್ರಕ್ರಿಯಾತ್ಮಕ ಲೋಪಗಳು, ಹಣಕಾಸು ಅಕ್ರಮಗಳು, ಕಾನೂನು ಉಲ್ಲಂಘನೆಗಳು ಹಾಗೂ ಆಡಳಿತಾತ್ಮಕ ಪಕ್ಷಪಾತದ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ವಿಶೇಷವಾಗಿ ಹಣಕಾಸು ಇಲಾಖೆಯ ಸ್ಪಷ್ಟ ಆಕ್ಷೇಪಣೆ ಮತ್ತು ತಿರಸ್ಕಾರವಿದ್ದರೂ ಪ್ರಸ್ತಾವನೆಯನ್ನು ಮುಂದಕ್ಕೆ ತೆಗೆದುಕೊಂಡು ಅನುಮೋದಿಸಿರುವುದು ಪಾರದರ್ಶಕತೆ ಮತ್ತು ಕಾನೂನುಬದ್ಧತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

- ಡಿಪಿಆರ್ ಸಲಹೆಗಾರರನ್ನು ಕಾನೂನುಬಾಹಿರವಾಗಿ ಬದಲಾಯಿಸಿರುವ ಆರೋಪ
- ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಅರ್ಹತಾ ಮಾನದಂಡಗಳಲ್ಲಿ ಅಸ್ಪಷ್ಟ ಬದಲಾವಣೆ
- ಪಾರದರ್ಶಕತಾ ನಿಯಮಗಳ ಅಡಿಯಲ್ಲಿ ಕಡ್ಡಾಯ ಪ್ರಕಟಣಾ ನಿಯಮಗಳ ಉಲ್ಲಂಘನೆ.

ಇ–ಖಾತಾ, ನನ್ನ ಹಕ್ಕು ಅಭಿಯಾನಕ್ಕೆ ಭರ್ಜರಿ ಸ್ಪಂದನೆ

ಸ್ಥಳದಲ್ಲಿಯೇ 3,275 ಅರ್ಜಿ ವಿಲೇವಾರಿ

ಬೆಂಗಳೂರು : ರಾಜ್ಯ ಸರ್ಕಾರದ ಭೂ ಗ್ಯಾರಂಟಿ ಯೋಜನೆಯಡಿ ನಗರದಲ್ಲಿ ಆರಂಭಿಸಿರುವ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಲ್ಲಿ ಮೂರು ವಾರದಲ್ಲಿ ಐದು ಪಾಲಿಕೆಗಳಿಂದ 9,457 ಮಂದಿ ಅಭಿಯಾನ ಸ್ಥಳಗಳಿಗೆ ಭೇಟಿ ನೀಡಿದ್ದು, 3,275 ಅರ್ಜಿಗಳ ವಿಲೇವಾರಿ ಮಾಡಲಾಗಿದೆ.

ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ಪಾಲಿಕೆಗಳಲ್ಲಿ ಪ್ರತಿ ಶನಿವಾರ ನಡೆಸಲಾಗುತ್ತಿದೆ. ಈಗಾಗಲೇ ಮೂರು ಶನಿವಾರ ಮುಕ್ತಾಯವಾಗಿದೆ. ಐದು ಪಾಲಿಕೆಗಳಿಂದ ಟ್ಟು 9,457



ಮಂದಿ ಭೇಟಿ ನೀಡಿದ್ದಾರೆ. ಖಾತಾ ಸಂಬಂಧ 3,275 ಅರ್ಜಿಗಳ ವಿಲೇವಾರಿ ಮಾಡಲಾಗಿದೆ ಎಂದು ಜಿಬಿಎ ತಿಳಿಸಿದೆ. ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನವು ನಾಗರಿಕರ ಆಸ್ತಿ ದಾಖಲೆಗಳ ಡಿಜಿಟಲೀಕರಣಕ್ಕೆ ಉತ್ತೇಜನ ನೀಡು ವುದರೊಂದಿಗೆ, ಪಾರದರ್ಶಕ ಮತ್ತು ಜನಸ್ನೇಹಿ ಆಡಳಿತದತ್ತ ಮಹತ್ವದ ಹೆಜ್ಜೆಯಾಗಿದೆ. ಈ ಅಭಿಯಾನದ ಮೂಲಕ ನಾಗರಿಕರಿಗೆ ಇ-ಖಾತಾ ಪಡೆಯುವ ಪ್ರಕ್ರಿಯೆಯನ್ನು ಸರಳ ಮತ್ತು ಸುಲಭಗೊಳಿಸಲಾಗಿದೆ.

- ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನಕ್ಕೆ ನಾಗರಿಕರಿಂದ ಉತ್ತಮ ಸ್ಪಂದನೆ
- 3 ವಾರಗಳಲ್ಲಿ 9,457 ಮಂದಿ ಅಭಿಯಾನ ಸ್ಥಳಗಳಿಗೆ ಭೇಟಿ
- 3,275 ಅರ್ಜಿಗಳ ವಿಲೇವಾರಿ

ಮಹಾಲಕ್ಷ್ಮಿ ಲೇಔಟ್‌ನಲ್ಲಿ ಟಿಬಿ ಮುಕ್ತಕ್ಕಾಗಿ ಅಭಿಯಾನ

ಕ್ಷಯಮುಕ್ತ ಕ್ಷೇತ್ರಕ್ಕಾಗಿ ಪಣ



ಬೆಂಗಳೂರು: ಕ್ಷೇತ್ರವನ್ನು ಸಂಪೂರ್ಣವಾಗಿ ಕ್ಷಯಮುಕ್ತ ಮಾಡುವುದೇ ನಮ್ಮ ಗುರಿ ಎಂದು ಶಾಸಕ ಕೆ.ಗೋಪಾಲಯ್ಯ ಅವರು ತಿಳಿಸಿದರು.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರವನ್ನು ಸಂಪೂರ್ಣವಾಗಿ ಟಿಬಿ (ಕ್ಷಯರೋಗ) ಮುಕ್ತಗೊಳಿಸುವ ನಿಟ್ಟಿನಲ್ಲಿ ಶಾಸಕರು ಮತ್ತು ಅವರ ಟ್ರಸ್ಟ್ ವತಿಯಿಂದ, ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾಲಕ್ಷ್ಮಿ ಲೇಔಟ್‌ನಿಂದಲೇ ಟಿಬಿ ಮುಕ್ತ ಭಾರತದ ಕನಸು ನನಸಾಗಬೇಕು ಎಂಬ ದೃಷ್ಟಿಯಿಂದ ನಮ್ಮ ಟ್ರಸ್ಟ್ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ಈ ಯೋಜನೆ ಹಮ್ಮಿಕೊಂಡಿದೆ. ಕ್ಷೇತ್ರವನ್ನು ಸಂಪೂರ್ಣವಾಗಿ ಕ್ಷಯಮುಕ್ತ ಮಾಡುವುದೇ ನಮ್ಮ ಗುರಿ ಎಂದು ಶಾಸಕರು ಭರವಸೆ ವ್ಯಕ್ತಪಡಿಸಿದರು.

ಕ್ಷೇತ್ರದ ಟಿಬಿ ರೋಗಿಗಳಿಗೆ ನೆರವಾಗುವ ಉದ್ದೇಶದಿಂದ ಕಳೆದ 47 ತಿಂಗಳುಗಳಿಂದ ನಿರಂತರವಾಗಿ ಟಿಬಿ ಕಿಟ್ (ಪೌಷ್ಟಿಕಾಂಶ/ಔಷಧಿ ಕಿಟ್) ವಿತರಿಸುವ ಕಾರ್ಯಕ್ರಮ ನಡೆಯುತ್ತಿದೆ. ಪ್ರತಿ ತಿಂಗಳು ತಪ್ಪದೆ ಈ ಕಿಟ್ ವಿತರಣೆ ಮಾಡಲಾಗುತ್ತಿದೆ. ಇದಕ್ಕಾಗಿ ಪ್ರತಿ ತಿಂಗಳು 2.5 ರಿಂದ 3 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತಿದೆ. ಕ್ಷೇತ್ರದ ಜನತೆಯ ಆರೋಗ್ಯ ಕಾಪಾಡುವುದು ಅತ್ಯಂತ ಮುಖ್ಯ ಎಂದರು.

ಕಿಟ್ ಪಡೆಯುವ ರೋಗಿಗಳಿಗೆ ಎಚ್ಚರಿಕೆ ನೀಡಿದ ಅವರು, ಈ ಕಿಟ್ ಪಡೆದುಕೊಂಡವರು ಕಡ್ಡಾಯವಾಗಿ ತಾವೇ ಬಳಸಬೇಕು. ಯಾರಿಗೆ ಕಾಯಿಲೆ ಇದೆಯೋ ಅವರು ಮಾತ್ರ ಇದನ್ನು ಉಪಯೋಗಿಸಬೇಕು. ಸತತ 6 ತಿಂಗಳ ಕಾಲ ಈ ಕಿಟ್ ಅನ್ನು ಸರಿಯಾಗಿ ಬಳಸಿದರೆ ಟಿಬಿ ರೋಗ ಸಂಪೂರ್ಣವಾಗಿ ಗುಣಮುಖವಾಗುತ್ತದೆ. ಏಳನೇ ತಿಂಗಳಿಗೆ ನೀವು ಇಲ್ಲಿಗೆ ಬರುವ ಅಗತ್ಯವೇ ಇರುವುದಿಲ್ಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಂಡಲದ ಅಧ್ಯಕ್ಷ ಡಾ.ನಾಗೇಂದ್ರ, ಯುವ ಮೋರ್ಚಾ ಮಂಡಲ ಅಧ್ಯಕ್ಷ ಡಾ. ಮಂಜುನಾಥ್ ಗೌಡ, ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿ, ಪ್ರಮುಖರಾದ ಜಯಸಿಂಹ, ಮಹಿಳಾ ಅಧ್ಯಕ್ಷೆ ನಾಗರತ್ನಮ್ಮ, ಮಹಿಳಾ ಮುಖಂಡರಾದ ಪದ್ಮಾವತಿ ಶ್ರೀನಿವಾಸ್, ಇಂದ್ರಮ್ಮ, ಉಮಾಪತಿ, ಅನಂತಣ್ಣ, ಸೀನಣ್ಣ ವೆಂಕಟೇಶ್, ನಾರಾಯಣ್ ಸೇರಿದಂತೆ ಇತರರಿದ್ದರು.



ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಶೇ.95ಕ್ಕಿಂತ ಅಧಿಕ ಅಂಕ ಪಡೆಯಲು ಕಾರಣರಾದ ಕೊತ್ತನೂರು ಎನ್ನಾರ್ ಹೈಸ್ಕೂಲ್ ಕನ್ನಡ ಹಿರಿಯ ಶಿಕ್ಷಕಿ ಅರುಣಾ ಜೋಶಿ ಅವರನ್ನು ಕರುನಾಡು ಕನ್ನಡ ಕಲಾ ಸಿರಿ ಬಳಗ, ಬೆಂಗಳೂರು ವಿವಿ ಎಚ್.ಎನ್.ಸಭಾಂಗಣದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ 2026 ನೇ ಸಾಲಿನ ಅತ್ಯುತ್ತಮ ಆದರ್ಶ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಸ್ಕಾಂ ಅಧಿಕಾರಿಗಳ ಕಾರ್ಯಕ್ಕೆ ಶಾಸಕ ಎಸ್‌ಟಿಎಸ್ ಶ್ಲಾಘನೆ

ಒಂದೇ ಸೂರಿನಲ್ಲಿ ವಿದ್ಯುತ್ ಸೇವೆ

ಕೆಂಗೇರಿ: ಸಾರ್ವಜನಿಕರಿಗೆ ಅನುಕೂಲವಾಗಲೆಂದು ವಿದ್ಯುತ್ ಸೇವೆಗಳನ್ನು ಒಂದೇ ಸೂರಿನಲ್ಲಿ ತ್ವರಿತವಾಗಿ ಒದಗಿಸಲು ಬೆಸ್ಕಾಂ ಗ್ರಾಹಕರ ಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಬೆಸ್ಕಾಂ ಅಧಿಕಾರಿಗಳ ಕಾರ್ಯ ಶ್ಲಾಘನೀಯ ಎಂದು ಶಾಸಕ ಎಸ್.ಟಿ. ಸೋಮಶೇಖರ್ ಅಭಿಪ್ರಾಯಪಟ್ಟರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಉಲ್ಲಾಳ್ ವಾರ್ಡ್‌ನ ಸರ್.ಎಂ.ವಿಶ್ವೇಶ್ವರಯ್ಯ ಲೇಔಟ್ 4ನೇ ಬ್ಲಾಕ್‌ನಲ್ಲಿ ನಿರ್ಮಾಣವಾಗಿರುವ ಬೆಸ್ಕಾಂ ಕೆ-4 ಉಪ ವಿಭಾಗದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಸ್ಕಾಂ ಕಟ್ಟಡ ವಿನೂತನ ಹಾಗೂ ವಿಶೇಷ ರೀತಿಯಲ್ಲಿ ಐಟಿ ಬಿಟಿ ಕಂಪನಿಗಳ ಮಾದರಿಯಲ್ಲಿ ನಿರ್ಮಾಣವಾಗಿದೆ ಬೆಂಗಳೂರು ನಗರದಲ್ಲಿಯೇ ಮಾದರಿ ಕಟ್ಟಡವಾಗಿದೆ ಎಂದರು.

ನಾಗರಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಸ್ಕಾಂ ಇಇ ಶಿವಕುಮಾರ್ ಮತ್ತು ಅವರ ತಂಡ ಹಿರಿಯ ಅಧಿಕಾರಿಗಳ ಮಾರ್ಗ ದರ್ಶನದಲ್ಲಿ ಗ್ರಾಹಕರಿಗೆ ಅತ್ಯುತ್ತಮ ಸೇವೆ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ಕೆಂಗೇರಿ ವಿಭಾಗ ಪಶ್ಚಿಮ ವಲಯ ಇಇ ಎನ್.



ಶಿವಕುಮಾರ್ ಮಾತನಾಡಿ, ಸಾರ್ವಜನಿಕರ ಅನುಕೂಲಕ್ಕಾಗಿ ತ್ವರಿತ ವಿದ್ಯುತ್ ಸೇವೆಗೆ ಅಗತ್ಯವಿರುವ ಬಹುಮಹಡಿ ಸೇವಾ ಕೇಂದ್ರ ನಿರ್ಮಾಣಕ್ಕೆ ಶಾಸಕ ಎಸ್.ಟಿ.ಸೋಮಶೇಖರ್ ಅವರ ಅನುದಾನ ಮತ್ತು ಅವರ ಸಹಕಾರದಿಂದ ಇಂತಹ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗಿದೆ. ಇದರಿಂದ ಸಾರ್ವಜನಿಕರಿಗೆ ಅತ್ಯುತ್ತಮ ಸೇವೆ ಒದಗಿಸುವುದರ ಜೊತೆಗೆ ಸಮಸ್ಯೆಯನ್ನು ತ್ವರಿತಗತಿಯಲ್ಲಿ ಬಗೆಹರಿಸಲು ಬೆಸ್ಕಾಂ ಮುಂಚೂಣಿಯಲ್ಲಿರುತ್ತದೆ ಎಂದು ಆಶ್ವಾಸನೆ ನೀಡಿದರು. ಮುಖ್ಯ ಇಂಜಿನಿಯರ್ ಕಾಶಿ ರಾಮ್ ಪವಾರ್, ಅಧೀಕ್ಷಕ ಇಂಜಿನಿಯರ್ ನಾರಾಯಣ ಸ್ವಾಮಿ, ಮಹಿಳಾ ಬ್ಲಾಕ್ ಅಧ್ಯಕ್ಷೆ ಸುಮಾ ಜನಾರ್ದನ್ ಮತ್ತಿತರರು ಉಪಸ್ಥಿತರಿದ್ದರು.

ಮೀನುಗಾರರಿಗೆ ಮುನ್ನೆಚ್ಚರಿಕೆ

ಉಡುಪಿ: ಕರಾವಳಿ ಹಾಗೂ ಅರಬ್ಬೀ ಸಮುದ್ರದಲ್ಲಿ ಮುಂದಿನ ಐದು ದಿನಗಳ ಕಾಲ ಭಾರಿ ವೇಗದ ಗಾಳಿ ಹಾಗೂ ಪ್ರಕ್ಷುಬ್ಧ ಹವಾಮಾನ ಇರುವ ಬಗ್ಗೆ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಭಾನುವಾರದಿಂದ ಜೂನ್ 4 ರ ವರೆಗಿನ ಹವಾಮಾನ ಮುನ್ಸೂಚನೆಯ ಪ್ರಕಾರ, ಅರಬ್ಬೀ ಸಮುದ್ರದ ಆಗ್ನೇಯ ಭಾಗ, ಲಕ್ಷದ್ವೀಪ, ಮಾಲ್ದೀವ್ಸ್ ಹಾಗೂ ಕೇರಳ ಕರಾವಳಿ ತೀರ ಪ್ರದೇಶಗಳಲ್ಲಿ ಗಂಟೆಗೆ 35 ರಿಂದ 50 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದ್ದು, ಇದು ಕೆಲವೊಮ್ಮೆ ಗರಿಷ್ಠ 60 ಕಿಲೋಮೀಟರ್ ವೇಗಕ್ಕೆ ತಲುಪುವ ಸಾಧ್ಯತೆಯಿದೆ. ಇದೇ ಅವಧಿಯಲ್ಲಿ ಕರಾವಳಿಯುದ್ದಕ್ಕೂ ಗಂಟೆಗೆ 40–50 ಕಿಲೋಮೀಟರ್ ವೇಗದ ಬಿರುಗಾಳಿ ಬೀಸಲಿದೆ.

ಕಿರುಸುದ್ದಿ

ಹೃದಯಾಘಾತಕ್ಕೆ ಯುವಕ ಬಲಿ

ನಿಡ್ಪಳ್ಳಿ; ಮೂಲತಃ ನಿಡ್ಪಳ್ಳಿ ಗ್ರಾಮದ ಬರೆಂಬೊಟ್ಟು ನಿವಾಸಿ ಪುತ್ತೂರು ಕೂರ್ನಡ್ಕ ಮದಕದ ಆರಾಧ್ಯ ಲೇ ಔಟ್‌ನಲ್ಲಿ ವಾಸವಿದ್ದ ಚಿನ್ನದ ಕಸೂತಿ ಕೆಲಸ ಮಾಡುತ್ತಿದ್ದ ಭಾಸ್ಕರ್ ಆಚಾರ್ಯ (39) ಎಂಬವರು ಎದೆ ನೋವು ಎಂದು ಪುತ್ತೂರು ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಯೊಂದರಲ್ಲಿ ದಾಖಲು ಮಾಡಲಾಗಿತ್ತು. ಆದರೆ ಅಲ್ಲಿ ಅವರಿಗೆ ಚಿಕಿತ್ಸೆ ಫಲಕಾರಿಯಾಗದೆ ಮೇ 31 ರಂದು ಮೃತಪಟ್ಟಿದ್ದಾರೆ. ಭಾಸ್ಕರ್ ಆಚಾರ್ಯ ಅವರು ಕೆಲವು ವರ್ಷದ ಹಿಂದೆ ಹಿಂದೂ ಜಾಗರಣ ವೇದಿಕೆ ಪುತ್ತೂರು ನಗರ ಸಂಚಾಲಕರಾಗಿಯೂ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ರಕ್ಷಿತಾ ತಾಯಿ ಸುನಂದಾ, ಸಹೋದರ ಉದಯ ಆಚಾರ್ಯ ಹಾಹೂ ಮೂವರು ಸಹೋದರಿಯರನ್ನು ಅಗಲಿದ್ದಾರೆ.



ಸ್ವರ್ಗ ಅಂಗನವಾಡಿ ಪ್ರವೇಶೋತ್ಸವ

ಪೆರ್ಲ: ಸ್ವರ್ಗ ಅಂಗನವಾಡಿಯಲ್ಲಿ ನವಾಗತ ಮಕ್ಕಳ ಪ್ರವೇಶೋತ್ಸವ ಮತ್ತು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಕಾಲಿಡುವ ಮಕ್ಕಳ ಬೀಳ್ಕೊಡುಗೆ ಸಮಾರಂಭವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರವಿ ವಾಣಿನಗರ ವಹಿಸಿ ಶುಭಹಾರೈಸಿದರು. ಸಮಾರಂಭವನ್ನು ನವಾಗತ ಮಕ್ಕಳಿಗೆ ಹೂಗುಚ್ಛವನ್ನು ನೀಡುವುದರ ಮೂಲಕ ಎಣ್ಮಕಜೆ ಗ್ರಾಮ ಪಂಚಾಯತ್ ಸದಸ್ಯ ರಾಮಚಂದ್ರ ಎಂ. ಉದ್ಘಾಟಿಸಿದರು. ಎಂ.ಕೆ.ಬಾಲಕೃಷ್ಣ ಗ್ರಂಥಾಲಯದ ಅಧ್ಯಕ್ಷ ರವಿರಾಜ್ ಎಸ್., ಆರೋಗ್ಯ ಇಲಾಖೆಯ ಕಾರ್ಯಕರ್ತೆ ಪೂರ್ಣಿಮಾ ಬೈರಡ್ಕ, ಆಶಾವರ್ಕರ್ ಚಂದ್ರಾವತಿ ಎ.ಟಿ. ಮೊದಲಾದವರು ಉಪಸ್ಥಿತರಿದ್ದರು. ಈ ಸಂದರ್ಭ ಅಂಗನವಾಡಿಯಿಂದ ಬೀಳ್ಕೊಡುವ ಮಕ್ಕಳಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು. ಅಂಗನವಾಡಿ ಶಿಕ್ಷಕಿ ಚಂದ್ರಾವತಿ ಎಂ. ಸ್ವಾಗತಿಸಿ, ಸಹಾಯಕಿ ಗೀತಾ ವಂದಿಸಿದರು.

ವಾಣಿನಗರ ಅಂಗನವಾಡಿ ಪ್ರವೇಶೋತ್ಸವ

ಪೆರ್ಲ: ನೂತನವಾಗಿ ಅಂಗನವಾಡಿಗೆ ಸೇರ್ಪಡೆಗೊಂಡ ಮಕ್ಕಳ ಪ್ರವೇಶೋತ್ಸವ ಮತ್ತು ಅಂಗನವಾಡಿಯಿಂದ ಬೀಳ್ಕೊಡುವ ಮಕ್ಕಳಿಗೆ ಸಮಾರಂಭವು ವಾಣಿನಗರ ಅಂಗನವಾಡಿಯಲ್ಲಿ ಜರಗಿತು. ಹೊಸದಾಗಿ ಸೇರ್ಪಡೆಗೊಂಡ ಮಕ್ಕಳಿಗೆ ಹೂಗುಚ್ಛವನ್ನಿತ್ತು ಎಣ್ಮಕಜೆ ಗ್ರಾಮ ಪಂಚಾಯತ್ ಸದಸ್ಯ ರಾಮಚಂದ್ರ ಎಂ. ಸ್ವಾಗತಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ರಂಜಿತಾ ಕುತ್ತಾಜೆ ವಹಿಸಿದ್ದರು. ಆರೋಗ್ಯ ಇಲಾಖೆಯ ಕಾರ್ಯಕರ್ತೆ ಪೂರ್ಣಿಮಾ ಬೈರಡ್ಕ, ರತೀಶ್ ಬಲಿಪಬಾಂಡಿಲು ಮೊದಲಾದವರು ಉಪಸ್ಥಿತರಿದ್ದರು. ಅಂಗನವಾಡಿಯಿಂದ ಬೀಳ್ಕೊಡುವ ಮಕ್ಕಳಿಗೆ ಪ್ರಮಾಣ ಪತ್ರ, ನೆನಪಿನ ಕಾಣಿಕೆಯನ್ನು ನೀಡಲಾಯಿತು. ಅಂಗನವಾಡಿ ಶಿಕ್ಷಕಿ ಕುಸುಮಾ ಸ್ವಾಗತಿಸಿ, ಶೈಲಜಾ ವಾಣಿನಗರ ವಂದಿಸಿದರು.

ನಿಧನ ಸುದ್ದಿ

ಡಾ.ಸರಸ್ವತಿ ರಾವ್

ಮಂಗಳೂರು: ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ 37 ವರ್ಷಗಳ ಕಾಲ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿಯೂ ವಿಭಾಗ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಡಾ.ಸರಸ್ವತಿ ಎಸ್.ರಾವ್ ಅವರು ಅಲ್ಪಕಾಲದ ಅಸೌಖ್ಯದಿಂದ ಭಾನುವಾರ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು.




ಡಾ.ಸರಸ್ವತಿ ರಾವ್ ನ್ಯಾನೋ ತಂತ್ರಜ್ಞಾನದ ಬಗ್ಗೆ ಸಂಶೋಧನೆ ನಡೆಸಿ ಮಂಗಳೂರು ವಿ.ವಿ.ಯಿಂದ ಡಾಕ್ಟರೇಟ್ ಪದವಿ ಪಡೆದಿದ್ದರು. ಅಲ್ಲದೆ 'ನ್ಯಾನೋ ತಂತ್ರಜ್ಞಾನ ಪ್ರಾಚೀನ ಕಾಲದ ಭಾರತೀಯ ವಿಜ್ಞಾನಿಗಳು' ಎಂಬ ಪುಸ್ತಕಗಳನ್ನು ಕನ್ನಡದಲ್ಲಿ ಬರೆದಿದ್ದರು. ಮಾತ್ರವಲ್ಲದೆ 'ವಿಷ್ಣುಸಹಸ್ರನಾಮ' ಸ್ತೋತ್ರದ ವ್ಯಾಖ್ಯಾನವನ್ನೂ ಪುಸ್ತಕರೂಪದಲ್ಲಿ ಪ್ರಕಟಿಸಿದ್ದರು.

ಡಾ.ಸರಸ್ವತಿಯವರು ಪತಿ ಡಾ.ಚ.ನ.ಶಂಕರ ರಾವ್ (ಸಮಾಜಶಾಸ್ತ್ರ ಪಠ್ಯ ಪುಸ್ತಕಗಳ ಪ್ರಸಿದ್ಧ ಲೇಖಕರು) ಮಕ್ಕಳಾದ ಡಾ.ಶ್ರುತಿ , ಸ್ವಾತಿ ಮತ್ತು ದೀಪ್ತಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗದವರನ್ನೂ ಅನೇಕ ಅಭಿಮಾನಿಗಳನ್ನೂ ಬಿಟ್ಟು ಅಗಲಿದ್ದಾರೆ.

ರುಕ್ಮಿಣಿ ಕೋಟೇಶ್ವರ

ಕುಂದಾಪುರ : ಕೋಟೇಶ್ವರ ರಥಬೀದಿಯ ಅತ್ಯಂತ ಹಿರಿಯ ನಿವಾಸಿ, ಪ್ರತಿಷ್ಠಿತ ಐತಾಳ ಕುಟುಂಬದ ದಿ. ರಾಮಕೃಷ್ಣ ಐತಾಳರ ಪತ್ನಿ ರುಕ್ಮಿಣಿ (92) ವಯೋಸಹಜ ಅಸೌಖ್ಯದಿಂದ ಮೇ 29ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಪುತ್ರ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.





ಮುಲ್ಕಿ ಸಮೀಪದ ಅಂಗರಗುಡ್ಡೆ ಮಸೀದಿ ಪಕ್ಕದಿಂದ ಕುಬೆವೂರುಗೆ ಹಾದು ಹೋಗುವ ಕಿಲ್ಪಾಡಿ ಹಾಗೂ ಶಿಮಂತೂರು ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟ ರಸ್ತೆಯ ಚರಂಡಿಯ ಹೂಳು ತೆಗೆದು ಹಾಗೂ ರಸ್ತೆಗೆ ಅಡ್ಡಲಾಗಿ ಬಿದ್ದ ಮರವನ್ನು ಸ್ಥಳೀಯ ಸಾರ್ವಜನಿಕರು ಶ್ರಮದಾನದ ಮೂಲಕ ತೆರವುಗೊಳಿಸಿದ್ದಾರೆ.

ಪಣೋಲಿಬೈಲು ಶ್ರೀಕ್ಷೇತ್ರದಲ್ಲಿ ಒಂದೇ ದಿನ 4000ಕ್ಕೂ ಅಧಿಕ ಹರಕೆಯ ಅಗೇಲು ಸೇವೆ

ಬಂಟ್ವಾಳ: ಹರಕೆಯ ಕೋಲ ಹಾಗೂ ಅಗೇಲು ಸೇವೆಗೆ ಪ್ರಸಿದ್ದಿಯಾಗಿರುವ ಬಂಟ್ವಾಳ ತಾಲೂಕಿನ ಕಾರುಣಿಕ ಕ್ಷೇತ್ರಗಳಲ್ಲೊಂದಾಗಿರುವ ಪಣೋಲಿಬೈಲು ಶ್ರೀ ಕಲ್ಲುರ್ಟಿ ದೈವಸ್ಥಾನದಲ್ಲಿ ಭಾನುವಾರ ದಾಖಲೆಯ 4000 ಸಾವಿರಕ್ಕೂ ಅಧಿಕ ಹರಕೆಯ ಅಗೇಲು ಸೇವೆ ಸಮರ್ಪಣೆಯಾಗಿದ್ದು, ಭಕ್ತರಿಂದಲೂ ಕ್ಷೇತ್ರ ತುಂಬಿ ತುಳುಕಿತ್ತು.



ಕ್ಷೇತ್ರದ ಮೂಲಗಳ ಪ್ರಕಾರ ಅಂದಾಜು 4,180 ಅಗೇಲು ಸೇವೆಗಳು ಭಕ್ತರಿಂದ ಸರ್ಮಣೆಯಾಗಿದೆ. ಪ್ರಸಕ್ತ ವರ್ಷದಲ್ಲಿ ಸಂದಾಯವಾದ ಗರಿಷ್ಠ ಸಂಖ್ಯೆಯ ಅಗೇಲು ಸೇವೆಯಾಗಿದ್ದು, ಈ ಹಿನ್ನಲೆ ಕ್ಷೇತ್ರದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದು,ಸರತಿ ಸಾಲಿನಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ಕ್ಷೇತ್ರದಲ್ಲಿ ವಾರದಲ್ಲಿ ಮೂರು ದಿನಗಳ ಕಾಲ ಅಗೇಲು ಸೇವೆ ಸಂದಾಯವಾಗುತ್ತಿದ್ದರೂ ಭಾನುವಾರ ರಜಾ ದಿನದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಅಗೇಲು ಸೇವೆ ಸಲ್ಲಿಸುತ್ತಾರೆ. ಸಾಮಾನ್ಯ ದಿನಗಳಲ್ಲಿ ಮಧ್ಯಾಹ್ನ 1.30ರ ಬಳಿಕ ಅಗೇಲು ಸೇವೆ ಪ್ರಸಾದ ವಿತರಿಸಲು ಆರಂಭಗೊಂಡರೆ, ಮೇ 31ರಂದು ಹೆಚ್ಚಿನ ಅಗೇಲು ಸೇವೆ ಇದ್ದ ಕಾರಣ ಕೊಂಚ ತಡವಾಗಿ ಸಂಜೆಯವರೆಗೂ ಪ್ರಸಾದ ವಿತರಣೆ ಸಾಗಿತು.

ಮಕ್ಕಳ ಶೈಕ್ಷಣಿಕ ಆರಂಭದ ಹಿನ್ನೆಲೆಯಲ್ಲಿ ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಫಲಿತಾಂಶ, ಉತ್ತಮ ಶಿಕ್ಷಣ ಸಂಸ್ಥೆಯ ಆಯ್ಕೆ, ನಿರೀಕ್ಷಿತ ಕನಸು ಸಾಕಾರಗೊಂಡ ಹಿನ್ನೆಲೆಯಲ್ಲಿ ಭಕ್ತರು ತಮ್ಮ ಮಕ್ಕಳ ಸಹಿತವಾಗಿ ಕ್ಷೇತ್ರಕ್ಕೆ ಭೇಟಿ ನೀಡಿ ಅಗೇಲು ಸೇವೆ ಸಮರ್ಪಿಸಿ ಧನ್ಯರಾಗಿದ್ದಾರೆ.

2025 ಜೂನ್ ಮೊದಲ ಭಾನುವಾರ ಗರಿಷ್ಠ ಅಗೇಲು ಸೇವೆ 3,871 ಸಂದಾಯವಾಗಿದ್ದರೆ, 2024 ರ ಜೂ.2ರಂದು 3,908 ಅಗೇಲು ಸೇವೆ ಸಂದಾಯವಾಗಿತ್ತು.ಪ್ರಸಕ್ತ ವರ್ಷ ಈ ಎರಡೂ ದಾಖಲೆಯನ್ನು ಮೀರಿ 4180 ಅಗೇಲು ಸೇವೆ ಸಮರ್ಪಣೆಯಾಗಿದೆ.

ಎಲ್ಲರ ರೋಮಾಂಚನಗೊಳಿಸಿತು 'ಕಾಸರಗೋಡು ಕೋಟೆ ಸವಾರಿ 2026' ಸೈಕಲ್ ಪ್ರಯಾಣ

ಡೀಸಿ, ತಂಡದಿಂದ 70 ಕಿಮೀ ಸೈಕ್ಲಿಂಗ್!

ಕಾಸರಗೋಡು: ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯ ಶ್ರೀಮಂತ ಐತಿಹಾಸಿಕ ಪರಂಪರೆ ಮತ್ತು ಕ್ರೀಡೆ ಹಾಗೂ ಮನರಂಜನಾ ಅವಕಾಶಗಳನ್ನು ಸಂಯೋಜಿಸಿ ಭಾನುವಾರ ಆಯೋಜಿಸಲಾದ ಕಾಸರಗೋಡು ಕೋಟೆ ಸವಾರಿ 2026 ಸೈಕಲ್ ಯಾತ್ರೆಯು ಅತ್ಯಂತ ಯಶಸ್ವಿಯಾಗಿ ಸಂಭ್ರಮ ಸಡಗರಗಳೊಂದಿಗೆ ಸಮಾಪ್ತಿಯಾಯಿತು. ಕೋಟೆಗಳ ನಾಡು ಕಾಸರಗೋಡಿನ ಪಾರಂಪರಿಕ ಸ್ಮಾರಕಗಳನ್ನು ಜಗತ್ತಿಗೆ ಪರಿಚಯಿಸಲು ಮತ್ತು ಆರೋಗ್ಯ ರಕ್ಷಣೆಯಲ್ಲಿ ಸೈಕ್ಲಿಂಗ್‌ನ ಮಹತ್ವವನ್ನು ಎತ್ತಿ ತೋರಿಸಲು ಈ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೋಟೆಯಿಂದ ಕೋಟೆಗೆ ಎಂಬ ಪ್ರಮುಖ ಉದ್ದೇಶ ಹಾಗೂ ಧ್ಯೇಯದೊಂದಿಗೆ ರೋಮಾಂಚನಕಾರಿಯಾಗಿ ಕಾರ್ಯಕ್ರಮ ಜರಗಿತು. ಜಿಲ್ಲಾಡಳಿತ, ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ (ಡಿಟಿಪಿಸಿ) ಮತ್ತು ಕಾಸರಗೋಡು ಪೆಡಲರ್ಸ್ ಸೈಕ್ಲಿಂಗ್ ಕ್ಲಬ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದವು. ಪಾರಂಪರಿಕ ಕೋಟೆಗಳನ್ನು ಸಂಪರ್ಕಿಸುವ 70 ಕಿಲೋ ಮೀಟರ್ ಉದ್ದದ ಸೈಕಲ್ ಯಾತ್ರೆಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವ ವಹಿಸಿದ್ದರು. ಅದರಂತೆ ಬೆಳಗ್ಗೆ 6.15ಕ್ಕೆ ಐತಿಹಾಸಿಕ ಕಾಞಂಗಾಡು ಹೊಸದುರ್ಗ ಕೋಟೆಯಿಂದ (ಹೊಸಕೋಟೆ) ಆರಂಭಗೊಂಡ ಸೈಕಲ್ ಸವಾರಿಗೆ ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್ ಚಾಲನೆ ನೀಡಿ ಶುಭಕೋರಿದರು.

ಐದು ಕೋಟೆಗಳನ್ನು ಸಂಪರ್ಕಿಸುವ ಪಾರಂಪರಿಕ ಮಾರ್ಗ

ಜಿಲ್ಲೆಯ ಪ್ರಮುಖ ಪಾರಂಪರಿಕ ತಾಣಗಳಾದ ಹೊಸದುರ್ಗ ಕೋಟೆ, ಬೇಕಲಕೋಟೆ, ಚಂದ್ರಗಿರಿ ಕೋಟೆ, ಪೊವ್ವಲ್ ಕೋಟೆ ಮತ್ತು ಕುಂಬಳೆ ಆರಿಕ್ಕಾಡಿ ಕೋಟೆಯನ್ನು ಒಂದೇ ಪ್ರವಾಸಿ ಜಾಲಕ್ಕೆ ಸಂಪರ್ಕಿಸುವ ಮೂಲಕ ಪ್ರಯಾಣದ ಮಾರ್ಗವನ್ನು ಸಿದ್ಧಪಡಿಸಲಾಯಿತು. ಕಾಸರಗೋಡು ಪೆಡಲರ್ಸ್ ಸೈಕ್ಲಿಂಗ್ ಕ್ಲಬ್‌ನ ಆಶ್ರಯದಲ್ಲಿ ಜಿಲ್ಲಾ ಕಲೆಕ್ಟರ್ ಜೊತೆಗೆ 26 ಬೈಸಿಕಲ್ ಉತ್ಸಾಹಿಗಳು ಪ್ರಯಾಣದಲ್ಲಿ ಭಾಗವಹಿಸಿ ಉದ್ದೇಶಿತ ಸಂಪೂರ್ಣ 70 ಕಿಲೋ ಮೀಟರ್ ಪೂರ್ತಿಗೊಳಿಸಿದರು.



ಪ್ರವಾಸೋದ್ಯಮ ತಾಣಗಳಾಗಿ ಅಭಿವೃದ್ಧಿಪಡಿಸಲು ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ ಜಿಲ್ಲೆಯ ಪಾರಂಪರಿಕ ಸ್ಮಾರಕಗಳನ್ನು ಪ್ರಚಾರಪಡಿಸುವುದು ಮತ್ತು ಜೀವನಶೈಲಿ ರೋಗಗಳನ್ನು ನಿಯಂತ್ರಿಸುವಲ್ಲಿ ಸೈಕ್ಲಿಂಗ್‌ನ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಈ ಪ್ರವಾಸದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಆರಿಕ್ಕಾಡಿಯಲ್ಲಿ ಸಮಾರೋಪ ಸಮಾರಂಭ

ಕುಂಬಳೆ ಆರಿಕ್ಕಾಡಿ ಕೋಟೆಯಲ್ಲಿ ಜರಗಿದ ಸಮಾರೋಪ ಸಮಾರಂಭವನ್ನು ಕುಂಬಳೆ ಗ್ರಾ.ಪಂ. ಅಧ್ಯಕ್ಷ ವಿ.ಪಿ.ಖಾದರ್ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪೂರ್ಣಾವಧಿ ಸೈಕಲ್ ಸವಾರಿ ನಡೆಸಿದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮಾತನಾಡಿ ತಮ್ಮ ಅನುಭವಗಳನ್ನು ಹಂಚಿ ಕೊಂಡರು. ಅಲ್ಲದೆ ಇಂತಹ ಕಾರ್ಯಕ್ರಮಗಳ ಮೂಲಕ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಇನ್ನಷ್ಟು ಉತ್ತೇಜನ ಲಭಿಸಲಿದೆ ಎಂದರು. ಸಮಾರೋಪ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷ ಎ.ಕೆ.ಆರಿಫ್ ಮತ್ತು ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯ ಅಶ್ರಫ್ ಕಾರ್ಲೆ ಮಾತನಾಡಿದರು.

ಕಾಞಂಗಾಡಿನಲ್ಲಿ ಉದ್ಘಾಟನಾ ಸಮಾರಂಭ

ಕಾಞಂಗಾಡಿನಲ್ಲಿ ನಡೆದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಎ.ನಸೀಬ್ ವಹಿಸಿದ್ದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಜಿಲ್ಲಾ ಶುಚಿತ್ವ ಮಿಷನ್ ಸಂಯೋಜಕ ಪಿ.ಜಯನ್, ಡಿಟಿಪಿಸಿ ಅಧಿಕಾರಿಗಳು, ಸೈಕ್ಲಿಂಗ್ ಕ್ಲಬ್ ಕಾರ್ಯದರ್ಶಿ ರತೀಶ್ ಅಂಬಲತ್ತರ, ಪದಾಧಿಕಾರಿಗಳಾದ ಶ್ರೀಜಿತ್ ಮತ್ತು ಶ್ರೀಕಾಂತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಿಟಿಪಿಸಿ ಕಾರ್ಯದರ್ಶಿ ಜಿ.ಕೆ.ಜಿಜೇಶ್ ಸ್ವಾಗತಿಸಿ, ವಂದಿಸಿದರು.

ಪಾರಂಪರಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವುದು, ಆರೋಗ್ಯಕರ ಜೀವನಶೈಲಿಯನ್ನು ಬೆಳೆಸುವುದು ಮತ್ತು ಪರಿಸರ ಸ್ನೇಹಿ ಸಾರಿಗೆ ವಿಧಾನಗಳನ್ನು ಜನಪ್ರಿಯಗೊಳಿಸುವುದು ಈ ಕಾರ್ಯಕ್ರಮದ ಪ್ರಮುಖ ಗುರಿಯಾಗಿದೆ. ಇಂತಹ ಉಪಕ್ರಮಗಳು ದೇಶೀಯ ಮತ್ತು ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಹೊಸ ಪ್ರವಾಸೋದ್ಯಮ ವ್ಯವಸ್ಥೆಗಳಾಗಿ ಯಶಸ್ವಿಯಾಗುತ್ತವೆ ಎಂದು ಸಂಘಟಕರು ಸಂತಸ ವ್ಯಕ್ತಪಡಿಸಿದರು.

ಕೋಟೆಗಳ ಶೋಚನೀಯ ಸ್ಥಿತಿಯನ್ನು ಪರಿಹರಿಸಲು ಕ್ರಮ

ಹೊಸದುರ್ಗ ಕೋಟೆ, ಪೊವ್ವಲ್ ಕೋಟೆ ಮತ್ತು ಕುಂಬಳೆ ಆರಿಕ್ಕಾಡಿ ಕೋಟೆಯ ಕಾಡುಪೊದೆ ಪ್ರದೇಶಗಳನ್ನು ಸ್ವಚ್ಛಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳು ಈ ಹಿಂದೆ ಚಂದ್ರಗಿರಿ ಕೋಟೆಗೆ ಭೇಟಿ ನೀಡಿದ್ದರು. ಅವರ ಸೂಚನೆಯಂತೆ ಅಲ್ಲಿ ಶುಚಿಗೊಳಿಸುವ ಕಾರ್ಯ ಪೂರ್ಣಗೊಂಡಿದೆ. ಪುರಾತತ್ವ ಇಲಾಖೆಯು ಚಂದ್ರಗಿರಿ ಕೋಟೆಯನ್ನು ಅದರ ನಿರ್ವಹಣೆಗಾಗಿ ಕಾಸರಗೋಡು ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿಗೆ ಹಸ್ತಾಂತರಿಸಿದೆ.

ಚಂದ್ರಗಿರಿ ಕೋಟೆಯನ್ನು ಮದುವೆ ತಾಣವಾಗಿ ಅಭಿವೃದ್ಧಿಪಡಿಸುವುದು ಮುಖ್ಯ ಗುರಿಯಾಗಿದ್ದು, ಈ ಹಿನ್ನೆಲೆಯಲ್ಲಿ ಕಾರ್ಯಯೋಜನೆ ತಯಾರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಹೊಸದುರ್ಗ, ಪೊವ್ವಲ್ ಮತ್ತು ಕುಂಬಳೆ ಆರಿಕ್ಕಾಡಿ ಕೋಟೆಗಳ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸಲು ಕೇರಳ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ಅರ್ಜುನ್ ಪಾಂಡ್ಯನ್ ಮಾಹಿತಿ ನೀಡಿದರು. ಪುರಾತತ್ವ ಇಲಾಖೆಯಿಂದ ಪಾರಂಪರಿಕ ತಾಣಗಳನ್ನು ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿಗೆ ಹಸ್ತಾಂತರಿಸುವ ಮೂಲಕ ಬೇಕಲಕೋಟೆಯ ಜೊತೆಗೆ ಜಿಲ್ಲೆಯ ಇತರ ಕೋಟೆಗಳ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಇದೇ ಸಂದರ್ಭ ನುಡಿದರು.

ಪ್ರತೀ ಬ್ರಹ್ಮಕಲಶೋತ್ಸವದಲ್ಲಿ ಒಬ್ಬ ಬಡವನಿಗೆ ಮನೆ ನಿರ್ಮಾಣ ಸಂಕಲ್ಪವಾಗಲಿ: ಪೇಜಾವರ ಶ್ರೀ

ಉಡುಪಿ: ಉಡುಪಿ–ದಕ್ಷಿಣ ಕನ್ನಡದಲ್ಲಿ ಪ್ರತೀ ವರ್ಷ ವಿವಿಧೆಡೆ ಬ್ರಹ್ಮಕಲಶೋತ್ಸವ ನಡೆಯುತ್ತಿರುತ್ತದೆ. ಅಂತಹ ಪ್ರತೀ ಬ್ರಹ್ಮಕಲಶೋತ್ಸವದಲ್ಲೂ ಕನಿಷ್ಠ ಒಬ್ಬ ಬಡವನಿಗೆ ಮನೆ ನಿರ್ಮಿಸಿಕೊಡುವ ಸಂಕಲ್ಪವನ್ನು ಸಮಿತಿಯವರು ಮಾಡಿದರೆ ನೂರಾರು ಕುಟುಂಬ ನೆಮ್ಮದಿಯಾಗಿ ಬಾಳಬಹುದು. ಇದರಿಂದಾಗಿ ಭಗವಂತ ಕೂಡ ಸಂಪ್ರೀತನಾಗಬಹುದು ಎಂದು ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಮಹೇಶ್ ಠಾಕೂರ್ ನೇತೃತ್ವದ ಶಿವಪ್ರೇರಣಾ ಟ್ರಸ್ಟ್ ವತಿಯಿಂದ ಸರಳಬೆಟ್ಟು ವಾರ್ಡ್‌ನ ಬಬ್ಬು ಸ್ವಾಮಿ ಲೇಔಟ್‌ನ ನಿವಾಸಿ ಶಂಕರಪೂಜಾರಿ ಅವರಿಗೆ ನಿರ್ಮಿಸಿ ಕೊಟ್ಟ ಶ್ರೀರಾಮ ಪ್ರಸಾದ ಎಂಬ ಮನೆಯನ್ನು ಹಸ್ತಾಂತರಿಸಿ ಶ್ರೀಗಳು ಆಶೀರ್ವಚನ ನೀಡಿದರು.



ಪ್ರತೀ ವರ್ಷ ಶ್ರೀಮಠದಿಂದ ಮನೆಗಳ ನಿರ್ಮಾಣ ಆಗುತ್ತಿದೆ. 20 ಸೈಟ್‌ಗಳನ್ನು ನಾವು ಅಶಕ್ತರಿಗೆ ಕೊಟ್ಟಿದ್ದೇವೆ. ಇದು ಹಲವಾರು ಮಂದಿಗೆ ಪ್ರೇರಣೆ ಆಗಿದೆ ಎಂದರು.

ಶಿವ ಪ್ರೇರಣಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಮಹೇಶ್ ಠಾಕೂರ್ ಮಾತನಾಡಿ, ರಾಮರಾಜ್ಯ ನಿರ್ಮಾಣವಾಗಬೇಕಾದರೆ ಎಲ್ಲರಿಗೂ ಸೂರು ಸಿಗಬೇಕು ಎಂಬ ಪೇಜಾವರ ಶ್ರೀಗಳ ಸಂಕಲ್ಪ ಹಾಗೂ ಶಿವಪಾಡಿಯ ಶ್ರೀ ಉಮಾಮಹೇಶ್ವರ ದೇವರ ಪ್ರೇರಣೆಯಿಂದಾಗಿ ಬಡವರಿಗೆ ಸೂರು ಕಲ್ಪಿಸಿ ಕೊಡಬೇಕು ಎಂದು ತೀರ್ಮಾನಿಸಿದೆ. ಇದು ನಾಲ್ಕನೇ ಮನೆಯಾಗಿದ್ದು, ಇನ್ನೂ ಒಂದಷ್ಟು ಮನೆಗಳನ್ನು ಕಟ್ಟಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಮಾಜಿ ಶಾಸಕ ರಘುಪತಿ ಭಟ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಣಿಪಾಲದ ಬಬ್ಬುಸ್ವಾಮಿ ದೇವಸ್ಥಾನ ಅಧ್ಯಕ್ಷ ಶ್ರೀನಿವಾಸ ಪೂಜಾರಿ, ಬಿಲ್ಲವ ಯುವ ವೇದಿಕೆ ಅಧ್ಯಕ್ಷ ಪ್ರವೀಣ್ ಪೂಜಾರಿ, ಉದ್ಯಮಿ ದೇವಿಚರಣ್ ಕಾವ, ಡಾ. ನಿತೀಶ್ ಶೆಟ್ಟಿ, ಉದ್ಯಮಿ ಗಣನಾಥ ಹೆಗ್ಡೆ, ನಿತ್ಯಾನಂದ ಪಡ್ರೆ, ಗಣೇಶೋತ್ಸವ ಸಮಿತಿ ಪರ್ಕಳದ ಅಧ್ಯಕ್ಷ ದಿಲೀಪ್ ರಾಜ್ ಹೆಗ್ಡೆ, ಶಿವಪಾಡಿ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಪ್ರಭು, ಗುರುರಾಜ್ ಭಂಡಾರಿ, ಬಿಲ್ಲವ ಸಮುದಾಯದ ಅಧ್ಯಕ್ಷ ಅನೀಲ್ ಪೂಜಾರಿ, ಬಾಬು ನಾಯ್ಕ, ಬಬ್ಬುಸ್ವಾಮಿ ಲೇ ಔಟ್ ಸೇವಾ ಸಂಘದ ಅಧ್ಯಕ್ಷ ಚೆನ್ನಪ್ಪ ವೀರೇಶನವರ್ ಉಪಸ್ಥಿತರಿದ್ದರು. ಮಮತಾ ಸಾವಂತ್ ನಿರೂಪಿಸಿದರು.

ಇಂದು ಎಲ್ಲೆಡೆ ಶಾಲಾರಂಭ ಸಂಭ್ರಮ ಸಡಗರ: ಕಾಸರಗೋಡು ಜಿಲ್ಲಾ ಮಟ್ಟದ ಪ್ರವೇಶೋತ್ಸವ

ಕಾಸರಗೋಡು: 2026–27ನೇ ಹೊಸ ಶೈಕ್ಷಣಿಕ ವರ್ಷದಲ್ಲಿ ಅಕ್ಷರ ಲೋಕಕ್ಕೆ ಮೊದಲ ಹೆಜ್ಜೆ ಇಡಲಿರುವ ಮಕ್ಕಳನ್ನು ಸ್ವಾಗತಿಸಲು ಕಾಸರಗೋಡು ಜಿಲ್ಲೆಯು ಸಂಪೂರ್ಣ ಸಜ್ಜಾಗಿದೆ. ಅದರಂತೆ ಜೂನ್ 1ರಂದು ಜಿಲ್ಲೆಯ ಎಲ್ಲಾ ಸರಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಪ್ರವೇಶೋತ್ಸವ ಕಾರ್ಯಕ್ರಮಗಳು ಸಂಭ್ರಮ ಸಡಗರದಿಂದ ಹಾಗೂ ವಿಜೃಂಭಣೆಯಿಂದ ಜರಗಲಿವೆ.

ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಶಾಲಾ ಪ್ರವೇಶ ಸಮಾರಂಭ ನಡೆಯಲಿದೆ. ಸಾಮಾನ್ಯ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಾ ಕೇರಳ ಆಯೋಜಿಸಿರುವ ಈ ವರ್ಷದ ಕಾಸರಗೋಡು ಜಿಲ್ಲಾ ಮಟ್ಟದ ಪ್ರವೇಶ ಸಮಾರಂಭವು ಬೆಳಗ್ಗೆ 10 ಗಂಟೆಗೆ ಕೈಕೊಟ್ಟುಕಡವು ಪೂಕೋಯ ತಂಜಲ್ ಸ್ಮಾರಕ ವಿಎಚ್‌ಎಸ್ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವದ ಅಧಿಕೃತ ಉದ್ಘಾಟನೆಯನ್ನು ರಾಜ್ಯ ವಿದ್ಯುತ್, ಪರಿಸರ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸನ್ನಿ ಜೋಸೆಫ್ ನೆರವೇರಿಸುವರು. ತೃಕ್ಕರೀಪ್ಪುರ ಶಾಸಕ ಸಂದೀಪ್ ವಾರಿಯರ್ ಅಧ್ಯಕ್ಷತೆ ವಹಿಸುವರು. ಶಾಸಕರಾದ ಕಲ್ಲಟ್ರ ಮಾಹಿನ್ ಹಾಜಿ ಮತ್ತು ಎ.ಕೆ.ಎಂ.ಅಶ್ರಫ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ಕಾಸರಗೋಡು ಜಿಲ್ಲಾ ಪಂಚಾಯತ್ ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವವು ಬೆಳಗ್ಗೆ 9.30ಕ್ಕೆ ಚಾಯೋತ್ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ (ಜಿಎಚ್‌ಎಸ್‌ಎಸ್) ನಡೆಯಲಿದೆ. ಈ ಕಾರ್ಯಕ್ರಮವನ್ನು ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕ್ಕಾಪಿಲ್ ಉದ್ಘಾಟಿಸಲಿದ್ದಾರೆ. ಕಾಸರಗೋಡು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸುವರು.

ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಶಾಲೆಗಳಿಗೆ ಸ್ವಾಗತಿಸುವುದರ ಜೊತೆಗೆ ಜಿಲ್ಲೆಯ ಅತ್ಯುತ್ತಮ ಸಾಧಕರನ್ನು ಸನ್ಮಾನಿಸಲಾಗುವುದು. 2025–26ನೇ ಶೈಕ್ಷಣಿಕ ವರ್ಷದಲ್ಲಿ ಪ್ಲಸ್ ಟು ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಉನ್ನತ ಫಲಿತಾಂಶಗಳನ್ನು ಗಳಿಸಿದ ವಿದ್ಯಾರ್ಥಿಗಳು ಮತ್ತು ಎನ್‌ಎಂಎಂಎಸ್ ಹಾಗೂ ಸಿಎಂ ಕಿಡ್ಸ್ (ಎಲ್‌ಎಸ್‌ಎಸ್, ಯುಎಸ್‌ಎಸ್) ಮುಂತಾದ ವಿದ್ಯಾರ್ಥಿವೇತನ ಪರೀಕ್ಷೆಗಳಲ್ಲಿ ಉನ್ನತ ಫಲಿತಾಂಶಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.

ಸಕಲ ಸಿದ್ಧತೆಗಳು ಪೂರ್ಣ

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಎರಡೂ ಪ್ರವೇಶೋತ್ಸವಗಳಲ್ಲಿ ಮಕ್ಕಳಿಗೆ ಉಡುಗೊರೆಗಳನ್ನು ನೀಡಲಿದ್ದಾರೆ. ಜನಪ್ರತಿನಿಧಿಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ವಿವಿಧ ವಲಯಗಳ ಪ್ರಮುಖರು ಪ್ರವೇಶೋತ್ಸವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಮಕ್ಕಳನ್ನು ಸ್ವಾಗತಿಸಲು ಜಿಲ್ಲೆಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

ವೃತ್ತಿನಿರತ ಯಕ್ಷಗಾನ ಕಲಾವಿದರ 26ನೆಯ ಬೃಹತ್ ಸಮಾವೇಶದ ಪ್ರಧಾನ ಸಭಾ ಕಾರ್ಯಕ್ರಮದಲ್ಲಿ ಪರ್ಯಾಯ ಶೀರೂರು ವೇದವರ್ಧನತೀರ್ಥ ಶ್ರೀ

ಯಕ್ಷಗಾನವು ನಮ್ಮ ನಾಡಿನ ಸಂಸ್ಕೃತಿ, ಪುರಾಣಗಳನ್ನು ಉಳಿಸಿದ ಅತ್ಯುತ್ತಮ ಕಲೆ

ಉಡುಪಿ: ಯಕ್ಷಗಾನವು ನಮ್ಮ ಭವ್ಯ ಸಂಸ್ಕೃತಿ ಮತ್ತು ಪುರಾಣ ಕಥೆಗಳನ್ನು ತಲೆಮಾರುಗಳಿಂದ ಅತ್ಯಂತ ಯಶಸ್ವಿಯಾಗಿ ಉಳಿಸಿ, ಬೆಳೆಸಿಕೊಂಡು ಬಂದಿರುವ ಜನಪ್ರಿಯ ಕಲಾಪ್ರಕಾರವಾಗಿದೆ. ಬೇರೆ ಯಾವುದೇ ಸಾಂಸ್ಕೃತಿಕ ಕಲೆಯ ಪ್ರಸ್ತುತಿಯ ಸಂದರ್ಭದಲ್ಲೂ ಕಾಣದಷ್ಟು ಕಲಾಭಿಮಾನಿಗಳು ಕರಾವಳಿಯ ಯಕ್ಷಗಾನ ಪ್ರದರ್ಶನಗಳಲ್ಲಿ ಒಂದೆಡೆ ಸೇರುತ್ತಾರೆ. ಈ ಅಪಾರ ಜನಪ್ರಿಯತೆಯೇ ಯಕ್ಷಗಾನದ ಮಹೋನ್ನತೆಗೆ ಸಾಕ್ಷಿ ಎಂದು ಪರ್ಯಾಯ ಶ್ರೀ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನತೀರ್ಥ ಶ್ರೀಪಾದರು ನುಡಿದರು.

ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ 'ಯಕ್ಷಗಾನ ಕಲಾರಂಗ' 25 ವರ್ಷಗಳಿಂದ ನಡೆಸಿಕೊಂಡು ಬಂದಿರುವ ವೃತ್ತಿನಿರತ ಯಕ್ಷಗಾನ ಕಲಾವಿದರ 26ನೆಯ ಬೃಹತ್ ಸಮಾವೇಶದ ಪ್ರಧಾನ ಸಭಾ ಕಾರ್ಯಕ್ರಮದಲ್ಲಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಅನುಗ್ರಹ ಸಂದೇಶ ನೀಡಿದರು.

ವಿವಿಧ ಯಕ್ಷಗಾನ ಮೇಳಗಳ 800ಕ್ಕೂ ಹೆಚ್ಚು ವೃತ್ತಿಪರ ಕಲಾವಿದರು ಈ ಮೌಲ್ಯಯುತ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಸಮಾವೇಶಕ್ಕೆ ಶುಭಾಶಂಸನೆಗೈದರು. ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರುರಾಜ ಗಂಟಿಹೊಳೆ ಭಾಗವಹಿಸಿ ಶುಭ ಹಾರೈಸಿದರು.

ಕಲಾವಿದರ ಕಲ್ಯಾಣಕ್ಕೆ ಧನಸಹಾಯ ಹಾಗೂ ಪ್ರಶಸ್ತಿ ಪ್ರದಾನ

ಇದೇ ಮಹತ್ವದ ವೇದಿಕೆಯಲ್ಲಿ ಕಟೀಲು ಮೇಳದ ಪ್ರಸಿದ್ಧ ಕಲಾವಿದ ಶ್ರುತಕೀರ್ತಿ ರಾಜ್ ಅವರು ರಚಿಸಿರುವ 'ಯಕ್ಷಗಾನ ಶ್ರೀರಾಮ ಸೂಕ್ತ' ಎಂಬ ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಹಿರಿಯ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಅವರು ತಮ್ಮ 'ಪೂರ್ಣಚಂದ್ರ ಕಲಾ ಪ್ರತಿಷ್ಠಾನ'ದ ವತಿಯಿಂದ 25,000 ರೂ. ನಗದು ಪುರಸ್ಕಾರದ 'ಕೊಂಡದಕುಳಿ ರಾಮ ಹೆಗಡೆ' ಪ್ರಶಸ್ತಿ ಹಾಗೂ 1,00,000 ರೂ. ನಗದು ಪುರಸ್ಕಾರ ಒಳಗೊಂಡ 'ಉತ್ತರ ಕನ್ನಡ ಯಕ್ಷಶ್ರೀ' ಪ್ರಶಸ್ತಿ ನಿಧಿಗಳನ್ನು ಯಕ್ಷಗಾನ ಕಲಾರಂಗ ಸಂಸ್ಥೆಗೆ ಅಧಿಕೃತವಾಗಿ ಹಸ್ತಾಂತರಿಸಿದರು.



ಉಚಿತ ಆರೋಗ್ಯ ತಪಾಸಣೆ ಮತ್ತು ವಿಚಾರಗೋಷ್ಠಿ

ಇದಕ್ಕೂ ಮುನ್ನ ಮುಂಜಾವಿನ ಅವಧಿಯಲ್ಲಿ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ತಜ್ಞ ವೈದ್ಯರ ತಂಡದಿಂದ ಕಲಾವಿದರಿಗಾಗಿ ಹಮ್ಮಿಕೊಳ್ಳಲಾಗಿದ್ದ ಉಚಿತ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಕ್ಕೆ ಶ್ರೀಕೃಷ್ಣ ಮಠದ ಪ್ರಬಂಧಕರಾದ ವಾಸುದೇವ ಆಚಾರ್ಯ ಚಾಲನೆ ನೀಡಿದರು. ಈ ಆರೋಗ್ಯ ಶಿಬಿರವು ಡಾ. ಶೈಲಜಾ ಭಟ್ ಮತ್ತು ಡಾ. ರಾಜೇಶ್ ನಾವಡ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆಯಿತು.

ಪೂರ್ವಾಹ್ನ 11 ಗಂಟೆಗೆ ಕಲಾ ಮಂಡಲಮ್ ನಂದ ಕುಮಾರ್ ಮತ್ತು ತಂಡದವರಿಂದ 'ಕಲ್ಯಾಣಸೌಗಂಧಿಕಂ ತುಳ್ಳಲ್ ತ್ರಯಮ್' ಸಾಂಸ್ಕೃತಿಕ ಪ್ರದರ್ಶನ ಜರಗಿತು. ತದನಂತರ 'ಕಲೆ–ಕಲಾವಿದ–ಪ್ರೇಕ್ಷಕ : ಸಮನ್ವಯ' ಎಂಬ ವಿಷಯದ ಕುರಿತು ಆಯೋಜಿಸಲಾಗಿದ್ದ ವಿಶೇಷ ಗೋಷ್ಠಿಯಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ, ವಾಸುದೇವ ರಂಗಾ ಭಟ್, ನೀಲ್ಕೋಡು ಶಂಕರ ಹೆಗಡೆ, ಪ್ರಜ್ವಲ್ ಗುರುವಾಯನಕೆರೆ, ಮಹೇಶ್ ಸಾಣೂರು, ವಾದಿರಾಜ ಕಲ್ಲೂರಾಯ ಹಾಗೂ ನಂದೀಶ್ ಶೆಟ್ಟಿ ಬಿಲ್ಲಾಡಿ ಪಾಲ್ಗೊಂಡು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಪ್ರಸಂಗಕರ್ತ ಪವನ್ ಕಿರಣ್‌ಕೆರೆ ಸಮನ್ವಯಕಾರರಾಗಿದ್ದರು.

ಯಕ್ಷಗಾನ ಪೋಷಕರಾದ ಪಣಂಬೂರು ವಾಸುದೇವ ಐತಾಳ್, ಉದ್ಯಮಿಗಳಾದ ಪಿ. ಪುರುಷೋತ್ತಮ ಶೆಟ್ಟಿ, ಕುಯಿಲಾಡಿ ಸುರೇಶ್ ನಾಯಕ್, ಸಿಎ ಗಣೇಶ್ ಕಾಂಚನ್, ಹರಿಯಪ್ಪ ಕೋಟ್ಯಾನ್, ಆನಂದ ಪಿ. ಸುವರ್ಣ, ಸಂಸ್ಥೆಯ ಉಪಾಧ್ಯಕ್ಷರಾದ ಪಿ. ಕಿಶನ್ ಹೆಗ್ಡೆ, ವಿ. ಜಿ. ಶೆಟ್ಟಿ, ಕೋಶಾಧಿಕಾರಿ ಪ್ರೊ. ಕೆ. ಸದಾಶಿವ ರಾವ್ ಹಾಗೂ ಹಿರಿಯ ಕಲಾವಿದರಾದ ಆರ್ಗೋಡು ಮೋಹನದಾಸ ಶೆಣೈ, ರೆಂಜಾಳ ರಾಮಕೃಷ್ಣ ರಾವ್ ಮತ್ತು ವಿ. ಗಣಪತಿ ಭಟ್ ಉಪಸ್ಥಿತರಿದ್ದರು. ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮುರಲಿ ಕಡೆಕಾರ್ ಕಾರ್ಯಕ್ರಮ ನಿರೂಪಿಸಿದರು.

ಕಲ್ಯಾಣ ಯೋಜನೆಗಳ ಹಸ್ತಾಂತರ

ಸಮಾವೇಶದ ಅಂಗವಾಗಿ ಯಕ್ಷಗಾನ ಕಲಾವಿದ ಸತೀಶ್ ಪೂಜಾರಿ ನೈನಾಡು ಅವರಿಗೆ 25,000 ರೂ.ಗಳ ತುರ್ತು ವೈದ್ಯಕೀಯ ಧನಸಹಾಯವನ್ನು ಹಸ್ತಾಂತರಿಸಲಾಯಿತು. ಇದೇ ವೇಳೆ ಅರ್ಹ 20 ಜನ ವೃತ್ತಿನಿರತ ಕಲಾವಿದರ ಸ್ವಂತ ಮನೆ ನಿರ್ಮಾಣದ ಕನಸಿಗೆ ಆಸರೆಯಾಗಿ ತಲಾ 20,000 ರೂ.ಗಳ ಗೃಹನಿರ್ಮಾಣ ಉಡುಗೊರೆ ನೀಡಿ ಗೌರವಿಸಲಾಯಿತು. ಸಮಾವೇಶದಲ್ಲಿದ್ದ 800ಕ್ಕೂ ಅಧಿಕ ಕಲಾವಿದರಿಗೆ ದೈನಂದಿನ ಬಳಕೆಯ ಉಪಯುಕ್ತ ಉಡುಗೊರೆಗಳನ್ನು ವಿತರಿಸಲಾಯಿತು.

ರಜತ್ ಪಡೆಗೆ ದ್ವಿತೀಯ ದಿಗ್ವಿಜಯ | ಆರ್‌ಸಿಬಿ ಕಿರೀಟ ಅಚಲ | ಜಿಟಿ ವಿರುದ್ಧ 5 ವಿಕೆಟ್ ಜಯ

ಬೆಂಗ್ಳೂರು ರಾಯಲ್ಸ್ ಮತ್ತೆ ಕಿಂಗ್ಸ್

ಅಹಮದಾಬಾದ್: ಮತ್ತೆ ಅದೆ ಕ್ರೀಡಾಂಗಣ, ಸಹಸ್ರಾರು ಸಂಖ್ಯೆಯಲ್ಲಿ ಬಂದ ಅಭಿಮಾನಿಗಳ ಸಂಭ್ರಮ. ಎಲ್ಲೆಲ್ಲೂ ಒಂದೇ ಧ್ವನಿ, ಒಂದೆ ಕಹಳೆ ಆರ್‌ಸಿಬಿ.. ಆರ್‌ಸಿಬಿ.. ಎಂಬ ಕೂಗಾಟ. ಐಪಿಎಲ್ ಫೈನಲ್ ಪಂದ್ಯದ ವೇಳೆ ಕಳೆದ ಬಾರಿಯ ಇತಿಹಾಸ ಮರುಕಳಿಸಿದಂತಿತ್ತು. ಆದರೆ ಈ ಬಾರಿ ಎದುರಾಳಿ ಗುಜರಾತ್ ಟೈಟಾನ್ಸ್. ಆದರೆ ಪ್ರಾಬಲ್ಯ ಕಳೆದ ಬಾರಿಗಿಂತ ಹೆಚ್ಚು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ತನ್ನ ಚಾಂಪಿಯನ್ ಪಟ್ಟ ಉಳಿಸಿಕೊಂಡಿರುವ ಆರ್‌ಸಿಬಿ ಗುಜರಾತ್ ಟೈಟಾನ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 155 ರನ್ ಮಾತ್ರ ಗಳಿಸಿತು. ವಾಷಿಂಗ್ಟನ್ ಸುಂದರ್ 50* ರನ್ ಗಳಿಸಿದರು. ಆರ್‌ಸಿಬಿ ಪರ ರಸೀಖ್ ಸಲಾಂ ಧಾರ್ 3 ವಿಕೆಟ್ ಪಡೆದರೆ, ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ತಲಾ 2 ವಿಕೆಟ್ ಪಡೆದರು. ಕೃಣಾಲ್ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಆರ್‌ಸಿಬಿ 18 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ಕೊಹ್ಲಿ ಅಜೇಯ 75 ರನ್ ಗಳಿಸಿದರು.ರಸೀಖ್ ಸಲಾಂ ಧಾರ್ ಪಂದ್ಯಶ್ರೇಷ್ಠ ಗೆದ್ದುಕೊಂಡರೆ, ವಿರಾಟ್ ಕೊಹ್ಲಿ ಪಂದ್ಯ ಗೆಲ್ಲಿಸಿದ ರೂವಾರಿ ಅನಿಸಿಕೊಂಡರು. ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ಕೂಡ 2 ವಿಕೆಟ್ ಪಡೆದುಕೊಂಡರು. ಗುಜರಾತ್ ಪರ ಬ್ಯಾಟಿಂಗ್ ವೇಳೆ ವಾಷಿಂಗ್ಟನ್ ಆಸರೆಯಾದರೆ, ಬೌಲಿಂಗ್ ವೇಳೆ ರಶೀದ್ ಹೋರಾಡಿದರು.

ವೇಗಿಗಳ ಕೈಚಳಕ: ಬ್ಯಾಟಿಂಗ್‌ಗಿಳಿದ ಗುಜರಾತ್ ಟೈಟಾನ್ಸ್ ಆರಂಭಿಕ ಆಘಾತ ಎದುರಿಸಿತು. ವೇಗಿಗಳಾದ, ಹ್ಯಾಜೆಲ್ವುಡ್, ಭುವಿ ಮತ್ತು ರಸೀಖ್ ದಾಳಿಗೆ ತಂಡದ ಪ್ರಮುಖ ಬ್ಯಾಟಿಗರಾದ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ ಬೇಗನೇ ಪೆವಿಲಿನ್ ದಾರಿ ಹಿಡಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಅಲ್ಪ ಹೊತ್ತು ನಿಂತರೂ ರನ್ ಮಾಡಲಾಗಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಸುಂದರ್ ಉತ್ತಮ ಬ್ಯಾಟಿಂಗ್ ಮಾಡಿದ ನಂತರ ಪವರ್‌ಪ್ಲೇನಲ್ಲಿ ಗುಜರಾತ್ 45 ರನ್ ಗಳಿಸಿತು. ತಂಡದ ಶಕ್ತಿಯಾಗಿದ್ದ ಗಿಲ್ ಮತ್ತು ಸಾಯಿ ಸುದರ್ಶನ್ ವಿಕೆಟ್ ಕಳೆದುಕೊಂಡಿತ್ತು. ಮಧ್ಯಮ ಓವರ್‌ಗಳಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ಜಾಸ್ ಬಟ್ಲರ್ ಕೊಂಚ ಹೊತ್ತು ಕ್ರೀಜ್‌ಗೆ ಅಂಟಿಕೊಂಡು ನಿಂತರು. 23 ಬಾಲ್‌ಗಳಲ್ಲಿ 19 ರನ್ ಗಳಿಸಿದ ಬಟ್ಲರ್ ಕೃಣಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಅಲ್ಲಿಂದ ಆರ್‌ಸಿಬಿ ಪಡೆ ಹಿಗ್ಗಿತು. ಬಲಿಷ್ಠ ಬ್ಯಾಟಿಗರು ವಿಕೆಟ್ ಒಪ್ಪಿಸಿದ ನಂತರ ಗುಜರಾತ್ ತತ್ತರಿಸಿತು. ಸುಂದರ್ ಒಂದು ಬದಿಯಲ್ಲಿ ನಿಧಾನವಾಗಿ ಅರ್ಧಶತಕದತ್ತ ಸಾಗಿದರು. ಮಧ್ಯಮ ಓವರ್‌ಗಳಲ್ಲಿ ಗುಜರಾತ್ 70 ರನ್ ಗಳಿಸಿತು. ಅಲ್ಲಿ 3 ವಿಕೆಟ್ ಬಿದ್ದವು. ಡೆತ್ ಓವರ್‌ಗಳಲ್ಲಿ ಟೇವಾಟಿಯ 7, ರಶೀದ್ ಖಾನ್ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಏಕಾಂಗಿ ಹೋರಾಟ ನಡೆಸಿದ ವಾಷಿಂಗ್ಟನ್ ಸುಂದರ್ 37 ಬಾಲ್‌ಗಳಲ್ಲಿ ಔಟಾಗದೆ 50 ರನ್ ಗಳಿಸಿದರು.

ವಿರಾಟ ಆರ್ಭಟ

ಗುರಿ ಬೆನ್ನತ್ತುವಾಗಲೂ ಆರ್‌ಸಿಬಿ ಅದೇ ಜೋಶ್ ಅದೇ ಪ್ರಾಬಲ್ಯದೊಂದಿಗೆ ಮುನ್ನಡೆಯಿತು. ಕಾಲಿಗೆ ಗಾಯವಾದರೂ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭದ ಜತೆಗೆ ಗೆಲುವಿನ ಅಡಿಪಾಯ ಹಾಕಿದರು. ವಿರಾಟ್ ಕೊಹ್ಲಿ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 16 ಬಾಲ್‌ಗಳಲ್ಲಿ 32 ರನ್‌ಗಳಿಸಿ ವೆಂಕಟೇಶ್ ವಿಕೆಟ್ ಒಪ್ಪಿಸಿದರು. ಪಡಿಕ್ಕಲ್ ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ಪವರ್‌ಪ್ಲೇದಲ್ಲೇ ಆರ್‌ಸಿಬಿ 70 ರನ್ ಬಾರಿಸಿ ಗೆಲುವಿನ ಹಾದಿ ಹಿಡಿದಿತ್ತು. ಬಂದ ಬೌಲರ್‌ಗಳನ್ನಲ್ಲಾ ದಂಡಿಸಿದ ಕೊಹ್ಲಿ ಅರ್ಧಶತಕದತ್ತ ಸಾಗಿದರು. 9ನೇ ಓವರ್ ಬೌಲಿಂಗ್ ಮಾಡಲು ಬಂದ ರಶೀದ್ ಖಾನ್ ಸರಸರನೇ ಎರಡು ವಿಕೆಟ್ ಕಿತ್ತರು. ಬಳಿಕ ಡೇವಿಡ್ ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಆದರೆ 24 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ವಿರಾಟ್ ಕೊಹ್ಲಿ ಒತ್ತಡ ತಡೆದುಕೊಂಡರು. ಉಳಿದ ಪಂದ್ಯವನ್ನು ಮುಗಿಸಿಕೊಂಡೇ ಬಂದರು. ಕೊನೆಯಲ್ಲಿ ಕೊಹ್ಲಿ 75 ರನ್ ಗಳಿಸಿದರೆ ಜಿತೇಶ್ ಶರ್ಮ 11 ರನ್‌ಗಳಿಸಿದರು.



ಸಂಕ್ಷಿಪ್ತ ಸ್ಕೋರ್
ಗುಜರಾತ್ 20 ಓವರ್‌ಗಳಲ್ಲಿ
155/8: ಸುಂದರ್ 50*, ನಿಶಾಂತ್ 20; ರಸೀಖ್ 27/3
ಆರ್‌ಸಿಬಿ 18 ಓವರ್‌ಗಳಲ್ಲಿ
161/5: ಕೊಹ್ಲಿ 75*, ವೆಂಕಟೇಶ್ 32

ಕಮಾಲ್ ಕ್ಯಾಚ್(ಟಾಪ್ 5)



1. ಮನೀಶ್ ಪಾಂಡೆ

ಕೆಕೆಆರ್–ಆರ್‌ಸಿಬಿ ಪಂದ್ಯದ ವೇಳೆ ಟಿಮ್ ಡೇವಿಡ್ ಬಾರಿಸಿದ ವೇಗದ ಶಾಟ್‌ಗೆ ಪಾಯಿಂಟ್‌ನಲ್ಲಿದ್ದ ಮನೀಷ್ ಪಾಂಡೆ ಎಡಭಾಗಕ್ಕೆ ಹಾರುತ್ತಾ ಒಂದು ಕೈಯಲ್ಲಿ ಕ್ಯಾಚ್ ಮಾಡಿದರು.

2. ಶ್ರೇಯಸ್ ಅಯ್ಯರ್

ಮುಂಬೈ ಪಂಜಾಬ್ ಪಂದ್ಯದ ವೇಳೆ ಶ್ರೇಯಸ್ ಅಯ್ಯರ್ ಹಾರ್ದಿಕ್ ಲಾಂಗ್‌ಆನ್‌ನತ್ತ ಬಾರಿಸಿದ ಬಾಲನ್ನು ಗಾಳಿಯಲ್ಲಿ ತೇಲಿ ಬಾರ್ಟ್‌ಲೆಟ್ ಕೈಗಿತ್ತರು. ಅದು ಕೂಡ ಬೆಸ್ಟ್ ಕ್ಯಾಚ್ ಅನಿಸಿಕೊಂಡಿತು.

3. ಫಿಲ್ ಸಾಲ್ಟ್

ಮೊದಲ ಪಂದ್ಯದಲ್ಲೇ ಬೆಂಗಳೂರಲ್ಲಿ ಫಿಲ್ ಸಾಲ್ಟ್ ಕಮಾಲ್ ಮಾಡಿದರು. ಇಶಾನ್ ಕಿಶನ್ ಬಾರಿಸಿದ ಬಾಲನ್ನು ಒಂದೇ ಕೈಯಲ್ಲಿ ಹಿಡಿದು ಮೆರೆದಾಡಿದರು.

4. ರಿಷಭ್ ಪಂತ್

ರಿಷಭ್ ಪಂತ್ ವಿಕೆಟ್ ಹಿಂದೆ ಮಿಲಿಸೆಕೆಂಡ್‌ಗಳಲ್ಲಿ ಪ್ರತಿಕ್ರಿಯಿಸಿ ಹಿಡಿದ ಕ್ಯಾಚ್ ಹೈಲೈಟ್‌ಗಳಲ್ಲಿ ಸ್ಥಾನ ಪಡೆದಿತು. ಜೈಸ್ವಾಲ್ ಬ್ಯಾಟ್‌ಗೆ ತಾಗಿ ಬಂದ ಬಾಲನ್ನು ನೋಡುತ್ತಾ ಪಂತ್ ಎಲ್‌ಬಿಗೆ ಮನವಿ ಮಾಡಿದರು. ಆದಾಗ್ಯೂ ನಿಂತಲೇ ದಿಕ್ಕು ಬದಲಾಯಿಸಿ ಕ್ಯಾಚ್ ಹಿಡಿದರು.

5. ಸರ್ಫರಾಜ್ ಖಾನ್

ಚೆನ್ನೈ ತಂಡದ ಸರ್ಫರಾಜ್ ಖಾನ್ ದಿಲ್ಲಿಯ ಅಕ್ಷರ್ ಪಟೇಲ್ ವಿರುದ್ಧ ನೆಲಕ್ಕೆ ತಾಕುವ ಮುನ್ನ ಹಿಡಿದ ಕ್ಯಾಚ್ ಅಭಿಮಾನಿಗಳನ್ನು ಅಚ್ಚರಿಗೊಳಿಸಿತು.

ಐಪಿಎಲ್ ವಿಜೇತರ ಪಟ್ಟಿ

ವರ್ಷ	ತಂಡ	ನಾಯಕ
2008	ರಾಜಸ್ಥಾನ ರಾಯಲ್ಸ್	ಶೇನ್ ವಾರ್ನ್
2009	ಡೆಕ್ಕನ್ ಚಾರ್ಜರ್ಸ್	ಏಡಮ್ ಗಿಲ್‌ಕ್ರಿಸ್ಟ್
2010	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2011	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2012	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2013	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2014	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2015	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2016	ಸನ್‌ರೈಸರ್ಸ್ ಹೈದ್ರಾಬಾದ್	ಡೇವಿಡ್ ವಾರ್ನರ್
2017	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2018	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2019	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2020	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2021	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2022	ಗುಜರಾತ್ ಟೈಟಾನ್ಸ್	ಹಾರ್ದಿಕ್ ಪಾಂಡ್ಯ
2023	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2024	ಕೋಲ್ಕತ್ತಾ ನೈಟ್ ರೈಡರ್ಸ್	ಶ್ರೇಯಸ್ ಅಯ್ಯರ್
2025	ಬೆಂಗಳೂರು	ರಜತ್ ಪಾಟಿದಾರ್
2026	ಬೆಂಗಳೂರು	ರಜತ್ ಪಾಟಿದಾರ್

ದಾಖಲೆಯ ನೋಟ

1.ವೈಭವ್ (ಆರ್‌ಆರ್)
- ಗೇಲ್ 58 ಸಿಕ್ಸರ್ ದಾಖಲೆ ಉಡೀಸ್
- ಅನ್‌ಕ್ಯಾಪ್ಡ್ ಆಟಗಾರರಾಗಿ 700 ರನ್ ದಾಟಿದ ಮೊದಲ ಕ್ರಿಕೆಟಿಗ

2. ವಿರಾಟ್ (ಆರ್‌ಸಿಬಿ)
- ಐಪಿಎಲ್‌ನಲ್ಲಿ 9 ಸಾವಿರ ರನ್ ಪೂರೈಸಿದ ವಿಶ್ವದ ಮೊದಲ ಆಟಗಾರ
- ಟಿ20ಯಲ್ಲಿ 12 ಸಾವಿರ ರನ್ ಪೂರೈಸಿದ ಆಟಗಾರ

3. ರಾಹುಲ್(ದಿಲ್ಲಿ)
- 152* ರನ್ ಬಾರಿಸಿದ ರಾಹುಲ್ ಐಪಿಎಲ್‌ನಲ್ಲಿ ಭಾರತೀಯರ ಅತಿ ಹೆಚ್ಚು ವೈಯಕ್ತಿಕ ಸ್ಕೋರ್.

4. ಉರ್ವಿಲ್ (ಚೆನ್ನೈ)
- 13 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಉರ್ವಿಲ್ ಐಪಿಎಲ್‌ನ ಅತಿ ವೇಗದ ಅರ್ಧ ಶತಕ ಬಾರಿಸಿದ ಜೈಸ್ವಾಲ್ ದಾಖಲೆ ಸರಿಗಟ್ಟಿದರು.

5. ಪಂಜಾಬ್ ಕಿಂಗ್ಸ್
- ದಿಲ್ಲಿ ವಿರುದ್ಧ 264 ರನ್ ಚೇಸ್ ಮಾಡಿದ ಪಂಜಾಬ್ ಐಪಿಎಲ್‌ನ ಅತಿ ಹೆಚ್ಚು ರನ್ ಗುರಿ ಮುಟ್ಟಿದೆ.

19ನೇ ಆವೃತ್ತಿ 19 ವಿಶೇಷ

1. ಪ್ರತಿ 11.6 ಎಸೆತಕ್ಕೊಮ್ಮೆ 1 ಸಿಕ್ಸರ್ ದಾಖಲಾಗಿದೆ.
2. ಪ್ಲೇಆಫ್‌ಗಳ ಮುನ್ನವೇ 1290ಕ್ಕೂ ಹೆಚ್ಚು ಸಿಕ್ಸರ್‌ಗಳು ಸಿಡಿದವು.
3. ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ 10 ಫ್ರಾಂಚೈಸಿಗಳ ಪರವೂ ಕನಿಷ್ಠ ಒಬ್ಬ ಬ್ಯಾಟರ್ ಶತಕ ಬಾರಿಸಿದರು.
4. ಒಟ್ಟು 61 ಬಾರಿ 200+ ಸ್ಕೋರ್ ದಾಖಲಾಗಿದೆ.
5. 220+ ಗುರಿಯನ್ನು 9 ಬಾರಿ ಯಶಸ್ವಿಯಾಗಿ ಬೆನ್ನಟ್ಟಲಾಗಿದೆ.
6. ಹಿಂದಿನ 18 ಸೀಸನ್‌ಗಳಲ್ಲಿ ಒಟ್ಟು 5 ಬಾರಿ ಮಾತ್ರ 220+ ಚೇಸ್ ಆಗಿತ್ತು!
7. ಒಟ್ಟು 26,700ಕ್ಕೂ ಹೆಚ್ಚು ರನ್‌ಗಳು ದಾಖಲಾಗಿವೆ.
8. ಟೂರ್ನಿಯ ಸರಾಸರಿ ರನ್‌ರೇಟ್ ಸುಮಾರು 10 ರನ್ ಪ್ರತಿ ಓವರ್.
9. ಕೆ.ಎಲ್. ರಾಹುಲ್ 67 ಎಸೆತಗಳಲ್ಲಿ 152 ರನ್ ಸಿಡಿಸಿ ಐಪಿಎಲ್‌ನಲ್ಲಿ ಭಾರತೀಯ ಬ್ಯಾಟರ್ ಗಳಿಸಿದ ಗರಿಷ್ಠ ವೈಯಕ್ತಿಕ ಸ್ಕೋರ್ ದಾಖಲಿಸಿದರು.
10. ವೈಭವ್ ಸೂರ್ಯವಂಶಿ ಪವರ್‌ಪ್ಲೇ ಓವರ್‌ಗಳಲ್ಲೇ 37 ಸಿಕ್ಸರ್‌ಗಳು ಬಾರಿಸಿ ಮತ್ತೊಂದು ಸರ್ವಕಾಲಿಕ ದಾಖಲೆ ನಿರ್ಮಿಸಿದರು.
11. ಮೊದಲ ಬಾರಿಗೆ ಭಾರತೀಯ ಬ್ಯಾಟರ್‌ಗಳ ಒಟ್ಟಾರೆ ಸ್ಟ್ರೈಕ್‌ರೇಟ್ (156+) ವಿದೇಶಿ ಆಟಗಾರರ ಸ್ಟ್ರೈಕ್‌ರೇಟ್‌ಗಿಂತ (155) ಹೆಚ್ಚು ದಾಖಲಾಗಿದೆ
12. ಮೊದಲ 3 ಓವರ್‌ಗಳ ಒಟ್ಟಾರೆ ರನ್‌ರೇಟ್ 9.52: ಇತಿಹಾಸದಲ್ಲೇ ಗರಿಷ್ಠ
13. ಗೆಲ್ಲಲು ತಂಡಕ್ಕೆ ಬೇಕಾದದ್ದು ಸರಾಸರಿ 217+ ರನ್, ಇತಿಹಾಸದಲ್ಲೇ ಗರಿಷ್ಠ
14. ಕೈತಪ್ಪಿದ 169 ಕ್ಯಾಚ್‌ಗಳು
15. ಟೂರ್ನಿಯ ಒಟ್ಟು ರನ್‌ಗಳಲ್ಲಿ 65.2% ರನ್‌ಗಳು ಬೌಂಡರಿಗಳಿಂದಲೇ ಬಂದಿವೆ.
16. ಗುಜರಾತ್ ತಂಡದ ಸಾಯಿ ಸುದರ್ಶನ್ ಇತಿಹಾಸದಲ್ಲೇ ಮೊದಲ ಬಾರಿಗೆ ಸಂಭವಿಸಿದ ಅಪರೂಪದ ರೀತಿಯ ಔಟ್‌ಗೆ ಬಲಿಯಾಗಿದ್ದಾರೆ.
17. ಟಾಪ್ ಬ್ಯಾಟರ್‌ಗಳ ಟಾಪ್ 3ರಲ್ಲಿ ಮೂವರೂ ಆರಂಭಿಕರೇ ಹೌದು.
18. ಟಾಪ್ 5 ಬೌಲರ್‌ಗಳಲ್ಲಿ ಸ್ಪಿನ್ನರ್‌ಗಳೇ ಇಲ್ಲ.
19. ಕೆಕೆಆರ್-ಎಲ್‌ಎಸ್‌ಜಿ: ಒಂದೇ ಸೂಪರ್ ಓವರ್

ಸತತ ಎರಡನೇ ಟ್ರೋಫಿ

ಈ ಗೆಲುವಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸತತ ಎರಡು ಟ್ರೋಫಿ ಗೆದ್ದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ಸಾಧನೆಯನ್ನು ಚೆನ್ನೈ 2010–2011ರಲ್ಲಿ ಮಾಡಿತ್ತು. 2019–2020ರಲ್ಲಿ ಮುಂಬೈ ಇಂಡಿಯನ್ಸ್ ತಂಡ ಮಾಡಿತ್ತು.



ಎರಡನೇ ಟ್ರೋಫಿ ಗೆಲ್ಲಿಸಿದ 4ನೇ ನಾಯಕ ರಜತ್ ಪಾಟಿದಾರ್

ಐಪಿಎಲ್ ಇತಿಹಾಸದಲ್ಲಿ 2 ಟ್ರೋಫಿ ಗೆಲ್ಲಿಸಿದ 4ನೇ ನಾಯಕ ಎಂಬ ಪಟ್ಟವನ್ನು ರಜತ್ ಪಾಟಿದಾರ್ ಅಲಂಕರಿಸಿದರು. ಇದಕ್ಕೂ ಮುನ್ನ ಈ ದಾಖಲೆಯನ್ನು ಮಹೇಂದ್ರ ಸಿಂಗ್ ಧೋನಿ, ರೋಹಿತ್ ಶರ್ಮ ಮತ್ತು ಗೌತಂ ಗಂಭೀರ್ ಮಾಡಿದ್ದಾರೆ. ಈ ಪಟ್ಟಿಗೆ ಸೇರಿರುವ ರಜತ್ ಪಾಟಿದಾರ್ ಸತತ ಟ್ರೋಫಿ ಗೆಲ್ಲಿಸಿದ 3ನೇ ನಾಯಕ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಬ್ಯಾಟಿಗರ ಭರಾಟೆ

ಎಂದಿನಂತೆ ಈ ಬಾರಿಯೂ ಐಪಿಎಲ್‌ನಲ್ಲಿ ಬ್ಯಾಟಿಗರದ್ದೇ ಭರಾಟೆ ನಡೆಯಿತು. ವೈಭವ್ ಸೂರ್ಯವಂಶಿ, ಶುಭಮನ್ ಗಿಲ್, ಸಾಯಿ ಸುದರ್ಶನ್ ವಿರಾಟ್ ಕೊಹ್ಲಿ ಸೇರಿದಂತೆ ವಿವಿಧ ಬ್ಯಾಟಿಗರು ರನ್ ಹೊಳೆ ಹರಿಸಿದ್ದಾರೆ. ಹತ್ತಾರು ದಾಖಲೆಗಳನ್ನು ಬರೆದಿದ್ದಾರೆ. ಹಾಗಿದ್ದರೆ ಟಾಪ್ 3 ಬ್ಯಾಟರ್‌ಗಳ್ಯಾರು ಮತ್ತು ಅವರ ಆಟವೇನು?

ವೈಭವ್ ಸೂರ್ಯವಂಶಿ



ಇನ್ನಿಂಗ್ಸ್: 16
ರನ್: 776
ಹೈಸ್ಕೋರ್: 103
ಶತಕ: 1
ಅರ್ಧಶತಕ: 5
ಸ್ಟ್ರೈಕ್‌ರೇಟ್: 237.30

ಈ ಬಾರಿಯ ಐಪಿಎಲ್‌ನಲ್ಲಿ ಸೂರ್ಯವಂಶಿಯದ್ದೇ ಹವಾ. ಲಕ್ಷಾಂತರ ಅಭಿಮಾನಿಗಳನ್ನು ಮೈದಾನಕ್ಕೆ ಸೆಳೆದ ಸೂರ್ಯವಂಶಿ ಮೊದಲನೇ ಪಂದ್ಯದಿಂದಲೂ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಪ್ಲೇಆಫ್‌ಗಳಲ್ಲಿ ಎರಡು ಶತಕ ವಂಚಿತ ಇನ್ನಿಂಗ್ಸ್ ಹೊರತಾಗ್ಯೂ 1 ಶತಕ ಬಾರಿಸಿರುವ ಅವರು, 48.50 ಅವರೇಜ್ ಹೊಂದಿದ್ದಾರೆ.

ಶುಭಮನ್ ಗಿಲ್



ಇನ್ನಿಂಗ್ಸ್: 16
ರನ್: 732
ಹೈಸ್ಕೋರ್: 104
ಶತಕ: 1
ಅರ್ಧಶತಕ: 6
ಸ್ಟ್ರೈಕ್‌ರೇಟ್: 163.2

ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಈ ಬಾರಿ ತಮ್ಮ ಬ್ಯಾಟಿಂಗ್ ಶೈಲಿಯನ್ನೇ ಬದಲಾಯಿಸಿದರು. ವಿಶ್ವಕಪ್ ತಂಡದಲ್ಲಿ ಆಡದೆ ಹಿಂದುಳಿದಿದ್ದ ಅವರು, ಒಂದು ಶತಕವನ್ನೂ ಬಾರಿಸಿದ್ದಾರೆ. 48.13 ಅವರೇಜ್‌ನಲ್ಲಿ ನಾಯಕನಾಟವಾಡಿದ್ದಾರೆ. ಇದಲ್ಲದೆ ವಿವಿಧ ಪಂದ್ಯಗಳಲ್ಲಿ ಪಂದ್ಯಶ್ರೇಷ್ಠವನ್ನೂ ಗೆದ್ದಿದ್ದಾರೆ.

ಸಾಯಿ ಸುದರ್ಶನ್



ಇನ್ನಿಂಗ್ಸ್: 17
ರನ್: 722
ಹೈಸ್ಕೋರ್: 100
ಶತಕ: 1
ಅರ್ಧಶತಕ: 8
ಸ್ಟ್ರೈಕ್‌ರೇಟ್: 157.98

ಎಡಗೈ ದಾಂಡಿಗರಾದ ಸಾಯಿ ಸುದರ್ಶನ್ ಕಳೆದ ಮೂರು ಆವೃತ್ತಿಗಳಲ್ಲಿ ಗಮನಾರ್ಹ ಪ್ರದರ್ಶನ ನೀಡುತ್ತಿದ್ದಾರೆ. ಗುಜರಾತ್ ತಂಡದ ಪ್ರಮುಖ ಬ್ಯಾಟರ್, ಬೌಲರ್‌ಗಳಿಗೆ ದುಸ್ವಪ್ನವಾಗಿ ಕಾಡುತ್ತಾ ಬಂದಿದ್ದಾರೆ. ಈ ಬಾರಿಯೂ 700ರ ಗಡಿ ದಾಟಿರುವ ಅವರು, 47.33 ಅವರೇಜ್ ಹೊಂದಿದ್ದಾರೆ.

ಬೌಲರ್‌ಗಳ ಅಟ್ಟಹಾಸ

ಬ್ಯಾಟಿಗರನ್ನು ಕಡಿವಾಣ ಹಾಕುವುದರಲ್ಲಿ ಬೌಲರ್‌ಗಳು ಕೂಡ ಅಷ್ಟೇ ಮೇಲುಗೈ ಸಾಧಿಸಿದ್ದಾರೆ. ಸ್ಪಿನ್ನರ್‌ಗಳು ಕಡಿಮೆ ಸಾಹಸ ಮಾಡಿದ್ದರೂ ಭುವನೇಶ್ವರ್ ಕುಮಾರ್ ಅಂಥ ಅಪ್ರತಿಮ ವೇಗಿಗಳು ಈ ಬಾರಿಯ ಲೀಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಹಾಗಿದ್ದರೆ ಯಾರು ಟಾಪ್ 3 ಬೌಲರ್ಸ್?

ಕಾಗಿಸೋ ರಬಾಡ



ಇನ್ನಿಂಗ್ಸ್: 17
ಓವರ್ಸ್: 64.4
ವಿಕೆಟ್: 29
ಅತ್ಯುತ್ತಮ: 25/3
ಎಕನಾಮಿ: 9.43

ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಕಾಗಿಸೋ ರಬಾಡ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಮಿಂಚಿದರು. ವೇಗದ ಬೌಲಿಂಗ್ ಜತೆಗೆ ವೇರಿಯೇಶನ್‌ಗಳನ್ನು ತಂದ ಅವರು, ಗೆಲುವಿನಲ್ಲಿ ಮಿಂಚಿದ್ದಾರೆ. ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ಭುವನೇಶ್ವರ್ ಕುಮಾರ್



ಇನ್ನಿಂಗ್ಸ್: 16
ಓವರ್ಸ್: 60
ವಿಕೆಟ್: 28
ಅತ್ಯುತ್ತಮ: 17/3
ಎಕನಾಮಿ: 9.31

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವಿನ ಗುಟ್ಟಾಗಿರುವ ಭುವನೇಶ್ವರ್ ಕುಮಾರ್ ಇಡೀ ಐಪಿಎಲ್‌ನಲ್ಲೇ ಬೆಸ್ಟ್ ಬೌಲರ್ ಅನಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ಬ್ಯಾಟಿಗರಿಗೆ ದುಸ್ವಪ್ನವಾಗಿ ಕಾಡಿರುವ ಭುವಿ ಸ್ವಿಂಗ್ ಮೂಲಕವೇ ಮೈದಾನದಲ್ಲಿ ಮತ್ತೊಮ್ಮೆ ಮೆರೆದಾಡಿದ್ದಾರೆ.

ಜೋಫ್ರಾ ಆರ್ಚರ್



ಇನ್ನಿಂಗ್ಸ್: 16
ಓವರ್ಸ್: 61.4
ವಿಕೆಟ್: 28
ಅತ್ಯುತ್ತಮ: 25/3
ಎಕನಾಮಿ: 9.43

ರಾಜಸ್ಥಾನದ ಉತ್ತಮ ಅಭಿಯಾನದ ಪ್ರಮುಖ ಕಾರಣ ಅನಿಸಿರುವ ಜೋಫ್ರಾ ಆರ್ಚರ್ ಟಾಪ್ ಬೌಲರ್‌ಗಳಲ್ಲಿ ಒಬ್ಬರು. ಪ್ರತಿ ಪಂದ್ಯದಲ್ಲೂ ಅವರ ಅತ್ಯುತ್ತಮ ವೇಗದ ದಾಳಿಯೊಂದಿಗೆ ಸ್ವಿಂಗ್ ಮತ್ತು ವೇರಿಯೇಶನ್‌ಗಳೊಂದಿಗೆ ಮಿಂಚಿದ್ದಾರೆ. ಪ್ಲೇಆಫ್ ಹಂತದಲ್ಲೂ ಅವರು ಅತ್ಯುತ್ತಮ ಪ್ರದರ್ಶನವನ್ನೇ ನೀಡಿದ್ದಾರೆ.

ವೈಭವ್ ವಿಸ್ಮಯ

ವಿಶ್ವದ ಕ್ರಿಕೆಟ್ ಅಭಿಮಾನಿಗಳಿಗೆ ಈ ಬಾರಿ ಮನರಂಜಿಸಿ ರೋಮಾಂಚನಗೊಳಿಸಿದವರೆಂದರೆ ವೈಭವ್ ಸೂರ್ಯವಂಶಿ. 14 ವರ್ಷದವರಿದ್ದಾಲೇ ಐಪಿಎಲ್ ಮಹಾ ಕೂಟಕ್ಕೆ ಕಾಲಿಟ್ಟ ಅವರು, ಬಂದ ದಿನದಂದೆ ಐಪಿಎಲ್ ಆಡಿದ ಅತಿ ಕಿರೀಯ ಆಟಗಾರ ಎಂಬ ದಾಖಲೆ ಮಾಡಿದರು, ಮುಂದೆ ಮುಟ್ಟಿದ್ದೆಲ್ಲಾ ಚಿನ್ನ. 15 ವರ್ಷದವರಾಗಿರುವ ವೈಭವ್ ಸೂರ್ಯವಂಶಿ ಈ ವರ್ಷವೂ ತಮ್ಮ ವಯಸ್ಸಿಗೂ ಮಿಗಿಲಾದ ಆಟವಾಡಿದರು. ಅವರ ಇನ್ನಿಂಗ್ಸ್‌ಗಳಲ್ಲಿ ಕೇವಲ ರನ್‌ಗಳಿರಲಿಲ್ಲ. ಸಮಸ್ಥ ಭಾರತೀಯರ ಆಸೆ, ಹೆಮ್ಮೆಯಿತ್ತು. ವಿಶ್ವದ ಟಾಪ್ ಸ್ಟಾರ್‌ಗಳಾಡುವ ಈ ಕೂಟದಲ್ಲಿ 15 ವರ್ಷದ ಬಾಲಕ ರಾಜಸ್ಥಾನ ತಂಡವನ್ನು ಸೆಮಿಫೈನಲ್‌ಗೆ ತರುತ್ತಾರೆಂದರೆ ಅದು ವಿಸ್ಮಯ ಅಲ್ಲದೆ ಮತ್ತೇನು? ಪಂದ್ಯಾವಳಿಯುದ್ದಕ್ಕೂ ರನ್ ಮಳೆ, ಪಂದ್ಯಗಳುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದಿರುವ ವೈಭವ್ ಈ ಬಾರಿಯ ಪ್ರಮುಖ ಆಕರ್ಷಣೆಯಾದರು.

237.30
ಸ್ಟ್ರೈಕ್‌ರೇಟ್

776 ರನ್!

ಐಪಿಎಲ್ ಮಹಾ ಇತಿಹಾಸದಲ್ಲಿ ಯಾವುದೇ ಆಟಗಾರ ಕಿರಿಯ ವಯಸ್ಸಿನಲ್ಲಿ ಮಾಡಲಾಗದ ದಾಖಲೆ ಮಾಡಿದ ವೈಭವ್ ಕೂಟದಲ್ಲಿ ಒಟ್ಟು 776 ರನ್ ಗಳಿಸಿದ್ದಾರೆ. ಇದು ಯಾವುದೇ ಅನ್‌ಕ್ಯಾಪ್ಡ್ ಆಟಗಾರನೂ ಮಾಡದ ಸಾಧನೆ. ಇದರಲ್ಲಿ ಶತಕ, 5 ಅರ್ಧಶತಕಗಳು ಸೇರಿವೆ. ಪ್ಲೇಆಫ್‌ನಲ್ಲಿ ಆಡಿದ ಎರಡು ಪಂದ್ಯಗಳಲ್ಲಿ ವೈಭವ್ ಒಂದು ಸರಿ 97, ಇನ್ನೊಂದು ಸರಿ 96 ರನ್ ಗಳಿಸಿದ್ದರು.



ಅಭಿಮಾನಿಗಳನ್ನು ಮೈದಾನಕ್ಕೆ ತಂದ ಪ್ಲೇಯರ್


ಈ ಬಾರಿ ಬಹುತೇಕ ಅಭಿಮಾನಿಗಳು ವೈಭವ್ ಬ್ಯಾಟಿಂಗ್‌ನಿಂದಲೇ ಮೈದಾನಕ್ಕೆ ಬಂದರು. ಮನೆಯಲ್ಲಿದ್ದವರು ಟಿವಿಯಲ್ಲಿ ನೋಡಿದವರೂ ವೈಭವ್‌ಗಾಗಿಯೇ ನೋಡಿದವರಿದ್ದಾರೆ. ಹಿರಿಯ ಕ್ರಿಕೆಟ್ ಅಭಿಮಾನಿಗಳನ್ನು ಈ ಬಾರಿ ಐಪಿಎಲ್ ನೋಡುವಂತೆ ಮಾಡಿರುವುದರಲ್ಲಿ ವೈಭವ್ ಪಾತ್ರ ದೊಡ್ಡದಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಒಂದೇ ಆವೃತ್ತಿಯಲ್ಲಿ 72 ಸಿಕ್ಸರ್

ವೈಭವ್ ಸೂರ್ಯವಂಶಿ ಮಾಡಿದ ಅದ್ಭುತ ದಾಖಲೆಯಂದರೆ ಅದು 72 ಸಿಕ್ಸರ್ ಬಾರಿಸಿದ ಮಹಾ ಸಾಧನೆ. ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಕೂಟದಲ್ಲಿ ಇಷ್ಟೊಂದು ಸಿಕ್ಸರ್ ಯಾರೊಬ್ಬರೂ ಗಳಿಸಿಲ್ಲ. ಕ್ರಿಸ್ ಗೇಲ್ 58 ಸಿಕ್ಸರ್ ಬಾರಿಸಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದರು. ಇದೆಲ್ಲವನ್ನೂ ಮುರಿದು ಹಾಕಿದ ವೈಭವ್ ಇತಿಹಾಸದ ಪುಟಗಳಲ್ಲಿ ಸೇರಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6001

ಎಡದಿಂದ ಬಲಕ್ಕೆ
2.ತನಗೆ ತಾನೆ ವಂಚನೆ ಮಾಡಿಕೊಳ್ಳುವುದು (4)
4.ರೋಗದಿಂದ ಬೆಳೆಯುವ ಗಂಟು (2)
5.ಹಂತ–ಹಂತವಾಗಿ ಹೀಗೆ ತಿರುಗಿ ನಡೆದಿದೆ (3)
6.ಗಲಭೆ ಸಂದರ್ಭ ಪೊಲೀಸರು ನಡೆಸಿದ ಗುಂಡು ಹಾರಾಟ (4)
8.ನಡತೆಗೆಡು ಎಂಬರ್ಥದ ನುಡಿಗಟ್ಟು (4)
10.ಅತ್ತು ಇದರ ನಡುವೆ ನ್ಯಾಯಸ್ಥಾನವಿದೆ (4)
12.ಹಣ್ಣುಗಳ ಮಿಶ್ರಣವೂ ಹೌದು–ವಿಜ್ಞಾನದ ಒಂದು ಶಾಸ್ತ್ರವೂ ಹೌದು (4)
14.ಹೊರನೋಟದ ಅಬ್ಬರ–ಆಡಂಬರ (3)
16. ಕಾಣೆಯಾಗದ ಕೊಠಡಿ (2)
17.ರಾತ್ರಿ, ಕರು ತರಲು ಒಡ್ಡಿದ ಆಕ್ಷೇಪಣೆ (4)

ಮೇಲಿನಿಂದ ಕೆಳಕ್ಕೆ
1.ಎಮ್ಮೆ ಜಾತಿಯ ಗಂಡುಜೀವಿ (2)
2.ಬಲವಂತದಿಂದ ವಶಪಡಿಸಿಕೊಂಡದ್ದು (4)
3.ಹರುಷದಿಂದ ಏರಿದ್ದು ಈ ದೋಣಿಯನ್ನು (4)
4.ಕ್ರಯಕ್ಕೆ ತೆಗೆದುಕೊಳ್ಳುವಿಕೆ ತಲೆಕೆಳಗಾಗಿದೆ (3)
7.ಅಕ್ರಮ ಪಾವತಿ–ಲಂಚವಿದು (4)
8.ದಾರದ ನಡುವೆ ಬೆಂಕಿಯಲ್ಲಿ ಸುಟ್ಟು ಶುದ್ಧವಾದದ್ದಿದೆ (4)
9.ಮತದಾನ ಮೂಲಕ ಮಂದಿಯ ಅಭಿಪ್ರಾಯ (4)
11.ಮಾರ್ಗದರ್ಶನ ಮಾಡು–ಉಪಾಯ ತಿಳಿಸು (4)
13.ಹಳ್ಳಿಗಳಲ್ಲಿ ನೆಲಕ್ಕೆ ನೀರು–ಸೆಗಣಿಯ ಲೇಪನಕ್ರಿಯೆ (3)
15.ಹಾಳಾಗು–ಹದಗೆಡುವಿಕೆ (2)

6000 ಉತ್ತರ

ಎಡದಿಂದ ಬಲಕ್ಕೆ:
2.ವಿದ್ಯಮಾನ 4.ಭಾಗ್ಯ
5.ಸಹಾರಾ 6.ಭರವಸೆ
6.ಮಂಗತನ 10.ಶಿರಸ್ತ್ರಾಣ
12.ರಿಯಾಯಿತಿ 14.ಹರಟೆ
16.ರಾಸು 17.ಸಮರಸ

ಮೇಲಿನಿಂದ ಕೆಳಕ್ಕೆ :
1.ದಾಸ 2.ವಿರಾಜಿತ
3.ನರಭಯ 4.ಭಾರ್ಗವ
7.ಸೆಳೆಗುಣ 8.ಮಂಡೋದರಿ
9.ಇತಿಹಾಸ 11.ಸಹಕಾರ
13.ಯಾಚಿಸು 15.ಕೋಟೆ





ಧರ್ಮಸ್ಥಳಕ್ಕೆ ಆಗಮಿಸಿದ್ದ ಭಾರತದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶ್ರೀ ಮಂಜುನಾಥ ಸ್ವಾಮಿ ದೇವರ ದರ್ಶನ ಪಡೆದು ಬಳಿಕ ಸಾರ್ವಜನಿಕರೊಂದಿಗೆ ಬೆರೆತರು. ಸಮಾರಂಭದಲ್ಲಿ ಪಾಲ್ಗೊಂಡ ಗಣ್ಯರು.

ಇಂದಿನಿಂದ ಶಾಲೆಯತ್ತ ಚಿಣ್ಣರ ನಡಿಗೆ | ಮುದ್ದು ಪುಟಾಣಿಗಳಿಗೆ ಸಿಗಲಿದೆ ಪನ್ನೀರ ಸಿಂಚನದ ಸ್ವಾಗತ

ಶೃಂಗಾರಗೊಂಡಿವೆ ಅಕ್ಷರ ದೇಗುಲಗಳು

ಮಂಗಳೂರು: ಅಂತೂ ಇಂತು ಬೇಸಿಗೆ ರಜೆ ಮುಗಿದಾಗಿದೆ. ಇಂದಿನಿಂದ ಶಾಲೆಗಳು ಪುನರಾರಂಭಗೊಳ್ಳುತ್ತಿವೆ. ಮಕ್ಕಳ ಸ್ವಾಗತಕ್ಕಾಗಿ ಶಾಲೆಗಳು ತಳಿರು ತೋರಣಗಳಿಂದ ಶೃಂಗಾರಗೊಂಡು ಕಾದಿವೆ. ಶಿಕ್ಷಕರು ಕೂಡ ಸರ್ವ ಸಿದ್ಧತೆ ನಡೆಸಿದ್ದು, ಶಾಲಾ ಮೆಟ್ಟಿಲೇರುವ ಪುಟಾಣಿಗಳನ್ನು ಆರತಿ ಬೆಳಗಿ ಪನ್ನೀರ ಸಿಂಚನದೊಂದಿಗೆ ಸ್ವಾಗತಿಸಲು ಸಜ್ಜಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಯಲ್ಲೂ ಭರದ ಸಿದ್ಧತೆ ಸಾಗಿದೆ.

ಬಹುತೇಕ ಶಾಲೆಗಳು ಸುಣ್ಣ ಬಣ್ಣ ಬಳಿದುಕೊಂಡು ಅಂದಗೊಂಡಿವೆ. ಶಾಲಾರಂಭದ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಕೂಡ ಅಗತ್ಯ ಸಿದ್ಧತೆ ಮಾಡುತ್ತಿದೆ. ಶಾಲೆ ಆರಂಭವಾಗುತ್ತಿದ್ದಂತೆ ಸಮವಸ್ತ್ರವಿತರಿಸಬೇಕಾಗಿರುವುದರಿಂದಇದರ ಸಿದ್ಧತೆಯಲ್ಲಿ ತೊಡಗಿದೆ. ಮೇ 29ರಂದು ಶಾಲೆ ಆರಂಭಗೊಂಡಿದ್ದು, ಮುಖ್ಯಶಿಕ್ಷಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಶಾಲೆಯಲ್ಲಿ ಕರ್ತವ್ಯ ಆರಂಭಿಸಿದ್ದಾರೆ.

ಎರಡು ತಿಂಗಳು ಭಣಗುಡುತ್ತಿದ್ದ ಶಾಲೆಗಳು ಮತ್ತೆ ಮಕ್ಕಳ ಕಲವರದಿಂದ ಚೈತನ್ಯ ಪಡೆದುಕೊಳ್ಳಲಿವೆ. ಮೊದಲ ಬಾರಿ ಶಾಲೆ ಮೆಟ್ಟಿಲು ಹತ್ತಲಿರುವ ಒಂದನೇ ತರಗತಿಯ ಚಿಣ್ಣರನ್ನು ಬರಮಾಡಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಶೇಷ ಸಿದ್ಧತೆ ನಡೆಸಿದೆ. ಮಕ್ಕಳನ್ನು ಹೂವು, ಸಿಹಿ ತಿಂಡಿ ನೀಡಿ ಶಿಕ್ಷಕರು ಸ್ವಾಗತಿಸಲಿದ್ದಾರೆ. ಮೊದಲ ದಿನವೇ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳ ವಿತರಣೆಯಾಗಲಿದೆ.

ಶಾಲೆಯ ಸ್ವಚ್ಛತೆ, ಕುಡಿಯುವ ನೀರು, ಶೌಚಗೃಹ ಮತ್ತು ಇನ್ನಿತರ ಸೌಲಭ್ಯಗಳ ಪರಿಶೀಲನೆ, ಸಿದ್ಧತೆ ನಡೆಸಿದ್ದಾರೆ. ಶಾಸಕರು ಸಹಿತ ಜನಪ್ರತಿನಿಧಿಗಳು, ಅಧಿಕಾರಿಗಳು, ಎಸ್‌ಡಿಎಂಸಿ ಸದಸ್ಯರು, ಪಾಲಕರು ವ್ಯಾಪ್ತಿಯ ಶಾಲೆಗೆ ತೆರಳಿ ಸಂಭ್ರಮದಿಂದ ವಿದ್ಯಾರ್ಥಿಗಳನ್ನು ಸ್ವಾಗತಿಸಲಿದ್ದಾರೆ.



ಪೋಷಕ-ಶಿಕ್ಷಕರ ಸಭೆ

ಶಾಲಾರಂಭದ ದಿನದಂದು ಪ್ರತೀ ಶಾಲೆಗಳಲ್ಲೂ ಪೋಷಕರ -ಶಿಕ್ಷಕರ ಸಭೆ ನಡೆಯಲಿದೆ. ಪೋಷಕರು ಯಾವುದೇ ಸಲಹೆ ಸೂಚನೆ ನೀಡಲು ಅವಕಾಶವಿದೆ. ಜಿಲ್ಲಾ ಮಟ್ಟದ ಅಧಿಕಾರಿ, ತಾ. ಮಟ್ಟದ ಅಧಿಕಾರಿಗಳು ಶಾಲೆಗಳಿಗೆ ತೆರಳಿ ಮಕ್ಕಳ ಸ್ವಾಗತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಆದೇಶ ಹೊರಡಿಸಲಾಗಿದೆ.

ಆಂಗ್ಲ ಮಾಧ್ಯಮ ಬೋಧನೆ

ದ.ಕ. ಜಿಲ್ಲೆಯಲ್ಲಿ 1014 ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗೆ ಸಮಾನವಾಗಿ 1ರಿಂದ 5ರವರೆಗೆ ಕನ್ನಡದ ಜತೆಗೆ ಆಂಗ್ಲ ಮಾಧ್ಯಮವೂ ಈ ವರ್ಷದಿಂದ ಆರಂಭವಾಗುತ್ತಿದೆ. ಇದಕ್ಕೆ ಬೇಕಾದ ಶಿಕ್ಷಕರು ಹಾಗೂ ಇತರ ವ್ಯವಸ್ಥೆಗಳನ್ನು ಜೋಡಿಸಿಕೊಳ್ಳಲಾಗಿದೆ. ಖಾಸಗಿ ಶಾಲಾ ಗುಣಮಟ್ಟಕೆ ಸರ್ಕಾರಿ ಶಾಲೆಗಳನ್ನು ಕೊಂಡೊಯ್ಯುವುದು ಮತ್ತು ಗ್ರಾಮೀಣ ಮಕ್ಕಳಿಗೂ ಆಂಗ್ಲ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸುವುದು ಇದರ ಉದ್ದೇಶ.

ಮೊದಲ ದಿನ ಮಕ್ಕಳಿಗೆ ಸಿಹಿ ಊಟದ ವ್ಯವಸ್ಥೆ ಮಾಡಲಾಗಿದೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಅಕ್ಷರಾಭ್ಯಾಸ

ಉಳ್ಳಾಲ: ಇಂದು ಸಕಲ ಜೀವರಾಶಿಗಳಿಗೂ ಸ್ವಾತಂತ್ರ್ಯ ಸಿಕ್ಕಿದೆ.ಹಾಗೆಂದು ನಾವು ವಿದೇಶಿ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳದೆ ಭಾರತೀಯತೆಯನ್ನು ಬೆಳೆಸಿಕೊಳ್ಳೋಣ. ಅಂತಹ ಭಾರತೀಯತೆಯ, ರಾಷ್ಟ್ರ ಪ್ರಜ್ಞೆಯ ಚಿಂತನೆಯನ್ನು ಒಳಗೊಂಡಂತಹ ಶಿಕ್ಷಣವನ್ನು ನೀಡುವ ಕೆಲಸವನ್ನು ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಮಾಡುತ್ತಿದೆ. ನೀವೆಲ್ಲರೂ ಈ ವಿದ್ಯಾಕೇಂದ್ರಕ್ಕೆ ಮಕ್ಕಳನ್ನು ಸೇರಿಸಿರುವುದಕ್ಕೆ ಹೆಮ್ಮೆ ಪಡಬೇಕಿದೆಯೆಂದು ಚಿತ್ರಾಪುರ ಮಠದ ಪರಮಪೂಜ್ಯ ಶ್ರೀ ವಿದ್ಯೇಂದ್ರ ತೀರ್ಥ ಸ್ವಾಮೀಜಿಯವರು ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಬಳಿಯ ಚೆಂಬುಗುಡ್ಡೆಯ ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ಭಾನುವಾರ ನಡೆದ ಅಕ್ಷರಭ್ಯಾಸ, ವಿದ್ಯಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಆಶೀರ್ವಚನವಿತ್ತರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಕಾರ್ಯದರ್ಶಿ ಲತೇಶ್ ಬಾಕ್ರಬೈಲ್ ಮಾತನಾಡಿ ಸಾಮಾನ್ಯವಾಗಿ ಅಕ್ಷರಭ್ಯಾಸ ವಿದ್ಯಾರಂಭವನ್ನು ದೇವಸ್ಥಾನಗಳಲ್ಲಿ ನಡೆಸುವುದು ವಾಡಿಕೆ. ಭಾರತೀಯ ಕಲ್ಪನೆಯ ಪ್ರಕಾರ ಶಾಲೆಗಳು ಕೂಡ ಸರಸ್ವತಿ ಮಂದಿರವಿದ್ದಂತೆ. ಹಾಗಾಗಿ ಶಾಲೆಯಲ್ಲಿ ಮೊದಲ ಅಕ್ಷರಭ್ಯಾಸ, ವಿದ್ಯಾರಂಭ ಮಾಡಿದರೆ ಆ ಅಕ್ಷರಗಳು ಜೀವಮಾನದ ಕೊನೆಗಾಲದ ತನಕ ನಮ್ಮ ಜೊತೆ ನಿಲ್ಲಬಹುದು. ಮಕ್ಕಳನ್ನು ಮಾರ್ಕ್ಸ್ ವಾದಿಗಳನ್ನಾಗಿ ಮಾಡಬೇಡಿ, ಶಾಲೆಗಳಲ್ಲಿ ಗಳಿಸಿದ ಅಂಕವೇ ನಮ್ಮನ್ನು ಅಳೆಯುವ ಮಾನದಂಡವಲ್ಲ. ಅಂಕಗಳ ಜೊತೆಗೆ ಸಂಸ್ಕಾರಕ್ಕೂ ಆದ್ಯತೆ ನೀಡಿ ಎಂದು ಅವರು ಪೋಷಕರಿಗೆ ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಸ್ವಾಮೀಜಿಯವರು ಶಾಲಾ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಕಾರ್ಯಕ್ರಮದ ಅಂಗವಾಗಿ ಶಾಲಾ ಅಂಗಣದಲ್ಲಿ ಗಣಪತಿ ಹೋಮ, ಸರಸ್ವತಿ ಪೂಜೆಗಳನ್ನು ನಡೆಸಲಾಯಿತು.

ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಧಾನಾಚಾರ್ಯರಾದ ವಿದ್ಯಾ ಕಾಮತ್ ಜಿ, ಕಾರ್ಯನಿರ್ವಹಣಾಧಿಕಾರಿ ಪ್ರಖ್ಯಾತ್ ರೈ ಉಪಸ್ಥಿತರಿದ್ದರು. ಶ್ರದ್ಧಾ ಮಾತಾಜಿ ಸ್ವಾಗತಿಸಿ,ಲಾವಣ್ಯ ಮಾತಾಜಿ ವಂದಿಸಿದರು. ಲಕ್ಷ್ಮಿ ಮಾತಾಜಿ ನಿರೂಪಿಸಿದರು.



» ಚೆಂಬುಗುಡ್ಡೆಯ ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ನಡೆದ ಅಕ್ಷರಭ್ಯಾಸ.

» ಮಕ್ಕಳನ್ನು ಮಾರ್ಕ್ಸ್ ವಾದಿಗಳನ್ನಾಗಿ ಮಾಡಬೇಡಿ, ಶಾಲೆಗಳಲ್ಲಿ ಗಳಿಸಿದ ಅಂಕವೇ ನಮ್ಮನ್ನು ಅಳೆಯುವ ಮಾನದಂಡವಲ್ಲ.

ಉಪರಾಷ್ಟ್ರಪತಿಗಳಿಂದ ಧರ್ಮಾಧಿಕಾರಿ ಭೇಟಿ



ಧರ್ಮಸ್ಥಳ: ಭಾರತದ ಉಪರಾಷ್ಟ್ರಪತಿಗಳಾದ ಸಿ.ಪಿ. ರಾಧಾಕೃಷ್ಣನ್ ಅವರು ಶನಿವಾರ ಬೆಳಗ್ಗೆ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಶ್ರೀ ಮಂಜುನಾಥ ಸ್ವಾಮಿ ದೇವರ ದರ್ಶನ ಪಡೆದರು.

ಸಾಂಪ್ರದಾಯಿಕ ಉಡುಪಿನಲ್ಲಿ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿಗಳು ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಬಳಿಕ ಅವರು ಅನ್ನಪೂರ್ಣ ಛತ್ರಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಹಾಗೂ ಸೇವಾ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರಧರ್ಮಸ್ಥಳದಧರ್ಮಾಧಿಕಾರಿಗಳಾದ ರಾಜ್ಯಸಭಾ ಸದಸ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿದ ಉಪರಾಷ್ಟ್ರಪತಿಗಳು ಕೆಲಕಾಲ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಧರ್ಮಸ್ಥಳ ಕ್ಷೇತ್ರದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ಪಡೆದ ಅವರು, ಕ್ಷೇತ್ರವು ಸಮಾಜಮುಖಿ ಸೇವೆಯಲ್ಲಿ ಸಲ್ಲಿಸುತ್ತಿರುವ ಕೊಡುಗೆಯನ್ನು ಶ್ಲಾಘಿಸಿದರು. ಭೇಟಿಯ ಸಂದರ್ಭದಲ್ಲಿ ಹೆಗ್ಗಡೆಯವರ ಕುಟುಂಬ ಸದಸ್ಯರೂ ಉಪಸ್ಥಿತರಿದ್ದರು.

ದೇವರ ದರ್ಶನದ ವೇಳೆ ಕರ್ನಾಟಕ ರಾಜ್ಯಪಾಲರಾದ ತಾವರಚಂದ್ ಗೆಹ್ಲೋಟ್, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಡಿ. ಶ್ರೇಯಸ್ ಕುಮಾರ್ ಹಾಗೂ ಅಮಿತ್ ಕುಮಾರ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಅಲ್ಲಲ್ಲಿ ಮನೆ ಮೇಲೆ ಬಿದ್ದ ಮರ | ಮೋಂತಿಮಾರು ದೇವಸ್ಥಾನಕ್ಕೂ ಹಾನಿ

ಬಂಟ್ವಾಳ ತಾಲೂಕಿನಲ್ಲಿ ಸಿಡಿಲು ಮಳೆ


ಬಂಟ್ವಾಳ: ಭಾನುವಾರ ಬೆಳ್ಗೆಯಿಂದ ಮಧ್ಯಾಹ್ನದವರೆಗೂ ಸುಡುಬಿಸಿಲಿದ್ದು, ಸಂಜೆಯ ವೇಳೆಗೆ ಬಂಟ್ವಾಳ ತಾಲೂಕಿನ ಕೆಲ ಗ್ರಾಮೀಣ ಭಾಗದಲ್ಲಿ ಸಿಡಿಲಿನ ಅಬ್ಬರ ಸಹಿತ ಗಾಳಿ, ಮಳೆಗೆ ಮೋಂತಿಮಾರು ದೇವಸ್ಥಾನ ಮತ್ತು ಮನೆಯೊಂದಕ್ಕೆ ಮರಬಿದ್ದು ಹಾನಿಯಾದ ಘಟನೆ ಸಂಭವಿಸಿದೆ.

ಸಂಜೆ ಸುಮಾರು 3.30 ಗಂಟೆಯ ವೇಳೆಗೆ ಮಂಚಿ , ಬೋಳಂತೂರು ಸಹಿತ ಅಕ್ಕ ಪಕ್ಕದ ಗ್ರಾಮಗಳಲ್ಲಿ ವ್ಯಾಪಕವಾಗಿ ಸಿಡಿಲಿನ ಅಬ್ಬರ, ಬಿರುಗಾಳಿ, ಮಳೆಯು ಸುರಿದಿದ್ದು, ಮಂಚಿ ಗ್ರಾಮದ ಮೊಂತಿಮಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಬಳಿರುವ ಸುಮಾರು 100 ಕ್ಕು ಅಧಿಕ ವರ್ಷದ ಕಲ್ಪವೃಕ್ಷ ವ್ಯಾಪಕ ಬಿರುಗಾಳಿಗೆ ದೇವಸ್ಥಾನದ ಸಭಾಂಗಣ ಮೇಲ್ಚಾವಡಿ ಮೇಲೆ ಬಿದ್ದಿದೆ. ಪರಿಣಾಮ ಚಾವಡಿಯ ಸಿಮೇಟ್ ಶೀಟ್ ಗಳು ಹಾನಿಯಾಗಿದೆ.

ಈ ಸಂದರ್ಭ ದೇವಸ್ಥಾನದ ಚಾವಡಿಯಲ್ಲಿ ಯಾರೂ ಇರದಿದ್ದರಿಂದ ಯಾವುದೇ ಪ್ರಾಣಹಾನಿಯಾಗಿಲ್ಲ, ಆದರೆ ದೇವಳದ ಪಕ್ಕದ ಸಭಾಂಗಣದಲ್ಲಿ ಸ್ಥಳೀಯ ಭಕ್ತರು, ಸಮಿತಿ ಸದಸ್ಯರ ಸಭೆ ನಡೆಯುತಿತ್ತು ಎನ್ನಲಾಗಿದೆ. ಸ್ಥಳೀಯ ಗ್ರಾಮಕರಣಿಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಷ್ಟದ ಬಗ್ಗೆ ಅಂದಾಜಿಸಿದ್ದಾರೆ.

ಹಾಗೆಯೇ ಬೋಳಂತೂರು ಗ್ರಾಮದ ದಾಸಮದಕ ಎಂಬಲ್ಲಿ ಲಲಿತ ತಿಮ್ಮಪ್ಪ ರಾಣ್ಯರವರ ಮನೆಗೆ ಮರ ಬಿದ್ದು ಹಾನಿಯಾಗಿರುತ್ತದೆ. ಇಲ್ಲೂ ಯಾವುದೇ ಪ್ರಾಣಹಾನಿಯಾಗಿರುವುದಿಲ್ಲ. ಮನೆ ಭಾಗಶ: ಜಖಂಗೊಂಡಿದೆ.

ಬಿ.ಸಿ.ರೋಡು, ಬಂಟ್ವಾಳ ಪ್ರದೇಶದಲ್ಲಿ ಮೋಡ ಕವಿದ ವಾತಾವರಣವಿದ್ದು, ಸಣ್ಣಮಟ್ಟಿನ ಗುಡುಗು ಹೊರತು ಮಳೆ, ಗಾಳಿಯಾಗಲಿ ಇರಲಿಲ್ಲ.





ಜೂನ್ 7ಕ್ಕೆ ಕರಾವಳಿಗೆ ಮುಂಗಾರು ಪ್ರವೇಶ ನಿರೀಕ್ಷೆ

ಮಂಗಳೂರು: ಕರಾವಳಿಯ ಕೆಲವೆಡೆ ಆಗಾಗ ಮಳೆಯಾಗುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲೂ ಭಾನುವಾರ ಮಳೆಯಾಗಿದೆ. ದ.ಕ. ಜಿಲ್ಲೆಯ ಧರ್ಮಸ್ಥಳ, ಬೆಳ್ತಂಗಡಿ, ಉಪ್ಪಿನಂಗಡಿ, ಸುಳ್ಯ ಹಾಗೂ ಕಡಬ ಸೇರಿದಂತೆ ಹಲವೆಡೆ ಭಾನುವಾರ ಉತ್ತಮ ಮಳೆಯಾಗಿದೆ. ಕೆಲವೆಡೆ ಬೆಳಗ್ಗೆ ಮತ್ತು ಸಂಜೆಯ ವೇಳೆ ಉತ್ತಮ ಮಳೆಯಾಗಿದೆ. ಸಾಮಾನ್ಯವಾಗಿ ಜೂನ್ ಮೊದಲ ವಾರದಲ್ಲಿ ಕೇರಳ ಪ್ರವೇಶಿಸುವ ನೈಋತ್ಯ ಮುಂಗಾರು, ಈ ಬಾರಿ ಜೂನ್ 4ರಂದು ರಾಜ್ಯಕ್ಕೆ ತಟ್ಟುವ ಸಾಧ್ಯತೆಗಳಿವೆ. ರಾಜ್ಯದ ಕರಾವಳಿಗೆ ಜೂನ್ 7ರ ವೇಳೆಗೆ ಪ್ರವೇಶಿಸುವ ನಿರೀಕ್ಷೆ ಇದೆ.

ಕಿರುಸುದ್ದಿ

ಜಾನುವಾರು ವಧೆ ಪ್ರಕರಣ: ಮೂವರ ಸೆರೆ

ಸವಣೂರು: ಕಡಬ ತಾಲೂಕಿನ ಸವಣೂರು ಗ್ರಾಮದ ಮಾಂತೂರು ಮುಂಡತಡ್ಕ ಎಂಬಲ್ಲಿ ಅಕ್ರಮವಾಗಿ ಜಾನುವಾರು ವಧೆ ನಡೆಸಿ ಮಾಂಸ ಮಾರಾಟಕ್ಕೆ ಸಿದ್ಧಪಡಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಬೆಳ್ಳಾರೆ ಪೊಲೀಸರು ಬಂಧಿಸಿದ್ದಾರೆ. ಮೇ 29 ರಂದು ಸಂಜೆ ಅಕ್ರಮ ಗೋವಧೆ ನಡೆಯುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಬೆಳ್ಳಾರೆ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಸಂತೋಷ್ ಬಿ.ಪಿ. ಅವರು ಸಿಬ್ಬಂದಿಗಳೊಂದಿಗೆ ಮಾಂತೂರು ಮುಂಡತಡ್ಕ ಪ್ರದೇಶಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ನಝೀರ್ ಎಂಬವರ ತೋಟದಲ್ಲಿ ಜಾನುವಾರನ್ನು ವಧೆ ಮಾಡಿ ಮಾಂಸ ಮಾಡುತ್ತಿರುವುದು ಪತ್ತೆಯಾಗಿದೆ. ಪೊಲೀಸರು ಸ್ಥಳದಲ್ಲಿದ್ದ ಮೂವರನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತರನ್ನು ಕೆ. ಅಬ್ದುಲ್ ರಫೀಕ್ (37), ಅದ್ರಾಮ ಮಾಂತೂರು (41) ಹಾಗೂ ಅಬ್ದುಲ್ ಖಾದರ್ ಪಣೆಮಜಲು (57) ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಯಾವುದೇ ಪರವಾನಿಗೆ ಪಡೆಯದೇ ಅಕ್ರಮವಾಗಿ ಗೋವಧೆ ನಡೆಸಿ ಮಾಂಸ ತಯಾರಿಸುತ್ತಿದ್ದುದಾಗಿ ತಿಳಿದುಬಂದಿದೆ. ಸ್ಥಳದಲ್ಲಿದ್ದ ಜಾನುವಾರು ಮಾಂಸ ಹಾಗೂ ಇತರೆ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ.





ಸರಕು ಸಾಗಾಟ ಲಾರಿಗೆ ಗೂಡ್ಸ್ ಟೆಂಪೋ ಡಿಕ್ಕಿ: ಚಾಲಕ ಸಾವು

ಉಡುಪಿ: ಸರಕು ಸಾಗಾಟ ಲಾರಿಗೆ ಗೂಡ್ಸ್ ಟೆಂಪೋ ಹಿಂದಿನಿಂದ ಗುದ್ದಿದ ಪರಿಣಾಮ ಟೆಂಪೋ ಚಾಲಕ ಸ್ಥಳದಲ್ಲೇ ಮೃತಪಟ್ಟ ಘಟನೆ ಭಾನುವಾರ ನಸುಕಿನ ಜಾವ ನಡೆದಿದೆ. ರಾಷ್ಟ್ರೀಯ ಹೆದ್ದಾರಿ 66, ಕಿನ್ನಿಮೂಲ್ಕಿ ಬಳಿ ಈ ದುರ್ಘಟನೆ ನಡೆದಿದ್ದು ಶಿವಮೊಗ್ಗದ ಪ್ರಶಾಂತ್ ಪಿ. (29) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ನಿಂತಿದ್ದ ಲಾರಿಗೆ ಗೂಡ್ಸ್ ಟೆಂಪೋ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಟೆಂಪೋ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಚಾಲಕನ ಮೃತದೇಹ ವಾಹನದೊಳಗೆ ಸಿಲುಕಿಕೊಂಡಿದ್ದು, ಹೊರತೆಗೆಯಲು ಸಾಹಸ ಪಡಬೇಕಾಯಿತು. ಸಮಾಜಸೇವಕ ನಿತ್ಯಾನಂದ ಒಳಕಾಡು, ಸಂಚಾರಿ ಠಾಣೆಯ ಪೊಲೀಸರು ಹಾಗೂ ಸ್ಥಳೀಯರು ಮೃತದೇಹವನ್ನು ಹೊರತೆಗೆದರು. ಬಳಿಕ ಶವವನ್ನು ಅಜ್ಜರಕಾಡು ಜಿಲ್ಲಾಸ್ಪತ್ರೆಯ ಮರಣೋತ್ತರ ಪರೀಕ್ಷಾ ಕೇಂದ್ರದಲ್ಲಿ ರಕ್ಷಿಸಿಡುವ ವ್ಯವಸ್ಥೆಗೊಳಿಸಿದರು. ಹೆಚ್ಚಿನ ಮಾಹಿತಿ ತಿಳಿದು ಬರಬೇಕಿದೆ.

ಗಾಂಜಾ ಪ್ರಕರಣ: ಆರೋಪಿಗೆ ಕಠಿಣ ಶಿಕ್ಷೆ

ಕಾಸರಗೋಡು: ಗಾಂಜಾ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ (ದ್ವಿತೀಯ) ಒಂದು ವರ್ಷ ಕಠಿಣ ಸಜೆ ಹಾಗೂ 20 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಮಂಗಲ್ಪಾಡಿ ಬೈತಲ ನಿವಾಸಿ ಮೊಹಮ್ಮದ್ ಬಾದಿಷಾ ಕೆ.ಎಸ್. (42) ಎಂಬಾತನಿಗೆ ಈ ಶಿಕ್ಷೆ ವಿಧಿಸಲಾಗಿದೆ. ದಂಡ ಪಾವತಿಸದಿದ್ದರೆ ಆರೋಪಿಯು ಎರಡು ತಿಂಗಳು ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. 2020ನೇ ಜುಲೈ ತಿಂಗಳ 5ರಂದು ಸಂಜೆ ಕುಂಬಳೆ ಪೊಲೀಸರು ನಿರ್ಮಾಣ ಹಂತದಲ್ಲಿರುವ ಆರೋಪಿಯ ಮನೆಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ 4.2 ಕಿಲೋ ಗ್ರಾಂ ಗಾಂಜಾ ಪತ್ತೆಹಚ್ಚಿ ವಶಪಡಿಸಿಕೊಂಡಿದ್ದರು. ಅದಕ್ಕೆ ಸಂಬಂಧಿಸಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಅಂದು ಕುಂಬಳೆ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಆಗಿದ್ದ ಪಿ.ಪ್ರಮೋದ್ ಮುಂದಿನ ಹಂತದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರೋಸಿಕ್ಯೂಶನ್ ಪರ ಹೆಚ್ಚುವರಿ ಸರಕಾರಿ ಪಬ್ಲಿಕ್ ಪ್ರೋಸಿಕ್ಯೂಟರ್ ಚಂದ್ರಮೋಹನ್ ಜಿ. ಮತ್ತು ವಕೀಲೆ ಚಿತ್ರಕಲಾ ನ್ಯಾಯಾಲಯದಲ್ಲಿ ವಾದಿಸಿದ್ದಾರೆ.

ಜಾನುವಾರು ಅಕ್ರಮ ಸಾಗಾಟ ಪತ್ತೆ : ಇಬ್ಬರು ವಶಕ್ಕೆ

ಮೂಡುಬಿದಿರೆ: ಕಾರ್ಕಳದಿಂದ ಮೂಡುಬಿದಿರೆ ಕಡೆಗೆ ಪಿಕಪ್ ವಾಹನದಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಎರಡು ಕೋಣಗಳು ಹಾಗೂ ಒಂದು ಕರುವನ್ನು ಮೂಡುಬಿದಿರೆ ಪೊಲೀಸರು ಭಾನುವಾರ ರಕ್ಷಿಸಿದ್ದಾರೆ. ಖಚಿತ ಮಾಹಿತಿಯ ಮೇರೆಗೆ ಆಲಂಗಾರು ಅಂಡರ್‌ಪಾಸ್ ಬಳಿ ವಾಹನವನ್ನು ತಡೆದು ಪರಿಶೀಲಿಸಿದ ವೇಳೆ ಜಾನುವಾರುಗಳನ್ನು ಸಾಗಿಸಲಾಗುತ್ತಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಕರ್ಕಳ ಮೂಲದ ಜಾಕ್ವೆಲಿನ್ ಹಾಗೂ ಜಾಕ್ಸನ್ ಎಂಬ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಜಾನುವಾರು ಸಾಗಾಟಕ್ಕೆ ಅಗತ್ಯ ದಾಖಲೆಗಳು ಹಾಗೂ ಪರವಾನಿಗೆಗಳನ್ನು ಹೊಂದಿರದ ಹಿನ್ನೆಲೆಯಲ್ಲಿ ಜಾನುವಾರುಗಳು ಮತ್ತು ಪಿಕಪ್ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಮೂಡುಬಿದಿರೆ ಪೊಲೀಸ್ ಠಾಣೆಯ ನಿರೀಕ್ಷಕ ರಾಜೇಂದ್ರ ಅವರ ನೇತೃತ್ವದಲ್ಲಿ ತನಿಖೆ ಮುಂದುವರಿದಿದೆ.

ಉಡುಪಿ ಜಿಲ್ಲೆಯ 46 ಅಂಗನವಾಡಿಗಳು ಇನ್ಮುಂದೆ 'ಸರ್ಕಾರಿ ಮೊಂಟೆಸರಿ'!

ಉಡುಪಿ: ಗ್ರಾಮೀಣ ಹಾಗೂ ನಗರ ಭಾಗದ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಅತ್ಯುನ್ನತ ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಪ್ರಥಮ ಹಂತದಲ್ಲಿ ಆಯ್ದ ಒಟ್ಟು 46 ಅಂಗನವಾಡಿ ಕೇಂದ್ರಗಳನ್ನು ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

ಖಾಸಗಿ ಕಾನ್ವೆಂಟ್‌ಗಳ ಭಾರಿ ಆರ್ಥಿಕ ಹೊರೆಯನ್ನು ಹೊರಲಾರದ ಬಡ ಕುಟುಂಬಗಳ ಮಕ್ಕಳಿಗೆ ಉಚಿತವಾಗಿ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದ ಶಿಕ್ಷಣ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಜಿಲ್ಲೆಯಲ್ಲಿ ಕಾರ್ಕಳ 6, ಕುಂದಾಪುರ 14, ಉಡುಪಿ 15, ಬ್ರಹ್ಮಾವರ ವಲಯದಲ್ಲಿ 11 ಅಂಗನವಾಡಿ ಕೇಂದ್ರಗಳನ್ನು ಎಲ್‌ಕೆಜಿ/ಯುಕೆಜಿ ತರಗತಿಗಳಾಗಿ ಪರಿವರ್ತಿಸಲಾಗಿದೆ.

ಯೋಜನೆಯ ಹಿನ್ನೆಲೆ ಮತ್ತು ಆರಂಭ

ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸುವ ಈ ಮಹತ್ವಾಕಾಂಕ್ಷಿ ಯೋಜನೆಗೆ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೇತೃತ್ವದಲ್ಲಿ ಚಾಲನೆ ನೀಡಲಾಗಿದೆ. ಮೊದಲ ಹಂತದಲ್ಲಿ ಆಯ್ದ ಕೇಂದ್ರಗಳಲ್ಲಿ ಪ್ರಾಯೋಗಿಕವಾಗಿ ಆರಂಭಗೊಂಡಿದ್ದ ಈ ಯೋಜನೆಯು ಯಶಸ್ವಿಯಾದ ಹಿನ್ನೆಲೆಯಲ್ಲಿ, ಮುಂಬರುವ ಜೂನ್ ತಿಂಗಳಿನ ಹೊಸ ಶೈಕ್ಷಣಿಕ ವರ್ಷದಿಂದ ಇಡೀ ರಾಜ್ಯಾದ್ಯಂತ ಒಟ್ಟು 10,000ಕ್ಕೂ ಅಧಿಕ ಅಂಗನವಾಡಿ ಕೇಂದ್ರಗಳಿಗೆ ವಿಸ್ತರಿಸಲಾಗುತ್ತಿದ್ದು, ಆದರಲ್ಲಿ ಉಡುಪಿ ಜಿಲ್ಲೆಯ ಈ 46 ಕೇಂದ್ರಗಳು ಮೊದಲ ಬ್ಯಾಚ್‌ನಲ್ಲಿ ಸ್ಥಾನ ಪಡೆದುಕೊಂಡಿವೆ.

ಅಂಗನವಾಡಿ ಉನ್ನತೀಕರಣದ ಪ್ರಮುಖ ಉದ್ದೇಶ

ಖಾಸಗಿ ಕಾನ್ವೆಂಟ್‌ಗಳ ವ್ಯಾಮೋಹದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಶಾಲೆಗಳ ಹಾಗೂ ಅಂಗನವಾಡಿಗಳ ದಾಖಲಾತಿ ಭಾರಿ ಪ್ರಮಾಣದಲ್ಲಿ ಕುಸಿಯುತ್ತಿತ್ತು. ಇದನ್ನು ತಡೆಗಟ್ಟಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಬಡವರ ಮಕ್ಕಳಿಗೂ ಆಂಗ್ಲ ಭಾಷೆಯ ಮೂಲ ಜ್ಞಾನ ಸಿಗುವಂತೆ ಮಾಡುವುದು ಹಾಗೂ ಸಕ್ಷಮ್ ಅಂಗನವಾಡಿ ಮತ್ತು ಪೋಷನ್ 2.0 ಯೋಜನೆಯಡಿ ಮೂಲಸೌಕರ್ಯಗಳನ್ನು ಅತ್ಯಾಧುನಿಕಗೊಳಿಸಿ, ಸರ್ಕಾರಿ ಶಾಲೆಗಳಲ್ಲಿ ಎಲ್ ಕೆಜಿ ಆರಂಭದಿಂದ ಅಂಗನವಾಡಿಗಳು ಮುಚ್ಚುವ ಭೀತಿಯನ್ನು ಸಂಪೂರ್ಣವಾಗಿ ನಿವಾರಿಸುವುದು ಇಲಾಖೆಯ ಆಶಯವಾಗಿದೆ.



ವಿದ್ಯಾರ್ಥಿಗಳಿಗೆ ಸಿಗಲಿರುವ ವಿಶೇಷ ಸೌಲಭ್ಯಗಳು

ಈ ನೂತನ ಹೈಟೆಕ್ ಯೋಜನೆಯಡಿ ದಾಖಲಾಗುವ 3 ರಿಂದ 6 ವರ್ಷದ ಮಕ್ಕಳಿಗೆ ಇಲಾಖೆಯ ವತಿಯಿಂದಲೇ ಉಚಿತವಾಗಿ ಸಮವಸ್ತ್ರಗಳು, ಪಠ್ಯಪುಸ್ತಕಗಳು ಹಾಗೂ ಸ್ಕೂಲ್ ಬ್ಯಾಗ್‌ಗಳನ್ನು ವಿತರಿಸಲಾಗುತ್ತದೆ.

ಆಧುನಿಕ ಶಿಕ್ಷಣ ನೀಡುವ ಗುರಿ

ಸಾಂಪ್ರದಾಯಿಕ ಅಂಗನವಾಡಿಗಳಲ್ಲಿ ಕೇವಲ ಪೌಷ್ಟಿಕ ಆಹಾರ ಹಾಗೂ ಪ್ರಥಮ ಹಂತದ ಆಟೋಟಗಳಿಗೆ ಸೀಮಿತವಾಗಿದ್ದ ಹಳೆಯ ವ್ಯವಸ್ಥೆಯನ್ನು ಈಗ ಸಂಪೂರ್ಣವಾಗಿ ಬದಲಾಯಿಸ ಲಾಗಿದೆ. ನೂತನ ಯೋಜನೆಯಡಿ ದ್ವಿಭಾಷಾ ಕಲಿಕೆಗೆ ಆದ್ಯತೆ ನೀಡಲಾಗು ತ್ತಿದ್ದು, ಕನ್ನಡದ ಜೊತೆಗೆ ಇಂಗ್ಲಿಷ್ ಭಾಷೆಯ ಮೂಲ ಅಕ್ಷರಗಳು, ದಿನಬಳಕೆಯ ಸಂವಹನ ಹಾಗೂ ಸರಳ ಇಂಗ್ಲಿಷ್ ಬಾಲಗೀತೆಗಳನ್ನು ಆಡಿಯೋ-ವಿಷುಯಲ್ ಮಾಧ್ಯಮಗಳ ಮೂಲಕ ಕಲಿಸಲಾಗುತ್ತದೆ. ಆಟದ ಮೂಲಕ ಶಿಕ್ಷಣ ನೀಡುವ ವಿಶಿಷ್ಟ ಪಠ್ಯಕ್ರಮವನ್ನು ಅಳವಡಿಸಲಾಗಿದ್ದು, ವಯಸ್ಸಿಗೆ ಅನುಗುಣವಾದ ಬೋಧನಾ ಪರಿಕರಗಳು ಹಾಗೂ ಮಾಂಟೆಸರಿ ಕಿಟ್‌ಗಳ ಮೂಲಕ ಮಕ್ಕಳ ಬೌದ್ಧಿಕ ವಿಕಸನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಇದು ಒಂದನೇ ತರಗತಿಗೆ ಹೋಗುವ ಮುನ್ನ ಮಕ್ಕಳಿಗೆ ಬೇಕಾದ ಬರವಣಿಗೆ, ಶಿಸ್ತು ಮತ್ತು ಗ್ರಹಿಕಾ ಶಕ್ತಿಯನ್ನು ಹೆಚ್ಚಿಸಲಿದೆ.

ಕಾರ್ಕಳ 6, ಕುಂದಾಪುರ 14, ಉಡುಪಿ 15, ಬ್ರಹ್ಮಾವರ ವಲಯದಲ್ಲಿ 11 ಕೇಂದ್ರಗಳನ್ನು ಎಲ್ ಕೆಜಿ/ಯುಕೆಜಿ ತರಗತಿಗಳಾಗಿ ಪರಿವರ್ತಿಸಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಸೋಮವಾರ 01, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
33° 26°	33° 27°



ಕೋಟ ಅಮೃತೇಶ್ವರೀ ಮೇಳದ ಕೊನೆಯ ಸೇವೆಯಾಟ ಸಮಾಪನ



ಪಿಲಾರ್ ಶಾಲೆಗೆ ಹೊಸ ರೂಪ ನೀಡಿದ ಹಳೆ ವಿದ್ಯಾರ್ಥಿಗಳು!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣೀ...ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ...







ಮಂಗಳೂರು ನಗರದ ಹೊರವಲಯ ತೊಕ್ಕೊಟ್ಟು ಚೆಂಬುಗುಡ್ಡೆಯ ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ಭಾನುವಾರ ಅಕ್ಷರಭ್ಯಾಸ, ವಿದ್ಯಾರಂಭ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಶಾಲಾ ಅಂಗಣದಲ್ಲಿ ಗಣಪತಿ ಹೋಮ, ಸರಸ್ವತಿ ಪೂಜೆಗಳನ್ನು ಏರ್ಪಡಿಸಲಾಗಿತ್ತು. ವಿದ್ಯಾಕೇಂದ್ರದ ಪ್ರಧಾನಾಚಾರ್ಯರಾದ ವಿದ್ಯಾ ಕಾಮತ್ ಜಿ., ಕಾರ್ಯನಿರ್ವಹಣಾಧಿಕಾರಿ ಪ್ರಖ್ಯಾತ್ ರೈ ಉಪಸ್ಥಿತರಿದ್ದರು.

ಸುತ್ತಮುತ್ತ

ಮಳೆ, ಬಿಸಿಲು, ಮೋಡ ಚಳಿ, ಉರಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಲಕ್ಷಣ ಹವೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರವೂ ತಾಪಮಾನ ಏರಿಕೆ ಕಂಡಿದ್ದು, ಸುಡು ಬಿಸಿಲಿಗೆ ನಾಗರಿಕರು ಕಂಗಾಲಾಗಿದ್ದಾರೆ. ಈ ನಡುವೆ ಸಂಜೆಯ ಬಳಿಕ ಕೆಲವೆಡೆಗಳಲ್ಲಿ ಮಳೆಯಾಗುತ್ತಿದ್ದು, ಉಳಿದಂತೆ ಮೋಡ, ಬಿಸಿಲು, ಉರಿ ಹಲವು ಆರೋಗ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಮಂಗಳೂರು ನಗರದಲ್ಲಿ ಭಾನುವಾರ 34 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 33 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಹಲವೆಡೆಗಳಲಿ ಗುಡುಗು, ಗಾಳಿ ಮಳೆ?

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಹಲವೆಡೆಗಳಲ್ಲಿ ಮುಂದಿನ ಎರಡು ದಿನ ಗಾಳಿ, ಗುಡುಗು ಸಿಡಿಲಿನ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಅವಧಿಯಲ್ಲಿ ಗಾಳಿಯ ತೀವ್ರತೆ ಗಂಟೆಗೆ 50 ಕಿಲೋ ಮೀಟರ್ ವೇಗದಲ್ಲಿ ಇರುವ ಸಾಧ್ಯತೆಯಿದ್ದು, ಕಡಲ ತೀರದ ಜನತೆ, ಪ್ರವಾಸಿಗರು ಕಡಲಿನ ಬಳಿಗೆ ತೆರಳದಂತೆ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಬರ್ಗುಳ ಕಿಂಡಿ ಅಣೆಕಟ್ಟು ಪರಿಸರದಲಿ ಸಾವಿರಾರು ಮೀನು ನಿಗೂಢ ಸಾವು

ಬೆಳ್ತಂಗಡಿ: ತಾಲೂಕಿನ ಶಿಶಿಲೇಶ್ವರ ದೇಗುಲದ ಸಮೀಪದ ಬರ್ಗುಳ ಕಿಂಡಿ ಅಣೆಕಟ್ಟು ಪ್ರದೇಶದಲ್ಲಿ ಸಾವಿರಾರು ಮೀನುಗಳು ಸಾವನ್ನಪ್ಪಿವೆ. ಇದೇ ಪರಿಸರದಲ್ಲಿ ಕಾಪರ್ ಸಲ್ಫೇಟ್‌ನ ಪ್ಯಾಕೆಟ್ ಕಂಡುಬಂದಿದ್ದು, ಇಲ್ಲಿನ ಮೀನುಗಳಿಗೆ ರಾಸಾಯನಿಕ ನೀಡಿ ಕೊಲ್ಲಲಾಗಿದೆಯೇ ಎಂಬ ಶಂಕೆ ಮೂಡಿಸಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಇಲ್ಲಿನ ಸ್ಥಳೀಯರು ಆಡಳಿತ ವ್ಯವಸ್ಥೆಯನ್ನು ಆಗ್ರಹಿಸಿದ್ದಾರೆ.

ಅಪಾಯ ಆಹ್ವಾನಿಸುತ್ತಿದೆ ವಿದ್ಯುತ್ ಕಂಬ, ತಂತಿಗೆ ಆವರಿಸಿಕೊಂಡಿರುವ ಬಳ್ಳಿ

ಮುಲ್ಕಿ: ಇಲ್ಲಿನ ಮೆಡಲಿನ್ ಶಾಲೆ ಬಳಿ ವಿದ್ಯುತ್ ಕಂಬ, ತಂತಿಗೆ ಬಳ್ಳಿಗಳು ಆವರಿಸಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಮುಲ್ಕಿ ವೆಂಕಟರಮಣ ದೇವಸ್ಥಾನ, ತ್ಯಾಜ್ಯದ ಡಂಪಿಂಗ್ ಯಾರ್ಡ್, ಶಾಲಾ ಮಕ್ಕಳು ಚಲಿಸುವ ಪ್ರಧಾನ ರಸ್ತೆ ಇದಾಗಿದೆ.

ಕಡಬ | ಕುಲ್ಕುಂದ | ಸುಬ್ರಹ್ಮಣ್ಯ | ಬಂಟ್ವಾಳ | ಬಿಳಿನೆಲೆ

ಇಳೆಗೆ ಮತ್ತಷ್ಟು ಮಳೆ

ಎಲ್ಲೆಡೆ ಗಾಳಿ ಆರ್ಭಟ | ಕೈಕೊಟ್ಟ ಕರೆಂಟ್


ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಭಾನುವಾರ ಸಂಜೆಯ ಬಳಿಕ ಸಾಧಾರಣ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ದಿನಪೂರ್ತಿ ಮೋಡ ಬಿಸಿಲಿನ ಕಣ್ಣಾಮುಚ್ಚಾಲೆಯೇ ಮುಂದುವರಿದಿತ್ತು. ಸಂಜೆಯ ಬಳಿಕ ಒಂದಿಷ್ಟು ಹನಿಹನಿ ಮಳೆ ಬಿದ್ದಿದೆ.

ಕಡಬ ಪರಿಸರದಲ್ಲಿ ಗಾಳಿಮಳೆ

ಕಡಬ ತಾಲೂಕಿನ ಬಹುತೇಕ ಕಡೆ ಭಾರೀ ಗಾಳಿ ಸಹಿತ ಮಳೆ ಸುರಿದಿದ್ದರೆ, ಸುಬ್ರಹ್ಮಣ್ಯ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಕೂಡಾ ಸಂಜೆಯ ಬಳಿಕ ಗುಡುಗು ಸಿಡಿಲಿನ ಸಹಿತ ಉತ್ತಮ ಮಳೆಯಾಗಿದೆ.

ಇದಲ್ಲದೆ ಸುಬ್ರಹ್ಮಣ್ಯ, ಕುಲ್ಕುಂದ, ಬಿಳಿನೆಲೆ, ಬಂಟ್ವಾಳ ಮುಂತಾದ ಕಡೆ ಉತ್ತಮ ಮಳೆಯಾಗಿದೆ. ಮಳೆಯ ಜತೆ ಮಿಂಚು ಕಾಣಿಸಿಕೊಂಡಿತ್ತು. ಮಳೆ ಜತೆಗೆ ಗಾಳಿ ಆರ್ಭಟ ಹೆಚ್ಚಾಗಿದ್ದ ಪರಿಣಾಮ ವಿವಿಧೆಡೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತ ಉಂಟಾಗಿದೆ. ಭಾನುವಾರ ರಾತ್ರಿವರೆಗೂ ವಿದ್ಯುತ್ ಮರು ಪೂರೈಕೆ ಆಗಿಲ್ಲ.



ತುಂಬೆ ಅಣೆಕಟ್ಟಿನಲ್ಲಿ ಮತ್ತಷ್ಟು ಜಲಸಮೃದ್ಧಿ

ಪಶ್ಚಿಮ ಘಟ್ಟ ಪ್ರದೇಶದ ತಪ್ಪಲು ಭಾಗದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿ ನೇತ್ರಾವತಿ ನದಿಯಲ್ಲಿ ನೀರಿನ ಮಟ್ಟದಲ್ಲಿ ಈಗ ಮತ್ತಷ್ಟು ಸುಧಾರಣೆಯಾಗಿದೆ. ಮಂಗಳೂರು ಮಹಾನಗರಕ್ಕೆ ನೀರು ಪೂರೈಸುವ ತುಂಬೆ ವೆಂಟೆಡ್ ಡ್ಯಾಂನಲ್ಲಿ ನೀರಿನ ಸಂಗ್ರಹ ಉತ್ತಮವಾಗಿದ್ದು, ಸದ್ಯ ಮಂಗಳೂರು ನಗರದ ಜನತೆಗೆ ಕುಡಿಯುವ ನೀರಿನ ಆತಂಕ ದೂರವಾಗಿದೆ.

ಕಡಬ, ಸುಬ್ರಹ್ಮಣ್ಯ ಭಾಗಕ್ಕೆ ತಂಪೆರೆದ ಮಳೆ

ಕಡಬ, ಸುಬ್ರಹ್ಮಣ್ಯ ಭಾಗದಲ್ಲಿ ಭಾನುವಾರ ದಿನವೀಡಿ ಭಾರೀ ಸೆಕೆಯ ವಾತಾವರಣವಿತ್ತು. ಆದರೆ ಸಂಜೆಯಾಗುತ್ತಲೇ ದಟ್ಟ ಮೋಡಗಳು ಮೇಳೈಸಿ ಭರ್ಜರಿ ಮಳೆ ಸುರಿಯಿತು. ಮುಂಗಾರು ಆಗಮನದ ನಿರೀಕ್ಷೆಯಲ್ಲಿದ್ದ ಜನತೆಗೆ ಭಾನುವಾರದ ಮಳೆ ತಂಪಿನ ಅನುಭವ ನೀಡಿತು.

ಕರಾವಳಿ ಜಿಲ್ಲೆಗಳ ಜೀವನದಿಗೆ ಮತ್ತೆ ಕಳೆ

ಬಿರು ಬಿಸಿಲಿಗೆ ಸೊರಗಿ ಹೋಗಿರುವ ಜಿಲ್ಲೆಯ ಜೀವನದಿಗಳಿಗೆ ಮತ್ತೆ ಕಳೆ ಬರುತ್ತಿದ್ದು, ನದಿಗಳಲ್ಲಿ ನೀರಿನ ಹರಿವು ಆರಂಭವಾಗುತ್ತಿದೆ. ಜಲಕ್ಷಾಮ ಭೀತಿ ದೂರವಾಗುತ್ತಿದೆ.

24 ತಾಸುಗಳಲ್ಲಿ 3.3 ಮಿಮೀ ಮಳೆ

ಮುಂಗಾರು ಪೂರ್ವ: ಟಾಪ್ 1 ಬ್ರಹ್ಮಾವರ!

ಸಾಧಾರಣ ಮಳೆಗೆ ಉಡುಪಿ ತೃಪ್ತ

ಹವಾಮಾನ ಇಲಾಖೆ ನೀಡಿದ ಮುನ್ಸೂಚನೆ ನಿಜವಾಗುತ್ತಿದ್ದು, ಉಡುಪಿ ಜಿಲ್ಲೆಯ ವಿವಿಧ ಭಾಗಳಲ್ಲಿ ಸಾಧಾರಣ ಮಳೆ ಕಂಡುಬಂದಿದೆ. ಭರ್ಜರಿ ಮುಂಗಾರು ಪೂರ್ವ ಮಳೆಯ ನಿರೀಕ್ಷೆಯಲ್ಲಿದ್ದ ನಾಡಿನ ಜನತೆ ಈಗ ಸಾಧಾರಣ ಮಳೆಗೆ ಸಾಮಾಧಾನ, ತೃಪ್ತಿಟ್ಟುಕೊಳ್ಳುವಂತಾಗಿದೆ.

ಉಡುಪಿ: ಭಾನುವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಉಡುಪಿ ಜಿಲ್ಲೆಯಾದ್ಯಂತ ಸಾಧಾರಣ ಮುಂಗಾರು ಪೂರ್ವ ಮಳೆಯಾಗಿದೆ.

ಜಿಲ್ಲಾಡಳಿತದ ವರದಿಯಂತೆ ಸರಾಸರಿ 3.3 ಮಿ.ಮೀ. ಮಳೆ ದಾಖಲಾಗಿದೆ. ಬ್ರಹ್ಮಾವರದಲ್ಲಿ ಜಿಲ್ಲೆಯಲ್ಲೇ ಗರಿಷ್ಠ 6.1 ಮಿ.ಮೀ. ಹಾಗೂ ಕಾಪು ವಲಯದಲ್ಲಿ 5.6 ಮಿ.ಮೀ. ಮಳೆ ಬಿದ್ದಿದೆ. ಉಡುಪಿಯಲ್ಲಿ 3.6 ಮಿ.ಮೀ., ಕುಂದಾಪುರದಲ್ಲಿ 4.3 ಮಿ.ಮೀ. ಮತ್ತು ಕಾರ್ಕಳದಲ್ಲಿ 3.3 ಮಿ.ಮೀ. ಮಳೆಯಾಗಿದೆ.

ಹೆಬ್ರಿಯಲ್ಲಿ ಕೇವಲ 0.2 ಮಿ.ಮೀ. ಮಳೆ

ತೀರ ಪ್ರದೇಶದ ಬೈಂದೂರಿನಲ್ಲಿ 1.1 ಮಿ.ಮೀ. ನಷ್ಟು ಅತ್ಯಲ್ಪ ಮಳೆಯಾಗಿದ್ದರೆ, ಹೆಬ್ರಿಯಲ್ಲಿ ಅತ್ಯಂತ ಕಡಿಮೆ ಅಂದರೆ ಕೇವಲ 0.2 ಮಿ.ಮೀ. ಮಳೆ ವರದಿಯಾಗಿದೆ. ಮಳೆಯಿಂದ ಜಿಲ್ಲೆಯ ಯಾವುದೇ ಭಾಗದಲ್ಲಿ ಸಾರ್ವಜನಿಕ ಪ್ರಾಣಹಾನಿಯಂತಹ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.



ಉಡುಪಿ ಜಿಲ್ಲೆಯಲ್ಲೂ ಮೀನುಗಾರಿಕೆ ಸ್ಥಗಿತ

ಮುಂಗಾರು ಋತು ಈಗ ಆರಂಭ ಹಿನ್ನೆಲೆಯಲ್ಲಿ ಉಡುಪಿಯಲ್ಲಿ ಕೂಡಾ ಯಾಂತ್ರೀಕೃತ ಮೀನುಗಾರಿಕೆ ಪೂರ್ಣ ಸ್ಥಗಿತವಾಗಿದೆ. ಬೋಟ್‌ಗಳು ಈಗಾಗಲೇ ಒಂದೊಂದಾಗಿ ದಡ ಸೇರಿದ್ದು, ಮೀನುಗಾರಿಕಾ ಬಂದರ್ 'ಹೌಸ್ ಫುಲ್' ಆಗಿದೆ.

ಕುಕ್ಕೆ ಶ್ರೀ ಕ್ಷೇತ್ರದಲ್ಲಿ ಭಾನುವಾರ ಭಕ್ತ ಸಾಗರ | ಪ್ರತ್ಯೇಕ ವಿಶೇಷ ಕೌಂಟರ್ ವ್ಯವಸ್ಥೆ

ಒಂದೇ ದಿನ 30 ಸಾವಿರಕ್ಕೂ ಅಧಿಕ ಭಕ್ತರ ಭೇಟಿ

ಸುಬ್ರಹ್ಮಣ್ಯ: ನಾಗರಾಧನೆಯ ಪುಣ್ಯ ಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ ರಾಜ್ಯ, ಹೊರರಾಜ್ಯಗಳಿಂದ 30,000 ಕ್ಕಿಂತಲೂ ಅಧಿಕ ಭಕ್ತರು ಆಗಮಿಸಿ ಶ್ರೀ ದೇವರ ದರುಶನ ಪಡೆದು ಸೇವೆ ಅರ್ಪಿಸಿದರು.

ಸ್ನಾನಘಟ್ಟದಲ್ಲಿ ಕಂಡಿತು ಜನಜಾತ್ರೆ

ಮುಂಜಾನೆಯಿಂದಲೇ ಕುಮಾರಧಾರಾ ಸ್ನಾನ ಘಟ್ಟದಲ್ಲಿ ಪವಿತ್ರ ತೀರ್ಥ ಸ್ನಾನಕ್ಕಾಗಿ ಭಕ್ತರ ದಂಡು ನೆರೆದಿತ್ತು. ದೇವಳದ ಹೊರಾಂಗಣದಲ್ಲಿ, ಒಳಾಂಗಣ, ಧರ್ಮ ಸಮ್ಮೇಳನ ಮಂಟಪ, ರಥಬೀದಿಯಲ್ಲಿ ಅಧಿಕ ಭಕ್ತರು ಕಂಡು ಬಂದರು.

ದೇವಳದ ಹೊರಾಂಗಣದಿಂದ ಸರತಿ ಸಾಲಿನಲ್ಲಿ ಸಾಗಿದ ಭಕ್ತರು ಶ್ರೀ ದೇವರ ದರುಶನ ಮಾಡಿ ಪ್ರಸಾದ ಸ್ವೀಕರಿಸಿದರು. ಶನಿವಾರ ರಾತ್ರಿಯಿಂದಲೇ ಶ್ರೀ ಕ್ಷೇತ್ರಕ್ಕೆ ಭಕ್ತರು ಆಗಮಿಸಿದ್ದರಿಂದ ಶ್ರೀ ದೇವಳದ ವಸತಿಗೃಹ ಹಾಗೂ ಖಾಸಗಿ ವಸತಿ ಗೃಹಗಳು ತುಂಬಿತ್ತು ದೇವಳದ ಪಾರ್ಕಿಂಗ್ ಸ್ಥಳಗಳು ತುಂಬಿದ್ದವು.



- ವಾರಾಂತ್ಯದಲ್ಲಿ ಕ್ಷೇತ್ರ ದರುಶನಕ್ಕೆ ಬಂದ ಭಕ್ತರು
- ಕುಕ್ಕೇಶನಿಗೆ ವಿವಿಧ ಸೇವೆಗಳ ಸಮರ್ಪಣೆ

ದೇವಳ ಆಡಳಿತದಿಂದ ಅಚ್ಚುಕಟ್ಟಾದ ವ್ಯವಸ್ಥೆ

ಭಕ್ತರಿಗೆ ಲಡ್ಡು ಪ್ರಸಾದ ಹಾಗೂ ಪಂಚಕಜ್ಜಾಯ ತೀರ್ಥ ಬಾಟಲಿ ಇತ್ಯಾದಿಗಳಿಗಾಗಿ ಶ್ರೀ ದೇವಳದ ಹೊರ ಭಾಗದಲ್ಲಿ ಪ್ರತ್ಯೇಕ ವಿಶೇಷ ಕೌಂಟರ್ ವ್ಯವಸ್ಥೆ ಮಾಡಲಾಗಿತ್ತು. ಇದು ಭಕ್ತರಿಗೆ ಹೆಚ್ಚು ಅನುಕೂಲಕರವಾಯಿತು. ಭೋಜನಕ್ಕಾಗಿ ಶ್ರೀದೇವಳದ ಷಣ್ಮುಖ ಭೋಜನ ಶಾಲೆಯಲ್ಲಿ ಹಾಗೂ ಬಫೆ ವ್ಯವಸ್ಥೆಯನ್ನು ಆದಿ ಸುಬ್ರಹ್ಮಣ್ಯ ಭೋಜನ ಶಾಲೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಬಾನಿಗೂ ಭುವಿಗೂ ಭಾಸ್ಕರನ ಬೆಳಕಿನ ಬೆಸುಗೆ



ಮೋಡಗಳ ಮರೆಯಿಂದ ಹೊರಬಂದು ಹೊಂಬಣ್ಣದಿಂದ ಕಂಗೊಳಿಸುವ ಸೂರ್ಯ ಉಪ್ಪಿನಂಗಡಿಯ ನೇತ್ರಾವತಿ, ಕುಮಾರಧಾರಾ ನದಿ ಸಂಗಮ ಸ್ಥಳ ಬಿಳಿಯೂರು ಅಣೆಕಟ್ಟಿನಿಂದ ಸಂಗ್ರಹವಾದ ಹಿನ್ನೀರಿನ ಜಲರಾಶಿಯಲ್ಲಿ ಪ್ರತಿಫಲನಗೊಂಡ ಬಗೆ.

ಬರೋಬ್ಬರಿ 61 ದಿನ ಕಡಲಿಗೆ ಬೀಗ | ನಾಡದೋಣಿಗಳಿಗೆ ಮಾತ್ರ ಮೀನುಗಾರಿಕೆ ಯೋಗ

ನಿಯಮ ಉಲ್ಲಂಘಿಸಿದರೆ ಡೀಸೆಲ್, ಸೌಲಭ್ಯ ಕಟ್

ಮಂಗಳೂರು: ಮುಂಗಾರು ಋತು ಈಗ ಆರಂಭ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಕಡಲಿನಲ್ಲಿ ಮುಂದಿನ 61 ದಿನ ಯಾಂತ್ರೀಕೃತ ಮೀನುಗಾರಿಕೆ ಪೂರ್ಣ ಸ್ತಬ್ಧವಾಗಿದೆ.

ಈ ಬಗ್ಗೆ ಮೀನುಗಾರಿಕಾ ಇಲಾಖೆ ಆದೇಶ ಹೊರಡಿಸಿದ್ದು, ಈ ನಿಷೇಧ ಆದೇಶ ಉಲ್ಲಂಘಿಸಿದಲ್ಲಿ ಸೂಕ್ತ ಕಾನೂನು ಕ್ರಮದ ಜೊತೆಗೆ ಎಲ್ಲಾ ಸೌಲಭ್ಯಗಳನ್ನು ರದ್ದು ಪಡಿಸಲಾಗುತ್ತದೆ ಎಂದು ಮೀನುಗಾರರಿಗೆ ಎಚ್ಚರಿಕೆ ನೀಡಿದೆ.

ಯಾವುದೇ ಬಲೆ, ಸಾಧನ ಬಳಸುವಂತಿಲ್ಲ

ಈ ದಿನಗಳಲ್ಲಿ ಮೀನುಗಾರಿಕಾ ಬೋಟ್ ಮೂಲಕ ಯಾವುದೇ ಬಲೆ, ಮೀನುಗಾರಿಕೆಯ ಸಾಧನಗಳನ್ನು ಬಳಸಿಕೊಂಡು ಮೀನುಗಾರಿಕೆ ನಡೆಸುವುದಕ್ಕೆ ಅವಕಾಶಗಳು ಇರುವುದಿಲ್ಲ. ಆದರೆ ಈ ಅವಧಿಯಲ್ಲಿ 10 ಹೆಚ್‌ಪಿ ವರೆಗಿನ ಸಾಮರ್ಥ್ಯದ ಮೋಟಾರು ಹೊಂದಿರುವ ದೋಣಿಗಳು ಹಾಗೂ ಸಾಂಪ್ರದಾಯಿಕ ನಾಡ ದೋಣಿಗಳಿಗೆ ಇಲಾಖೆ ನೀಡುವ ಸುರಕ್ಷತಾ ನಿಯಮಗಳನ್ನು ಪಾಲಿಸುವ ಷರತ್ತಿನೊಂದಿಗೆ ಕಡಲಿನಲ್ಲಿ ಮೀನುಗಾರಿಕೆ ನಡೆಸಲು ಅವಕಾಶ ನೀಡಲಾಗಿದೆ. ಕಲ್ಪಿಸಲಾಗಿದೆ. ಇಲಾಖೆ ನೀಡಿದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಉಲ್ಲಂಘಿಸಿ ಮೀನುಗಾರಿಕೆ ನಡೆಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಮೀನುಗಾರರಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಮಾರಾಟ ತೆರಿಗೆ ರಹಿತ ಡೀಸೆಲ್, ಅನುದಾನ ಸಹಿತ ಇತರೆ ಸೌಲಭ್ಯ ಕೂಡ ರದ್ದುಗೊಳಿಸಲಾಗುವುದು ಎಂದು ಮೀನುಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರು ಎಚ್ಚರಿಕೆ ನೀಡಿದ್ದಾರೆ.



- ಮೇ ತಿಂಗಳ 31ರಿಂದ ಜುಲೈ 31ರವರೆಗೆ ಮೀನುಗಾರಿಕೆ ಇಲ್ಲ
- ಯಾಂತ್ರೀಕೃತ ಮೀನುಗಾರಿಕೆಗೆ ಒಟ್ಟು 61 ದಿನ ರಜೆ ಘೋಷಣೆ
- ಯಾಂತ್ರೀಕೃತ ಮೀನುಗಾರಿಕಾ ದೋಣಿ ಕಡಲಿಗಿಳಿಯುವಂತಿಲ್ಲ
- ಆದೇಶ ಉಲ್ಲಂಘನೆ ಮಾಡಿದರೆ ಕಾದಿದೆ ಕಾನೂನಿನ ಕ್ರಮಗಳು

ಮೀನುಗಾರಿಕೆಗೆ ಯಾಕೆ ಈ ನಿಷೇಧ?

ಇದು ಮೀನುಗಳ ಸಂತಾನೋತ್ಪತ್ತಿ ಅವಧಿಯಾಗಿದ್ದು, ಈ ಅವಧಿಯಲ್ಲಿ ಸಮುದ್ರ ಜೀವಿಗಳ ರಕ್ಷಣೆಯ ಉದ್ದೇಶದಿಂದ ಪ್ರತಿ ವರ್ಷ ಮುಂಗಾರು ಕಾಲದಲ್ಲಿ ಈ ನಿಷೇಧ ಜಾರಿಗೊಳಿಸಲಾಗುತ್ತದೆ.

ಬೆಳ್ಳಂಬೆಳಗ್ಗೆ ಗೇಟು ತೆರೆದು ಕೊಡಗಿನಲ್ಲಿ ಮನೆಯ ಅಂಗಳಕ್ಕೆ ಕಾಲಿಟ್ಟಿತು ಕಾಡಾನೆ!

ಗೋಣಿಕೊಪ್ಪಲು-ಪೊನ್ನಂಪೇಟೆ ಮುಖ್ಯ ರಸ್ತೆಯಲ್ಲಿ ಘಟನೆ

ಮಡಿಕೇರಿ: ಬೆಳ್ಳಂಬೆಳಗ್ಗೆ ಮನೆಯಂಗಳಕ್ಕೆ ಕಾಡಾನೆ ನುಗ್ಗಿದ ಘಟನೆ ಭಾನುವಾರ ಬೆಳಗ್ಗೆ ಗೋಣಿಕೊಪ್ಪಲು– ಪೊನ್ನಂಪೇಟೆ ಮುಖ್ಯ ರಸ್ತೆಯ ಅರುವತೊಕ್ಲುವಿನಲ್ಲಿ ನಡೆದಿದೆ.

ಗೋಣಿಕೊಪ್ಪಲು ಪೊನ್ನಂಪೇಟೆ ರಸ್ತೆಯ ಅರುವತ್ತೊಕ್ಲು ಗ್ರಾಮದ ಕಾಫಿ ಬೋರ್ಡ್ ಸಮೀಪವಿರುವ ಕಬ್ಬಚ್ಚಿರ ಬಿದ್ದು ಉತ್ತಪ್ಪ ಎಂಬವರ ಮನೆಯ ಅಂಗಳಕ್ಕೆ ಗೇಟ್ ತೆರೆದು ಕಾಡಾನೆ ಒಳ ನುಗ್ಗಿರುವ ಆತಂಕಕಾರಿ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಈ ಭಾಗದಲ್ಲಿ ಪ್ರತಿವರ್ಷ ಕಾಡಾನೆಯೊಂದು ಮಧ್ಯರಾತ್ರಿ ಕಾಣಿಸಿಕೊಳ್ಳುತ್ತಿತ್ತು. ಇದು ಕಾಫಿ ಬೋರ್ಡ್ ಸಮೀಪದ ತರಕಾರಿ ಅಂಗಡಿಗೆ ತೆರಳಿ ಅಲ್ಲಿ ಹಣ್ಣು ಹಂಪಲುಗಳನ್ನು ತಿಂದು ಹೋಗುತ್ತಿತ್ತು. ಆದರೆ ಈ ಬಾರಿ ಬಂದಿರುವುದು ಮಾತ್ರ ಹೊಸ ಕಾಡಾನೆಯಾಗಿದೆ.



ಕಾಡಾನೆ ನಾಯಿಯನು ಅಟ್ಟಿಸಿಕೊಂಡು ಬಂದಿತ್ತು

ನಾಯಿಯೊಂದನ್ನು ಅಟ್ಟಿಸಿಕೊಂಡು ಬಂದ ಈ ಕಾಡಾನೆ ನೇರ ಮನೆಯ ಅಂಗಳ ಪ್ರವೇಶಿಸಿ ನಂತರ ವಾಪಸ್ ತೆರಳಿದೆ. ಮನೆಯ ಅಂಗಳದಲ್ಲಿದ್ದ ಹೂ ಕುಂಡಗಳು ಸೇರಿದಂತೆ ಯಾವುದೇ ವಸ್ತುಗಳಿಗೆ ಹಾನಿ ಮಾಡದಿರುವುದು ಮಾತ್ರ ತುಸು ನೆಮ್ಮದಿ ತಂದಿದೆ.

ಖಾರ್ವಿಕೇರಿ ದೇವಸ್ಥಾನದಲ್ಲಿ ಸಾಮೂಹಿಕ ನೀಲಾ ಸರಸ್ವತೀ ಹವನ 2
ಕಡತಕ್ಕಷ್ಟೇ ಸೀಮಿತವಾದ ಕುಂಬಳೆ ಗ್ರಾಮ ಪಂಚಾಯತ್ ನಿರ್ಧಾರಗಳು 3
ಅನಂತಪುರ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನ ರಕ್ಷಾ ಸಮಿತಿ ರಚನೆ 3
ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: 10 ನಿರ್ಣಯ ಮಂಡನೆ 5

ಉಡುಪಿ: ಮುಗಿದ ಬೇಸಿಗೆ ರಜೆ, ಇಂದಿನಿಂದ ಶಾಲಾ ಆರಂಭ | ತಳಿರು-ತೋರಣಗಳಿಂದ ಶಾಲೆ ಅಲಂಕಾರ

ಸಿಹಿಯೂಟದೊಂದಿಗೆ ವಿದ್ಯಾರ್ಥಿಗಳ ಸ್ವಾಗತಕ್ಕೆ ಶಾಲೆಗಳು ಸಜ್ಜು

ಕುಂದಾಪುರ: ವಿದ್ಯಾರ್ಥಿಗಳ ಒಂದೂವರೆ ತಿಂಗಳ ದೀರ್ಘ ಬೇಸಿಗೆ ರಜೆಯ ಮಜಾ ಮುಕ್ತಾಯಗೊಂಡಿದ್ದು, ಜೂ.1ರಿಂದ ಹೊಸ ಶೈಕ್ಷಣಿಕ ವರ್ಷ ಅಧಿಕೃತವಾಗಿ ಆರಂಭಗೊಳ್ಳುತ್ತಿದೆ. ಶಾಲೆಗಳತ್ತ ಮರಳಲು ಮಕ್ಕಳು ಸಜ್ಜಾಗಿದ್ದು, ವಿದ್ಯಾರ್ಥಿಗಳನ್ನು ಅದ್ದೂರಿ ಶಾಲಾ ಪ್ರಾರಂಭೋತ್ಸವದೊಂದಿಗೆ ಬರಮಾಡಿಕೊಳ್ಳಲು ಉಡುಪಿ ಜಿಲ್ಲೆಯ ಶಾಲೆಗಳು ಸಕಲ ರೀತಿಯಲ್ಲಿ ಸಿದ್ಧಗೊಂಡಿವೆ.

ಸರಕಾರಿ ಶಾಲೆಗಳಲ್ಲಿ ಭಾನುವಾರವೂ ಸೇರಿದಂತೆ ಕಳೆದ2-3 ದಿನಗಳಿಂದ ಶಿಕ್ಷಕರು ಶಾಲೆಗೆ ಆಗಮಿಸಿದ್ದು, ಎಸ್‌ಡಿಎಂಸಿ, ಹಳೆ ವಿದ್ಯಾರ್ಥಿಗಳು ಹಾಗೂ ಊರವರ ಸಹಕಾರದೊಂದಿಗೆ ಶಾಲಾ ಆವರಣದ ಸ್ವಚ್ಛತಾ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ. ಎಲ್ಲೆಡೆ ಸಡಗರದ ಪ್ರಾರಂಭೋತ್ಸವ ನಡೆಸಲು ಸಕಲ ತಯಾರಿಗಳು ನಡೆದಿವೆ.

ಬಿಸಿಯೂಟದಲ್ಲಿ ಪಾಯಸದ ಸಿಹಿ

ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳನ್ನು ಅತ್ಯಂತ ಪ್ರೀತಿ



ಮತ್ತು ಖುಷಿಯಿಂದ ಸ್ವಾಗತಿಸಲು ಶಿಕ್ಷಣ ಇಲಾಖೆ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕ ವೃಂದದವರು ಮೇ 28ರಂದೇ ಶಾಲೆಗಳಿಗೆ ಆಗಮಿಸಿ ತಳಿರು-ತೋರಣಗಳಿಂದ ಶಾಲಾ ಕೊಠಡಿ ಹಾಗೂ ಆವರಣವನ್ನು ಅಲಂಕರಿಸಿದ್ದಾರೆ. ಮೇ 29ರಂದು ಶಾಲೆಯ ಮೊದಲ ದಿನದ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮಕ್ಕಳಿಗೆ ವಿಶೇಷವಾಗಿ ಪಾಯಸ ನೀಡಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಎಸ್‌ಡಿಎಂಸಿ ಹಾಗೂ ಪೋಷಕರ ಸಹಕಾರದೊಂದಿಗೆ ವಿವಿಧ ಬಗೆಯ ಸಿಹಿ ತಿಂಡಿಗಳನ್ನು ವಿತರಿಸಲು ಯೋಜಿಸಲಾಗಿದೆ. ಹೊಸದಾಗಿ ಶಾಲೆಗೆ ದಾಖಲಾದ ವಿದ್ಯಾರ್ಥಿಗಳಿಗೆ ಮೊದಲ ದಿನವೇ ತರಗತಿಗಳು ಆರಂಭವಾಗಲಿದ್ದು, ಅವರಿಗೆ ಪ್ರೇರಣಾದಾಯಕವಾಗಿ ಮತ್ತು ಆಕರ್ಷಕವಾಗಿ ಶಾಲೆ ಆರಂಭಿಸಲು ಶಿಕ್ಷಕರಿಗೆ ನಿರ್ದೇಶನ ನೀಡಲಾಗಿದೆ.

> **ಸಿದ್ಧತೆ ಮಾಡಿಕೊಳ್ಳಲಾಗಿದೆ**
> ಕುಂದಾಪುರ ವಲಯದಲ್ಲಿಯೂ ಶಾಲಾ ಪ್ರಾರಂಭೋತ್ಸವಕ್ಕೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್ಲಾ ಶಾಲೆಗಳಲ್ಲಿ ಕಳೆದ ಎರಡು ದಿನಗಳಿಂದ ಪೂರ್ವ ತಯಾರಿ ನಡೆದಿದ್ದು, ಮೊದಲ ದಿನದ ಸಿಹಿಯೂಟಕ್ಕೆ ಬೇಕಾದ ಬೇಳೆ ಹಾಗೂ ಧಾನ್ಯಗಳ ಪೂರೈಕೆಯಾಗಿದೆ. ಗ್ಯಾಸ್ ಸಮಸ್ಯೆಯಾಗದಂತೆ ಏಜೆನ್ಸಿಗಳ ಜೊತೆ ಮಾತನಾಡಲಾಗಿದ್ದು, ಕುಡಿಯುವ ನೀರಿನ ತೊಂದರೆಯೂ ಇರುವುದಿಲ್ಲ, ಈ ಬಗ್ಗೆ ಗ್ರಾ.ಪಂ.ಗಳಿಗೂ ಮನವಿ ಸಲ್ಲಿಸಲಾಗಿದೆ. ಈ ಬಾರಿ ಅಮಾಸೆಬೈಲಿನಲ್ಲಿ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವ ಅಧಿಕೃತವಾಗಿ ನಡೆಯಲಿದ್ದು, ಎಲ್ಲ ಶಾಲೆಗಳಲ್ಲಿ ಪಾಲಕರ ಸಭೆ ಕೂಡ ಜರುಗಲಿದೆ.
> ● ಶೋಭಾ ಶೆಟ್ಟಿ, ಬಿಇಒ, ಕುಂದಾಪುರ ವಲಯ

ಪಠ್ಯಪುಸ್ತಕ, ಶೂ-ಸಾಕ್ಸ್ ವಿತರಣೆ

ಶಾಲೆಯ ಆರಂಭೋತ್ಸವದ ದಿನವೇ ವಿದ್ಯಾರ್ಥಿಗಳಿಗೆ ಉಚಿತ ಶಾಲಾ ಪಠ್ಯಪುಸ್ತಕಗಳನ್ನು ವಿತರಿಸಲು ಸಿದ್ಧತೆ ನಡೆಸಲಾಗಿದ್ದು, ಈಗಾಗಲೇ ಶಾಲೆಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡುವ ಪ್ರಕ್ರಿಯೆ ಭರದಿಂದ ಸಾಗುತ್ತಿದೆ. ಇದರ ಜೊತೆಗೆ ಶಾಲಾ ಮಕ್ಕಳಿಗಾಗಿ ಸರ್ಕಾರದ ವತಿಯಿಂದ ನೀಡಲಾಗುವ ಶೂ ಮತ್ತು ಸಾಕ್ಸ್‌ಗಳ ವಿತರಣೆ ಕೂಡ ಅಂದೇ ನಡೆಯಲಿದೆ.

ಕುಂದಾಪುರದಾದ್ಯಂತ ಸಕಲ ಸಿದ್ಧತೆ

ಕುಂದಾಪುರ ವಲಯದ ವ್ಯಾಪ್ತಿಯಲ್ಲಿರುವ 119 ಸರ್ಕಾರಿ ಪ್ರಾಥಮಿಕ ಶಾಲೆಗಳು, 15 ಅನುದಾನಿತ ಪ್ರಾಥಮಿಕ ಶಾಲೆಗಳು, 20 ಸರಕಾರಿ ಪ್ರೌಢಶಾಲೆಗಳು, 7 ಅನುದಾನಿತ ಪ್ರೌಢಶಾಲೆಗಳು, 2 ಅನುದಾನ ರಹಿತ ಕಿರಿಯ ಪ್ರಾಥಮಿಕ ಶಾಲೆಗಳು, 9 ಅನುದಾನ ರಹಿತ ಹಿರಿಯ ಪ್ರಾಥಮಿಕ ಶಾಲೆಗಳು, 20 ಅನುದಾನ ರಹಿತ ಪ್ರೌಢಶಾಲೆಗಳು ಹಾಗೂ 4 ವಸತಿ ಶಾಲೆಗಳು ಸೇರಿದಂತೆ ಒಟ್ಟು 195 ಶಾಲೆಗಳು ಮಕ್ಕಳ ಸ್ವಾಗತಕ್ಕೆ ಸಜ್ಜಾಗಿವೆ.

ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯ

ಎಲ್ಲಾ ಶಾಲೆಗಳಲ್ಲಿ ಶಿಕ್ಷಕರ ನೇತೃತ್ವದಲ್ಲಿ ಕೊಠಡಿಗಳ ಸ್ವಚ್ಛತೆ, ನೀರಿನ ಟ್ಯಾಂಕ್ ಶುದ್ಧೀಕರಣ, ಹೆಂಚುಗಳು ಹಾಳಾಗಿದ್ದರೆ ಅವುಗಳ ದುರಸ್ತಿ ಕಾರ್ಯ, ಕುಡಿಯುವ ನೀರಿನ ಪರೀಕ್ಷೆ ಹಾಗೂ ಮುಂಬರುವ ಮುಂಗಾರು ಮಳೆಯ ಮುಂಜಾಗ್ರತೆಯಾಗಿ ಮಕ್ಕಳು ಶಾಲೆಗೆ ಬರುವ ಮಾರ್ಗಗಳ ಪರಿಶೀಲನಾ ಕಾರ್ಯವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಭಾನುವಾರ ಬಹುತೇಕ ಶಾಲೆಗಳಲ್ಲಿ ವಿಶೇಷ ರೀತಿಯ ಅಲಂಕಾರ ಹಾಗೂ ತೋರಣ ಕಟ್ಟುವ ಕಾರ್ಯಗಳು ನಡೆದಿವೆ.

ಸುತ್ತ ಮುತ್ತ

ಯುವ ಪ್ರತಿಭೆ, ವಿದ್ಯಾರ್ಥಿವೇತನ ಪ್ರಶಸ್ತಿಗೆ ಆಯ್ಕೆ

ಕೋಟ: ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ ನಡೆಸಿದ 2025-26ರ ಸಾಲಿನ ಭಾರತದ ಯುವ ಪ್ರತಿಭಾ ಶೋಧದಲ್ಲಿ, ಹೆಚ್ಚಿನ





ವ್ಯಾಸಂಗಕ್ಕಾಗಿ ಜಾನಪದ ರಂಗಭೂಮಿ (ಯಕ್ಷಗಾನ) ಯುವ ಪ್ರತಿಭೆ, ವಿದ್ಯಾರ್ಥಿವೇತನ ಪ್ರಶಸ್ತಿಗೆ ಬೆಂಗಳೂರಿನ ಯಕ್ಷದೇಗುಲದಲ್ಲಿ ಕಳೆದ 15 ವರ್ಷದಿಂದ ಕಲಿಯುತ್ತಿರುವ ಇಂಜಿನಿಯರಿಂಗ್ ಮುಗಿಸಿ ಪೆಸ್ ವಿಶ್ವವಿದ್ಯಾಲಯದಲ್ಲಿ ಎಂಟೆಕ್ ಓದುತ್ತಿರುವ ಶ್ರೀರಾಮ್ ಹೆಬ್ಬಾರ್ ಮತ್ತು ಯಕ್ಷದೇಗುಲದಲ್ಲಿ 12 ವರ್ಷದಿಂದ ಕಲಿಯುತ್ತಿರುವ ಕಿಮ್ಸ್ ಕಾಲೇಜಿನಲ್ಲಿ ಬಿಫಾರ್ಮ ಓದುತ್ತಿರುವ ಶ್ರೀವಿದ್ಯಾ ಹರಿತಸ ಆಯ್ಕೆಯಾಗಿದ್ದಾರೆ. ಇವರು ಯಕ್ಷದೇಗುಲದಲ್ಲಿ ಅಭಿಮನ್ಯು ಕಾಳಗ, ಕಂಸವಧೆ, ರತ್ನಾವತಿ ಕಲ್ಯಾಣ, ಏಕಲವ್ಯ, ವೃಷಸೇನ, ಜಾಂಬವತಿ ಕಲ್ಯಾಣ ಹೀಗೆ ಹಲವಾರು ಪ್ರಸಂಗಗಳಲ್ಲಿ ವೇಷ ಮಾಡಿದಲ್ಲದೇ ಯಕ್ಷಗಾನ ಸಭಾಲಕ್ಷಣದ ಪೂರ್ವರಂಗ, ಪಾಂಡವರ ಒಡ್ಡೋಲಗ, ಯುದ್ಧ ಕುಣಿತ, ಕೃಷ್ಣ ಒಡ್ಡೋಲಗ, ಕಿರಾತ ಒಡ್ಡೋಲಗ, ಬಣ್ಣದ ಒಡ್ಡೋಲಗ ಹೀಗೆ ಎಲ್ಲಾ ವಿಭಾಗದಲ್ಲೂ ಸೈ ಎನಿಸಿಕೊಂಡಿದ್ದಾರೆ. ಇತ್ತೀಚೆಗೆ ಯಕ್ಷದೇಗುಲದ ಸಿಂಗಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಜೂ.1-6: ತಂಬಾಕು ವ್ಯಸನ ನಿವಾರಣಾ ಹೊರರೋಗಿ ಶಿಬಿರ

ಉಡುಪಿ: ವಿಶ್ವ ತಂಬಾಕು ರಹಿತ ದಿನಾಚರಣೆಯ ಅಂಗವಾಗಿ ದೊಡ್ಡಣಗುಡ್ಡೆಯಲ್ಲಿರುವ ಡಾ. ಎ.ವಿ. ಬಾಳಿಗ ಸ್ಮಾರಕ ಆಸ್ಪತ್ರೆಯಲ್ಲಿ ಸ್ಮಾರಕ ಆಸ್ಪತ್ರೆಯಲ್ಲಿ ಜೂನ್ 1ರಿಂದ ಜೂನ್ 6ರವರೆಗೆ ಉಚಿತ ತಂಬಾಕು ವ್ಯಸನ ನಿವಾರಣಾ ಹೊರರೋಗಿ ಶಿಬಿರವನ್ನು ಆಯೋಜಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಡೆಯಲಿರುವ ಈ ಶಿಬಿರದಲ್ಲಿ ಜರ್ದಾ, ಸಿಗರೇಟ್, ಗುಟ್ಕಾ ನಶ್ಯ ಪುಡಿ, ಎಲೆ ಅಡಿಕೆ ತಂಬಾಕು, ಬೀಡಿ, ಹುಕ್ಕಾ ಹಾಗೂ ಪಾನ್ ಮಸಾಲಾ ಸೇವನೆಯಂತಹ ತಂಬಾಕು ವ್ಯಸನಗಳಿಂದ ಮುಕ್ತರಾಗಲು ಬಯಸುವವರಿಗೆ ಉಚಿತ ಸಲಹೆ ಹಾಗೂ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ತಂಬಾಕು ಸೇವನೆಯನ್ನು ತ್ಯಜಿಸುವ ಸಂದರ್ಭದಲ್ಲಿ ಮನಸ್ಸಿಗೆ ಕಿರಿಕಿರಿ, ಆತಂಕ, ಅಸಹನೆ, ನಿದ್ರಾಹೀನತೆ, ಏಕಾಗ್ರತೆಯ ಕೊರತೆ, ಹಸಿವು ಹೆಚ್ಚಾಗುವುದು, ತಲೆನೋವು ಸೇರಿದಂತೆ ವಿವಿಧ ಹಿಂದೆಗೆತ ಲಕ್ಷಣಗಳು ಕಂಡು ಬರಬಹುದು. ಆದರೆ ಸರಿಯಾದ ಚಿಕಿತ್ಸೆ ಕೌನ್ಸೆಲಿಂಗ್ ಮತ್ತು ನಿರಂತರ ಬೆಂಬಲದ ಮೂಲಕ ಈ ವ್ಯಸನದಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವೆಂದು ತಜ್ಞರು ತಿಳಿಸಿದ್ದಾರೆ. ಶಿಬಿರದಲ್ಲಿ ತಜ್ಞ ವೈದ್ಯರ ಸಲಹೆ, ಮನೋವೈದ್ಯಕೀಯ ಮಾರ್ಗದರ್ಶನ, ವ್ಯಸನ ನಿವಾರಣಾ ಕೌನ್ಸೆಲಿಂಗ್, ಆರೋಗ್ಯ ತಪಾಸಣೆ, ಕುಟುಂಬ ಸದಸ್ಯರಿಗೆ ಜಾಗೃತಿ ಮಾಹಿತಿ, ಪ್ರೇರಣಾತ್ಮಕ ಮಾರ್ಗದರ್ಶನವನ್ನು ನೀಡಲಾಗುವುದು. ತಂಬಾಕು ಸೇವನೆಯು ಬಾಯಿ ಕ್ಯಾನ್ಸರ್, ಹೃದಯ ರೋಗಗಳು, ಉಸಿರಾಟದ ಸಮಸ್ಯೆಗಳು, ರಕ್ತದೊತ್ತಡ ಹೆಚ್ಚಳ ಹಾಗೂ ಹಲ್ಲು ಮತ್ತು ಬಾಯಿಗೆ ಸಂಬಂಧಿತ ಕಾಯಿಲೆಗಳಿಗೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದು ಕೊಳ್ಳುವಂತೆ ಸಂಘಟಕರು ಮನವಿ ಮಾಡಿದ್ದಾರೆ. ಅಲ್ಲದೆ ಆಸ್ಪತ್ರೆಯಲ್ಲಿ ಮಾನಸಿಕ ಕಾಯಿಲೆಗಳು ಹಾಗೂ ಸಾರಾಯಿ, ತಂಬಾಕು, ಗಾಂಜಾ ಸೇರಿದಂತೆ ವಿವಿಧ ಅಮಲು ಪದಾರ್ಥಗಳ ವ್ಯಸನ ವಿಮುಕ್ತಿ ಚಿಕಿತ್ಸೆಗೆ ಇಎಸ್‌ಐ ಸೌಲಭ್ಯವೂ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9242821515ನ್ನು ಸಂಪರ್ಕಿಸಬಹುದು ಎಂದು ವೈದ್ಯಕೀಯ ನಿರ್ದೇಶಕರು ತಿಳಿಸಿದ್ದಾರೆ.

ಐವನ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಉಡುಪಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿರುವ ಡಿ ಕೆ ಶಿವಕುಮಾರ್ ಅವರ ನೂತನ ಸಚಿವ ಸಂಪುಟದಲ್ಲಿ ಕ್ರೈಸ್ತ ಸಮುದಾಯದ ಶಾಸಕ ಕೆ ಜೆ ಜಾರ್ಜ್‌ಗೆ ಉಪಮುಖ್ಯಮಂತ್ರಿ ಹಾಗೂ ಕರಾವಳಿಯ ಐವನ್ ಡಿಸೋಜಾ ಅವರಿಗೆ ಮಂತ್ರಿ ಸ್ಥಾನವನ್ನು ನೀಡುವಂತೆ ಕಥೊಲಿಕ್ ಸಭಾ ಉಡುಪಿ ಪ್ರದೇಶ ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸಿದೆ. ಕೆ ಜೆ ಜಾರ್ಜ್ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದು ಕಾಂಗ್ರೆಸ್ ಪಕ್ಷಕ್ಕೆ ಅತ್ಯುನ್ನತವಾದ ಸೇವೆಯನ್ನು ನೀಡಿದ್ದಾರೆ. ಕ್ರೈಸ್ತ ಸಮುದಾಯಕ್ಕೆ ಈ ವರೆಗೆ ಇಂತಹ ಉನ್ನತ ಹುದ್ದೆ ಲಭಿಸಿಲ್ಲ ಈ ಬಾರಿಯಾದರೂ ಇಂತಹ ಅವಕಾಶ ಒದಗಿ ಬರಲಿದೆ ಎಂಬ ಆಶಾಭಾವನೆಯಿದ್ದು ಈ ನಿಟ್ಟಿನಲ್ಲಿ ಪಕ್ಷ ಗಮನ ಹರಿಸಬೇಕಾಗಿದೆ. ಕರಾವಳಿಯಲ್ಲಿ ಕ್ರೈಸ್ತ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಐವನ್ ಡಿಸೋಜಾ ಅವರು ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ಪರಿಷತ್ ಮುಖ್ಯ ಸಚೇತಕರಾಗಿ ಕ್ರೈಸ್ತ ಅಭಿವೃದ್ಧಿ ನಿಗಮದಲ್ಲಿ ವಿವಿಧ ರೀತಿಯ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ, ಕಾಂಗ್ರೆಸ್ ಪಕ್ಷದ ಗೆಲುವಿಗೆ ಕ್ರೈಸ್ತ ಸಮುದಾಯದ ಕೊಡುಗೆ ಅಪಾರವಾಗಿದ್ದು ರಾಜ್ಯದ 23 ಕ್ಷೇತ್ರಗಳಲ್ಲಿ ಕ್ರೈಸ್ತ ಸಮುದಾಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದೆ. ಸಮುದಾಯಕ್ಕೆ ಪ್ರತಿ ಬಾರಿ ಉನ್ನತ ಸ್ಥಾನಗಳನ್ನು ನೀಡುವಾಗ ಅವಕಾಶ ವಂಚಿತವಾಗಿದ್ದು ಈ ಬಾರಿ ಡಿ ಕೆ ಶಿವಕುಮಾರ್ ಅವರು ಎಲ್ಲಾ ಸಮುದಾಯಗಳನ್ನು ಸಮಾನವಾಗಿ ಅವಕಾಶ ನೀಡುವ ಕೆಲಸವನ್ನು ಮಾಡಬೇಕು. ಈ ಮೂಲಕ ಐವನ್ ಡಿಸೋಜಾ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು. ಅವರಿಗೆ ಸಚಿವ ಸ್ಥಾನವನ್ನು ನೀಡಿದ್ದಲ್ಲಿ ಮುಂದಿನ ದಿನಗಳಲ್ಲಿ ಪಕ್ಷದ ಏಳಿಗೆಗೆ ಮತ್ತಷ್ಟು ಸಹಕಾರಿಯಾಗಲಿದೆ ಎಂದು ಅಧ್ಯಕ್ಷ ಮೆಲ್ವಿನ್ ಆರಾನ್ಹಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಕರ್ನಾಟಕ ದಸಂಸ ಅಂಬೇಡ್ಕರ್ ವಾದ 'ಅಕ್ಷರದಕ್ಕರೆ'ಯಲ್ಲಿ ಕುಂದರ್ ಅಭಿಪ್ರಾಯ

ಶಿಕ್ಷಣದಿಂದ ಸಮಾಜದ ಸರ್ವತೋಮುಖ ಪ್ರಗತಿ

ಕೋಟ: ಶಿಕ್ಷಣವೇ ಸಮಾಜದ ಅಭಿವೃದ್ಧಿಗೆ ಮೂಲ ಆಧಾರವಾಗಿದ್ದು, ಯಾವುದೇ ಕಾರಣಕ್ಕೂ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಬಾರದು ಎಂದು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ಹೇಳಿದರು.

ಭಾನುವಾರ ಕೋಟ ಸಿಎ ಬ್ಯಾಂಕ್ ಬಿ.ಸಿ ಹೊಳ್ಳ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಹೋಬಳಿ ಘಟಕ ಕೋಟ ಇವರ ಆಶ್ರಯದಲ್ಲಿ ನಡೆದ 'ಅಕ್ಷರದಕ್ಕರೆ-2026' ಕಾರ್ಯಕ್ರಮದಲ್ಲಿ ಉಚಿತ ನೋಟ್‌ಬುಕ್ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ನೆರವೇರಿಸಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಗಳಿಸಿದ ಸಾಧಕ ವಿದ್ಯಾರ್ಥಿ ಪ್ರೀತಮ್ ಪೂಜಾರಿ ಸಾಧನೆ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದರು.

ಅಕ್ಷರದಕ್ಕರೆ ಪುರಸ್ಕಾರವನ್ನು ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಗಳಿಸಿದ ಕುಂದಾಪುರದ ಪ್ರೀತಮ್ ಪೂಜಾರಿ, ಸಂಸತ್ ಭವನದಲ್ಲಿ ಅಂಬೇಡ್ಕರ್ ಕುರಿತು ಭಾಷಣಗೈದ ಮಹಾಲಕ್ಷ್ಮಿ ಸಿ.ಜಿ. ಅವರಿಗೆ ನೀಡಲಾಯಿತು. ಸಮುದಾಯ ಸಾಧಕ ಪುರಸ್ಕಾರವನ್ನು ಉಪನ್ಯಾಸಕ ಮಂಜುನಾಥ್, ಬಿಎಸ್ ಎನ್ ಎಲ್ ಪ್ರಮುಖ ಹುದ್ದೆಯಲ್ಲಿ ಕಾರ್ಯ



ನಿರ್ವಹಿಸುತ್ತಿರುವ ಮಣೂರಿನ ಪ್ರಭಾಕರ್ ಅವರಿಗೆ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಸಾಂಕೇತಿಕವಾಗಿ ನೋಟ್ ಬುಕ್ ಹಾಗೂ ಪ್ರತಿಭಾ ಪುರಸ್ಕಾರ ನೀಡಿ ಅಕ್ಷರದಕ್ಕರೆ ಮಹತ್ವ ತಿಳಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ದಸಂಸ ಕೋಟ ಹೋಬಳಿಯ ಸಂಚಾಲಕ ನಾಗರಾಜ್ ಪಡುಕರೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪನಮನಗೈಯಲಾಯಿತು. ಮುಖ್ಯ ಅಭ್ಯಾಗತರಾಗಿ ಉದ್ಯಮಿ ಮೊಳಹಳ್ಳಿ ದಿನೇಶ್ ಹೆಗ್ಡೆ,ದಸಂಸ ಅಂಬೇಡ್ಕರ್ ವಾದ ರಾಜ್ಯ ಸಂಘಟನಾ ಸಂಚಾಲಕ ಸುಂದರ್ ಮಾಸ್ತರ್, ಕೋಟ ಸಿಎ ಬ್ಯಾಂಕ್ ಅಧ್ಯಕ್ಷ ಡಾ.ಕೃಷ್ಣ ಕಾಂಚನ್, ದಸಂಸ ಮೈಸೂರು ವಿಭಾಗೀಯ ಸಂಘಟನಾ ಸಂಚಾಲಕ ಶ್ಯಾಮರಾಜ್ ಬಿರ್ತಿ, ಕುಂದಾಪುರ ತಾಲೂಕು ಸಂಚಾಲಕ ಕೆ.ಸಿ. ರಾಜು ಬೆಟ್ಟಿನಮನೆ,ಜಿಲ್ಲಾ ಸಮಿತಿಯ ಸದಸ್ಯ ಶ್ರೀನಿವಾಸ ವಡ್ಡರ್ಸೆ, ತಾಲೂಕು ಸಂಘಟನಾ ಸಂಚಾಲಕ ವಿಜಯ ಗಿಳಿಯಾರು, ಹಿರಿಯ ಮುಖಂಡ ಐತ ಕಾರ್ಕಡ, ದಸಂಸ ಮಹಿಳಾ ಒಕ್ಕೂಟದ ಗೀತಾ ಸುರೇಶ್, ಗಣಪತಿ ಜೂನಿಯರ್ ಕಾಲೇಜು ಮಂಗಳೂರು ಇದರ ಪ್ರಾಂಶುಪಾಲ ರತ್ನಾಕರ ಗುಂಡ್ಮಿ, ಉಪನ್ಯಾಸಕ ಸಂಜೀವ ಸಿ. ಗುಂಡ್ಮಿ, ಕೋಟ ವಿವೇಕ ಪ್ರೌಢಶಾಲಾ ಮುಖ್ಯ ಶಿಕ್ಷಕ ಪ್ರೇಮಾನಂದ ಬಾರ್ಕೂರು ಉಪಸ್ಥಿತರಿದ್ದರು. ದಸಂಸ ತಾಲೂಕು ಪ್ರಧಾನ ಸಂಚಾಲಕ ಶ್ಯಾಮಸುಂದರ್ ತೆಕ್ಕಟ್ಟೆ ಸ್ವಾಗತಿಸಿದರು. ಜಿಲ್ಲಾ ಪ್ರಧಾನ ಸಂಚಾಲಕ ಟಿ.ಮಂಜುನಾಥ್ ಗಿಳಿಯಾರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಭಾಕರ್ ಮಣೂರು ನಿರೂಪಿಸಿದರು. ಜಿಲ್ಲಾ ಸಮಿತಿ ಸದಸ್ಯ ಕುಮಾರ್ ಕೋಟ ವಂದಿಸಿದರು.ರವಿ ಬನ್ನಾಡಿ ಸಹಕರಿಸಿದರು. ರವಿ ಬನ್ನಾಡಿ ನೇತೃತ್ವದ ಅಘೋರೇಶ್ವರ ಮೇಲೋಡಿಸ್ ಅವರಿಂದ ಸಂಗೀತ ರಸಮಂಜರಿ ಜರಗಿತು.

ಮಧುಶ್ರೀ ಪ್ರಕಾಶನ ಕಿದಿಯೂರು 40ನೇ ವರ್ಷದ ಸಂಭ್ರಮಾಚರಣೆ

ಕೃತಿಗಳ ಲೋಕಾರ್ಪಣೆ, ಗುರುವಂದನೆ, ಸನ್ಮಾನ

ಉಡುಪಿ: ತುಳುಕೂಟ ಉಡುಪಿ ಮತ್ತು ವಿಶ್ವಪ್ರಭ ಪ್ರತಿಷ್ಠಾನದ ಜಂಟಿ ಸಹಯೋಗದಲ್ಲಿ, ಮಧುಶ್ರೀ ಪ್ರಕಾಶನ ಕಿದಿಯೂರು ಇದರ 40ನೇ ವರ್ಷದ ಸಂಭ್ರಮಾಚರಣೆಯ ಉದ್ಘಾಟನಾ ಸಮಾರಂಭವು ಭಾನುವಾರ ಕಿದಿಯೂರು ಹೊಟೇಲ್‌ನ ಅನಂತಶಯನ ಸಭಾಂಗಣದಲ್ಲಿ ಜರುಗಿತು.

ಉಡುಪಿ ತುಳುಕೂಟದ ಅಧ್ಯಕ್ಷ ಬಿ. ಜಯಕರ ಶೆಟ್ಟಿ ಇಂದ್ರಾಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉದ್ಯಮಿ ಯು. ವಿಶ್ವನಾಥ ಶೆಣೈ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮಹತ್ವದ ಕೃತಿಗಳ ಲೋಕಾರ್ಪಣೆ

ಗೋವಾದ ಮೀರ್ಮಾರದ ನಿವೃತ್ತ ಉಪಪ್ರಾಂಶುಪಾಲ ಎಸ್.ಎನ್.ಡಿ. ಪೂಜಾರಿ ಅವರು ಬರೆದಿರುವ 'ತುಳುವ ದೈವ ಸಂಪ್ರದಾಯ' ಎಂಬ ಸಂಶೋಧನಾತ್ಮಕ ಅಧ್ಯಯನ ಗ್ರಂಥವನ್ನು ಉಡುಪಿ ತುಳುಕೂಟದ ಸ್ಥಾಪಕಾಧ್ಯಕ್ಷ ಡಾ. ಭಾಸ್ಕರಾನಂದ ಕುಮಾರ್ ಬಿಡುಗಡೆ ಮಾಡಿದರು. ಜಾನಪದ ವಿದ್ವಾಂಸ ಡಾ. ಗಣನಾಥ ಎಕ್ಕಾರ್ ಈ ಕೃತಿಯನ್ನು ಪರಿಚಯಿಸಿದರು.

ಇದೇ ವೇಳೆ, ತುಳುಕೂಟದ ಪ್ರಧಾನ ಕಾರ್ಯದರ್ಶಿ ಹಾಗೂ ಮಧುಶ್ರೀ ಪ್ರಕಾಶನದ ಮುಖ್ಯಸ್ಥರಾದ ಸಾಹಿತಿ



ಗಂಗಾಧರ ಕಿದಿಯೂರು ರಚಿಸಿರುವ 'ಪಿಂಗಾರದ ಬಾಲೆ ಸಿರಿ' ತುಳು ನಾಟಕದ ಇಂಗ್ಲಿಷ್ ಆವೃತ್ತಿಯನ್ನು ಜಾನಪದ ವಿದ್ವಾಂಸ ಡಾ. ಗಣೇಶ್ ಅಮೀನ್ ಸಂಕಮಾರ್ ಲೋಕಾರ್ಪಣೆಗೊಳಿಸಿದರು. ಲೇಖಕಿ ಡಾ. ಪಾರ್ವತಿ ಜಿ. ಐತಾಳ್ ಕೃತಿಯ ಕುರಿತು ಮಾತನಾಡಿದರು.

ಗುರುವಂದನೆ, ಪ್ರತಿಭಾ ಪುರಸ್ಕಾರ

ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಪ್ರಾಂಶುಪಾಲ ಪ್ರೊ. ಎಂ.ಎಲ್. ಸಾಮಗ, ನಿವೃತ್ತ ಶಿಕ್ಷಕಿಯರಾದ ಸರಳಾ ಶೆಟ್ಟಿ, ಧನಲಕ್ಷ್ಮಿ ಮತ್ತು ಮುತ್ತಕ್ಕ ಅವರಿಗೆ ಆತ್ಮೀಯವಾಗಿ 'ಗುರುವಂದನೆ' ಸಲ್ಲಿಸಿ ಗೌರವಿಸಲಾಯಿತು. ತದನಂತರ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆ ತೋರಿದ ವಿದ್ಯಾರ್ಥಿಗಳಾದ ತನುಶ್ರೀ ಪಿತ್ರೋಡಿ, ಸಂಹಿತಾ ಜಿ.ಪಿ., ಯಶಸ್ ಪಿ. ಸುವರ್ಣ ಕಟಪಾಡಿ, ಶಾರ್ವರಿ ಯು. ಅಂಚನ್, ಆದ್ಯ ಶ್ರೀನಾಥ್, ಅದಿತಿ ಶ್ರೀನಾಥ್, ಸಮರ್ಥ ಎಂ.ಸಿ, ತನ್ವಿ ಎಂ. ಕಿದಿಯೂರು ಹಾಗೂ ವೈಷ್ಣವಿ ವಿಶ್ವನಾಥ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ಸಂಸ್ಥೆಗಳಿಗೆ ಗೌರವಾರ್ಪಣೆ

'ರಂಗಭೂಮಿ ಉಡುಪಿ, ಸುಮನಸಾ ಕೊಡವೂರು, ಕಲಾಕಿರಣ್ ಕ್ಲಬ್ ಬೈಲೂರು, ನವಸುಮ ರಂಗಮಂಚ ಕೊಡವೂರು, ಯೂತ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಕ್ಲಬ್ ಅಂಬಲಪಾಡಿ, ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಉಡುಪಿ, ವಿಠೋಬ ಭಜನಾ ಮಂದಿರ ಅಂಬಲಪಾಡಿ, ತುಳುಕೂಟ ಉಡುಪಿ, ನಂದಗೋಕುಲ ಯುವಕ ಮಂಡಲ ಮಾರ್ಪಳ್ಳಿ, ಬೈದಶ್ರೀ ಸಂಶೋಧನಾ ಕೇಂದ್ರ ಆದಿಉಡುಪಿ ಸಂಸ್ಥೆಗಳನ್ನು ವೇದಿಕೆಯಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು. ಮಧುಶ್ರೀ ಪ್ರಕಾಶನದ ಮುಖ್ಯಸ್ಥ ಗಂಗಾಧರ ಕಿದಿಯೂರು ಸ್ವಾಗತಿಸಿದರು. ಪ್ರಭಾಕರ ತುಮುರಿ ನಿರೂಪಿಸಿದರು.

ಸಾಲಿಗ್ರಾಮದಲ್ಲಿ 'ಅರ್ಥಾಂಕುರ' ಸರಣಿ ತಾಳಮದ್ದಳೆಗೆ ಚಾಲನೆ



ಕೋಟ: ಹೊಸ ತಲೆಮಾರಿನ ಅರ್ಥದಾರಿಗಳ ಪರಿಶೋಧ ಕಾರ್ಯಕ್ರಮವು ಕಲಿಕಾ ಹಂತದಲ್ಲಿರುವ ಕಲಾವಿದರಿಗೆ ಪ್ರೋತ್ಸಾಹದಾಯಕವಾಗಿದೆ. ಸಾಂಸ್ಕೃತಿಕ ಚಿಂತನೆಯೊಂದಿಗೆ ಆಧ್ಯಾತ್ಮಿಕ ಸ್ಪರ್ಶವೂ ಈ ಕಲೆಯಿಂದ ಸಾಧ್ಯವಾಗುತ್ತದೆ. ಪ್ರಸಿದ್ಧ ಕಲಾವಿದರೊಂದಿಗೆ ಹೊಸ ಕಲಾವಿದರೂ ಹೆಮ್ಮರವಾಗಿ ಬೆಳೆದು ಯಕ್ಷಗಾನವನ್ನು ವಿಶ್ವವ್ಯಾಪಿ ಬೆಳಗಬೇಕು. ಇದಕ್ಕಾಗಿ ಪ್ರಸಿದ್ಧ ದೇಗುಲಗಳೂ ಕೈಜೋಡಿಸಬೇಕು ಎಂದು ಸಾಲಿಗ್ರಾಮ ಗುರುನರಸಿಂಹ ದೇಗುಲದ ಅಧ್ಯಕ್ಷ ಪ್ರಕಾಶ್ ಕಾರಂತ್ ಹೇಳಿದರು.

ಶ್ರೀ ಗುರುನರಸಿಂಹ ದೇವಸ್ಥಾನ ಸಾಲಿಗ್ರಾಮ ಸಹಯೋಗದೊಂದಿಗೆ ಯಶಸ್ವಿ ಕಲಾವೃಂದ ಕೊಮೆ ತೆಕ್ಕಟ್ಟೆ, ಯಕ್ಷ ನುಡಿಸಿರಿ ಬಳಗ ಸಿದ್ದಾಪುರ ಆಶ್ರಯದಲ್ಲಿ 'ಅರ್ಥಾಂಕುರ' ತಿಂಗಳ ಸರಣಿ ತಾಳಮದ್ದಳೆ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಕಾಶ್ ಕಾರಂತ್ ಮಾತನ್ನಾಡಿದರು. ಪ್ರಸಿದ್ಧ ಕಲಾವಿದರಾದ ಯಕ್ಷಗಾನ ವಿದ್ವಾಂಸ ಡಾ. ಪ್ರಭಾಕರ ಜೋಷಿ, ಪಿ. ಕಿಶನ್ ಹೆಗ್ಡೆ, ಕೆ. ತಾರಾನಾಥ ಹೊಳ್ಳ, ಸಿ. ಚಂದ್ರಶೇಖರ ಉಪಾಧ್ಯಾಯ, ಸುಣ್ಣಂಬಳ ವಿಶ್ವೇಶ್ವರ ಭಟ್, ವಾಸುದೇವ ರಂಗ ಭಟ್, ಡಾ. ವೈಕುಂಠ ಹೇರ್ಳೆ ಇದ್ದರು. ಡಾ. ಜಗದೀಶ್ ಶೆಟ್ಟಿ ಪ್ರಾಸ್ತಾವಿಕ ಮಾತನ್ನಾಡಿದರು. ಮಲ್ಯಾಡಿ ಸೀತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ರಾಘವೇಂದ್ರ ತುಂಗ ನಿರ್ವಹಿಸಿದರು. ಬಳಿಕ ಯಕ್ಷಗಾನ ತಾಳಮದ್ದಳೆ 'ಇಂದ್ರಜಿತು ಕಾಳಗ' ರಂಗ ಪ್ರಸ್ತುತಿಗೊಂಡಿತು.

ಕೋಟ ಅಮೃತೇಶ್ವರೀ ಮೇಳದ ಕೊನೆಯ ಸೇವೆಯಾಟ ಸಮಾಪನ



ಕೋಟ: ಇಲ್ಲಿನ ಕೋಟದ ಅಮೃತೇಶ್ವರೀ ದಶಾವತಾರ ಯಕ್ಷಗಾನ ಮಂಡಳಿ ಇದರ ಪ್ರತಿ ವರ್ಷದ ಯಕ್ಷಗಾನದ ಕೊನೆಯ ತಿರುಗಾಟದ ಸೇವೆಯಾಟ ಶುಕ್ರವಾರ ಸಂಪನ್ನಗೊಂಡಿತು.

ದೇಗುಲದ ಅಧ್ಯಕ್ಷ ಹಾಗೂ ಮೇಳದ ಯಜಮಾನ ಆನಂದ್ ಸಿ. ಕುಂದರ್ ಈ ವರ್ಷದ ಹರಕೆ ಹಾಗೂ ಗ್ರಾಮದ ಸೇವೆಯಾಟ ನೀಡಿದ ಭಕ್ತರಿಗೆ, ಸಹಕಾರ ನೀಡಿದ ಕಲಾವಿದರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ದೇಗುಲದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರತನ್ ಐತಾಳ್, ಶಿವ ಪೂಜಾರಿ, ಸುಭಾಷ್ ಶೆಟ್ಟಿ, ಸುಬ್ರಾಯ ಜೋಗಿ,ಗಣೇಶ್ ನೆಲ್ಲಿಬೆಟ್ಟು, ಸುಧಾ ಎ. ಪೂಜಾರಿ, ಜ್ಯೋತಿ ಡಿ. ಕಾಂಚನ್, ಚಂದ್ರ ಆಚಾರ್ ಹಾಗೂ ಮೇಳದ ಮ್ಯಾನೇಜರ್ ಸುರೇಶ್ ಬಂಗೇರ, ಮಾಜಿ ಟ್ರಸ್ಟಿಗಳು, ದೇಗುಲದ ವ್ಯವಸ್ಥಾಕ ಗಣೇಶ್ ಹೊಳ್ಳ ಉಪಸ್ಥಿತರಿದ್ದರು.

> ■ ಕೊನೆಯ ಸೇವೆಯಾಟದ ಅಂಗವಾಗಿ ಸುದರ್ಶನ ವಿಜಯ, ವೀರಮಣಿ, ಕನಕಾಂಗಿ ಕಲ್ಯಾಣ ಪ್ರದರ್ಶನ

ಕೊನೆಯ ಸೇವೆಯಾಟದ ಅಂಗವಾಗಿ ಸುದರ್ಶನ ವಿಜಯ, ವೀರಮಣಿ, ಕನಕಾಂಗಿ ಕಲ್ಯಾಣ ಪ್ರದರ್ಶನಗೊಂಡಿತು.

ಖಾರ್ವಿಕೇರಿ ದೇವಸ್ಥಾನದಲ್ಲಿ ಸಾಮೂಹಿಕ ನೀಲಾ ಸರಸ್ವತೀ ಹವನ



ಕುಂದಾಪುರ: ಕುಂದಾಪುರದ ಖಾರ್ವಿಕೇರಿಯ ಶ್ರೀ ಮಹಾಕಾಳಿ ದೇವಸ್ಥಾನದಲ್ಲಿ ಸಮಸ್ತ ಮಕ್ಕಳ ಉತ್ತಮ ವಿದ್ಯಾಭ್ಯಾಸಕ್ಕೆ ಪ್ರಾರ್ಥಿಸಿ, ರವಿವಾರ ಸಾಮೂಹಿಕ ನೀಲಾ ಸರಸ್ವತೀ ಹವನ ನಡೆಯಿತು.

ಶಾಲಾ ಪುನಾರರಂಭದ ಹಿನ್ನೆಲೆಯಲ್ಲಿ ಮಕ್ಕಳ ವಿದ್ಯಾಭ್ಯಾಸದ ಪ್ರಗತಿಗಾಗಿ ಸರಸ್ವತಿ ಸ್ವರೂಪಿಣಿ ಶ್ರೀ ಮಹಾಕಾಳಿ ಅಮ್ಮನವರ ಸಾನಿಧ್ಯದಲ್ಲಿ ಪ್ರಧಾನ ಅರ್ಚಕರ ನೇತೃತ್ವದಲ್ಲಿ ನೀಲಾ ಸರಸ್ವತಿ ಹವನದ ವಿಧಿ- ವಿಧಾನ ನೆರವೇರಿತು.

ಈ ಸಂದರ್ಭದಲ್ಲಿ ಶ್ರೀ ಮಹಾಕಾಳಿ ದೇವಸ್ಥಾನದ ಅಧ್ಯಕ್ಷ ಅಜಂತ ಖಾರ್ವಿ, ಉಪಾಧ್ಯಕ್ಷ ಪ್ರಕಾಶ್ ಖಾರ್ವಿ, ಕಾರ್ಯದರ್ಶಿ ನಾಮದೇವ್ ಖಾರ್ವಿ, ಪ್ರಮುಖರಾದ ಸುನೀಲ್ ಕುಮಾರ್ ಖಾರ್ವಿ, ಸುನೀಲ್ ತಲ್ಲೂರು, ಮನೋಜ್ ಖಾರ್ವಿ, ರಾಜು ನಾಯ್ಕ್, ರತ್ನಾಕರ್ ಖಾರ್ವಿ, ದಾಸ ಹೆಗ್ಡೆ, ವರದರಾಜ್ ಖಾರ್ವಿ, ಸುರೇಶ್ ಖಾರ್ವಿ, ಮುಕ್ತೇಶ್ವರರಾದ ಶಂಕರ್ ನಾಯ್ಕ್, ಪಾಂಡು ಸಾರಂಗ, ಆನಂದ್ ನಾಯ್ಕ್, ರಾಘವೇಂದ್ರ ಖಾರ್ವಿ, ಆಡಳಿತ ನಿರ್ದೇಶಕರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

> ■ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರಾರ್ಥಿಸಿ, ಸಾಮೂಹಿಕ ನೀಲಾ ಸರಸ್ವತೀ ಹವನ

ಗಂಗೊಳ್ಳಿಯಲ್ಲಿ ರಕ್ತದಾನ ಶಿಬಿರ | ರಕ್ತದ ಬೇಡಿಕೆ ಜೊತೆಗೆ ರಕ್ತನಿಧಿ ಕೇಂದ್ರಗಳಲ್ಲಿ ರಕ್ತದ ಕೊರತೆ ಇದೆ: ಪುರಾಣಿಕ್

ಒಂದು ಯೂನಿಟ್ ರಕ್ತದಾನ ಮಾಡುವುದರಿಂದ ಮೂರು ಜೀವಗಳ ಉಳಿವು

ಕುಂದಾಪುರ: ರಕ್ತದಾನ ಮಾಡುವುದು ಪುಣ್ಯದ ಕಾರ್ಯ. ಇಂದಿನ ಈ ರಜಾದಿನಗಳಲ್ಲಿ ರಕ್ತದಾನ ಮಾಡುವವರ ಸಂಖ್ಯೆ ಕಡಿಮೆಯಿದೆ. ಕುಂದಾಪುರ ರೆಡ್‌ಕ್ರಾಸ್ ರಕ್ತನಿಧಿ ಕೇಂದ್ರದಲ್ಲಿ ಪ್ರತಿನಿತ್ಯ 20-25 ಯೂನಿಟ್ ರಕ್ತದ ಬೇಡಿಕೆ ಇದೆ. ರಕ್ತದ ಬೇಡಿಕೆ ಹೆಚ್ಚಿದೆ ಜೊತೆಗೆ ರಕ್ತನಿಧಿ ಕೇಂದ್ರಗಳಲ್ಲಿ ರಕ್ತದ ಕೊರತೆ ಕೂಡ ಇದೆ. ಒಂದು ಯೂನಿಟ್ ರಕ್ತ ದಾನ ಮಾಡುವುದರಿಂದ ಮೂರು ಜೀವ ಉಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಪುಣ್ಯದ ಕೆಲಸದಲ್ಲಿ ಕೈಜೋಡಿಸಬೇಕು ಎಂದು ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರ ಘಟಕದ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್ ಹೇಳಿದರು.



ಯಕ್ಷಾಭಿಮಾನಿ ರಕ್ತದಾನಿಗಳ ಬಳಗ ಗಂಗೊಳ್ಳಿ ಇದರ 17ನೇ ವರ್ಷದ ಶ್ರೀ ಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಪ್ರಯುಕ್ತ ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಗಂಗೊಳ್ಳಿ, ಅಭಯಹಸ್ತ ಚಾರಿಟೇಬಲ್ ಟ್ರಸ್ಟ್ ಉಡುಪಿ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ರಕ್ತನಿಧಿ ಕೇಂದ್ರ ಕುಂದಾಪುರ ಇವರ ಸಹಯೋಗದೊಂದಿಗೆ ಗಂಗೊಳ್ಳಿಯ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಭಾನುವಾರ ಜರಗಿದ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಗಂಗೊಳ್ಳಿ ಖಾರ್ವಿಕೇರಿ ಶ್ರೀ ಮಹಾಂಕಾಳಿ ಅಮ್ಮನವರ ದೇವಸ್ಥಾನದ ಅಧ್ಯಕ್ಷ ರಾಮಪ್ಪ ಖಾರ್ವಿ ಶಿಬಿರವನ್ನು ಉದ್ಘಾಟಿಸಿದರು. ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಜಿ.ವಿಶ್ವನಾಥ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಅಭಯಹಸ್ತ ಚಾರಿಟೇಬಲ್ ಟ್ರಸ್ಟ್ ಉಡುಪಿ ಅಧ್ಯಕ್ಷ ಸತೀಶ್ ಸಾಲಿಯಾನ್, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ದಿವಾಕರ ಖಾರ್ವಿ, ಪತ್ರಕರ್ತ ಬಿ.ರಾಘವೇಂದ್ರ ಪೈ, ತ್ರಾಸಿ ಗ್ರಾಪಂ ಮಾಜಿ ಅಧ್ಯಕ್ಷ ಮಿಥುನ್ ಬಿಜೂರು, ಕೆನರಾ ಬ್ಯಾಂಕ್ ಗಂಗೊಳ್ಳಿ ಶಾಖೆ ಪ್ರಬಂಧಕ ವಾಸು ದೇವಾಡಿಗ, ಗಂಗೊಳ್ಳಿ ಗ್ರಾಪಂ ಸದಸ್ಯ ಚಂದ್ರ ಖಾರ್ವಿ, ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಣೇಶ ನಾಯಕ್, ಯಕ್ಷಾಭಿಮಾನಿ ರಕ್ತದಾನಿಗಳ ಬಳಗದ ಅಶೋಕ ಎನ್.ಡಿ., ಚರಣ್ ಖಾರ್ವಿ ಇದ್ದರು. ಉಪನ್ಯಾಸಕ ನರೇಂದ್ರ ಎಸ್.ಗಂಗೊಳ್ಳಿ ನಿರ್ವಹಿಸಿದರು.

> **ಸನ್ಮಾನ, ಗೌರವಾರ್ಪಣೆ**
> ಇದೇ ಸಂದರ್ಭ ರಕ್ತದಾನಿ ದೇವದಾಸ ಪಾಟ್ಕರ್ ಅವರನ್ನು ಸಮ್ಮಾನಿಸಲಾಯಿತು. ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಸಾಧನೆಗೈದ ವೈಷ್ಣವಿ ಖಾರ್ವಿ ಅವರನ್ನು ಗೌರವಿಸಲಾಯಿತು.

ಸುತ್ತಮುತ್ತ

ಜೂ.2: ಸೂರಂಬೈಲು ಶಾಲೆಯಲ್ಲಿ ಶಿಕ್ಷಕ ಹುದ್ದೆಗೆ ಸಂದರ್ಶನ

ಕುಂಬಳೆ: ಸೂರಂಬೈಲು ಸರಕಾರಿ ಪ್ರೌಢಶಾಲೆಯಲ್ಲಿ ಖಾಲಿಯಿರುವ ಪ್ರೌಢಶಾಲಾ ಶಿಕ್ಷಕ ಸಮಾಜ ವಿಜ್ಞಾನ (ಕನ್ನಡ ಮಾಧ್ಯಮ) ಹುದ್ದೆಗೆ ದಿನವೇತನ ಆಧಾರದಲ್ಲಿ ತಾತ್ಕಾಲಿಕ ನೇಮಕಾತಿಗಾಗಿ ಜೂ. 2ರಂದು ಬೆಳಗ್ಗೆ 10.30ಕ್ಕೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಆಸಕ್ತ ಅರ್ಹ ಉದ್ಯೋಗಾರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ 9495094859 ಮೊಬೈಲ್ ಸಂಖ್ಯೆಗೆ ಕರೆ ಮಾಡಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನಗರಸಭಾ ಕ್ರೀಡಾಂಗಣ ಅಭಿವೃದ್ಧಿಗೆ 18 ಕೋಟಿ ರೂ. ಯೋಜನೆ

ಕಾಸರಗೋಡು: ವಿದ್ಯಾನಗರದಲ್ಲಿರುವ ಕಾಸರಗೋಡು ನಗರಸಭಾ ಕ್ರೀಡಾಂಗಣದ ಸಮಗ್ರ ಅಭಿವೃದ್ಧಿಗಾಗಿ ನಗರಸಭಾ ಆಡಳಿತವು 18 ಕೋಟಿ ರೂ.ಗಳ ಯೋಜನೆಗೆ ರೂಪು ನೀಡಿದೆ. ಇದಕ್ಕಾಗಿರುವ ರೂಪುರೇಷೆ (ಡಿಪಿಆರ್) ತಯಾರಿಸುವ ಹೊಣೆಗಾರಿಕೆಯನ್ನು ಸ್ಪೋರ್ಟ್ಸ್ ಕೇರಳ ಫೌಂಡೇಶನ್‌ಗೆ ನಗರಸಭೆಯು 2023ರಲ್ಲಿ ನೀಡಿತ್ತು. ಈ ಹೊಸ ಯೋಜನೆಯಂತೆ ನಗರಸಭಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರಾಕ್ ಫುಟ್ಬಾಲ್ ಟರ್ಫ್ ಕೋರ್ಟ್‌ಗಳ ಸೌಕರ್ಯಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ಈ ಯೋಜನೆಗೆ ಮೊದಲು 10 ಕೋಟಿ ರೂ. ವೆಚ್ಚ ಅಂದಾಜಿಸಲಾಗಿತ್ತು. ಆದರೆ ಈಗ ಒಟ್ಟು ನಿರ್ಮಾಣ ವೆಚ್ಚ 18 ಕೋಟಿ ರೂ. ತಗುಲ ಬಹುದೆಂಬ ಲೆಕ್ಕಾಚಾರಕ್ಕೆ ಬರಲಾಗಿದೆ. ಈ ಡಿಪಿಆರ್‌ನ್ನು ನಗರಸಭಾ ಕೌನ್ಸಿಲ್ ಅಧಿವೇಶನದ ಅಂಗೀಕಾರಕ್ಕಾಗಿ ಮೊದಲು ಮಂಡಿಸಲಾಗುವುದು. ಅದಕ್ಕೆ ಅಂಗೀಕಾರ ಲಭಿಸಿದ ನಂತರ ಕೇಂದ್ರ ಸರ್ಕಾರದ ಅಮೃತ ಮಿಷನ್ ಯೋಜನೆಯಲ್ಲಿ ಒಳಪಡಿಸಿ ಜಾರಿಗೊಳಿಸಲು ನಗರಸಭೆ ತೀರ್ಮಾನಿಸಿದೆ. ಇದರ ಹೊರತಾಗಿ ಈ ಯೋಜನೆಗೆ ಕೇರಳ ಸರಕಾರದ ಬಜೆಟ್‌ನಲ್ಲಿ ಮೀಸಲಿರಿಸಿರುವ ಮೊತ್ತವನ್ನು ಪಡೆಯಲು ನಗರಸಭೆಯು ಮುಂದಾಗಿದೆ.

ಇಲೆಕ್ಟ್ರಿಕ್ ಸ್ಕೂಟರ್, ಶ್ರವಣ ಉಪಕರಣ ವಿತರಣೆ

ಕಾಸರಗೋಡು: ಕೇಂದ್ರ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಡಿ ಪ್ರಧಾನಮಂತ್ರಿ ದಿವ್ಯಶಾ ವಯೋಶ್ರೀ ಕೇಂದ್ರದ ಸಹಯೋಗದೊಂದಿಗೆ ಅಕ್ಷಯಮಿತ್ರ ಫೌಂಡೇಶನ್, ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಹಿರಿಯ ನಾಗರಿಕರಿಗೆ ಇಲೆಕ್ಟ್ರಿಕ್ ಸ್ಕೂಟರ್‌ಗಳು, ಶ್ರವಣ ಉಪಕರಣಗಳು ಮತ್ತು ವೀಲ್‌ಚೇರ್‌ಗಳು ಸೇರಿದಂತೆ ಸಹಾಯಕ ಉಪಕರಣಗಳನ್ನು ಬಂದಡ್ಕದಲ್ಲಿ ಜರಗಿದ ಕಾರ್ಯಕ್ರಮದಲ್ಲಿ ವಿತರಿಸಲಾಯಿತು. ಅಕ್ಷಯಮಿತ್ರ ಫೌಂಡೇಶನ್ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್. ಉದ್ಘಾಟಿಸಿದರು. ಅಧಿಕಾರಕ್ಕೆ ಬಂದ ನಂತರ ನರೇಂದ್ರ ಮೋದಿ ಸರಕಾರವು ಎಲ್ಲಾ ವರ್ಗದ ಜನರ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು ಯೋಜನೆಗಳನ್ನು ಪ್ರಾರಂಭಿಸಿದೆ ಎಂದು ಅವರು ಹೇಳಿದರು. ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ ಹಿರಿಯ ನಾಗರಿಕರಿಗೆ ಶ್ರವಣ ಉಪಕರಣಗಳು ಮತ್ತು ಇಲೆಕ್ಟ್ರಿಕ್ ಸ್ಕೂಟರ್‌ಗಳು ಸೇರಿದಂತೆ ದುಬಾರಿ ಸಹಾಯಕ ಉಪಕರಣಗಳನ್ನು ಉಚಿತವಾಗಿ ವಿತರಿಸುವುದು ಮೋದಿ ಸರಕಾರದ ಸಾಮಾಜಿಕ ಬದ್ಧತೆಗೆ ಪುರಾವೆಯಾಗಿದೆ ಎಂದು ಅವರು ಗಮನ ಸೆಳೆದರು. ಅಕ್ಷಯಮಿತ್ರ ಫೌಂಡೇಶನ್‌ನ ಪದಾಧಿಕಾರಿಗಳಾದ ಪಿ.ಆರ್.ಸುನೀಲ್ ಮತ್ತು ಸತ್ಯನಾಥನ್ ಕೆ. ಉಪಸ್ಥಿತರಿದ್ದರು. ಬಿಜೆಪಿ ಮುಳಿಯಾರು ಮಂಡಲಾಧ್ಯಕ್ಷ ದಿಲೀಪ್ ಕುಮಾರ್ ಪಳ್ಳಂಜಿ ಅಧ್ಯಕ್ಷತೆ ವಹಿಸಿದ್ದರು. ಕುತ್ತಿಕೋಲು ಪಂಚಾಯತ್ ಸಮಿತಿ ಅಧ್ಯಕ್ಷ ಮಣಿ ಕಾವುಂಗಾನಂ, ಕುತ್ತಿಕೋಲು ಗ್ರಾಮ ಪಂಚಾಯತ್ ಜನಪ್ರತಿನಿಧಿಗಳಾದ ಮಹೇಶ್ ಗೋಪಾಲ್, ಸಿಂಧು ಮೋಹನ್, ದೇಲಂಪಾಡಿ ಗ್ರಾಮ ಪಂಚಾಯತ್ ಸದಸ್ಯ ಧನಂಜಯ ಬೆಳ್ಳಿಪ್ಪಾಡಿ, ಬಿಜೆಪಿ ಮುಳಿಯಾರು ಮಂಡಲ ಪ್ರಧಾನ ಕಾರ್ಯದರ್ಶಿ ಜಯಕುಮಾರ್ ಮಾತನಾಡಿದರು.

ಚೆರ್ಕಳ – ಕಲ್ಲಡ್ಕ ರಸ್ತೆಯಲ್ಲಿ ತಾತ್ಕಾಲಿಕ ಸಂಚಾರ ನಿರ್ಬಂಧ

ಕಾಸರಗೋಡು: ಕೇರಳ ರಸ್ತೆ ನಿಧಿ ಮಂಡಳಿ (ಕೆಆರ್‌ಎಫ್‌ಬಿ) ಅಧೀನದಲ್ಲಿ ಕೆಐಐಎಫ್‌ಬಿ ಯೋಜನೆಯಡಿ ನಿರ್ಮಾಣ ಹಂತದಲ್ಲಿರುವ ಚೆರ್ಕಳ – ಕಲ್ಲಡ್ಕ ರಾಜ್ಯ ಹೆದ್ದಾರಿಯಲ್ಲಿ ತಾತ್ಕಾಲಿಕ ಸಂಚಾರ ನಿರ್ಬಂಧಗಳನ್ನು ವಿಧಿಸಲಾಗಿದೆ. ಈ ಮಾರ್ಗದಲ್ಲಿ ಸಂಚಾರಕ್ಕೆ ತಾತ್ಕಾಲಿಕ ನಿಷೇಧ ಹೇರಲಾಗಿದ್ದು, ಚೆರ್ಕಳ ವಿಭಾಗದಲ್ಲಿ ನಡೆಯುತ್ತಿರುವ ರಸ್ತೆ ನಿರ್ವಹಣಾ ಕಾರ್ಯದ ಅಂಗವಾಗಿ ಇದು ಅನಿವಾರ್ಯವಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ. ಕಾಸರಗೋಡು ಕಡೆಯಿಂದ ಬರುವ ವಾಹನಗಳು ಚೆರ್ಕಳ ಹೊಸ ಬಸ್ ನಿಲ್ದಾಣದ ಮೂಲಕ ಜಾಲ್ಸೂರು ರಸ್ತೆ ಮತ್ತು ಬದಿಯಡ್ಕ ರಸ್ತೆಗೆ ಹೋಗಬೇಕು. ಬದಿಯಡ್ಕ ಮತ್ತು ಮುಳ್ಳೇರಿಯ ಪ್ರದೇಶಗಳಿಂದ ಬರುವ ವಾಹನಗಳು ಹೊಸ ಬಸ್ ನಿಲ್ದಾಣದ ಮೂಲಕ ಚೆರ್ಕಳ ಪೇಟೆಗೆ ತೆರಳುವ ರಸ್ತೆಯನ್ನು ಬಳಸಬೇಕು. ಕೇರಳ ರಸ್ತೆ ನಿಧಿ ಮಂಡಳಿ (ಕೆಆರ್‌ಎಫ್‌ಬಿ – ಪಿಎಂಯು) ಕಾಸರಗೋಡು ವಿಭಾಗದ ಸಹಾಯಕ ಇಂಜಿನಿಯರ್ ದಿಲೀಪ್ ಪಿ.ನಾಯರ್ ಅವರು ಸಾರ್ವಜನಿಕರು ಅಭಿವೃದ್ಧಿ ಕಾರ್ಯಗಳಿಗೆ ಸಂಪೂರ್ಣವಾಗಿ ಸಹಕರಿಸುವಂತೆ ಮತ್ತು ತಾತ್ಕಾಲಿಕ ತೊಂದರೆಗಳು ಅನಿವಾರ್ಯ ಎಂಬುದಾಗಿ ತಿಳಿಸಿದ್ದಾರೆ.

ಹಳೆಯ ಬಸ್ ನಿಲ್ದಾಣದಲ್ಲಿ ವಾಹನಗಳ ಅನಧಿಕೃತ ನಿಲುಗಡೆ | ಫಲಕ ಅಳವಡಿಸಿದ್ದರೂ ಕ್ಯಾರೇ ಅನ್ನದ ಜನ

ಕಡತಕಷ್ಟೇ ಸೀಮಿತವಾದ ಕುಂಬಳೆ ಗ್ರಾ.ಪಂ. ನಿರ್ಧಾರಗಳು

ಕುಂಬಳೆ: ಕುಂಬಳೆ ಗ್ರಾಮ ಪಂಚಾಯತ್ ಆಡಳಿತವು ಕೈಗೊಂಡ ಜನಪರ ಹಾಗೂ ಅಭಿವೃದ್ಧಿಪರ ತೀರ್ಮಾನಗಳನ್ನು ಸರಿಯಾಗಿ ಕಾರ್ಯಗತಗೊಳಿಸಲಾಗುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಹುಮುಖ್ಯವಾಗಿ ವಾಹನ ದಟ್ಟಣೆ ಹಾಗೂ ಸಾರಿಗೆ ಸಂಚಾರ ಸುಧಾರಣೆಯ ಭಾಗವಾಗಿ ಕುಂಬಳೆ ಹಳೆಯ ಬಸ್ ನಿಲ್ದಾಣಕ್ಕೆ ಬಸ್‌ಗಳಿಗೆ ಪ್ರವೇಶ ನೀಡಲು ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಆದರೆ ಬಸ್‌ಗಳು ಪ್ರವೇಶಿಸದ ಕಾರಣ ಖಾಸಗಿ ವಾಹನಗಳು ನಿಲ್ದಾಣದಲ್ಲಿ ಅನಧಿಕೃತವಾಗಿ ಪಾರ್ಕಿಂಗ್ ಮಾಡುತ್ತಿರುವುದು ಕಂಡುಬರುತ್ತಿದೆ.

ಗ್ರಾಮ ಪಂಚಾಯತ್ ಆಡಳಿತದ ಸೂಚನೆಯ ಮೇರೆಗೆ ಕುಂಬಳೆ ಪೊಲೀಸರು ಮತ್ತು ಆರ್‌ಟಿಒ ಅಧಿಕಾರಿಗಳು ಹಳೆಯ ಬಸ್ ನಿಲ್ದಾಣದಲ್ಲಿ ವಾಹನ ಪಾರ್ಕಿಂಗ್ ನಿಷೇಧಿಸುವ ಬ್ಯಾನರ್ ಅಳವಡಿಸಿದ್ದರು. ಆದರೆ ಖಾಸಗಿ ವಾಹನಗಳು ಈ ಬೋರ್ಡ್‌ನ ಅಡಿಭಾಗದಲ್ಲೇ ನಿಲುಗಡೆಗೊಳ್ಳುತ್ತಿವೆ. ಗ್ರಾಮ ಪಂಚಾಯತ್ ಮತ್ತು ಪೊಲೀಸರ ಎಚ್ಚರಿಕೆಗಳನ್ನು



ಜನರು ಗಮನಿಸದಿರುವುದು ವಿಪರ್ಯಾಸವಾಗಿದೆ.

ಜಾರಿಯಾಗದ ತೀರ್ಮಾನ

ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ತೆಗೆದುಕೊಂಡ ನಿರ್ಧಾರಗಳನ್ನು ತಾವೇ ಜಾರಿಗೆ ತರಲು ಅಸಮರ್ಥರಾಗಿದ್ದಾರೆ ಎಂದು ಸ್ಥಳೀಯರು ಹಾಗೂ ಪ್ರಯಾಣಿಕರು ಅಪಹಾಸ್ಯ ಮಾಡುತ್ತಿದ್ದಾರೆ. ಸೀತಾಂಗೋಳಿ, ಬದಿಯಡ್ಕ, ಮುಳ್ಳೇರಿಯ, ಬಾಡೂರು, ಪೆರ್ಲ, ಪೆರ್ಮುದೆ, ಧರ್ಮತ್ತಡ್ಕ, ಬಂಬ್ರಾಣ, ಕಳತ್ತೂರು ಮುಂತಾದ ಸ್ಥಳಗಳಿಗೆ ಹೋಗುವ ಬಸ್‌ಗಳು ಕುಂಬಳೆ ಹಳೆಯ ನಿಲ್ದಾಣದೊಳಗೆ ಪ್ರವೇಶಿಸಿ ಪ್ರಯಾಣಿಕರನ್ನು ಇಳಿಸಿ ಕರೆದೊಯ್ಯಬೇಕು ಎಂದು ಪಂಚಾಯತ್ ಈ ಹಿಂದೆ ನಿರ್ದೇಶನ ನೀಡಿತ್ತು. ಇನ್ನೊಂದೆಡೆ ಈ ವಿಷಯಕ್ಕೆ ಸಂಬಂಧಿಸಿದಂತೆ ಕುಂಬಳೆ ಪೇಟೆಯಲ್ಲಿ ಬಸ್ ಸಿಬ್ಬಂದಿಗಳು ಮತ್ತು ವ್ಯಾಪಾರಿ ಯುವ ಘಟಕದ ಪ್ರತಿನಿಧಿಗಳ ನಡುವೆ ದೊಡ್ಡ ವಿವಾದಗಳು ನಡೆದಿದ್ದವು. ಅದಾದ ಬಳಿಕ ಕುಂಬಳೆ ಪೊಲೀಸ್ ಠಾಣೆಯಲ್ಲಿ ಬಸ್ ಸಿಬ್ಬಂದಿ ಮತ್ತು ವ್ಯಾಪಾರಿ ಯುವ ಘಟಕದ ಪ್ರಮುಖರ ಪಾಲ್ಗೊಳ್ಳುವಿಕೆಯೊಂದಿಗೆ ಏರ್ಪಡಿಸಲಾದ ಚರ್ಚೆಯಲ್ಲಿ ನಿರ್ದಿಷ್ಟ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಆದರೆ ಒಮ್ಮತದಿಂದ ಅಂಗೀಕಾರಗೊಂಡ ತೀರ್ಮಾನಗಳನ್ನು ಇಲ್ಲಿಯವರೆಗೆ ಪ್ರಾಯೋಗಿಕವಾಗಿ ಜಾರಿಗೊಳಿಸದಿರುವುದು ದುರಂತವಾಗಿದೆ.

ಕುಂಬಳೆ ಪೇಟೆಯಲ್ಲಾಗುತ್ತಿರುವ ಕಾನೂನು ಉಲ್ಲಂಘನೆಯ ವಿರುದ್ಧ ಗ್ರಾಮ ಪಂಚಾಯತ್ ಅಧಿಕಾರಿಗಳು ಮತ್ತು ಪೊಲೀಸರು ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಯುವ ಘಟಕದ ವ್ಯಾಪಾರಿಗಳು ಆರೋಪಿಸಿದ್ದಾರೆ. ಒಂದೆಡೆ ಆಡಳಿತ ವರ್ಗದ ನಿರ್ಧಾರಗಳು ವಿಳಂಬವಾಗುತ್ತಿವೆ. ಇನ್ನೊಂದೆಡೆ ಖಾಸಗಿ ವಾಹನಗಳು ಹಳೆಯ ಬಸ್ ನಿಲ್ದಾಣದಲ್ಲಿ ಅನಧಿಕೃತವಾಗಿ ನಿಲುಗಡೆಗೊಳಿಸುತ್ತಿರುವುದು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಮೂಲಕ ಪೊಲೀಸ್ ಮತ್ತು ಆರ್‌ಟಿಒ ಸೂಚನೆಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿರುವುದು ಗೋಚರಿಸುತ್ತಿದೆ.

ಬಸ್ ಒದಗಿಸುವಂತೆ ಮನವಿ

ಈ ಮಧ್ಯೆ ಕುಂಬಳೆ ಹಳೆಯ ನಿಲ್ದಾಣವನ್ನು ಪ್ರವೇಶಿಸದ ಬಸ್ ನೌಕರರ ಕ್ರಮಗಳನ್ನು ಪ್ರಬಲವಾಗಿ ಪ್ರತಿಭಟಿಸಲು ಯುವ ಘಟಕದ ವ್ಯಾಪಾರಿಗಳು ಹೊಸ ಕ್ರಮಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಬದಿಯಡ್ಕ, ಮುಳ್ಳೇರಿಯ, ಪೆರ್ಲ, ಕಳತ್ತೂರು, ಪೆರ್ಮುದೆ ಮೊದಲಾದ ಪ್ರದೇಶಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಸೇವೆಗಳನ್ನು ಒದಗಿಸಬೇಕೆಂದು ಒತ್ತಾಯಿಸಿ ಕೇರಳದ ನೂತನ ಸರಕಾರಕ್ಕೆ ಮನವಿ ಸಲ್ಲಿಸುವುದು ವ್ಯಾಪಾರಿ ಯುವ ಘಟಕದ ಹೊಸ ಕ್ರಮವಾಗಿದೆ. ಈ ಮೂಲಕ ಖಾಸಗಿ ಬಸ್ ಸಿಬ್ಬಂದಿಗಳ ನಿರ್ಲಕ್ಷ್ಯ ಪ್ರವೃತ್ತಿಗೆ ಕಡಿವಾಣ ಹಾಕಲು ಯೋಜಿಸಲಾಗಿದೆ.

ಜನನಿಬಿಡ ಪೇಟೆ

ಕುಂಬಳೆ ಪೇಟೆಯು ತ್ವರಿತಗತಿಯಲ್ಲಿ ಬೆಳೆಯುತ್ತಿದೆ. ಅದಕ್ಕೆ ಹೊಂದಿಕೊಂಡು ವಾಹನ ಸೌಕರ್ಯಗಳ ಸಮರ್ಥ ವ್ಯವಸ್ಥೆಗಳ ಕೊರತೆಯಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಇಲಾಖೆಗಳು ಪರಿಹಾರ ಸೂತ್ರಗಳನ್ನು ರೂಪಿಸಬೇಕಾಗಿದೆ. ಜೊತೆಗೆ ಬಸ್‌ಗಳ ನಿಲುಗಡೆ ವಿಚಾರದಲ್ಲಿ ಸಮರ್ಪಕ ಕಾರ್ಯತಂತ್ರ ಹೆಣೆಯಬೇಕಾಗಿದೆ. ಇನ್ನಾದರೂ ಕುಂಬಳೆ ಪೇಟೆಯಲ್ಲಿ ವಾಹನಗಳ ಸಂಚಾರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಮಧ್ಯಪ್ರವೇಶಿಸಬೇಕೆಂದು ಜನಆಗ್ರಹಿಸಿದ್ದಾರೆ.

ಡಾ.ವಾಮನ್, ಸಂಧ್ಯಾರಾಣಿ ದಂಪತಿಗೆ ಗಡಿನಾಡು ಪೋಷಕ ರತ್ನ ಪ್ರಶಸ್ತಿ ಪ್ರದಾನ



ಕಾಸರಗೋಡು: ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗದ ಸಾರಥ್ಯದಲ್ಲಿ ಹಾವೇರಿಯ ಡಾ.ಅಂಬೇಡ್ಕರ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ರಾಜ್ಯ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾಸರಗೋಡು ಕನ್ನಡ ಭವನದ ಸಂಸ್ಥಾಪಕರಾದ ಡಾ.ಕೆ.ವಾಮನ್ ರಾವ್ ಬೇಕಲ್ ಮತ್ತು ಸಂಧ್ಯಾರಾಣಿ ಟೀಚರ್ ದಂಪತಿಗೆ ಕರುನಾಡ ಕನ್ನಡ ಗಡಿನಾಡು ಪೋಷಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉಚಿತ ವಸತಿ, ದಾಸೋಹ

ಗಡಿನಾಡು ಕಾಸರಗೋಡಿನಲ್ಲಿ ಕಳೆದ 25 ವರ್ಷಗಳಿಂದ ನಿರಂತರ ಕನ್ನಡ ಕಾವಲು ಭಟರಾಗಿ, ಕನ್ನಡ ಉಳಿಸಿ ಬೆಳೆಸುವ ಕಾಯಕದಲ್ಲಿ ತನ್ನ ಮನೆಯನ್ನೇ ಕನ್ನಡ ಭವನವನ್ನಾಗಿಸಿ ಕನ್ನಡ ಭವನದಲ್ಲಿ ಕರ್ನಾಟಕದಿಂದ ಕಾಸರಗೋಡಿಗೆ ಆಗಮಿಸುವ ಸಾಹಿತ್ಯ ಸಾಂಸ್ಕೃತಿಕ ರಾಯಭಾರಿಗಳಿಗೆ ಉಚಿತ ವಸತಿ – ದಾಸೋಹ ಒದಗಿಸುವ ಮೂಲಕ ಕನ್ನಡದ ಚಟುವಟಿಕೆಯಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿರುವ ಡಾ.ಕೆ.ವಾಮನ್ ರಾವ್ ದಂಪತಿ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಕಾರ್ಯಕ್ರಮ ಸಂಘಟಿಸಿದ ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ ರಾಜ್ಯಾಧ್ಯಕ್ಷ ಡಾ.ಎಸ್.ಡಿ. ಮುಡೆಣ್ಣವರ, ಕರ್ನಾಟಕ ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ್ ಹೊರಟ್ಟಿ, ಸಮ್ಮೇಳನದ ಸರ್ವಾಧ್ಯಕ್ಷ ಜಿ.ಎಂ. ಓಂಕಾರಣ್ಣನವರ ಮುಂತಾದವರ ಗಣ್ಯರ ಉಪಸ್ಥಿತಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೂ.6, 7: ಸಂತಡ್ಕ ಅರಸು ಸಂಕಲಮಾಡ ಕ್ಷೇತ್ರ ರುದ್ರಯಾಗ, ಗಿರಿಜಾ ಕಲ್ಯಾಣೋತ್ಸವ

ಮಂಜೇಶ್ವರ: ಇತಿಹಾಸ ಪ್ರಸಿದ್ಧ ಸಂತಡ್ಕ ಶ್ರೀ ಅರಸು ಸಂಕಲ ಮಾಡ ದೈವ ಕ್ಷೇತ್ರದಲ್ಲಿ ಲೋಕ ಕಲ್ಯಾಣಾರ್ಥ ಹಾಗೂ ಭಕ್ತರ ಅಭೀಷ್ಟಾರ್ಥ ಸಿದ್ಧಿಗಾಗಿ ಶ್ರೀ ರುದ್ರಯಾಗ ಮತ್ತು ಗಿರಿಜಾ ಕಲ್ಯಾಣೋತ್ಸವ ಹಾಗೂ ನೂತನವಾಗಿ ನಿರ್ಮಾಣಗೊಂಡ ಭೋಜನ ಶಾಲೆಯ ಉದ್ಘಾಟನಾ ಸಮಾರಂಭವು ಜೂ.6 ಮತ್ತು 7ರಂದು ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕಕಾರ್ಯಕ್ರಮಗಳೊಂದಿಗೆ ಬಹಳ ವಿಜೃಂಭಣೆಯಿಂದ ಜರಗಲಿದೆ.



ಜೂ.6ರಂದು ಸಂಜೆ 4 ಗಂಟೆಗೆ ಚಿಗುರುಪಾದೆ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದಿಂದ ದೇವರ ವಿಗ್ರಹದೊಂದಿಗೆ ಹೊರಡುವ ಶೋಭಾಯಾತ್ರೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. 5 ಗಂಟೆಗೆ ವೈದಿಕ ವಿದ್ವಾಂಸರ ಆಗಮನ, ಪ್ರಾರ್ಥನೆ ಬಳಿಕ ಯಾಗ ಮಂಟಪ ಶುದ್ಧೀಕರಣ ಪ್ರಕ್ರಿಯೆಗಳು ನಡೆಯಲಿವೆ.

ಜೂ.7ರಂದು ಬೆಳಗ್ಗೆ 6.30ರಿಂದ ಗಣಪತಿ ಹವನ, ದೈವಗಳಿಗೆ ವಿಶೇಷ ತಂಬಿಲ ಸೇವೆ, 8ರಿಂದ ರುದ್ರಯಾಗ ಆರಂಭಗೊಳ್ಳಲಿದೆ. 11 ಗಂಟೆಗೆ ಯಾಗದ ಪೂರ್ಣಾಹುತಿ, ಮಂತ್ರಾಕ್ಷತೆ ನೆರವೇರಲಿದೆ. 11.30ಕ್ಕೆ ಜರಗುವ ಧಾರ್ಮಿಕ ಸಭೆಯಲ್ಲಿ ಒಡಿಯೂರು ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಮತ್ತು ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರು ಆಶೀರ್ವಚನ ನೀಡುವರು. ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ವೇದಮೂರ್ತಿ ನರಸಿಂಹ ತಂತ್ರಿ ಕುಡುಪು ಗೌರವ ಉಪಸ್ಥಿತರಿರುವರು. ಶ್ರೀ ಅರಸು ಸಂಕಲ ದೈವ ಕ್ಷೇತ್ರದ ಆಡಳಿತ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಶ್ರೀಧರ ಭಟ್ ಕಾರ್ಯಕ್ರಮದಅಧ್ಯಕ್ಷತೆ ವಹಿಸುವರು. ಇದೇ ವೇಳೆ ಶ್ರೀ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿದ ಭೋಜನ ಶಾಲೆಯ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ಮಾನವ ಹಕ್ಕು ಆಯೋಗದ ಪ್ರಭಾರ ಅಧ್ಯಕ್ಷ ಡಾ.ಟಿ.ಶ್ಯಾಮ ಭಟ್ ನಿರ್ವಹಿಸುವರು. ಸಂಜೆ 5ರಿಂದ ವೇದಮೂರ್ತಿ ಪರಕ್ಕಜೆ ಅನಂತನಾರಾಯಣ ಭಟ್ ನೇತೃತ್ವದಲ್ಲಿ ಗಿರಿಜಾ ಕಲ್ಯಾಣೋತ್ಸವದ ವಿಧಿ ವಿಧಾನಗಳು ನಡೆಯಲಿದ್ದು, ರಾತ್ರಿ 7.30ರಿಂದ ಅಷ್ಟಾವಧಾನ ಸೇವೆ ನಂತರ ಮಹಾಪೂಜೆ ನಡೆಯಲಿದೆ.

ಅತ್ಯಾಧುನಿಕ ಸೌಲಭ್ಯ, ಡಯಾಲಿಸಿಸ್ ಅಜಾನೂರಿನಲ್ಲಿ ಕೇಂದ್ರದ ಆರಂಭ

ಕಾಸರಗೋಡು: ಗ್ರಾಮೀಣ ಆರೋಗ್ಯ ಸೇವೆಗಳ ಕ್ಷೇತ್ರದಲ್ಲಿ ಅಜಾನೂರು ಗ್ರಾಮ ಪಂಚಾಯತ್ ಹೊಸ ಮಾದರಿಯನ್ನು ಸೃಷ್ಟಿಸಿದೆ. ಅದರಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಡಯಾಲಿಸಿಸ್ ಕೇಂದ್ರವು ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮಗ್ರ ಸೌಕರ್ಯಗಳನ್ನು ಹೊಂದಿರುವ ಡಯಾಲಿಸಿಸ್ ಘಟಕವನ್ನು ಸ್ಥಾಪಿಸಿದ ಕಾಸರಗೋಡು ಜಿಲ್ಲೆಯ ಮೊದಲ ಪಂಚಾಯತ್ ಎಂಬ ಹೆಗ್ಗಳಿಕೆಗೆ ಅಜಾನೂರು ಪಾತ್ರವಾಗಿದೆ.

ಸ್ಥಳೀಯ ಮಟ್ಟದಲ್ಲಿ ಮೂತ್ರಪಿಂಡ ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಹಿಂದೂಸ್ತಾನ್ ಏರೋನಾಟಿಕಲ್ಸ್ ಲಿಮಿಟೆಡ್ (ಎಚ್‌ಎಎಲ್)ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಯಿಂದ ಮತ್ತು ಪಂಚಾಯತ್‌ನ ಸ್ವಂತ ಅನುದಾನದಿಂದ 1.10 ಕೋಟಿ ರೂ. ಫಂಡ್‌ನೊಂದಿಗೆ ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ.

ಡಯಾಲಿಸಿಸ್ ಉಪಕರಣಗಳನ್ನು ಸಂಪೂರ್ಣವಾಗಿ ಸಿಎಸ್‌ಆರ್ ನಿಧಿಯ ಮೂಲಕ ಸಂಗ್ರಹಿಸಲಾಯಿತು. ಅಜಾನೂರು ಕಡಲತೀರದಲ್ಲಿರುವ ಕುಟುಂಬ ಆರೋಗ್ಯ ಕೇಂದ್ರದ ಒಂದು ಭಾಗವನ್ನು ನವೀಕರಿಸುವ ಮೂಲಕ ಡಯಾಲಿಸಿಸ್ ಘಟಕವನ್ನು ಸ್ಥಾಪಿಸಲಾಯಿತು. ನಿರ್ಮಾಣ ಕಾರ್ಯವನ್ನು ನಿರ್ಮಿತಿ ಕೇಂದ್ರವು ನಿರ್ವಹಿಸಿದೆ. ಗ್ರಾಮ ಪಂಚಾಯತ್ ನಿಧಿಯಿಂದ 8 ಲಕ್ಷ ರೂ.ಗಳ ವೆಚ್ಚದಲ್ಲಿ ನವೀಕರಣ ಕಾರ್ಯ ಪೂರ್ಣಗೊಂಡಿದೆ. ಚಿಕಿತ್ಸೆಗಾಗಿ ದೂರದ ಸ್ಥಳಗಳಿಗೆ ಪ್ರಯಾಣಿಸಬೇಕಾದ ಮೂತ್ರಪಿಂಡ ರೋಗಿಗಳಿಗೆ ಈ ಯೋಜನೆಯು ಬಹುದೊಡ್ಡ ಪರಿಹಾರವಾಗಿದೆ.

ಗುಣಮಟ್ಟದ ಚಿಕಿತ್ಸೆ

ಅಜಾನೂರು ಡಯಾಲಿಸಿಸ್ ಘಟಕವು ಕಾರ್ಯಾರಂಭಗೊಂಡ ಹಿನ್ನೆಲೆಯಲ್ಲಿ ಗ್ರಾಮೀಣ ಆರೋಗ್ಯ ಸೇವೆಗಳು ಮತ್ತಷ್ಟು ಬಲಗೊಳ್ಳಲಿದ್ದು, ಮೂತ್ರಪಿಂಡ ರೋಗಿಗಳು ತಮ್ಮ ಪ್ರದೇಶದಲ್ಲಿಯೇ ಗುಣಮಟ್ಟದ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತದೆ ಎಂದು ಗ್ರಾ.ಪಂ. ಅಧ್ಯಕ್ಷೆ ವಿ.ವಿ.ತುಳಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅನಂತಪುರ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನ ರಕ್ಷಾ ಸಮಿತಿ ರಚನೆ



ಕುಂಬಳೆ: ಇತಿಹಾಸ ಪ್ರಸಿದ್ಧ ಕುಂಬಳೆ ಸೀಮೆಯ ಐತಿಹಾಸಿಕ ದೇವಾಲಯಗಳಲ್ಲಿ ಒಂದಾದ ಸರೋವರ ಕ್ಷೇತ್ರವೆಂದೇ ಪ್ರಖ್ಯಾತಿ ಪಡೆದಿರುವ ಅನಂತಪುರ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ರಕ್ಷಾ ಸಮಿತಿಯ ರೂಪೀಕರಣ ಸಭೆಯು ಅನಂತಪುರ ಕ್ಷೇತ್ರದಲ್ಲಿ ಭಾನುವಾರ ಜರಗಿತು.

ಸಭೆಯ ಅಧ್ಯಕ್ಷತೆಯನ್ನು ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ವಹಿಸಿ ವಿವಿಧ ವಿಷಯಗಳ ಕುರಿತು ಮಾತನಾಡಿದರು. ಹಿಂದು ಐಕ್ಯ ವೇದಿಕೆಯ ಕೇರಳ ರಾಜ್ಯ ಕಾರ್ಯದರ್ಶಿ ಶ್ರೀಧರನ್ ಸಭೆಯನ್ನು ಉದ್ಘಾಟಿಸಿ ದೇವಾಲಯಗಳ ಸಂರಕ್ಷಣೆ ಹಿಂದುಗಳಿಗೆ ಸೇರಿದ್ದು ಎಂದರು.

ಪ್ರಮುಖರಾದ ಶ್ರೀಕೃಷ್ಣಯ್ಯ ಅನಂತಪುರ, ಎಸ್.ಪಿ.ಶಾಜಿ, ಮಹಾಲಿಂಗೇಶ್ವರ ಭಟ್ ಅನಂತಪುರ, ಉಪೇಂದ್ರ ಕೋಟೆಕಣಿ, ಅಶೋಕ ಮಾಸ್ಟರ್ ಬಾಡೂರು, ಪುತ್ತಿಗೆ ಗ್ರಾಮ ಪಂಚಾಯತ್ ಸದಸ್ಯ ಸತೀಶ್ ಪೆರ್ಣೆ, ಕುಂಬಳೆ ಗ್ರಾಮ ಪಂಚಾಯತ್ ಸದಸ್ಯೆಯರಾದ ಅಮಿತಾ ಆಳ್ವ, ಶಾರದಾ, ಪೆರ್ಣೆ ಕ್ಷೇತ್ರದ ಪ್ರತಿನಿಧಿ ಗೋಪಾಲಕೃಷ್ಣ ಮಾಸ್ಟರ್ ಪಂಜತ್ತೊಟ್ಟಿ, ಬಿ.ವಿಕ್ರಂ ಪೈ, ಸುನೀಲ್ ಅನಂತಪುರ ಮೊದಲಾದವರು ಭಾಗವಹಿಸಿದ್ದರು.

ನವೋದಯ ಶಾಲೆಗೆ ಸೂರಂಬೈಲು ಶಾಲೆ ವಿದ್ಯಾರ್ಥಿಗಳು ಆಯ್ಕೆ





ಕುಂಬಳೆ: ಇತ್ತೀಚೆಗೆ ನಡೆದ ಜವಾಹರ್ ನವೋದಯ ಪ್ರವೇಶ ಪರೀಕ್ಷೆಯಲ್ಲಿ ಸೂರಂಬೈಲು ಸರಕಾರಿ ಪ್ರೌಢಶಾಲೆಯ ಶಿವಾತ್ಮಿಕ ಎಸ್. ಮತ್ತು ಅಫ್ಸಲ್ ಉತ್ತೀರ್ಣರಾಗಿ ನವೋದಯ ಶಾಲೆಗೆ ಪ್ರವೇಶ ಪಡೆದಿದ್ದಾರೆ.

ಚುನಾವಣೆ ಸೋಲು ಗೆಲುವು ಸಹಜ, ಸಮಾಜ ಸೇವೆ ನಿರಂತರ : ಆದರ್ಶ್



ಮಂಜೇಶ್ವರ: ಸಮಾಜ ಸೇವೆ ನಿರಂತರವಾಗಿ ನಡೆಯಬೇಕು. ಸಮಾಜಕ್ಕೆ ಮಾದರಿಯಾಗುವಂತಹ ಕಾರ್ಯ, ಸ್ಥಳೀಯ ಜನತೆಯ ಆಗ್ರಹ, ಬೇಡಿಕೆ, ನಂಬಿಕೆ ಮತ್ತು ವಿಶ್ವಾಸ ಪ್ರಕ್ರಿಯೆ ಸದಾ ಸಾಗಬೇಕು. ಚುನಾವಣೆಯಲ್ಲಿ ಸೋಲು ಗೆಲುವು ಸಹಜವಾಗಿದೆ. ಆದರೆ ಸಮಾಜದ ಅಭಿವೃದ್ಧಿ ಕಾರ್ಯವು ನಿರಂತರವಾಗಿರಬೇಕು ಎಂದು ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಉದ್ಯಾವರದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಮಂಜೇಶ್ವರ ಗ್ರಾಮ ಪಂಚಾಯತ್‌ನ 14ನೇ ಬೂತ್ ಬಿಜೆಪಿ ಸಮಿತಿಯ ವತಿಯಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ಪುಸ್ತಕಗಳ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಾಮಾಜಿಕ ಮುಂದಾಳು, ವಕೀಲ ನವೀನ್‌ರಾಜ್ ಕೆ.ಜೆ. ಉಪಸ್ಥಿತರಿದ್ದರು. ಬೂತ್ ಸಮಿತಿಯ ಅಧ್ಯಕ್ಷ ಜಯರಾಮ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಯಶ್‌ಪಾಲ್, ಯಶರಾಜ್ ಮಂಜೇಶ್ವರ, ನವೀನ್ ಉದ್ಯಾವರ, ಚಕ್ರೇಶ್ ಮಂಜೇಶ್ವರ, ದಿನೇಶ್ ಗುಡ್ಡೆ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ (ಪ್ಲಸ್ ಟು) ಪರೀಕ್ಷೆಗಳಲ್ಲಿ ಶೇಕಡಾ 90ಕ್ಕಿಂತ ಅಧಿಕ ಅಂಕ ಗಳಿಸಿದವರನ್ನು ಬಿಜೆಪಿ ವತಿಯಿಂದ ಪುರಸ್ಕರಿಸಲಾಯಿತು.

ಪಾಲೆಪ್ಪಾಡಿ ದೇವಾಲಯದಲ್ಲಿ ಸಾಮೂಹಿಕ ಶ್ರೀ ಶನಿ ಪೂಜೆ



ಪೆರ್ಲ: ಇತಿಹಾಸ ಪ್ರಸಿದ್ಧ ಪರಮ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಪಡ್ರೆ ವಾಣಿನಗರ ಸಮೀಪದ ಪಾಲೆಪ್ಪಾಡಿ ಶ್ರೀ ವನಶಾಸ್ತಾರ ದೇವಸ್ಥಾನದಲ್ಲಿ ಶನಿವಾರ ಸಾಮೂಹಿಕ ಶನಿ ಪೂಜೆ ಮತ್ತು ವಿವಿಧ ಧಾರ್ಮಿಕ ಕೈಂಕರ್ಯಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು.

ಶ್ರೀ ಕ್ಷೇತ್ರದ ಪ್ರಧಾನ ಅರ್ಚಕ ಕೃಷ್ಣರಾಜ ಪುಣಿಂಚತ್ತಾಯ ಅವರ ನೇತೃತ್ವದಲ್ಲಿ ವಿಶೇಷ ಪೂಜೆ, ಶನಿ ದೇವರ ಆರಾಧನೆ ನಡೆಯಿತು. ಶನಿ ದೋಷ ನಿವಾರಣೆಗಾಗಿ ವಿಶೇಷ ಅರ್ಚನೆಗಳು ವೈದಿಕ ವಿಧಿ ವಿಧಾನಗಳೊಂದಿಗೆ ಜರಗಿದವು. ನೂರಾರು ಮಂದಿ ಭಕ್ತರು ಸಾಮೂಹಿಕ ಪೂಜೆಯಲ್ಲಿ ಪಾಲ್ಗೊಂಡು ಪ್ರಾರ್ಥನೆ ಸಲ್ಲಿಸಿದರು. ಪಡ್ರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಪಾರ ಮಂದಿ ಭಕ್ತಜನರು ಭಾಗಿಗಳಾಗಿ ಶ್ರೀ ವನಶಾಸ್ತಾರ ಹಾಗೂ ಶ್ರೀ ಶನಿ ದೇವರ ಕೃಪೆಗೆ ಪಾತ್ರರಾದರು.

ಬಲಿವಾಡು ಕೂಟ

ದೇವಸ್ಥಾನದ ಆವರಣದಲ್ಲಿ ಸಂಪ್ರದಾಯದಂತೆ ಬಲಿವಾಡು ಕೂಟ ಸೇವೆ ನೆರವೇರಿತು. ಮಹಾಪೂಜೆ ಬಳಿಕ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು.

ನೀರ್ಚಾಲಿನಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನ | ಡಾ. ರಮಾನಂದ ಬನಾರಿ 85ರ ಅಭಿನಂದನಾ ಕಾರ್ಯಕ್ರಮ

ಸಾಧಕ ಶ್ರೇಷ್ಠರನ್ನು ಗೌರವಿಸಿದಾಗ ನಾಡು ಸಂಭ್ರಮಿಸುತ್ತದೆ: ಡಾ. ಬಿಳಿಮಲೆ

ಬದಿಯಡ್ಕ: ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ, ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘ ಮತ್ತು ಕೀರಿಕ್ಕಾಡು ಸ್ಮಾರಕ ಸಾಂಸ್ಕೃತಿಕ ಅಧ್ಯಯನ ಕೇಂದ್ರ ದೇಲಂಪಾಡಿ, ಕಲಾಕುಂಚ ಕಾಸರಗೋಡು, ಗಿಳಿವಿಂಡು ಮಂಜೇಶ್ವರ, ಸ್ನೇಹರಂಗ ಕಾಸರಗೋಡು ಸಹಿತ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಭಾನುವಾರ ನೀರ್ಚಾಲು ಮಹಾಜನ ವಿದ್ಯಾಸಂಸ್ಥೆಗಳ ಆವರಣದಲ್ಲಿ ಕವಿ, ಸಾಹಿತಿ, ಖ್ಯಾತ ವೈದ್ಯ, ಅರ್ಥಧಾರಿ ಡಾ.ರಮಾನಂದ ಬನಾರಿ 85ರ ಅಂಗವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನ ಸಮಾರಂಭ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ, ಕಾಸರಗೋಡಿನ ಕಣ್ಮಣಿ ಡಾ. ರಮಾನಂದ



ಬನಾರಿ 85 ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿ ಕರ್ನಾಟಕ ಸರ್ಕಾರದ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮಾತನಾಡಿ, ಸಾಧಕ ಶ್ರೇಷ್ಠರನ್ನು ಗೌರವಿಸಿದಾಗ ನಾಡು ಸಂಭ್ರಮಿಸುತ್ತದೆ ಎಂದರು.

ವಿಶ್ರಾಂತ ಪ್ರಾಧ್ಯಾಪಕ, ಸಾಹಿತಿ ಡಾ.ಮೋಹನ ಕುಂಟಾರು ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಡಾ.ರಾಧಾಕೃಷ್ಣ ಬೆಳ್ಳೂರು ಅಭಿನಂದನಾ ಭಾಷಣ ಮಾಡಿದರು. ಆಕಾಶವಾಣಿ ಮಾಜಿ ನಿರ್ದೇಶಕ ಡಾ. ವಸಂತಕುಮಾರ್ ಪೆರ್ಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭ ಕುಟ್ಟಿಯಾನ ಮುಹಮ್ಮದ್ ಅವರ ಕನಸುಗಳ ಭೂಮಿಗೆ ಯಾತ್ರೆ ಕೃತಿ ಬಿಡುಗಡೆಗೊಳಿಸಲಾಯಿತು. ಸಾಕ್ಷ್ಯಚಿತ್ರ ನಿರ್ಮಾಪಕ ಡಾ. ಪ್ರವೀಣ್‌ರಾಜ್ ಎಸ್. ರಾವ್ ಅವರನ್ನು ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಜಯದೇವ ಖಂಡಿಗೆ, ಡಾ. ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ವಿಜಯಲಕ್ಷ್ಮಿ ಶ್ಯಾನುಭೋಗ್ ಕೂಡ್ಲು, ಎ.ಆರ್. ಸುಬ್ಬಯ್ಯಕಟ್ಟೆ ಇದ್ದರು. ವಿಶಾಲಾಕ್ಷ ಪುತ್ರಕಳ, ಡಾ.ಯು.ಮಹೇಶ್ವರಿ ಹಾಗೂ ಕವಿತಾ ಕೂಡ್ಲು ಕಾರ್ಯಕ್ರಮ ನಿರೂಪಿಸಿದರು. ಬಳಿಕ ನಡೆದ ಕಾಸರಗೋಡಿನ ಸಾಹಿತ್ಯದ ಸ್ಥೂಲ ಅವಲೋಕನದ ವಿಚಾರಗೋಷ್ಠಿಯಲ್ಲಿ ಡಾ.ವರದರಾಜ ಚಂದ್ರಗಿರಿ ಹಾಗೂ ಕಾಸರಗೋಡಿನ ಸಮಗ್ರ ಸಂಸ್ಕೃತಿ ವಿಷಯದಲ್ಲಿ ಡಾ. ರತ್ನಾಕರ ಮಲ್ಲಮೂಲೆ ವಿಚಾರ ಮಂಡಿಸಿದರು.

ಪ್ರೊ.ಪಿ.ಎನ್.ಮೂಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ಅಪರಾಹ್ನ ಡಾ.ಬನಾರಿ ಕಾವ್ಯ ಸತ್ವ – ಸ್ವತ್ವದ ಬಗ್ಗೆ ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಗದ್ಯ ಮತ್ತು ಅರ್ಥಗಾರಿಕೆ ಬಗ್ಗೆ ಡಾ.ಧನಂಜಯ ಕುಂಬಳೆ, ಸಾಂಸ್ಕೃತಿಕ ವಿಲೀನೀಕರಣದ ಬಗ್ಗೆ ಟಿ.ಎ.ಎನ್. ಖಂಡಿಗೆ, ನ್ಯಾಯಾಂಗದ ಮುಂದೆ ಕಾಸರಗೋಡಿನ ಸಮಸ್ಯೆ ಬಗ್ಗೆ ಎನ್.ಕೆ.ಮೋಹನದಾಸ್, ಕಾಸರಗೋಡಿನ ಸಂಘಟನೆಗಳ ಪಾತ್ರದ ಬಗ್ಗೆ ಡಾ.ಬಾಲಕೃಷ್ಣ ಹೊಸಂಗಡಿ, ಸಾಹಿತ್ಯ – ಸಂಸ್ಕೃತಿಗಳ ಸಂವರ್ಧನೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಶಿವಶಂಕರ ವಿಚಾರ ಮಂಡನೆ ನಡೆಸಿದರು. ಸಂಜೆ ಸಮಾರೋಪ ಸಮಾರಂಭ ನಡೆಯಿತು.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಸೋಮವಾರ 01, ಜೂನ್ 2026

ಸುತ್ತ ಮುತ್ತ

ಇಂದು ಮಠದಲ್ಲಿ ಶ್ರೀದೇವರಿಗೆ ಉಷಾ ಪೂಜೆ, ಕಲಶ ಸಮರ್ಪಣೆ

ಮುಲ್ಕಿ: ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಮಠದಲ್ಲಿ ಇಂದು (ಜೂ.1) ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಅವರು ಸಂಸ್ಥಾನದ ಪಟ್ಟದ ಶ್ರೀ ದೇವರಿಗೆ ಉಷಾ ಪೂಜೆ ನೆರವೇರಿಸಲಿದ್ದಾರೆ. ಬಳಿಕ ಬೆಳಗ್ಗೆ 8.30ಕ್ಕೆ ಸಂಸ್ಥಾನದ ಪಟ್ಟದ ದೇವರ ಸಮೇತ ಶ್ರೀಗಳು ದೇವಾಲಯಕ್ಕೆ ಚಿತ್ತೈಸಿ ಬೆಳಗ್ಗೆ 11ಕ್ಕೆ ಸಂಸ್ಥಾನ ದೇವರಿಗೆ ಅಲಂಕಾರ ನಿತ್ಯಪೂಜೆ ಶ್ರೀ ದೇವರಿಗೆ ಮತ್ತು ಸಂಸ್ಥಾನ ದೇವರಿಗೆ ಏಕಕಾಲದಲ್ಲಿ ಮಹಾ ಪೂಜೆ, ನೈವೇದ್ಯ ಮಹಾಮಂಗಳಾರತಿ, ಸಂಸ್ಥಾನ ದೇವರಿಗೆ ಮತ್ತು ಶ್ರೀಗಳವರಿಗೆ ಸುವರ್ಣ ನಾಣ್ಯ ಸಹಿತ ಬೆಳ್ಳಿಯ ಕಲಶ ಸಮರ್ಪಣೆ ನಡೆಯಲಿದೆ. ಬಳಿಕ ಭೋಜನ ಪ್ರಸಾದ. ಸಂಜೆ ಶ್ರೀಗಳನ್ನು ಕೋಟಾ ಮೊಕ್ಕಾಂಗಾಗಿ ಬೀಳ್ಕೊಡುಗೆ ನಡೆಯಲಿದೆ ಎಂದು ದೇವಳದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಸುಬ್ರಹ್ಮಣ್ಯ ಘಟಕದ ಸೀನಿಯರ್ ಚೇಂಬರ್ ಪದಾಧಿಕಾರಿಗಳ ಆಯ್ಕೆ

ಸುಬ್ರಹ್ಮಣ್ಯ: ಸೀನಿಯರ್ ಚೇಂಬರ್ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಘಟಕದ 2026– 27ನೇ ಸಾಲಿನ





ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.ನೂತನ ಅಧ್ಯಕ್ಷರಾಗಿ ಮಾಧವ ದೇವರಗದ್ದೆ ನೇಮಕಗೊಂಡರು. ಕಾರ್ಯದರ್ಶಿಯಾಗಿ ವಿಶ್ವನಾಥ ನಡುತೋಟ, ಕೋಶಾಧಿಕಾರಿಯಾಗಿ ರವಿ ಕಕ್ಕೆಪದವು ಆಯ್ಕೆಯಾದರು. ಉಳಿದಂತೆ ನಿಕಟಪೂರ್ವ ಅಧ್ಯಕ್ಷರಾಗಿ ವೆಂಕಟೇಶ ಎಚ್. ಎಲ್, ಉಪಾಧ್ಯಕ್ಷರಾಗಿ ಶೇಷಪ್ಪ ಗೌಡ, ನಿರ್ದೇಶಕರಾಗಿ ಚಂದ್ರಶೇಖರ ನಾಯರ್, ಗೋಪಾಲ ಎಣ್ಣೆಮಜಲ್, ಪ್ರಕಾಶ ಕೆ.ಎಸ್.ಕಟ್ಟೆಮನೆ, ಮೋನಪ್ಪ ಡಿ., ಪ್ರಭಾಕರ ಪಡ್ರೆ, ಲೋಕೇಶ್ ಬಿ.ಎನ್, ಅಶೋಕ್ ಕುಮಾರ್ ಮೂಲೆಮಜಲು, ರೋಹಿತ್ ಬಿ.ಬಿ, ಮೋಹನದಾಸ ರೈ, ಪ್ರಶಾಂತ ಕೋಡಿಬೈಲ್, ಲೀಲಾ ಕುಮಾರಿ ವಿಶ್ವನಾಥ್, ಜಾನಕಿ ವೆಂಕಟೇಶ್, ಗೀತಾ ರವಿ ಕಕ್ಕೆಪದವು ಆಯ್ಕೆಯಾದರು.

ಡಾ.ಮಂಥರ್ ಗೌಡಗೆ ಸಚಿವ ಸ್ಥಾನ ನೀಡಲು ಒಕ್ಕಲಿಗರ ಸಂಘ ಒತ್ತಾಯ

ಮಡಿಕೇರಿ: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರಿಗೆ ಸಚಿವ ಸ್ಥಾನ



ನೀಡಬೇಕೆಂದು ಕೊಡಗು ಜಿಲ್ಲಾ ಒಕ್ಕಲಿಗರ ಸಂಘ ಒತ್ತಾಯಿಸಿದೆ. ಜಂಟಿ ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ಜಿಲ್ಲಾಧ್ಯಕ್ಷ ಎಸ್.ಎಂ.ಚಂಗಪ್ಪ ಸೋಮವಾರಪೇಟೆ ತಾಲ್ಲೂಕು ಅಧ್ಯಕ್ಷ ಎ.ಆರ್.ಮುತ್ತಣ್ಣ ಹಾಗೂ ಕುಶಾಲನಗರ ತಾಲ್ಲೂಕು ಅಧ್ಯಕ್ಷ ಎಂ.ಕೆ.ದಿನೇಶ್ ಅವರು ಯುವ ಶಾಸಕ ಡಾ.ಮಂಥರ್ ಗೌಡ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಜಿಲ್ಲೆಯ ಆಡಳಿತ ವ್ಯವಸ್ಥೆ ಚುರುಕುಗೊಳ್ಳಲಿದೆ. ಅಲ್ಲದೆ ಯುವಶಕ್ತಿಗೆ ಪ್ರೇರಣೆಯಾಗಲಿದ್ದಾರೆ ಎಂದು ತಿಳಿಸಿದ್ದಾರೆ. ಯುವ ರಾಜಕಾರಣಿಗಳಿಗೆ ಪ್ರೋತ್ಸಾಹ ನೀಡುತ್ತಾ ರಾಜಕೀಯ ಬಲ ತುಂಬುತ್ತಿರುವ ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ಡಾ.ಮಂಥರ್ ಗೌಡ ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸವಿದೆ. ಡಾ. ಮಂಥರ್ ಗೌಡ ಅವರು ಜನಾನುರಾಗಿ ಶಾಸಕರಾಗಿದ್ದು, ಮಡಿಕೇರಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಯಾವುದೇ ಗುಂಪುಗಾರಿಕೆ ಮಾಡದೆ ಅಭಿವೃದ್ಧಿ ಮಂತ್ರದೊಂದಿಗೆ ಪಕ್ಷ ನಿಷ್ಠೆಯನ್ನೂ ತೋರುತ್ತಿದ್ದಾರೆ. ಸಮಸ್ಯೆಗಳ ಪರಿಹಾರ ಮತ್ತು ಅಭಿವೃದ್ಧಿ ಕಾರ್ಯಗಳ ವೇಗಕ್ಕೆ ಈ ನಾಡಿಗೆ ಯುವ ನಾಯಕರ ಅಗತ್ಯವಿದೆ. ಡಿ.ಕೆ. ಶಿವಕುಮಾರ್ ಅವರು ಪ್ರಸ್ತುತ 43 ವರ್ಷದ ಯುವ ಶಾಸಕ ಡಾ.ಮಂಥರ್ ಗೌಡ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ರಾಜಕೀಯ ಶಕ್ತಿ ತುಂಬಲಿದ್ದಾರೆ ಎನ್ನುವ ನಂಬಿಕೆ ಇದೆ ಎಂದು ಎಸ್.ಎಂ.ಚಂಗಪ್ಪ ಎ.ಆರ್.ಮುತ್ತಣ್ಣ ಹಾಗೂ ಎಂ.ಕೆ. ದಿನೇಶ್ ಹೇಳಿದ್ದಾರೆ. ಡಾ. ಮಂಥರ್ ಗೌಡ ಅವರ ಪ್ರವೇಶದ ನಂತರ ಯುವ ಸಮೂಹ ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಳ್ಳುತ್ತಿದೆ. ಸಚಿವ ಸ್ಥಾನ ಹೊಂದಲು ಸಮರ್ಥರಾಗಿರುವ ಇವರು ಸಚಿವರಾದರೆ ಕೊಡಗಿನ ಎಲ್ಲಾ ಸಮುದಾಯದ ಪ್ರಗತಿಗೆ ಮತ್ತು ಪಕ್ಷ ಸಂಘಟನೆಗೂ ಅನುಕೂಲವಾಗಲಿದೆ ಅಭಿಪ್ರಾಯಪಟ್ಟಿದ್ದಾರೆ.

‘ಕುಶಲ ಹೆಗ್ಡೆ 100’ ಕಾರ್ಯಕ್ರಮ ಉದ್ಘಾಟಿಸಿ ಮಾಜಿ ಸಂಸದ ಕೆ. ಜಯಪ್ರಕಾಶ ಹೆಗ್ಡೆ ಅಭಿಪ್ರಾಯ

ಇತಿಹಾಸವನ್ನು ಅರಿತಾಗ ವರ್ತಮಾನದ ಬದುಕು ಸುಲಭ



ಕುಂದಾಪುರ: ಇವತ್ತಿನ ವಿದ್ಯಾರ್ಥಿಗಳಿಗೆ ಕುಶಲ ಹೆಗ್ಡೆ ಅವರ ಬಗ್ಗೆ ತಿಳಿಸುವ ಬಹಳ ಅಗತ್ಯತೆ ಇದೆ. ನಮ್ಮಲ್ಲಿ ಇತಿಹಾಸದ ಬಗ್ಗೆ ತಿಳಿದುಕೊಳ್ಳುವ ಅಭ್ಯಾಸ ಬಿಟ್ಟು ಬಿಟ್ಟಿದ್ದೇವೆ. ಇತಿಹಾಸದ ಬಗ್ಗೆ ಗೊತ್ತಿಲ್ಲದಿದ್ದರೆ ವರ್ತಮಾನದ ಬಗ್ಗೆ ಆಲೋಚನೆ ಮಾಡುದಿಲ್ಲ. ಸಮಾಜವನ್ನು ಸುಧಾರಿಸುವುದು ಹೇಗೆ ಸಮಾಜದ ಅಭಿವೃದ್ಧಿ ಬಗ್ಗೆ ಏನು ಮಾಡಲು ಸಾಧ್ಯ ಎನ್ನುವುದರ ಬಗ್ಗೆ ಆಲೋಚನೆ ಇದ್ದರೆ ಬದಲಾವಣೆ ತರಲು ಸಾಧ್ಯವಿದೆ. ಶಿಕ್ಷಣ ಮತ್ತು ಆರೋಗ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕಿದೆ. ಮಕ್ಕಳ ಭವಿಷ್ಯದ ಬಗ್ಗೆ ಹೆಚ್ಚು ಆಲೋಚನೆ ಮಾಡಬೇಕಿದೆ. ಮಕ್ಕಳಿಗೆ ಸರಿ ದಾರಿ ತೋರಿಸಿ ತರಬೇತಿ ನೀಡುವ ಕೆಲಸ ಆಗಬೇಕು ಎಂದು ಮಾಜಿ ಸಂಸದ ಕೆ. ಜಯಪ್ರಕಾಶ ಹೆಗ್ಡೆ ಹೇಳಿದರು.

ಪ್ರಸಿದ್ಧ ವಕೀಲರಾಗಿದ್ದು ಧಾರ್ಮಿಕ, ಶೈಕ್ಷಣಿಕ, ಸಹಕಾರ, ಸಾಮಾಜಿಕ ಸೇವಾ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಜನಪ್ರಿಯರಾಗಿದ್ದ ದಿವಂಗತ ಗಿಳಿಯಾರು ಕುಶಲ ಹೆಗ್ಡೆ ಅವರು ಸಮಾಜದ ಆಗುಹೋಗುಗಳ ಬಗ್ಗೆ ಸ್ವಲ್ಪ ಹೆಚ್ಚು ಗಮನ ಹರಿಸುತ್ತಿದ್ದರು. ಕುಶಲ ಹೆಗ್ಡೆಯವರ ಜೀವನ ಶೈಲಿಯನ್ನು ಅರ್ಥಮಾಡಿಕೊಂಡಾಗ ನಮಗೆ ಜೀವನದ ಪರಿಚಯವಾಗುತ್ತದೆ. ಕಳೆದ 25 ವರ್ಷಗಳಿಂದ ಕುಶಲ ಹೆಗ್ಡೆ ಟ್ರಸ್ಟ್ ಮೂಲಕ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅಶಕ್ತರಿಗೆ ವೈದ್ಯಕೀಯ ಸಹಾಯಧನ ಮೊದಲಾದ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಜನರ ಬಾಳಿಗೆ ಬೆಳಕಾಗಿರುವುದು ಶ್ಲಾಘನೀಯ ಎಂದರು.

ಗಿಳಿಯಾರು ಕುಶಲ ಹೆಗ್ಡೆ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಕುಂದಾಪುರ ಇವರ ಆಶ್ರಯದಲ್ಲಿ ಕೋಟೇಶ್ವರದ ಸಹನಾ ಸಭಾಂಗಣದಲ್ಲಿ ಕೀರ್ತಿಶೇಷ ಗಿಳಿಯಾರು ಕುಶಲ ಹೆಗ್ಡೆಯವರ ಜನ್ಮ ಶತಮಾನೋತ್ಸವ ಸಮಾರಂಭ ‘ಕುಶಲ ಹೆಗ್ಡೆ 100’ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಾಜಿ ಸಚಿವ ಬಿ. ರಮಾನಾಥ ರೈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಸಾಧಕರನ್ನು ಗೌರವಿಸಿ ಶುಭಾಶಂಸನೆಗೈದರು.

> **ಸಹಾಯಧನ ವಿತರಣೆ**
> ವಿದ್ಯಾರ್ಥಿಗಳಿಗೆ ಗುರುರಾಜ ಗಂಟಿಹೊಳೆ ಸಹಾಯಧನ ಶಾಸಕ ವಿತರಿಸಿ ಶುಭ ಹಾರೈಸಿದರು. ಇದೇ ಸಂದರ್ಭ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಪ್ರೀತಮ್ ಪೂಜಾರಿ ಅವರನ್ನು ಗೌರವಿಸಲಾಯಿತು. ಕಾನ್ಫಿಡೆಂಟ್ ಡೆಂಟಲ್ ಇಕ್ವಿಪ್ಮೆಂಟ್ ಪ್ರೈ ಲಿ. ಬೆಂಗಳೂರು ಇದರ ಆಡಳಿತ ನಿರ್ದೇಶಕ ಡಾ ಸುಭಾಷ್ಚಂದ್ರ ಶೆಟ್ಟಿ ಅವರು ಶಾಲೆಗೆ ನೆರವು ಹಸ್ತಾಂತರಿಸಿದರು.

ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ ಭಾಗವಹಿಸಿ, ಮಾತನಾಡಿದರು. ಹಿರಿಯ ವಕೀಲ ಎ. ಎಸ್. ಎನ್. ಹೆಬ್ಬಾರ್ ‘ಕುಶಲೋಪರಿ’ ನಡೆಸಿದರು. ಕೋಟ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ವೈದ್ಯಕೀಯ ನೆರವು ಹಸ್ತಾಂತರ ಮಾಡಿದರು. ಮಾಜಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ಜನ್ಮ ಶತಮಾನೋತ್ಸವ ಸಂಯೋಜಕ ಬಿ.ಉದಯ ಕುಮಾರ್ ಹೆಗ್ಡೆ, ಟ್ರಸ್ಟ್‌ನ ವಿಶ್ವಸ್ಥರಾದ ಬಿ.ಸಂತೋಷ ಕುಮಾರ್ ಶೆಟ್ಟಿ, ಬಿ.ಕಿಶೋರ್ ಹೆಗ್ಡೆ, ಬಿ.ಸ್ವರೂಪ್ ಹೆಗ್ಡೆ ಮೊದಲಾದವರಿದ್ದರು. ಇದೇ ಸಂದರ್ಭ ವಕೀಲ ಮಟ್ಟಿ ಮಾಧವ ರಾವ್, ಸಾಲಿಗ್ರಾಮ ಮಕ್ಕಳ ಮೇಳ ಕೋಟದ ಎಚ್. ಸುಜಯೀಂದ್ರ ಹಂದೆ, ಕ್ರೀಡಾಪಟು ಎನ್. ವಸಂತ ರಾವ್, ರಂಗ ಕಲಾವಿದ ಸತೀಶ ಪೈ (ಕುಳ್ಳಪ್ಪು), ಭರತನಾಟ್ಯ ಕಲಾವಿದೆ ವಿದುಷಿ ಭಾಗೀರಥಿ ಎಂ. ರಾವ್, ಚೇತನ್ ನೈಲಾಡಿ, ಲಾವಣ್ಯ ಬೈಂದೂರು, ಸಂಗೀತ ಭಾರತಿ ಟ್ರಸ್ಟ್ ಕುಂದಾಪುರ, ಕುಂದಾಪುರದ ಭಂಡಾರ್ ಕಾರ್ಸ್ ಕಾಲೇಜಿನ ರೇಡಿಯೋ ಕುಂದಾಪ್ರ 89.6 ಎಫ್. ಎಂ., ಶ್ರೀ ಗುರುಮಾರುತಿ ಹೌಂದೇರಾಯನ ಜನಪದ ತಂಡ ಪಾರಂಪಳ್ಳಿ-ಸಾಲಿಗ್ರಾಮ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಬಿ.ಪ್ರಕಾಶ್ಚಂದ್ರ ಶೆಟ್ಟಿ ಸ್ವಾಗತಿಸಿದರು. ಕಾರ್ಯದರ್ಶಿ ಯು.ಎಸ್. ಶೆಣೈ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪತ್ರಕರ್ತ ಕೆ.ಸಿ.ರಾಜೇಶ ಕಾರ್ಯಕ್ರಮ ನಿರ್ವಹಿಸಿದರು. ಸಭಾ ಬಳಿಕ ವಿಶೇಷ ಕಾರ್ಯಕ್ರಮ ‘ಕಾಳಿಂಗ-ಕಾಳಿಂಗ’ ಪ್ರದರ್ಶನಗೊಂಡಿತು.

ಪಿಲಾರ್ ಸರ್ಕಾರಿ ಶಾಲೆಗೆ ಹೊಸ ರೂಪ ನೀಡಿದ ಹಳೆ ವಿದ್ಯಾರ್ಥಿಗಳು!



ಮಂಗಳೂರು: ಶ್ರೀ ಗೋಕರ್ಣ ನಾಥೇಶ್ವರ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ಸ್ವಯಂ ಸೇವಕರು ಎರಡು ದಿನಗಳ ಕಾಲ ಪಿಲಾರ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರಮದಾನ ಕಾರ್ಯ ನಡೆಸಿದರು.

ಶಾಲಾ ಆರಂಭದ ದಿನದ ಹಿನ್ನಲೆಯಲ್ಲಿ ಶಾಲಾ ಆವರಣ ಸ್ವಚ್ಛಗೊಳಿಸುವುದು, ಕಟ್ಟಡಕ್ಕೆ ಬಣ್ಣ ಬಳಿಯುವುದು ಹಾಗೂ ಶಾಲೆಯ ಸೌಂದರ್ಯ ಹೆಚ್ಚಿಸುವ ಕಾರ್ಯ ಕೈಗೊಂಡರು. ಸ್ವಯಂಸೇವಕರ ಶ್ರಮದಿಂದ ಶಾಲೆಯು ನವ ಚೈತನ್ಯವನ್ನು ಪಡೆದು ಆಕರ್ಷಕವಾಗಿ ಕಂಗೊಳಿಸಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಗ್ರೇಟ್ಟ ಅವರು ವಿದ್ಯಾರ್ಥಿಗಳ ಸೇವಾ ಮನೋಭಾವ ಮತ್ತು ಪರಿಶ್ರಮವನ್ನು ಶ್ಲಾಘಿಸಿ ಅಭಿನಂದಿಸಿದರು. ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ವಿದ್ಯಾರ್ಥಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಜಯ ಪ್ರಕಾಶ್, ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಬಾಲಚಂದ್ರ, ರಾಷ್ಟ್ರೀಯ ಸೇವಾ ಯೋಜನೆಯ ಸಹ ಯೋಜನಾಧಿಕಾರಿ ಪ್ರತೀಕ್ಷ ಉಪಸ್ಥಿತರಿದ್ದರು. ಶ್ರಮದಾನ ಕಾರ್ಯದಲ್ಲಿ ವಿದ್ಯಾರ್ಥಿಗಳಾದ ಧನುಷ್, ಸುಮಿತ್, ಶ್ರೇಯಸ್, ಪ್ರಶಾಂತ್, ಪ್ರೀತಮ್ ಹಾಗೂ ವಿಕಾಸ್ ಭಾಗವಹಿಸಿ ಶಾಲೆಯ ಅಭಿವೃದ್ಧಿಗೆ ತಮ್ಮ ಕೊಡುಗೆಯನ್ನು ನೀಡಿದರು. ಎನ್ ಎಸ್ ಎಸ್ ಸ್ವಯಂಸೇವಕರ ಈ ಸೇವಾ ಕಾರ್ಯವು ಸಮಾಜಮುಖಿ ಚಟುವಟಿಕೆಗಳಿಗೆ ಮಾದರಿಯಾಗಿದೆ.

ಕನ್ನಡದಲ್ಲಿ ಪೂರ್ಣಾಂಕ ಪಡೆದ ವಿದ್ಯಾರ್ಥಿಗಳಿಗೆ ಕಸಾಪದಿಂದ ಸನ್ಮಾನ



> ■ ಆಗಸ್ಟ್‌ನಲ್ಲಿ ನಡೆಯಲಿರುವ ಕನಡ ಸಾಹಿತ್ಯ ಸಮ್ಮೇಳನದ ಬಗ್ಗೆ ಕೆ. ಸೇಸಪ್ಪ ರೈ ಮಾಹಿತಿ
> ■ ಕಡಬ ತಾಲೂಕಿನ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ

ಕಡಬ: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಡಬ ತಾಲೂಕು ಘಟಕದ ವತಿಯಿಂದ 2025-26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಭಾಷೆ ಕನ್ನಡ ವಿಷಯದಲ್ಲಿ ಪೂರ್ಣಾಂಕ ಗಳಿಸಿ ಅತ್ಯುತ್ತಮ ಸಾಧನೆಗೈದ ಕಡಬ ತಾಲೂಕಿನ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವು ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿಶ್ವೇಶ ಸೌಧ ಸಭಾಂಗಣದಲ್ಲಿ ನಡೆಯಿತು.

ಹೆಚ್ಚಿನ ಮಕ್ಕಳ ಸಾಧನೆ ಮಾಡಲಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕ.ಸಾ.ಪ. ಕಡಬ ತಾಲೂಕು ಘಟಕದ ಅಧ್ಯಕ್ಷ ಕೆ. ಸೇಸಪ್ಪ ರೈ, ಸರಕಾರಿ ಶಾಲೆಗಳ ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ವಿಷಯದಲ್ಲಿ ಪೂರ್ಣಾಂಕ ಗಳಿಸುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು. ಸಾಧಕ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಅವರು, ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲರ ಸಹಕಾರವನ್ನು ಕೋರಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಾಣಿಯೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಭಾಷಾ ಶಿಕ್ಷಕಿ ಕುಸುಮಾವತಿ ಮಾತನಾಡಿ, ವಿದ್ಯಾರ್ಥಿಗಳ ಯಶಸ್ಸಿಗೆ ಏಕಾಗ್ರತೆ ಹಾಗೂ ಸತತ ಪರಿಶ್ರಮ ಅತ್ಯಗತ್ಯ ಎಂದು ಹೇಳಿದರು.

ವೇದಿಕೆಯಲ್ಲಿ ಕಸಾಪ ನಿಕಟಪೂರ್ವ ಅಧ್ಯಕ್ಷ ಜನಾರ್ದನ ಗೌಡ ಪಣೆಮಜಲು, ಹೋಬಳಿ ಅಧ್ಯಕ್ಷ ಪದ್ಮಪ್ಪ ಗೌಡ ಹಾಗೂ ಸದಸ್ಯ ಎ.ಎನ್. ಕೊಳಂಬೆ ಉಪಸ್ಥಿತರಿದ್ದರು. ಕೋಶಾಧಿಕಾರಿ ಬಾಲಚಂದ್ರ ಮುಚ್ಚಿಂತಾಯ ಸ್ವಾಗತಿಸಿ, ಪ್ರೇಮ ವಂದಿಸಿದರು. ಸಂಘಟನಾ ಕಾರ್ಯದರ್ಶಿ ಕಿಶೋರ್ ಕುಮಾರ್ ಬಿ. ಕಾರ್ಯಕ್ರಮ ನಿರ್ವಹಿಸಿದರು. ಕನ್ನಡ ಶಿಕ್ಷಕ ಹರೀಶ್ ಆಚಾರ್ಯ ಸಹಕರಿಸಿದರು. ಸಮಾರಂಭದಲ್ಲಿ ಸಾಧಕ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಕನ್ನಡಾಭಿಮಾನಿಗಳು ಭಾಗವಹಿಸಿದ್ದರು.

ದೇವರಲ್ಲಿ ಶರಣಾಗತಿ ಭಾವದಿಂದ ಪ್ರಾರ್ಥಿಸಿದರೆ ಫಲ ಪ್ರಾಪ್ತಿ: ಕಾಶೀ ಶ್ರೀ



ಮುಲ್ಕಿ: ದೇವರಲ್ಲಿ ಶರಣಾಗತಿಯ ಭಾವದಿಂದ ಬೇಡುವ ಮೂಲಕ ನಮ್ಮ ಜ್ಞಾತ ಅಜ್ಞಾತ ತಪ್ಪುಗಳಿಗೆ ಕ್ಷಮೆಯ ಸಹಿತ ನಾವು ನಡೆಸುವ ಪ್ರಾಮಾಣಿಕ ಸೇವೆಗೆ ಸದಾ ಹರಿಗುರುಗಳ ಕೃಪೆ ಲಭ್ಯವಾಗುವುದು ಎಂದು ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡೆಯುವ ಮೂರು ದಿನಗಳ ಮೊಕ್ಕಾಂ ಸಂದರ್ಭ ಭಕ್ತ ಜನರ ಸಭೆಯಲ್ಲಿ ಆಶೀರ್ವಚನ ನೀಡಿ, ನಮ್ಮೊಳಗಿನ ಪ್ರೀತಿ ವಿಶ್ವಾಸ ಪರಸ್ಪರ ಸಹಕಾರ ಸಹಬಾಳ್ವೆಯು ಸಂಘಟಿತವಾಗಿ ಮುಂದುವರಿಯಲು ಸಹಕರಿಸುವ ಜೊತೆಗೆ ದೇವರ ಆಶೀರ್ವಾದವನ್ನು ನೀಡುತ್ತದೆ. ಸಮಾಜದ ಹಿರಿಯರು ಭೋಧಿಸಿದ ಸಂಸ್ಕಾರ ಸಂಸ್ಕೃತಿಯನ್ನು ಎಳೆಯರು ಪಾಲಿಸುವ ಮೂಲಕ ಧರ್ಮ ಬೆಳೆಸುವುದು ಬಹಳ ಅಗತ್ಯ ಎಂದರು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ವಸಂತ ಮಂಟಪದಲ್ಲಿ ಜರುಗಲಿರುವ ಕೋಟಿ ಶ್ರೀ ವಿಷ್ಣು ಸಹಸ್ರನಾಮ ಮತ್ತು ಶ್ರೀವ್ಯಾಸ ಸಹಸ್ರ ನಾಮ ಜಪಕ್ಕೆ ಸ್ವಾಮೀಜಿ ಚಾಲನೆ ನೀಡಿದರು. ಬಳಿಕ ಶ್ರೀಗಳ ಪಾದಪೂಜೆ ನಡೆಯಿತು. ಮತ್ತು ಶ್ರೀ ಕ್ಷೇತ್ರದ ಮೊಕ್ತೇಸರರಿಂದ ಗೌರವ ಸಮರ್ಪಣೆ ನಡೆಯಿತು. ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಪ್ರಯುಕ್ತ ಭಕ್ತರಿಂದ ನಿಧಿ ಸಂಚಯನ ಪಾತ್ರೆಗೆ ಸ್ವಾಮೀಜಿಗಳು ದೇವರ ಪ್ರಸಾದ ಹಚ್ಚಿ ಹರಸಿದರು. ದೇವಳದ ಮೊಕ್ತೇಸರ ಅತುಲ್ ಕುಡ್ವಾ ಸ್ವಾಗತಿಸಿ, ಪ್ರಸ್ತಾವಿಸಿದರು.

ಧಾರ್ಮಿಕ ಕಾರ್ಯಕ್ರಮ

ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಭಾನುವಾರ ಶ್ರೀ ವಿಷ್ಣು ಸಹಸ್ರನಾಮ ಕದಳೀ ಹವನ, ಸಾಮೂಹಿಕ ಶ್ರೀ ಶ್ರೀ ವಿಷ್ಣು ಸಹಸ್ರನಾಮ ಮತ್ತು ಶ್ರೀ ವೇದವ್ಯಾಸ ಸಹಸ್ರನಾಮ ಪಠಣ, ಹವನ ಪೂರ್ಣಾಹುತಿ, ಶ್ರೀ ದೇವರಿಗೆ ಮಹಾನೈವೇದ್ಯ, ಮಹಾಮಂಗಳಾರತಿ, ಶ್ರೀಗಳಿಂದ ಸಂಸ್ಥಾನ ದೇವರಿಗೆ ಪೂಜೆ, ಶ್ರೀಗಳಿಗೆ ಭಿಕ್ಷಾ ಸೇವೆ, ಭೂರಿ ಸಮಾರಾಧನೆ, ರಾತ್ರಿ ಪೂಜೆ, ಪ್ರಸಾದಗ್ರಹಣ ನಡೆಯಿತು. ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

ಶಾಸಕಿ ಮುರುಳ್ಯ ನಿವಾಸದಲ್ಲಿ ಮನ್ ಕಿ ಬಾತ್ ವೀಕ್ಷಣೆ, ಕಾರ್ಯಕರ್ತರ ಸಭೆ



ಸುಬ್ರಹ್ಮಣ್ಯ: ಬಿಜೆಪಿ ಸುಳ್ಯ ಮಂಡಲದ ವತಿಯಿಂದ ಪ್ರಧಾನಮಂತ್ರಿಯವರ 134 ನೇ ಮನ್ ಕೀ ಬಾತ್ ವೀಕ್ಷಣೆ ಮತ್ತು ಕಾರ್ಯಕರ್ತರ ಸಭೆಯು ಭಾನುವಾರ ಶಾಸಕಿ ಭಾಗೀರಥಿ ಮುರುಳ್ಯ ಅವರ ನಿವಾಸದಲ್ಲಿ ನಡೆಯಿತು.

ಶೇ. 100 ವೀಕ್ಷಣೆ

ಸಭಾಧ್ಯಕ್ಷತೆ ವಹಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಸುಳ್ಯ ಮಂಡಲ ಕಳೆದ ಆವೃತಿಯ ಮನ್ ಕೀ ಬಾತ್ ಕಾರ್ಯಕ್ರಮ ಶೇ. 100 ವೀಕ್ಷಣೆ ಮಾಡಿ ನಂ. 1 ಸ್ಥಾನವನ್ನು ಪಡೆದುಕೊಂಡಿದೆ. ಈ ಬಾರಿಯೂ ಅದೇ ಫಲಿತಾಂಶ ಬರಲಿ ಮತ್ತು ಜೂ. 5ರಿಂದ ಆರಂಭವಾಗುವ ಎಸ್. ಐ.ಆರ್. ಬಗ್ಗೆಯೂ ವಿಶೇಷ ಗಮನ ಹರಿಸಿ ಮತದಾರರಿಗೆ ಯಾವುದೇ ತೊಂದರೆಗಳು ಆಗದ ರೀತಿಯಲ್ಲಿ ಕಾರ್ಯಕರ್ತರು ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಮಾತನಾಡಿ, ದೇಶದ ಜನರ ಜೊತೆ ಪ್ರಧಾನಿಗಳು ಮಾತನಾಡುವುದರಿಂದ ಸರ್ಕಾರದ ಮಾಹಿತಿ ಜನರಿಗೆ ತಲುಪುತ್ತದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತೀಶ್ ಆರ್ವಾರ, ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಮಾರ್ತ, ಸುಳ್ಯ ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ, ಮಂಡಲ ಪ್ರಧಾನ ಕಾರ್ಯದರ್ಶಿ ವಿನಯ್ ಕಂದಡ್ಕ, ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರಾ ಬಿ.ಕೆ, ಒಬಿಸಿ ಮೋರ್ಚಾ ಅಧ್ಯಕ್ಷ ಗಿರೀಶ ಆಚಾರ್ಯ ಪೈಲಾಜೆ, ಯುವಮೋರ್ಚಾ ಅಧ್ಯಕ್ಷ ಶ್ರೀಕಾಂತ್ ಮಾವಿನಕಟ್ಟೆ ಮಂಡಲ ಕೋಶಾಧಿಕಾರಿ ಸುಭೋದ್ ಶೆಟ್ಟಿ ಮೇನಾಲ, ಮಂಡಲದ ಪ್ರಮುಖರಾದ ಎ.ವಿ. ತೀರ್ಥರಾಮ, ವೆಂಕಟ್ ದಂಬೆಕೋಡಿ, ಹರೀಶ್ ಕಂಜಿಪಿಲಿ, ಎಸ್.ಎನ್. ಮನ್ಮಥ, ಮುಳಿಯ ಕೇಶವ ಭಟ್, ಮಹಾಶಕ್ತಿ ಕೇಂದ್ರ ಕಾರ್ಯದರ್ಶಿ ಅನೂಪ್ ಬಿಳಿಮಲೆ, ಮಹಿಳಾ ಪ್ರಮುಖರಾದ ಶುಭದಾ ಎಸ್ ರೈ, ಸುವರ್ಣಿನಿ ಎನ್.ಎಸ್, ಪುಷ್ಪವತಿ ಕಳುವಾಜೆ, ಕಾರ್ಯಕರ್ತರು ಉಪಸ್ಥಿತರಿದ್ದರು.

ಪಾಂಡುರಂಗ ಭಟ್ ನಿಧನಕ್ಕೆ ಚಂದ್ರಶೇಖರ ಸ್ವಾಮೀಜಿ ಸಂತಾಪ

ಮುಲ್ಕಿ: ಕಟೀಲು ದೇವಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಾಂಡುರಂಗ ಭಟ್ ಅವರ ನಿಧನಕ್ಕೆ ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು ಶ್ರೀ ಚಂದ್ರಶೇಖರ ಸ್ವಾಮೀಜಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅವರು ಮಾಧ್ಯಮದೊಂದಿಗೆ ಮಾತನಾಡಿ, ಪಾಂಡುರಂಗ ಭಟ್ ಯಕ್ಷಗಾನ, ಭಜನೆ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಕ್ರಿಯಾಶೀಲರಾಗಿದ್ದರು. ಕಟೀಲು ದೇವಳದ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ ಎಂದು ಹೇಳಿದರು. ಅಲ್ಲದೇ ಶಾಸಕ ಉಮಾನಾಥ ಕೋಟ್ಯಾನ್, ಕಟೀಲು ಕ್ಷೇತ್ರದ ತಂತ್ರಿ ವೇದವ್ಯಾಸ ತಂತ್ರಿ, ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಕಟೀಲು ಕ್ಷೇತ್ರದ ಅರ್ಚಕ ವೃಂದ, ಸಚ್ಚಿದಾನಂದ ಉಡುಪ ಕೊಡೆತ್ತೂರು, ವೇದವ್ಯಾಸ ಉಡುಪ, ಕಿನ್ನಿಗೋಳಿ ಪ. ಪಂ ಸದಸ್ಯ ಪ್ರಕಾಶ್ ಆಚಾರ್ಯ, ಉದ್ಯಮಿ ಪೃಥ್ವಿರಾಜ ಆಚಾರ್ಯ ಕಿನ್ನಿಗೋಳಿ, ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ಭಾನುಮತಿ ಶೆಟ್ಟಿ ಕಕ್ವಗುತ್ತು ಸಂತಾಪ ವ್ಯಕ್ತಪಡಿಸಿದ್ದಾರೆ.

17ನೇ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನ

10 ಪ್ರಮುಖ ನಿರ್ಣಯ ಮಂಡನೆ, ಅನುಮೋದನೆ

ಸುಂಟಿಕೊಪ್ಪ: 17ನೇ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಸುಂಟಿಕೊಪ್ಪದ ಸಮಸ್ಯೆಗಳು ಸೇರಿದಂತೆ ಕನ್ನಡ ನಾಡು ನುಡಿ ಆನೆ ಮಾನವ ವನ್ಯಜೀವಿ ಸಂಘರ್ಷ ತ್ಯಾಜ್ಯ ವಿಲೇವಾರಿಗೆ ವೈಜ್ಞಾನಿಕ ಪರಿಹಾರ ಸೇರಿದಂತೆ ಹತ್ತು ಪ್ರಮುಖ ನಿರ್ಣಯ ಮಂಡಿಸಿ ಅನುಮೋದಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪುದಿಯ ನೆರವನರೇವತಿ ರಮೇಶ್ ನಿರ್ಣಯ ಮಂಡಿಸಿದರು. ಮೊದಲ ನಿರ್ಣಯವಾಗಿ ಸುಂಟಿಕೊಪ್ಪ ಹೋಬಳಿಯಲ್ಲಿರುವ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು, 2ನೇ ನಿರ್ಣಯವಾಗಿ ಸುಂಟಿಕೊಪ್ಪ ಹೋಬಳಿಗೆ ಸುಸಜ್ಜಿತ ಬಸ್



ನಿಲ್ದಾಣ ,ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯ ನಿರ್ಮಿಸುವಿಕೆ, 3ನೇ ನಿರ್ಣಯವಾಗಿ ಸುಂಟಿಕೊಪ್ಪ ಹೋಬಳಿಗೆ ಹೊಸ ನಾಡ ಕಚೇರಿ ನಿರ್ಮಾಣ, 4ನೇ ನಿರ್ಣಯವಾಗಿ ಕೊಡಗು ಜಿಲ್ಲೆಯಲ್ಲಿ ವನ್ಯ ಜೀವಿ ಮಾನವ ಸಂಘರ್ಷಕ್ಕೆ ಪರಿಹಾರ ಕಲ್ಪಿಸುವುದು, 5ನೇ ನಿರ್ಣಯವಾಗಿ ಕೊಡಗು ಜಿಲ್ಲೆ ಪ್ರವಾಸೋದ್ಯಮ ವಿಶ್ವದ ಗಮನಸೆಳೆದಿದ್ದು ಪ್ರವಾಸಿಗರಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸುವುದು, 6ನೇ ನಿರ್ಣಯವಾಗಿ ಕೊಡಗು ಪುಟ್ಟ ಜಿಲ್ಲೆಯಾಗಿದ್ದರೂ 19 ಮಂದಿ ಒಲಂಪಿಯನ್ ಆಟಗಾರರು 200 ಕ್ಕೂ ಹೆಚ್ಚು ರಾಷ್ಟ್ರಮಟ್ಟದ ಆಟಗಾರರನ್ನು ಪುಟ್ಟ ಜಿಲ್ಲೆ ಕೊಡಗನ್ನು ಕ್ರೀಡಾ ಜಿಲ್ಲೆಯೆಂದು ಘೋಷಿಸುವಂತೆ ಮನವಿ.

7ನೇ ನಿರ್ಣಯವಾಗಿ ಕೊಡಗನ್ನು ಆಳಿದ ಹಾಲೇರಿ ವಂಶಸ್ಥ ಲಿಂಗರಾಜ ಕೊಡಗಿನ ಭೂ ಪ್ರದೇಶವನ್ನು ಸರ್ವೆ ಮಾಡಿಸಿ ಲಿಂಗರಾಜನ ಶಿಸ್ತು ಎಂದು ದಾಖಲಿಸಿದ್ದಾನೆ ಇದನ್ನು ಡಿಜಿಟಲೀಕರಣಗೊಳಿಸಿ ಸರ್ವರಿಗೂ ತಿಳಿಯು ವಂತೆ ಮಾಡಬೇಕು. 8ನೇ ನಿರ್ಣಯವಾಗಿ ಕೊಡಗು ಜಿಲ್ಲಾ ಸಾಹಿತ್ಯ ಪರಿಷತ್ತಿನ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅನುದಾನ ನೀಡುವಂತೆ ಕೋರಿಕೆ. 9ನೇ ನಿರ್ಣಯವಾಗಿ ಎಲ್ಲಾ ಕನ್ನಡ ಮಾಧ್ಯಮ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ವಿಷಯವಾರು ಶಿಕ್ಷಕರನ್ನು ನೇಮಿಸಿ ಸರಕಾರಿ ಶಾಲೆಗಳನ್ನು ಸಬಲೀಕರಣಗೊಳಿಸಬೇಕು 10ನೇ ನಿರ್ಣಯವಾಗಿ ಪರಿಷತ್ತಿನ ಜಿಲ್ಲಾ ತಾಲೂಕು ಹೋಬಳಿ ಘಟಕಗಳಿಗೆ ಹೆಚ್ಚಿನ ಅನುದಾನ ನೀಡಿ ಹೆಚ್ಚು ಕನ್ನಡ ಪರ ಕಾರ್ಯಕ್ರಮಗಳನ್ನು ನಡೆಸುವಂತಾಗಿ ಕರ್ನಾಟಕದಲ್ಲಿ ಕನ್ನಡಕ್ಕೆ ಆದ್ಯತೆ ನೀಡುವಂತೆ ಆಗ್ರಹ. ಈ ಎಲ್ಲಾ ನಿರ್ಣಯಗಳನ್ನು ಸಭೆ ಒಮ್ಮತದಿಂದ ಅಂಗೀಕರಿಸಿತು.